ಸಂಪಾದಕರು
ಮಿರ್ಜಿ ಅಣ್ಣಾರಾಯ
ಕೃಷ್ಣ ಕೊಲ್ಹಾರಕುಲಕರ್ಣಿ

# ಕಾವ್ಯಾನಂದ

ಸಂಪಾದಕರು

ಮಿರ್ಜಿ ಅಣ್ಣಾರಾಯ

ಕೃಷ್ಣ ಕೊಲ್ಹಾರಕುಲಕರ್ಣಿ

ಶ್ರೀ ಚಂದ್ರ-ಗಂಗಾ ಜ್ಞಾನಪೀಠ, ಶೇಡಬಾಳ.

ಮುದ್ರಣ

**ಮೋಹನ ಕುಲಕರ್ಣಿ**

ವಿಜಯಲಕ್ಷ್ಮಿ ಆರ್ಟ ಪ್ರಿಂಟರ್ಸ

ಶೇರಿ ಗಲ್ಲಿ-ಬೆಳಗಾವಿ.

**ಬೆಲೆ– ಐದು ರೂಪಾಯಿಗಳು**

**ಪ್ರಕಟಣೆ– ೫೧**

ಅಧಿಕೃತ ಮಾರಾಟಗಾರರು

**ಶ್ರೀ ಚಂದ್ರ–ಗಂಗಾ ಜ್ಞಾನಪೀಠ,** ಶೇಡಬಾಳ.

**ದುರ್ಗಾ ಪಬ್ಲಿಕೇಷರ್ಸ,** ಬೆಳಗಾವಿ.

KAVYANAND — A Collection of essays on the life & works of Shri Siddhayya Puranik, I.A.S. Published on the occasion of his 55th birthday celebrations. Edited by — Mirji Annarao & Krishna Kolhar Kulkarni Published by — Shri Chandra - Ganga Jnyana peetha, Shedbal. First Eddition — 1973 . Copies 1000 Price — 5 Rupees.

© Publisher.

# ಪರಿವಿಡಿ

ನಿವೇದನೆ ೫

ಕಾವ್ಯಾನಂದರಿಗೆ (ಕವನ)
ಎಸ್. ಡಿ. ಇಂಚಲ ೮

೧) ಕಾವ್ಯಾನಂದ–ದ– ಅಧಿಕಾರಿ ಸಿದ್ಧಯ್ಯ ಪುರಾಣಿಕ (ಸಂದರ್ಶನ)
ಕೃಷ್ಣ ಕೊಲ್ಹಾರಕುಲಕರ್ಣಿ ೯

೨) ಕಾವ್ಯಾನಂದರ ದೃಷ್ಟಿ ಮತ್ತು ಕಾವ್ಯ ಸೃಷ್ಟಿ (ರಸದರ್ಶನ)
ಮಿರ್ಜಿ ಅಣ್ಣಾರಾಯ ೨೫

೩) ಕಲ್ಲೋಲಮಾಲೆ
ಸ. ಸ. ಮಾಳವಾಡ ೭೩

೪) ಮೊದಲು ಮಾನವನಾಗು
ಪಾಂಡುರಂಗ ಕುಲಕರ್ಣಿ ೮೫

೫) ಬಾಳ ಗುಬ್ಬಿಯ ಗುಟುಕುಗಳು........ (ಕವನ)
ಸಿದ್ಧಯ್ಯ ಪುರಾಣಿಕ ೯೪

೬) ಶರಣ ಚರಿತಾಮೃತ
ಎಂ. ಚಿದಾನಂದಮೂರ್ತಿ ೯೫

೭) ರಜತ ರೇಖೆ
ನಿಂಗಣ್ಣ ಸಣ್ಣಕ್ಕಿ ೯೯

೮) ಭಾರತವೀರ ಮತ್ತು ಇತರ ನಾಟಕಗಳು
ಕುಲಕೃಷ್ಣ ೧೧೫

೯) ಸಿದ್ಧೇಶ್ವರ ವಚನಗಳಲ್ಲಿ "ಕಾವ್ಯಾನಂದ"
ಮಿರ್ಜಿ ಅಣ್ಣಾರಾಯ ೧೧೯

೧೦) ತ್ರಿಭುವನ ಮಲ್ಲ
ಅಜಿತ ಅಣ್ಣಾರಾಯ ಮಿರ್ಜಿ ೧೩೧

೧೧) ಸಂಪಾದನಾಶೀಲರು– ಶ್ರೀ ಪುರಾಣಿಕರು
ಶಾಂತರಸ ೧೩೯

೧೨) 'ನಾನಾರು?' (ಕವನ)
ಸಿದ್ಧಯ್ಯ ಪುರಾಣಿಕ ೧೪೬
೧೩) 'ನಾನಾರು?' ಕವಿತೆಯ ರಸಗ್ರಹಣ
ಉಮಾಶಂಕರ ಜೋಶಿ ೧೪೭
೧೪) ಕಾವ್ಯಾನಂದ (ಕವನ)
ಎಚ್. ಸೂರ್ಯದೇವ ೧೫೧
೧೫) ಕವಿ ಕಂಡ ಕಾವ್ಯಾನಂದ (ಕವನ)
ಬಿ. ಎ. ಸನದಿ ೧೫೨
೧೬) ಕರ್ಮಯೋಗಿ (ಕವನ)
ಜಿ. ಆರ್. ಹಿರೇಮಠ ೧೫೪
೧೭) ಕರುಣಾಮಯಿ........ಕಾವ್ಯಾನಂದರಿಗೆ (ಕವನ)
ಸೇಗಿಲಯೋಗಿ ೧೫೬
೧೮) ಕಾವ್ಯಾನಂದರಿಗೆ (ಕವನ)
ಬಿ. ಈ. ಶೇಷಾದ್ರಿ ೧೫೮
೧೯) ಕಾವ್ಯಾನಂದರ– 'ಆತ್ಮಾರ್ಪಣ'
ಎಸ್. ಪಿ. ಪಾಟೀಲ ೧೫೯
೨೦) ಆದರ್ಶ ಆಡಳಿತಗಾರ
ಕೊಟ್ರ ಬಸವಯ್ಯನವರು ೧೬೩
೨೧) ಕಾವ್ಯಾನಂದ ಉವಾಚ
ಪಿ. ಆಯ್. ವಸವಡೆ ೧೬೯
೨೨) ಒಂದು ಸಂಭವನೀಯ ಸಂಭಾಷಣೆ
ಸಿದ್ಧಯ್ಯ ಪುರಾಣಿಕ ೧೯೪
೨೩) ಸವ್ಯಸಾಚಿ ಸಿದ್ಧಯ್ಯ ಪುರಾಣಿಕ ೨೦೨

*—*



# ನಿವೇದನೆ

ಶ್ರೀ ಚಂದ್ರ-ಗಂಗಾ ಜ್ಞಾನಪೀಠವು ಹಮ್ಮಿಕೊಂಡ ಕಾರ್ಯ ವಿಧಾನಗಳಲ್ಲಿ ಗುಣಿಗಳ ಗುಣಗೌರವವೂ ಒಂದು ಪ್ರಮುಖ ಅಂಗವಾಗಿದೆ. ನಾಡಿನ ಸಂಸ್ಕೃತಿಯ ವಿಕಾಸಕ್ಕೆ ಈಗ ಇದೊಂದು ತೀರ ಅವಶ್ಯವಾದ ಕಾರ್ಯವಾಗಿದೆ. ಅದರಿಂದ ಆಗಾಗ ಇಂಥ ಕಾರ್ಯಕ್ರಮಗಳನ್ನು ಏರ್ಪಡಿಸುವುದು ಜ್ಞಾನಪೀಠದ ಸಂಚಾಲಕರಿಗೆ ಸಂತಸದ ಸಂಗತಿಯಾಗಿದೆ.

ಇಂಥ ಕಾರ್ಯಕ್ರಮಗಳು ಕೇವಲ ತಾತ್ಪೂರ್ತಿಕ ಉತ್ಸಾಹದ ಉತ್ಸವಗಳಾಗಿ ಹೋಗದೆ ಸ್ಥಿರವಾದ ಸತ್ಪರಿಣಾಮವೇನಾದರೂ ಜನರಲ್ಲಿ ನಿಲ್ಲಬೇಕೆಂದು ನಮ್ಮ ಉದ್ದೇಶವಾಗಿದೆ. ಅದಕ್ಕಾಗಿ ಇಂಥ ಗ್ರಂಥ ಪ್ರಕಟಣೆಯಲ್ಲಿ ತೊಡಗಿದ್ದೇವೆ. ಈಗಾಗಲೇ ಜ್ಞಾನಪೀಠವು "ಮಧುರ ಸ್ಮೃತಿ" "ಸತ್ಸಂಗದ ಮಹಿಮೆ"ಗಳಂಥ ಗ್ರಂಥಗಳನ್ನು ಸಂಪಾದಿಸಿ ಗುಣಿಗಳಿಗೂ ಜನತೆಗೂ ಅರ್ಪಿಸಿದೆ. ಈ "ಕಾವ್ಯಾನಂದ" ಎಂಬ ಪುಸ್ತಕ ಪ್ರಕಾಶನವೂ ಕೂಡ ಅಂಥ ಗ್ರಂಥ ಸಮರ್ಪಣ ಪರಂಪರೆಯಲ್ಲಿ ಒಂದಾಗಿದೆ. ಇದು ಶ್ರೀ ಸಿದ್ಧಯ್ಯ ಪುರಾಣಿಕರಂಥವರಿಗೆ ಅರ್ಪಿಸಲು ಓಡಿಸಾ ರಾಜ್ಯದ ಸನ್ಮಾನ್ಯ ರಾಜ್ಯಪಾಲರಾದ ಶ್ರೀ ಬಿ. ಡಿ. ಜತ್ತಿಯವರಂಥ ಅನುಭಾವಿಗಳು ಲಭಿಸಿದುದು ನಮ್ಮ ಜ್ಞಾನಪೀಠದ ಸುಯೋಗವಾಗಿದೆ.

ಕನ್ನಡ ಸಾಹಿತ್ಯದ ವಿವಿಧ ಅಂಗಗಳಲ್ಲಿ ಉತ್ಕೃಷ್ಟ ಕೃತಿಗಳನ್ನು ನಿರ್ಮಿಸಿ, ಕನ್ನಡ ಲೋಕಕ್ಕೆ 'ಕಾವ್ಯಾನಂದ' ರೆಂದು ಚಿರಪರಿಚಿತರಾದ ಶ್ರೀ ಸಿದ್ಧಯ್ಯ ಪುರಾಣಿಕ ಆಯ್. ಎ. ಎಸ್. ಅವರ ವ್ಯಕ್ತಿತ್ವ, ಸಾಹಿತ್ಯ, ಆಡಳಿತಗಳನ್ನು ಕುರಿತು, ಒಂದು ಚಿಕ್ಕದಾದ್ದಾದರೂ ಸಮಗ್ರ ಪರಿಚಯವನ್ನು ಕನ್ನಡ ಓದುಗರಿಗೆ ನೀಡುವ ಗ್ರಂಥವನ್ನು ಸಂಪಾದಿಸಿ ಕೊಡುವುದಕ್ಕೆ ಇಲ್ಲಿ ಪ್ರಯತ್ನಿಸಿದ್ದೇವೆ. ನಮ್ಮ ಕರೆಗೆ ಓಗೊಟ್ಟು ಹಲವು ಜನ ಲೇಖಕರು ತಮ್ಮ ಅಭ್ಯಾಸಪೂರ್ಣ ಲೇಖನಗಳನ್ನು, ಭಾವಪೂರ್ಣ ಕವನಗಳನ್ನು ನೀಡಿ ಸಹ

ಕರಿಸಿದ್ದಾರೆ. ಅವರಿಗೆಲ್ಲ ಜ್ಞಾನಪೀಠವು ಋಣಿಯಾಗಿದೆ. ಅದರಂತೆ ಗ್ರಂಥ ಸಂಪಾದನೆಯ ಕಾರ್ಯದಲ್ಲಿ ಶ್ರೀ ಕೃಷ್ಣ ಕೊಲ್ಹಾರಕುಲಕರ್ಣಿಯವರು ತುಂಬ ನೆರವಾಗಿದ್ದಾರೆ. ಇವರ ಆತ್ಮೀಯ ಭಾವನೆಗೆ ಕೃತಜ್ಞತೆಯನ್ನು ಸಲ್ಲಿಸುವುದೆಂದರೆ ಔಪಚಾರಿಕವೇ ಆದೀತು.

ಇನ್ನು ಇಂಥ ವಿಮರ್ಶಾ ಗ್ರಂಥವನ್ನು ಪ್ರಕಟಿಸುವುದರಲ್ಲಿ ಬೆಳಗಾವಿಯ ವಿಜಯಲಕ್ಷ್ಮಿ ಆರ್ಟ ಪ್ರೆಸ್ಸಿನ ಒಡೆಯರಾದ ಶ್ರೀ ಮೋಹನ ಕುಲಕರ್ಣಿಯವರ ಸಹಯೋಗವಿಲ್ಲದೆ ಹೋಗಿದ್ದರೆ ಇಂಥ ಸುಂದರ ಕೃತಿಯು ಇಷ್ಟು ಬೇಗನೇ ಬೆಳಕಿಗೆ ಬರುತ್ತಿರಲಿಲ್ಲ. ಇವರಿಗೂ ನಮ್ಮ ಜ್ಞಾನಪೀಠದ ವಂದನೆಗಳು ಸಲ್ಲುತ್ತವೆ.

ಎಂದಿನಂತೆ ಕನ್ನಡಿಗರು ನಮ್ಮ ಈ ಕಾವ್ಯಾನಂದದಲ್ಲಿ ರಸಗ್ರಹಣ ಮಾಡಲು ಮುಂದೆ ಬರಲೆಂದು ಹಾರೈಸುವೆವು.

ಮಿರ್ಜಿ ಅಣ್ಣಾರಾಯ<br>
ಅಧ್ಯಕ್ಷ<br>
ಚಂದ್ರ-ಗಂಗಾ ಜ್ಞಾನಪೀಠ<br>
ಶೇಡಬಾಳ.

೧೮ ಅಗಸ್ಟ ೧೯೭೩.

—✻✻—



# ಕಾವ್ಯಾನಂದ

(ಸಂಭಾವನಾ ಗ್ರಂಥ)

## ಕಾವ್ಯಾನಂದರಿಗೆ

ಎಸ್. ಡಿ. ಇಂಚಲ

ಮಾನವೀಯತೆಯೆ ಮೈದಾಳಿತೆಂಬಂತೆ
ಸದುವಿನಯ ಮೃದು ಮಧುರ ನಡೆಯ ಕೋಮಲತೆ
ನಸುನಗೆಯ ಸೌರಭಕೆ ಮಾತು ಮಲ್ಲಿಗೆಯಾಗಿ
ಸುರಿವ ನಿಮ್ಮೆದೆಯೊಳಗೆ ಏನೆಂಥ ನಯ ಮಾಗಿ

ಅನುಭವಾಮೃತ ತಾನೆ ಅಡಿಗಡಿಗೂ ಸೂಸುವದು !
ತನು ಮನಗಳಂಗಳದಿ ಸಂಪ್ರೀತ ಅರಳುವದು !
ನಿತ್ಯ ಕಾರ್ಯಾಸಕ್ತ ನೀವೆ 'ಕಾರ್ಯಾನಂದ'
ಸತ್ಯ ಸೌಂದರ್ಯ ರಸ ಭಾವಗಳ ಸ್ವಚ್ಛಂದ

ಪ್ರತಿಬಿಂಬಿಸಿದ ಶರಣಕವಿ 'ಕಾವ್ಯಾನಂದ'
ಕನ್ನಡಕೆ ಕಣ್ಣಾಗಿ, ತನ್ನದೆಲ್ಲವ ನೆರೆದು
ದೀನ ದಲಿತರ ದುರ್ಬಲರ ಸೇವೆಯದು
ಜೀವನದ ಧ್ಯೇಯವೆಂದರಿದು ಮುಂಬರಿದು

ಬಡವ ಬಲ್ಲಿದರ ಬಂಧು ಸ್ನೇಹದ ಸಿಂಧು !
ಮೃಡನ ಕರುಣೆಯ ಕಂದ, ನಮ್ಮ 'ಕಾವ್ಯಾನಂದ!'

ಬೆಳಗಾವಿ







ಕಾವ್ಯಾನಂದ-ದ-ಅಧಿಕಾರಿ * ಸಂದರ್ಶನ.

# ಸಿದ್ಧಯ್ಯ ಪುರಾಣಿಕ

* ಕೃಷ್ಣ ಕೊಲ್ಹಾರಕುಲಕರ್ಣಿ

" ಮನುಷ್ಯ ಮೊದಲು ತನ್ನನ್ನು ತಾನು ಸ್ವಚ್ಛವಾಗಿಟ್ಟುಕೊಳ್ಳಲು ಕಲಿತರೆ ಸಾಕು. ಉಳಿದದ್ದು ತಂತಾನೆ ಸರಿಹೋಗುತ್ತದೆ.................

ಜೀವನದುದ್ದಕ್ಕೂ " ಅಧಿಕಾರ " ವನ್ನೆ ನಡೆಸಿದ " ಕಾವ್ಯಾನಂದ " ಸಿದ್ಧಯ್ಯ ಪುರಾಣಿಕರ ಜೀವನದ ಸೂತ್ರರೂಪೀ ಅಭಿಪ್ರಾಯವನ್ನು ಕೇಳಿದಾಗ ಒಂದು ಕ್ಷಣ ಆಶ್ಚರ್ಯವಾಗುತ್ತದೆ.

ತಹಶೀಲದಾರರೆಂದು ನೇರವಾಗಿ ನೌಕರಿಗೆ ಸೇರಿ ಅಸಿಸ್ಟಂಟ ಕಲೆಕ್ಟರ, ಕಲೆಕ್ಟರರಲ್ಲದೆ ರಾಜ್ಯದ ಬಹುತೇಕ ಎಲ್ಲ ಖಾತೆಗಳಲ್ಲೂ ಮೇಲಿನ ಹುದ್ದೆಯನ್ನು ಯಶಸ್ವಿಯಾಗಿ ನಿರ್ವಹಿಸಿದ ಸಿದ್ಧಯ್ಯ ಪುರಾಣಿಕರು ಸಮಾಜದ ಸುಧಾರಣೆಯ ನೆಪದಲ್ಲಿ ಧಾರಾಳವಾಗಿ ಉಪದೇಶ ಕೊಡಬಲ್ಲಷ್ಟು ಅನುಭವಿಕರು. ಆದರೆ ಅಂಥ ಉಪದೇಶವನ್ನು ಅವರೆಂದಿಗೂ ನೀಡಲಿಲ್ಲ. ಬಹುಶಃ ಇದಕ್ಕೆ ಕಾರಣ ಅವರು ಪಡೆದು ಬಂದ ಆನುವಂಶಿಕ ಸಾಹಿತ್ಯ ಸಂಸ್ಕೃತಿಯ ಸಂಬಂಧವಿದ್ದೀತು—

" ಅಜ್ಜಂದಿರಾದ ಚೆನ್ನಕವಿಗಳು ನೂತನ ಶರಣರನೇಕರ ಚರಿತ್ರೆಗಳನ್ನು ಪ್ರೌಢ ಕಾವ್ಯಗಳನ್ನಾಗಿ ರಚಿಸಿದ್ದಾರೆ. ತಂದೆಯವರಾದ ಪಂಡಿತ ಕಲ್ಲಿನಾಥ ಶಾಸ್ತ್ರಿಗಳವರು ಇನ್ನು ಕೆಲವು ಶರಣರ ಚರಿತ್ರೆಗಳನ್ನು ಕಾವ್ಯರೂಪದಲ್ಲಿ ರಚಿಸಿರುವುದಲ್ಲದೆ, ಶರಣ ಸಂದೇಶವನ್ನು ಪುರಾಣ-ಪ್ರವಚನ ಶಿವಕೀರ್ತನೆಗಳ ಮೂಲಕ ಬಿತ್ತರಿಸುವುದರಲ್ಲಿ ತಮ್ಮ ಆಯುಸ್ಯವನ್ನೆಲ್ಲ ವಿನಿಯೋಗಿಸಿದ್ದಾರೆ. ಅವರ ಆಶೀರ್ವಾದದ ಬಲವಿರಲು " ಸಿದ್ಧಯ್ಯ ಪುರಾಣಿಕರು ಅಂಥ ಉನ್ನತ ಹುದ್ದೆಗಳಲ್ಲೂ ಸಂಸ್ಕಾರವಂತ ಹೃದಯದ ಶ್ರೀಮಂತ ಸಂಸ್ಕೃತಿಯನ್ನು ಬೆಳೆಸಿಕೊಂಡು ಬಂದಿರುವರೆಂದೇ ಹಾಗೆ ಹೇಳುತ್ತಾರೆ. ಇಲ್ಲವಾದಲ್ಲಿ ಸರ್ವೇಸಾಮಾನ್ಯ ಅಧಿಕಾರಿಗಳಂತೆ—

" ಹೌದರೀ....ಭಾಳ ಆಗೇದ ಲಂಚ-ವಶೀಲಿ-ಘೇ ನೌಕರಿ ಮಾಡುವದೇ ದುಸ್ತರ ಆಗೇದ....ಇಂಥಾ ದಿನದಾಗ....ಏನ ಮಾಡೂದು ?" ಎಂಬ ಠರಾವಿಕ ಉತ್ತರ ಕೊಟ್ಟು ಆತ್ಮ ವಂಚನೆಯನ್ನು ಮಾಡಿಕೊಳ್ಳ ಬಯಸುವದಿಲ್ಲ. ಆಡಳಿತದ ಮಂದಗತಿಯನ್ನು-ಅಲ್ಲಿಯ ಲಂಚ ವಶೀಲಿಗಳ ಅಸ್ತಿತ್ವವನ್ನು ಅವರೂ ಒಪ್ಪುತ್ತಾರೆ. ಆದರೆ ಅವುಗಳಿಗೆ ಕಾರಣರೂ ನಾವೇ ಅಲ್ಲವೆ? ಎಂದು ಮರು ಪ್ರಶ್ನೆ ಹಾಕುತ್ತಾರೆ.

" ಹೌದು." ಎನ್ನಲೇ ಬೇಕಾಗುತ್ತದೆ. ಜೊತೆಗೆ ಪ್ರಜ್ಞಾವಂತ ಸೃಜನ ಶೀಲ ಬರಹಗಾರ, ಆಡಳಿತಗಾರನಾಗಿ ಇದನ್ನು ಹೇಗೆ ತಡೆದುಕೊಳ್ಳಬಲ್ಲ ಎಂಬ ಪ್ರಶ್ನೆ ಹುಟ್ಟುತ್ತದೆ. ಅದಕ್ಕೆ ಸಿದ್ಧಯ್ಯ ಪುರಾಣಿಕರು ಹೇಳುತ್ತಾರೆ.

" ಇದು ಅನಿವಾರ್ಯ, ಕಾಯ್ದೆ ಬದ್ಧನಾಗಿ ನಡೆಯಲೇಬೇಕು. ಆದರೂ ಅದು ತಡೆಯದಿದ್ದಾಗ ನಾನೇನು ಸುಮ್ಮನೆ ಕುಳಿತಿಲ್ಲ.

ಎಷ್ಟೋ ಸಲ—

ಆದರ್ಶವಾದಿಗಳ ಶಿಲುಬೆಗೇರಿಸಿ ಅವರ
ಕನಸುಗಳ ಕುಟ್ಟಿ ಸ್ವಾರ್ಥಿಗಳಿಗುಣಿಸೆ
ಜ್ಞಾನಯೋಗಿಯ ಕೈಗೆ ವಿಷದ ಬಟ್ಟಲ ಕೊಟ್ಟು
ನೀಚ ನರ–ನಾಯಕರ ಮನವ ತಣಿಸೆ.

ಎಂಬ ಸಾಲುಗಳು ತಂತಾನೆ ಹೊರಬಂದಿವೆ. "

" ಗಣರಾಜ್ಯವೇನೋ ಬಂತು
ಗುಣ ರಾಜ್ಯ ಕರಗಿಹೋಯ್ತು " ಎಂದು ಬಿಚ್ಚು ಮಾತುಗಳಲ್ಲಿ ಹೇಳಿದ ಸಿದ್ಧಯ್ಯ ಪುರಾಣಿಕರಿಗೆ ಈ ಗುಣ ಕರಗಿ ಹೋದ ಗಣ ರಾಜ್ಯದಲ್ಲಿ-ಸೌಜನ್ಯವಿಲ್ಲದ ಸ್ವಾತಂತ್ರ್ಯದಲ್ಲಿ— " ಸರಕಾರದ ಸೇವೆಯಲ್ಲಿರುವ ನಾನು ಮೊದಲು ಸರಕಾರದ ಕಾರ್ಯವನ್ನು ತೃಪ್ತಿಕರವಾಗಿ ಮಾಡಬೇಕು—ಮಾಡುತ್ತಿದ್ದೇನೆ " ಎಂಬ ಅರಿವು ಇದೆ. ಅಲ್ಲಿ ಆದರ್ಶಗಳ ಗೊಡವೆಯನ್ನು ತರಲಾರರು. ಹಾಂ ! ಆದರೆ ಬಂದದ್ದು ಹೋದದ್ದು ಎಷ್ಟು ? ಯಾವುದಕ್ಕೆ ಬೆಲೆಯು ಹೆಚ್ಚು ಎಂಬ ಈ ನಾಡ ಜಮಾಖರ್ಚನ್ನು ಮಾತ್ರ ಯಾವಾಗಲೂ ಮಾಡುತ್ತಿರುತ್ತಾರೆ. ಈ ಪ್ರಜ್ಞೆಯೇ ಅವರನ್ನು ಪ್ರತಿಭಾವಂತ ಕವಿಯೊಂದಿಗೆ-ಯಶಸ್ವಿ ಅಧಿಕಾರಿಯನ್ನಾಗಿಯೂ ಮಾಡಿರಲು ಸಾಕು. ಸಂಪ್ರದಾಯದಂತೆ



ಪ್ರತಿಯೊಂದಕ್ಕೂ ನಾವು ನೃಪತುಂಗನಿಂದ ಉದಾಹರಣೆಗಳನ್ನು ಕೊಡುವಂತೆ ಇಲ್ಲಿಯೂ ಉತ್ತರ ಸುಲಭವಿದೆ. ಆದರೆ ಇಂಥ ಜನರು ತೀರ ಕಡಿಮೆ. ಒಬ್ಬ ಬಸವಣ್ಣ ಮಂತ್ರಿಯಾಗಿಯೂ ಸಾಹಿತ್ಯವನ್ನು ನಿರ್ಮಿಸಿದ್ದರೂ—ಮಂತ್ರಿಪದ ಯಶಸ್ವಿಯಾಗಲಿಲ್ಲ. ಪಂಪ-ರನ್ನ-ಜನ್ನರ ದಾರಿ ಬೇರೆ. ಇದಕ್ಕೆ ಅಪವಾದ ಇತ್ತೀಚಿನ ದಿನಗಳಲ್ಲಿ " ಮಾಸ್ತಿ " ಅವರ ನಂತರ ಬಹುಶಃ ಕಾವ್ಯಾನಂದರೇ. ಅಧಿಕಾರಿಗಳು ಸಾಹಿತಿಗಳಾಗುವದು ದೊಡ್ಡ ಮಾತಲ್ಲ. ಹುಟ್ಟು ಕವಿ—ಸಾಹಿತಿ ಯಶಸ್ವೀ ಅಧಿಕಾರಿಯಾಗುವುದು ಕಠಿಣ. ಉಭಯರಂಗಗಳಲ್ಲೂ ಸ್ವಂತಿಕೆಯನ್ನು ಉಳಿಸಿಕೊಂಡವರು ಮಾಸ್ತಿ ಹಾಗೂ ಕಾವ್ಯಾನಂದರು.

ಸ್ಥಾನ ಮಹಾತ್ಮ್ಯದಿಂದ ಪ್ರಸಿದ್ಧ ಸಾಹಿತಿಗಳಾದವರು ಪುರಾಣಿಕರಲ್ಲ. ಆದಕ್ಕೊಂದು ಉದಾಹರಣೆ ಅವರ " ನಾನಾರು ? " ಕವಿತೆ. ೧೬ ಸಾಲುಗಳ ಪುಟ್ಟ ಕವನ ಅವರ " ಮಾನಸ ಸರೋವರ " ಕವನ ಸಂಗ್ರಹದಲ್ಲಿ ಮೊದಲು ಪ್ರಕಟವಾಯಿತು. ಆಮೇಲೆ ಅದು, ಭಾರತ ಸಾಹಿತ್ಯ ಅಕಾಡೆಮಿ ಪ್ರಕಟಿಸಿದ " ಭಾರತೀಯ ಕವಿತಾ " ಎಂಬ ವಾರ್ಷಿಕ ಸಂಕಲನದ ೧೯೬೬-೬೭ ರ ಸಂಚಿಕೆಯಲ್ಲಿ ದೇವನಾಗರಿ ಲಿಪಿಯಲ್ಲಿ ಮೂಲ ಕವನದೊಂದಿಗೆ ಅದರ ಹಿಂದೀ ಅವತರಣಿಕೆಯೂ ಪ್ರಕಟವಾಯಿತು. ಆ ಮುಂದೆ ಅದು ಭಾರತೀಯ ಜ್ಞಾನ ಪೀಠ ಪ್ರಶಸ್ತಿ ವಿಜೇತ ಗುಜರಾತದ ಮಹಾಕವಿ • ಶ್ರೀ ಉಮಾಶಂಕರ ಜೋಶಿ ಅವರ ದೃಷ್ಟಿಗೆ ಬಿದ್ದು, ಅವರ ಸಂಪಾದಕತ್ವದಲ್ಲಿ ಪ್ರಕಟವಾಗುವ " ಸಂಸ್ಕೃತಿ " ಎಂಬ ಪ್ರೌಢ ಪತ್ರಿಕೆಯಲ್ಲಿ ಪ್ರಶಂಸಿತವಾಯಿತು. ಈಚೆಗೆ ಗುಜರಾತಿಯಲ್ಲಿ ಅವರೇ ಬರೆದು ಪ್ರಕಟಿಸಿದ " ಕಾವ್ಯಾಯನ " ಎಂಬ ಶ್ರೇಷ್ಠ ಸಾಹಿತ್ಯ ಕೃತಿಯಲ್ಲಿ ಕನ್ನಡದ ಏಕೈಕ ಪ್ರತಿನಿಧಿಯಾಗಿ ಪ್ರವೇಶ ಪಡೆದಿದೆ. ಅಲ್ಲಿ ಸ್ವತಃ ಉಮಾಶಂಕರ ಜೋಶಿ ಅವರೇ ಈ ಪುಟ್ಟ ಕವನಕ್ಕೆ ಸುದೀರ್ಘ ರಸಗ್ರಹಣ ನೀಡಿದ್ದಾರೆ!

ಸಿದ್ಧಯ್ಯ ಪುರಾಣಿಕರ ಮತ್ತು ನನ್ನ ಪರಿಚಯವಾದಾಗ ಅವರು ಇನ್ನೂ ಬೆಳಗಾವಿಯ ಜಿಲ್ಹಾಧಿಕಾರಿಗಳಾಗಿದ್ದರು. ಒಂದು ಜಿಲ್ಹೆಯ ರಾಜ-ಅದೂ ಪ್ರಜಾರಾಜನಲ್ಲ-ಅಧಿಕಾರೀ ರಾಜ! ಸಾಮಾನ್ಯ ಜನರೊಂದಿಗೂ ಸಮನಾಗಿ ಬೆರೆತು ಯಾವ ಅಧಿಕಾರ ಠೀವಿಯ ಗೊಂದಲವಿಲ್ಲದೆ ನಗುತ್ತ ಕೆಲೆಯುತ್ತ ಇರುವುದನ್ನು ಕಂಡಾಗ ಸಹಜವಾಗಿ ನನಗೆ ಆ ವ್ಯಕ್ತಿಯ ಕುರಿತು

ಕುತೂಹಲ ಕೆರಳಿತು. ಅದನ್ನು ತೃಪ್ತಿ ಪಡಿಸಿದವರು ನಾಡಿನ ಇನ್ನೊಬ್ಬ ಶ್ರೇಷ್ಠ ಸಾಹಿತಿ ಶ್ರೀ ಮಿರ್ಜಿ ಅಣ್ಣಾರಾಯರು.

ಪರಿಚಯ ತುಸು ಹತ್ತಿರವಾಗುತ್ತಿದ್ದಾಗ ಒಮ್ಮೆಲೆ ಅವರಿಗೆ ಬೆಳಗಾವಿಯಿಂದ ಬೆಂಗಳೂರಿಗೆ ಲೇಬರ ಕಮಿಶನರ ಎಂದು ಬದಲಿಯಾದ ಸುದ್ದಿ ಬಂತು. ಮಾರನೆಯ ರವಿವಾರ ಅವರನ್ನು ಕಾಣುವದೆಂದು ನಿರ್ಧರಿಸಿ ನಾನು ಶ್ರೀ ಮಿರ್ಜಿ ಅಣ್ಣಾರಾಯರು, ಅವರಿಗೆ ಮೊದಲೆ ತಿಳಿಸಿ ಬೆಳಗಿನ ೮ ಗಂಟೆಗೆ-ಬೆಳಗಾವಿಯ ಡೆಪ್ಯುಟಿ ಕಮಿಶನರರ ಬಂಗ್ಲೆಯಲ್ಲಿ ಧ್ವಜ ಹಾಕಿದೆವು. ಸಿದ್ಧಯ್ಯ ಪುರಾಣಿಕರು ಆದೇ ಆಗ ಬೆಳಗಿನ ವಾಯುಸೇವನೆ ತೀರಿಸಿ ಸ್ನಾನಕ್ಕಿಳಿದಿದ್ದರಂತೆ. ಸೇವಕನೊಬ್ಬ ಆಮಿಸಿ ಅಧಿಕಾರಿಗಳ ದರ್ಬಾರ ಹಾಲಿನಲ್ಲಿ ಕರೆದೊಯ್ದು ಕುಳ್ಳಿರಿಸಿದ. ಆಗಲೇ ಪ್ರಾರಂಭವಾಗಿತ್ತು ನನ್ನ ಮನಸ್ಸಿನಲ್ಲಿ ಅವರ ಸಾಹಿತ್ಯ ಸೃಷ್ಟಿಯ ಸಿಂಹಾವಲೋಕನ.

ಸುಮಾರು ೨೨ ಪುಸ್ತಕಗಳ ಕರ್ತೃವಾದ ಸಿದ್ಧಯ್ಯ ಪುರಾಣಿಕರು "ಕಾವ್ಯಾನಂದ" ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದವರು. ಅವರ "ಮಾನಸ ಸರೋವರ" ಕಾವ್ಯ ಸಂಗ್ರಹ ಸರಕಾರದ ಬಹುಮಾನ ಗಿಟ್ಟಿಸಿದೆ. ಅದರ ಮುನ್ನುಡಿಯಲ್ಲಿ ನಾಡಿನ ಹಿರಿಯ ಕವಿ "ಪುತಿನ" ಅವರು "ಕಾವ್ಯಾನಂದರ ಕವನಗಳು ಹೂಗಳ ಹೃದಯವನು ಹೂಬಿಸಿಲು ಹೊಕ್ಕಂತೆ. ನಮ್ಮ ಮನಸ್ಸನ್ನು ಹೊಗುತ್ತವೆ." ಎಂದಿದ್ದಾರೆ. ಇನ್ನೊಂದು ಕವನ ಸಂಗ್ರಹ "ಜಲಪಾತ" ದಲ್ಲಿ ಅವರು ವರ ಕವಿ ಬೇಂದ್ರೆಯವರಿಂದ "ಕಾವ್ಯಾನಂದರ ಕಾವ್ಯರಚನೆಯ ಅಸ್ತಿಭಾರಕ್ಕೆ ತತ್ವಗಳ ತೂಕವಿರುವುದರಿಂದಲೇ ಅವರ ನುಡಿಗಳಲ್ಲಿ ಬೆಂಕಿಯ ಜತೆ-ಜತೆಗೆ ಬೆಳಕು ನುಗ್ಗುತ್ತದೆ" ಎಂದು ಬೆನ್ನು ಚಪ್ಪರಿಕೆಯನ್ನು ಗಳಿಸಿಕೊಂಡಿದ್ದಾರೆ. ಮತ್ತೊಂದು "ಕರುಣಾ-ಶ್ರಾವಣ" ದಲ್ಲಿ ಆಚಾರ್ಯ ಡಿ. ವ್ಹಿ. ಗುಂಡಪ್ಪನವರ ಪ್ರಶಂಸೆಯಿದೆ.

ಸುಮಾರು ಎಂಟುನೂರಕ್ಕೂ ಮಿಕ್ಕಿದ ಪುಟಗಳ ಸಂಶೋಧಿತ ಐತಿಹಾಸಿಕ ಬೃಹತ್ ಗ್ರಂಥ "ಶರಣ ಚರಿತಾಮೃತ" ದಲ್ಲಿ ನೂರೊಂದು ಶರಣರ ಚರಿತ್ರೆಗಳಿವೆ. ಅದರ ಮುನ್ನುಡಿಯಲ್ಲಿ ರಾಷ್ಟ್ರಕವಿ ಕುವೆಂಪು ಅವರು "ಶ್ರೀ ಸಿದ್ಧಯ್ಯ ಪುರಾಣಿಕರು ಅರ್ವಾಚೀನ ಶ್ರೀ ಸಾಮಾನ್ಯರಿಗೆ ಪ್ರಾಚೀನ ಸಾಮಾನ್ಯತಾಶ್ರೀಯನ್ನು ಸುಲಭ ಮಧುರ ರೂಪದಲ್ಲಿ ಉಣಬಡಿಸಿದ್ದಾರೆ"



ಎಂದು ಅವರನ್ನು ಮುಕ್ತ ಕಂಠದಿಂದ ಹೊಗಳಿದ್ದಾರೆ. ಅದೊಂದು ಕನ್ನಡ ಸಾರಸ್ವತ ಲೋಕದಲ್ಲಿ ಉತ್ಕೃಷ್ಟ ಗದ್ಯಗೋಪುರ.

ಇವಲ್ಲದೆ ನಾಟಕ-ಪ್ರಬಂಧ-ಕಥೆ ಕಾದಂಬರಿ ಮಕ್ಕಳ ಸಾಹಿತ್ಯದವರೆಗೂ ಅವರ ಸಾಹಿತ್ಯ ಕೃಷಿ ಹರಡಿದೆ. "ತುಪ್ಪಾ ರೊಟ್ಟಿ ಗೇ-ಗೇ" ಮಕ್ಕಳ ಪುಸ್ತಕಕ್ಕೆ ಭಾರತ ಸರಕಾರದ ಬಹುಮಾನವೂ ದೊರೆತಿದೆ. ಅಂತೆಯೇ ನನಗೆ ಆಶ್ಚರ್ಯ-ಜವಾಬ್ದಾರಿಯುತ ಸ್ಥಾನದಲ್ಲಿದ್ದುಕೊಂಡು ಸಾಹಿತ್ಯದ ಇಂಥ ವಿವಿಧ ಕ್ಷೇತ್ರಗಳಲ್ಲಿ ಕೈಯಾಡಿಸಿದ ಅವರ ಕರ್ತೃತ್ವ ಶಕ್ತಿಯ ಕುರಿತು. ಹಾಗೆ ನೋಡಿದರೆ ಭಾವನಾವಶನಾದ ಕವಿಯಾಗಿ, ಇಲ್ಲ-ಆದರ್ಶವಾದಿ ಸಾಹಿತಿಯಾಗಿ ಎಲ್ಲಿಯೂ ಅವರು ತನ್ಮ ಅಧಿಕಾರದಲ್ಲಿ ಅಯಶಸ್ವಿಯಾಗಿಲ್ಲ. ತದ್ವಿರುದ್ಧ ಹೋದಲ್ಲೆಲ್ಲ ಜನಪ್ರಿಯ ಅಧಿಕಾರಿಗಳಾಗಿದ್ದಾರೆ. ಅನೇಕ ಹೊಸ ಕೆಲಸಗಳನ್ನು ಮಾಡಿದ್ದಾರೆ.

೧೯೧೮ ರ ಜೂನ, ೧೮ ರಂದು ರಾಯಚೂರು ಜಿಲ್ಹೆಯ ಯಲಬುರ್ಗಾ ತಾಲೂಕಿನ "ದ್ಯಾಂಪುರ" ದಲ್ಲಿ ಜನಿಸಿದ ಸಿದ್ಧಯ್ಯ ಪುರಾಣಿಕರು ಮಾಜಿ ನಿಜಾಮನ ರಾಜ್ಯದವರು. ಆದರೆ ಅವರ ಜೀವನದಲ್ಲಿ ಮಾತ್ರ ಮೊಗಲಾಯಿ ದರ್ಬಾರ ಬಂದಿಲ್ಲ. ಅಚ್ಚುಕಟ್ಟು ಶಿಸ್ತುಸಂಯಮ ಬೇಕು ಅವರಿಗೆ. ಮನೆತನ ಶ್ರೀಮಂತರದೇ-? ಅಲ್ಲ ಉಂಡುಟ್ಟು ಸುಖದಿಂದಿರುವವರದು. ಅವರೇ ಹೇಳುವಂತೆ–ಪುರಾಣಿಕರು, ಜೋಶಿ, ಅಯ್ಯನವರು ಆಚಾರ್ಯರು ಎಂದಾದರೂ ಶ್ರೀಮಂತರಿದ್ದುದುಂಟೇ ?

ಚಿಕ್ಕಂದಿನಲ್ಲಿ ತಂದೆಯವರ ಹತ್ತಿರ, ಸೋದರ ಮಾವ ಕಾಲಕಾಲೇಶ್ವರ ಶಾಸ್ತ್ರಿಗಳ ಹತ್ತಿರ ಪ್ರಾಥಮಿಕ ಶಿಕ್ಷಣ ಮುಗಿಸಿ ಕುಕ್ಕನೂರಿನ "ಗುರುಕುಲ" ದಲ್ಲಿ ಸುಪ್ರಸಿದ್ಧ ಇತಿಹಾಸ ಸಂಶೋಧಕ ಪಾಂ. ಭೀ. ದೇಸಾಯಿಯವರ ಕಣ್ಣರಿಕೆಯಲ್ಲಿ ಮಾಧ್ಯಮಿಕ ಶಿಕ್ಷಣ ಮುಂದುವರಿಯಿತು. ಮೊದಲಿನಿಂದಲೂ ಚೂಟಿಯಾದ ಹುಡುಗ, ಪರೀಕ್ಷೆಗಳಲ್ಲೆಲ್ಲ ಪ್ರಥಮ ದರ್ಜೆ ಪ್ರಥಮ ರ್‍ಯಾಂಕು ಸಿದ್ಧಯ್ಯ ಪುರಾಣಿಕರಿಗೆ ಸಿದ್ಧವಾಗಿಯೇ ನಿಂತಿರುತ್ತಿದ್ದುವು. ಇಂತು ಗುಲಬರ್ಗಾ ಹೈದರಾಬಾದುಗಳಲ್ಲಿ ಪ್ರೌಢ ಶಿಕ್ಷಣ ಪೂರೈಸಿ ಬಿ. ಎ. ಪರೀಕ್ಷೆಯಲ್ಲಿ ಮೊಟ್ಟ ಮೊದಲ ಸ್ಥಾನ ಪಡೆಯುವ ಹೊತ್ತಿಗೆ ಕನ್ನಡ ತಾಯಿಯ ಭಕ್ತರಾಗಿಬಿಟ್ಟಿದ್ದರು. ಕನ್ನಡದಲ್ಲಿ ಭಾಷಣ, ಕಾವ್ಯರಚನೆ, ನಾಟಕ ರಚನೆ

ನಿರಾತಂಕವಾಗಿ ಸಾಗಿತ್ತು ಈ ದಿನಗಳಲ್ಲಿಯೇ ರಚಿಸಿದ ನಾಟಕ "ಆತ್ಮಾರ್ಪಣ" ದಲ್ಲಿ ಸ್ವತಃ ಬಸವೇಶ್ವರ ಪಾತ್ರವಹಿಸಿ ಯಶಸ್ವಿಯಾಗಿ ಅಭಿನಯಿಸಿದ್ದರು. ೧೯೪೩ ರಲ್ಲಿ ಅಂದರೆ ಬಿ. ಎ. ಆದ ಮರು ವರುಷವೇ ಪ್ರೊಬೆಶನರಿ ತಹಶೀಲದಾರರೆಂದು ಆಯ್ಕೆಗೊಂಡರು. ನಾಂದೇಡದಲ್ಲಿ ಕೆಲಸಕ್ಕೆ ಪ್ರಾರಂಭವಾಯಿತು. ಅಲ್ಲಿಂದೀಚೆಗೆ ಅವರು ಹಿಂದಿನ ನಿಜಾಂ ರಾಜ್ಯದಲ್ಲಿ ಇಂದಿನ ಕರ್ನಾಟಕ ರಾಜ್ಯದಲ್ಲಿ ಅನೇಕ ಇಲಾಖೆಗಳಲ್ಲಿ ಕೆಲಸ ಮಾಡಿ ದಕ್ಷರೆಂದೂ, ಕರ್ತವ್ಯ ನಿಷ್ಠರೆಂದೂ, ಪ್ರಾಮಾಣಿಕರೆಂದೂ ಹೆಸರು ಗಳಿಸಿದ್ದಾರೆ

ಅಧಿಕಾರಿಯೊಬ್ಬರು ಹೇಳಿದಂತೆ ಪುರಾಣಿಕರ ಬೆಳಗಾವ ಜಿಲ್ಹಾ ರಿಪೇರಿ ಕೆಲಸ ಅವರ ಬಂಗ್ಲೆಯಿಂದಲೇ ಪ್ರಾರಂಭವಾಯಿತಂತೆ! ಬಂಗ್ಲೆಗೆ ಬಣ್ಣ. ಮುಂದಿನ ವಿಶಾಲವಾದ ಅಂಗಳದಲ್ಲಿ ಹೂದೋಟ. ಅಲ್ಲಿ ಎಲ್ಲ ತರದ ಹೂವುಗಳು ನಮ್ಮನ್ನು ಗೇಟಿನಲ್ಲಿಯೇ ಸ್ವಾಗತಿಸುತ್ತವೆ. ಅಲ್ಲಲ್ಲಿ ಕಾಯಿಪಲ್ಲೆ ನೆಲಗಡಲೆಯನ್ನೂ ಬೆಳೆದಿದ್ದಾರೆ. ಅದೊಂದು ಚಿಕ್ಕ ಕೈತೋಟ ಕಮ್ ಹೂದೋಟ. ಪುರಾಣಿಕರು ಊರಲ್ಲಿದ್ದರೆ ಒಮ್ಮೆಯಾದರೂ ಆ ತೋಟದಲ್ಲಿ ಸುತ್ತು ಹೊಡೆದು ಹತ್ತು ನಿಮಿಷ ಅಲ್ಲಿಯ ಶಿಲಾಸನಗಳ ಮೇಲೆ ಕುಳಿತು ಬರದಿದ್ದರೆ ದಿನ ಪೂರ್ತಿಯಾಗುವುದಿಲ್ಲ. ಹೌದು, ಹಿಂದಿನ ಸಣ್ಣ ನೆನಪೊಂದು ಕಣ್ಣೆದುರಿಗೆ ಸುಳಿಯಿತು.

ಸಾಯಂಕಾಲ ಆರರ ನಂತರ ಒಮ್ಮೆ ಅವರ ಮನೆಗೆ ಫೋನು ಮಾಡಿದ್ದೆ. " ಸಾಹೇಬರು ತಿರುಗಾಡಲು ಹೋಗಿದ್ದಾರೆ " ಎಂದು ಉತ್ತರ ಬಂದಿತ್ತು. ಸರಿ, ನಾನು ಅಲ್ಲಿಯ ವರೆಗೆ ದಟ್ಟೋ-ದಟ್ಟೋ ಎಂದು ಹೋಗುವಷ್ಟರಲ್ಲಿ ಅವರ ತಿರುಗಾಟವೂ ಮುಗಿದಿರುತ್ತದೆಂದು ಬಂಗ್ಲಾಭಿಮುಖನಾಗಿದ್ದೆ. ನಾನು ಮುಟ್ಟುವಷ್ಟರಲ್ಲಿ ಅವರು ಬಂದಿದ್ದರೇನೋ ನಿಜ. ಆದರೆ ಇನ್ನೂ ಬಂಗ್ಲೆಯ ಒಳಗಡೆ ಬಂದಿರಲಿಲ್ಲ. ಸೇವಕ ನನ್ನನ್ನು ನೋಡಿ ಅರೆ-ಚಣ ಅಂತರ್ಧಾನನಾದ—ಮತ್ತೆ ಪ್ರತ್ಯಕ್ಷನಾಗಿ ಬನ್ನಿ ಎಂದ. ಅವನ ಬೆನ್ನು ಹಿಡಿದೆ. ತೋಟದ ಮೂಲೆಯೊಂದರಲ್ಲಿ ದಟ್ಟಗಿಡಗಳ ಮಧ್ಯ ಶಿಲಾಸನದ ಮೇಲೆ ಮೈ-ಕೈ-ಕಾಲು ಸಡಿಲು ಬಿಟ್ಟು ಒರಗಿದ್ದರು ಜಿಲ್ಹಾಧಿಕಾರಿಗಳು. ಆಗೆಲ್ಲ ಪುರಾಣಿಕರು ದಿನಕ್ಕೆ ೨೪ ಗಂಟೆ ಕೆಲಸ ಮಾಡುತ್ತಿದ್ದರೆಂದರೂ ಸರಿ. ಮಲಪ್ರಭೆಯ ನೀರು ಬಂದು ಮೂವತ್ತು ಹಳ್ಳಿಗಳು ಮುಳುಗಿದ ಅಭೂತ-



ಪೂರ್ವ ಕೆಲಸವನ್ನು ಅವರು ಯಶಸ್ವಿಯಾಗಿ ಯಾವ ಪ್ರಾಣ ವಿತ್ತಗಳ ಹಾನಿಯಿಲ್ಲದೆ ಕೈಗೊಂಡಿದ್ದರೆನ್ನುವಷ್ಟರಲ್ಲಿ ಭಯಂಕರ ಬರಗಾಲ ಹಣಕಿಕ್ಕಿತ್ತು. ಅದರ ಪರಿಹಾರ ಕಾಣುವಲ್ಲಿ ಅವರು ಅಹೋರಾತ್ರಿ ಶ್ರಮಿಸಿದ್ದಾರೆ. ಆದರೆ ಆ ಕುರಿತು ಅವರಿಗೆ ಎಳ್ಳಷ್ಟು " ಅಹಂ " ಇಲ್ಲ. " ನಾನು ಮಾಡಬೇಕಾದ ಕರ್ತವ್ಯ ಅದು—ಮಾಡಿದ್ದೇನೆ. " ಎಂಬ ತೃಪ್ತಿ ಮಾತ್ರ ಇದೆ. ಅದನ್ನೇ ನಮ್ಮೆದುರಿಗೆ ಹೇಳುವಾಗ " ಇದು ೨೮ ವರುಷಗಳ ಹಿಂದೆ ಬ್ರಿಟಿಶ ರಾಜ್ಯದಲ್ಲಿ ಬಂದ ಬಂಗಾಲದ ಬರಗಾಲವೇ! ಪ್ರಜಾರಾಜ್ಯವಿರದಿದ್ದರೆ ಮತ್ತೆ ಮೂವತ್ತೋ ನಾಲ್ವತ್ತೋ ಲಕ್ಷ ಜನರು ಸಾಯುತ್ತಿದ್ದರು! '' ಎಂದು ಹೇಳಿದ್ದರು. ಅಬ್ಬಾ! ನಾನದನ್ನು ಕೇಳಿ ದಂಗಾಗಿದ್ದೆ. ಯಾಕಂದರೆ ಕೇವಲ ವೃತ್ತಪತ್ರಿಕೆಗಳಲ್ಲಿ ಪ್ರಸ್ತುತ ಪಡಿಸಿದ ಹರಕು-ಮುರುಕು ಬರಗಾಲದ ವರ್ಣನೆಯನ್ನಷ್ಟೆ ಓದಿದವನು ನಾನು. ಮೇಲಾಗಿ ಬಜಾರದಲ್ಲಿ ತುಟ್ಟಿಯಾದರೂ ಚಿಂತೆಯಿಲ್ಲ ಸಾಮಾನು ಸಿಗುತ್ತಿತ್ತಲ್ಲ ಬರಗಾಲದ ಸ್ಪಷ್ಟ ಕಲ್ಪನೆ ನನಗಾಗಿರಲಿಲ್ಲ. ಆದರೆ ಆ ಸಾಮಾನು ಹೇಗೆ ಸಿಗುತ್ತದೆ. ಅದಕ್ಕೆ ಈ ಆಡಳಿತದ ಅಧಿಕಾರವರ್ಗ ಅಹೋರಾತ್ರಿ ಹೇಗೆ ಶ್ರಮಿಸುತ್ತದೆ ಎನ್ನುವುದನ್ನು ಪುರಾಣಿಕರ ಬಾಯಿಂದ ಕೇಳಿದಾಗ ಗೊತ್ತಾಗಿತ್ತು. ಇಷ್ಟಾಗಿಯೂ ದಣಿದ ಪುರಾಣಿಕರ ಮುಖದ ಸುಹಾಸ ಮಾತ್ರ ಮಾಸಿರಲಿಲ್ಲ. ಅಲ್ಲಿಯೇ ಸ್ವಾಗತಿಸಿ ಕ್ಷಣಹೊತ್ತು ಮಾತ–ನಾಡಿ ಶರಬತ್ತಿನೊಂದಿಗೆ ನನ್ನನ್ನು ಬೀಳ್ಕೊಟ್ಟಿದ್ದರು. ಬೆಳಗಾವಿಯ ಆ ಸುಳಿ ಚಳಿಯಲ್ಲಿ ಶರಬತ್ತಿನ ಅವಶ್ಯಕತೆ ನನಗೆ ಎಳ್ಳಷ್ಟೂ ಇರಲಿಲ್ಲ–ನಿಜ. ಆದರೆ ಪುರಾಣಿಕರಿಗೆ ಅವಶ್ಯಕತೆ ಇದ್ದಿತೇನೋ ? ಜಿಲ್ಹೆಯ ಹಸಿವನ್ನು ಚಿಂತಿಸಿದ ಆಡಳಿತದ ತಲೆಯೊಂದಿಗೆ ಕವಿ ಹೃದಯ ಕಲಕಿರಬೇಕು. ಹನಿ ಶರಬತ್ತು ಅದನ್ನು ಶಾಂತಗೊಳಿಸಿರಬೇಕು.

" ಇಂಥಾದ್ದರಾಗ ಸಾಹಿತ್ಯ........ಬರೆಯೋದು.........ಎಂದು ಕೇಳಬೇಕೆಂದಿದ್ದ ನನ್ನ ಮೂರ್ಖ ಪ್ರಶ್ನೆಯನ್ನು ಮಧ್ಯದಲ್ಲಿಯೇ ತಡೆದು ಹೇಳಿದ್ದರು.

" ಮೊದಲು ಬದುಕಬೇಕರೀ............ಕುಲಕರ್ಣಿ ! "

ಎಂಥ ಜೀವಂತ ಕವಿ ಎನಿಸಿತ್ತು.

ಮೊದಲು ಬದುಕಬೇಕು ಎನ್ನುವ ಪುರಾಣಿಕರು ಬರಡು ಬಾಳ-

ನ್ನೆಂದೂ ಬಯಸಿದವರಲ್ಲ. ಇದ್ದುದರಲ್ಲಿ ಒಪ್ಪವಾಗಿ ಓರಣವಾಗಿ ಬಾಳುತ್ತ, ಸದಭಿರುಚಿಯೊಂದಿಗೆ ನಗು ನಗುತ್ತ ಬದುಕಬೇಕು ಎನ್ನುತ್ತಾರೆ. ಅವರ ದರ್ಬಾರ ಹಾಲಿನಲ್ಲಿ ಕಾಲಿಟ್ಟ ತಕ್ಷಣ ಎದುರಿಗೆ ಗಂಧದ ಕೊರಡಿನಲ್ಲಿ ಕಡೆದ ಗೀತೋಪದೇಶವಿದೆ. ಎಡಬಲದ ಗೋಡೆಗಳಲ್ಲಿ ಕಂಚಿನ-ಹಸ್ತಿದಂತದ ಸುಂದರ ವಿಗ್ರಹಗಳು ಯಾವದೋ ವಸ್ತು ಸಂಗ್ರಹಾಲಯದಲ್ಲಿ ಕಾಲಿಟ್ಟಂತೆ ಭಾಸ! ಮಧ್ಯ ಸಧ್ಯಃರಾಷ್ಟ್ರಪತಿಗಳು. ಮತ್ತೆ ಆ ಬದಿಯ ಗೋಡೆಯಲ್ಲಿ ಪತ್ನೀಸಮೇತ ಸ್ವವರ್ಣಚಿತ್ರ. ಕೆಳಗಡೆ ರೇಡಿಯೋ ಗ್ರಾಮು. ಹಾಗೆಯೇ ಈ ಬದಿಯ ಗೋಡೆಯ ಮೇಲೆ ಕಣ್ಣು ಹಾಯಿಸುತ್ತಿರುವಂತೆ ಒಳಬಂದರು ಸಿದ್ಧಯ್ಯ ಪುರಾಣಿಕರು.

ಮೈಯಲ್ಲೊಂದು ತೆಳ್ಳನ್ನ ಜುಬ್ಬ- ಲುಂಗಿ, ಎರಡೂ ಕೈಜೋಡಿಸಿ ಸುಹಾಸ ವದನರಾಗಿ " ನಮಸ್ಕಾರ " ಎನ್ನುತ್ತ ಒಳಬರುತ್ತಿರುವಂತೆ ನಾವೂ ಗೌರವ–ದ್ಯೋತಕ ಎದ್ದು ನಿಲ್ಲಬೇಕೆನ್ನುವಷ್ಟರಲ್ಲಿ—

" ಕೂತು ಕೊಳ್ಳಿ........ಕೂತುಕೊಳ್ಳಿ ಪರವಾ ಇಲ್ಲ........" ಎಂದರು. ಪ್ರಜಾರಾಜರಂತೆ ಮೈಬಿಡದ-ಪ್ರಜೆಗಳಂತೆ ಬಡಕಲಲ್ಲದ-ಅಧಿಕಾರೀ ಮಧ್ಯಮ ದೇಹ. ನೀಳ ನಾಸಿಕದ ಮೇಲೆ ಹರವಾದ ಹಣೆ. ಹೊಳೆಯುವ ಕಣ್ಣುಗಳು, ನಾಲ್ಕೇ ನಾಲ್ಕು ಕೂದಲುಗಳು ಓರಣವಾಗಿ ಬಲಹಣೆಯನ್ನು ಅಲಂಕರಿಸಿರುತ್ತವೆ. ನಗುಮುಖದ ಸಾದುಗಪ್ಪಿನ ಪುರಾಣಿಕರ ಹಣೆ ಬಿಗಿದದ್ದನ್ನು ಎಂದೂ ಕಂಡೇ ಇಲ್ಲವೆಂದರೂ ಸರಿ. ಹತ್ತಾರು ಭಾಷಣಗಳಾಗಿರಲಿ. ದೂರದ ಕ್ಯಾಂಪನ್ನು ಮುಗಿಸಿ ಧೂಳು ತುಂಬಿದ ರಸ್ತೆ ದಾಟಿ ಬಂದಾಗಲೂ ಸರಿ, ಯಾವುದೋ ಮಂತ್ರಿಯ ಆರಭಾರ ಹಿಡಿದು ಕಳಿಸಿ ಬಂದಾಗಲೂ ಸರಿ ಸದಾ ಹಸನ್ಮುಖಿ.

ಸಾಹಿತ್ಯದ ಕುರಿತು ಚರ್ಚಿಸಬೇಕೆಂದು ಮುದ್ದಾಮ ಬಂದ ನಮ್ಮ ಮಾತು ಕತೆಗೆ ಹೇಗೆ ಪ್ರಾರಂಭ ಮಾಡಬೇಕೆಂದು ಯೋಚಿಸುವಷ್ಟರಲ್ಲಿ ಜೊತೆಗಾರ ಮೋಹನ ಮುತಾಲಿಕ ಆ ಭಾರವನ್ನು ಇಳಿಸಿದರು.

" ನೀವು ಸಹಸಃ ಬರೆಯುವದು ಯಾವಾಗ ? "

" ಹಾಗೆ ನಿಶ್ಚಿತವಾಗಿ ಹೇಳಲಾರೆ. ಎಲ್ಲೋ ಕಾರಿನಲ್ಲಿ ಹೊರಟಿರುತ್ತೇನೆ. ಯಾವುದೋ ದೃಶ್ಯ–ದೃಷ್ಟಿಗೆ ಬೀಳುತ್ತದೆ—ಮನಸ್ಸಿಗೆ ಹಿಡಿಸುತ್ತದೆ.



ಆಗಲೇ ಮನಸ್ಸಿನಲ್ಲಿ ಕಾಂಪೋಜಿಂಗ ಪ್ರಾರಂಭವಾಗಬಹುದು. ಇಲ್ಲ ಮನೆಗೆ ಬಂದು ಮಲಗುವಾಗಲೋ ಮಾರನೆಯ ಬೆಳಿಗ್ಗೆಯೋ ಅದರ ಮೆಲಕು ಹಾಕಿದಾಗ ಮೂರ್ತಿಯಾಗಿರುತ್ತದೆ ಬರೆಯಬೇಕು ಎನ್ನಿಸಿದರೆ ಬರೆದು ಬಿಡುವೆ. ಸಾಮಾನ್ಯವಾಗಿ ನಾನು ಹಾಗೆ ಬರೆಯುವದು ಕವಿತೆಗಳನ್ನು. ಮೂಲತಃ ನಾನು ಕವಿಯೇ ಹೊರತು ಬರಹಗಾರನಲ್ಲ. "

ಆಗಲೇ ನಾನು ಕೇಳಿದ್ದೆ—

" ಭಾವ ಜೀವಿಯಾದ ನೀವು, ಇಂದಿನ ವಂಚನೆಯ ಜೀವನವನ್ನು ಹೇಗೆ ತಡೆದುಕೊಳ್ಳುವಿರಿ ? "

" ಹೌದು. ಸಹಿಸಲು ತುಸು ತೊಂದರೆಯಾಗುತ್ತದೆ ಸರಕಾರೀ ನೌಕರನಾಗಿದ್ದುದರಿಂದ ತಡೆದುಕೊಳ್ಳಲೇ ಬೇಕು. ಅನಿವಾರ್ಯವೆನಿಸಿದಾಗ ಅಂಥ ಪ್ರಸಂಗಗಳೂ ನನ್ನ ಬರವಣಿಗೆಯಲ್ಲಿ ಬಂದಿವೆ—ಅಂತೂ ಕಡಿಮೆ. "

ಅಂದರೆ ನೌಕರಿ ಮುಗಿದ ಮೇಲಾದರೂ ಅಂಥ ವಾಸ್ತವ ಕೃತಿಗಳನ್ನು ನಿಮ್ಮಿಂದ ಅಪೇಕ್ಷಿಸಿದರೆ ತಪ್ಪಿಲ್ಲವೆಂದುದಕ್ಕೆ–ಪುರಾಣಿಕರ ಮುಗುಳ್ನಗೆಯೇ ಅದಕ್ಕೆ ಉತ್ತರವಾಯಿತು.

" ಆದರೆ-ಇಂದಿನ ಸಂಕೀರ್ಣ ಜೀವನದಲ್ಲಿ ಆ ನಿಮ್ಮ ಪ್ರಾಸಬದ್ಧ—ವರ್ಣನಾತ್ಮಕ ಕವಿತೆಗಳಿಂದಾಗಲೀ-ಆದರ್ಶವನ್ನು ಹೊತ್ತು ತರುವ ಗದ್ಯದಿಂದಾಗಲೀ ಯಾವ ಪ್ರಯೋಜನ. ಜನ ಸಂಪರ್ಕ ಜೊತೆಗೆ ವಿಶೇಷ ಆಡಳಿತದ ಅನುಭವವಿದ್ದ ನಿಮ್ಮಿಂದ ಜೀವನದ ಹೆಚ್ಚಿನ ವಾಸ್ತವ ಚಿತ್ರ ಸಿಗಬಹುದಲ್ಲ ? "

" ಹೌದು. ಆದರೆ ನಾನು ಪ್ರಾಸಬದ್ಧ ಕವಿತೆಗಳನ್ನು ಬರೆಯಬಾರದು ಎನ್ನುವ ಹಟ ನಿಮಗೇಕೆ ? ನೋಡಿ ಸಾಹಿತ್ಯದಿಂದ ಜೀವನಕ್ಕೆ ಪ್ರಯೋಜನವಿದೆಯೇ ? ಎನ್ನುವುದೇ ಒಂದು ವಾದಗ್ರಸ್ತ ವಿಷಯ. ನನಗಂತೂ ಅದರಿಂದ ತಕ್ಷಣದ ಯಾವ ಪರಿಣಾಮವೂ ಆಗುವ ಬಗ್ಗೆ ನಂಬಿಕೆ ಇಲ್ಲ. ಬರೆಯಬೇಕು ಎನ್ನುವುದು ಸ್ವ–ಸಮಾಧಾನಕ್ಕಾಗಿ. ಆ ಬರವಣಿಗೆಯ ಪ್ರಯೋಜನ ಅಥವಾ ಪರಿಣಾಮ ಸುತ್ತಲಿನ ಸಮಾಜದಮೇಲೆ–ಜೀವನದ ಮೇಲೆ ಆದೀತು–ಆಗಲಿಕ್ಕಿಲ್ಲ. ''

"ಪರಿಣಾಮ ಅನಿಶ್ಚಿತವೆಂದು ನಿಮ್ಮ ಅಭಿಪ್ರಾಯ."

"ಹಾಗಲ್ಲ—ಅದೊಂದು ಮಂದಗತಿಯ ಕ್ರಿಯೆ, ಶತಮಾನಗಳ ಹಿಂದೆ ಬರೆದ ರಾಮಾಯಣ-ಮಹಾಭಾರತಗಳ ಪರಿಣಾಮ ಎಷ್ಟರಮಟ್ಟಿಗೆ ಆಗಿದೆ. ಸಂಪೂರ್ಣ ರಾಮರಾಜ್ಯ-ಧರ್ಮರಾಜ್ಯ ಬಂದಿದೆಯೆ? ಆದ್ದರಿಂದ ಹೇಳಿದೆ. ಆ ಮಹಾಕಾವ್ಯಗಳೊಂದಿಗೆ ಮುಂದೆ ಬಂದ ಎಲ್ಲ ಕೃತಿಗಳ ಪ್ರಭಾವ ಮಿಶ್ರಣ ಯಾವುದೋ ರೂಪದಲ್ಲಿ ಸಮಾಜದ ಮೇಲೆ ಕಿಂಚಿತ್ ಪರಿಣಾಮ ಬೀರಬಹುದು."

"ಅದೂ ನಿಜ— ಆದರೆ ಇಂದಿನ ವಾಸ್ತವ ಸಾಹಿತ್ಯದ ಹೆಸರಿನಲ್ಲಿ ಬರುತ್ತಿರುವ ನವ್ಯ ಸಂಪ್ರದಾಯದ ಬರವಣಿಗೆಯ ದಿನಗಳಲ್ಲೂ ನಿಮಗೆ ಮೊದಲಿನಂತೆಯೇ ಬರೆಯಬೇಕು ಎನ್ನಿಸುತ್ತದೆಯೆ?"

"ಹೌದು—ಆದರೆ ಈ ವಿಷಯವನ್ನು ಹಿಂದೊಮ್ಮೆ ನನ್ನ ಭಾಷಣದಲ್ಲಿ ಹೇಳಿರುವೆ–ನಾನೂ ಮಣ್ಣಿನ ಮಗ–ಮಣ್ಣಿನಲ್ಲಿಯೇ ಬೆಳೆದವನು. ನನಗೂ ಮಣ್ಣಿನ ವಾಸನೆ ಬಡಿಯುತ್ತದೆ. ಅದರ ಜತೆಗೆ ಮಣ್ಣಿನಲ್ಲಿಯೇ ಹುಟ್ಟುವ ಮಲ್ಲಿಗೆಯ ವಾಸನೆಯೂ ಮೂಗಿಗೆ ಬಡಿದಾಗ ನಾನೇಕೆ ಬೇಡವೆನ್ನಲಿ? ಅದನ್ನೂ ಅನುಭವಿಸುವೆ."

"ಅಂದರೆ ನವ್ಯರಿಗೆ ಸಂಪೂರ್ಣ ಪ್ರಜ್ಞೆ ಇಲ್ಲ. ಆದ್ದರಿಂದ ಅದರಲ್ಲಿ ಅರ್ಥವಿಲ್ಲ."

"ಹಾಗಲ್ಲ— ನಿಮ್ಮ ಪ್ರಕಾರ ಹಳೆಯದೆಲ್ಲ ಅರ್ಥ ಪೂರ್ಣವಾಗಿ ಬಂದಿದೆ ಎನ್ನಬೇಕಾದೀತು. ನನಗೊಬ್ಬನಿಗೆ ಬೇಡ ಎಂದ ತಕ್ಷಣ ಜಗತ್ತಿಗೇ ಬೇಡವಾಯಿತೆ? ಸತ್ವಯುತವಾದ ಸಾಹಿತ್ಯಕ್ಕೆ ಯಾವ ಹಣೆಪಟ್ಟಿಯೇ ಇರಲಿ ಅದು ಚಿರಕಾಲ ಉಳಿಯುವ ಕೃತಿಯಾಗಿದ್ದರೆ ಉಳಿದೇ ಉಳಿಯುತ್ತದೆ. ಅದಕ್ಕೆ ಯಾರ ಜಾಹೀರಾತೂ ಬೇಡ. ನವ್ಯರೆಂದೇ ಹೆಸರು ಗಳಿಸಿದ ಹಿರಿಯ ಕವಿ ಅಡಿಗರ ಕವಿತೆಗಳಲ್ಲಿ ಅಂಥನೆಷ್ಟನ್ನೋ ಉದಹರಿಸಬಹುದು."

"ಆದರೂ ಈ ನವ್ಯರು ಎಬ್ಬಿಸುವ ಗೊಡಗಿನಿಂದ ಹಳೆಯರ ತಿಳಿನೀರು ಕಲಕಿದೆಯೆಂಬರಾಗವಿದೆಯಲ್ಲ?—ನೀವೆಲ್ಲ ಜೀವಂತ ಕವಿಗಳಲ್ಲ!"

"ಅದೇ ತಪ್ಪು ಕಲ್ಪನೆ. ಎಷ್ಟು ಜನ ಈ ನವ್ಯ ಕವಿತೆಗಳನ್ನು–ಕಥೆಗಳನ್ನು ಓದುತ್ತಾರೆ? ಯುಗ ಪ್ರವರ್ತಕರೆನಿಸಿದ ಬೇಂದ್ರೇ–ಕುವೆಂಪು ಅವರ ಕೃತಿಗಳನ್ನೇ ಪೂರ್ತಿ ಓದದ ಜನರ ಮೇಲೆ ಈ ಸಾಹಿತ್ಯದಿಂದ ಯಾವ ಪ್ರಯೋಜನ-ಪರಿಣಾಮ ಆದೀತು? ಎಲ್ಲಿಯೋ ನಾಲ್ಕು ಜನ ಬರೆದರೆ ಹತ್ತು ಜನ ಓದಿದರು. ಅವರದೇ ಗುಂಪು. ಇದೊಂದೇ ಏಕೆ? ಇಂಥ ವಿವಿಧ ಅಭಿರುಚಿಯ ಗುಂಪುಗಳಿಲ್ಲವೆ? ಪ್ರತಿ ಗುಂಪಿನ ಸಾಹಿತ್ಯ ತನ್ನ ಪಾಲಿನ ಕೆಲಸವನ್ನು ಮಾಡುತ್ತಿರುತ್ತದೆ. ಹೋಳಿಹುಣ್ಣಿಮೆ ಪದಗಳ ರಸಿಕರ ಗುಂಪು, ಮಹಾಕಾವ್ಯಗಳಲ್ಲಿಯ ಕೇವಲ ಶೃಂಗಾರ ಸನ್ನಿವೇಶಗಳನ್ನಷ್ಟೆ ಸವಿಯುವ ಸವಿಗಾರರು. ಅಂತೆಯೇ 'ಭಿನ್ನತೆ' ಜೀವನದ ಗುಣಧರ್ಮ. ಈ ಭಿನ್ನತೆಯಲ್ಲಿ ಜೊಳ್ಳು ಹಾರಿ–ಕಾಳು ಉಳಿಸುವ ಕೆಲಸ 'ಕಾಲ' ನ ಕೆಲಸ. ನಾವು ಜೀವಂತರು–ಸತ್ತವರು ಎಂಬುದನ್ನು ಈ ಕಾಲವೇ ನಿರ್ಧರಿಸೀತು ಇಂದೋ ಮತ್ತೆಂದೋ."

ಅವರ ಮೇಲೆ ಪ್ರಭಾವ ಬೀರಿದ ಸಾಹಿತಿಗಳ ಕುರಿತು ಕೇಳಿದಾಗ–ಉರ್ದು ಮಾಧ್ಯಮ ಶಿಕ್ಷಣ ಪಡೆದ ಸಿದ್ಧಯ್ಯ ಪುರಾಣಿಕರು ತಮ್ಮ ಮೇಲೆ ನಿಶ್ಚಿತವಾಗಿ ಇಂಥವರದೇ ಪ್ರಭಾವ ಬಿದ್ದಿದೆ ಎನ್ನಲು ಸಿದ್ಧರಿಲ್ಲ. ಕನ್ನಡದ ಹಳೆಯ ಕವಿಗಳನೇಕರ ಜೊತೆಗೆ ಇಂದಿನ ಬೇಂದ್ರೆ–ಕುವೆಂಪುದ್ವಯರಂತೂ ಸರಿಯೇ ಸರಿ. ಅಲ್ಲದೆ ಉರ್ದು ಭಾಷೆಯ ಗಾಲಿಬ್, ಪರ್ಶಿಯದ ಖಯ್ಯಾಮ-ಇಕ್ಬಾಲ ಸೂದಿ, ಇಂಗ್ಲೀಷಿನ ವರ್ಡ್ಸ್‌ವರ್ಥ, ಶೆಲ್ಲಿ, ಕೀಟ್ಸ ಇವರ ಕಾವ್ಯವೂ ಅವರ ಮೇಲೆ ಸಾಕಷ್ಟು ಪ್ರಭಾವ ಬೀರಿದೆ ಎಂದು ಅವರೇ ಒಪ್ಪುತ್ತಾರೆ. ಅದಕ್ಕೆ ಅವರದೇ ಆದ ಒಂದು ಉದಾಹರಣೆಯೂ ಸಿದ್ಧವಿತ್ತು. ನದಿಯಲ್ಲಿಯ ಬೆಣಚುಕಲ್ಲು ಯಾವ ತೆರೆಯಿಂದ ಗುಳುಗುಳಿತವಾಗಿದೆಯೆಂದರೆ ಹೇಳಲು ಸಾಧ್ಯವೆ? ಹಾಗೆ, ಕನ್ನಡದಲ್ಲಿ ಅವರಿಗೆ ಮೆಚ್ಚಿಗೆಯಾದ ಕವಿಗಳಲ್ಲಿ ಬೇಂದ್ರೆ-ಕುವೆಂಪು ಇಬ್ಬರಿಗೂ ಸರಿಸಮನಾದ ಗೌರವಗಳು. ಕುಮಾರವ್ಯಾಸನ ನಂತರ ಇನ್ನೊಬ್ಬ ರೂಪಕ ಚಕ್ರವರ್ತಿ ಬೇಂದ್ರೆಯಾದರೆ, ಮಹಾಕಾವ್ಯ ಪ್ರಜ್ಞೆಯ ಪ್ರಗಲ್ಭ ಪಾಂಡಿತ್ಯದ ಪ್ರತಿರೂಪ ಕುವೆಂಪು ಬಗ್ಗೆಯೂ ಅಮಿತ ಆದರ. ಆದರೆ ಕನ್ನಡ ಗದ್ಯದ ಕುರಿತು ಇನ್ನೂ ಹೇಳಿಕೊಳ್ಳುವಂಥ ಗದ್ಯಸೃಷ್ಟಿ ನಮ್ಮಲ್ಲಿ ಆಗಲಿಲ್ಲ. ಇದ್ದುದರಲ್ಲಿ ಎ.ಆರ್.ಕೃ-ಡಿವ್ಹಿಜಿ ಅವರ ಗದ್ಯವನ್ನು ಮೆಚ್ಚುತ್ತಾರೆ.

ಕನ್ನಡ ಸಾಹಿತ್ಯದಿಂದಲೂ, ಇತ್ತೀಚಿನ ದಿನಗಳಲ್ಲಿ ಕೈತುಂಬ ಅಲ್ಲದಿದ್ದರೂ ಸಾಕಷ್ಟು ಹಣ ಸಿಗುತ್ತಿದೆ ಎನ್ನುತ್ತಾರೆ ಪುರಾಣಿಕರು. ಅವರಿ

ಗಂತೂ ಈ ಕನ್ನಡ ತಾಯಿಯ ವರಪ್ರಸಾದ ಸಾಕಷ್ಟಾಗಿದೆ. ಅಷ್ಟೇ ಅಲ್ಲ ಬಹುಶಃ ಆದರಿಂದ ಅವರು ತಮ್ಮ ಕೆಲಸದಲ್ಲಿ ಭ್ರಷ್ಟಾಚಾರದಿಂದ ದೂರವಿರಲೂ ಸಹಾಯ ಮಾಡಿದೆ. ಈಗ ಒಂದು ಮಾತನ್ನು ತಪ್ಪದೆ ಸ್ಮರಿಸಿದರು. ಇಷ್ಟೆಲ್ಲ ತಮ್ಮ ಯಶಸ್ಸಿನ ಶ್ರೇಯಸ್ಸಿನಲ್ಲಿ ತಮ್ಮ ಪತ್ನಿಯ ಭಾಗವೂ ಸಮನಾಗಿದೆ. ಶ್ರೀಮತಿ ಗಿರಿಜಾದೇವಿ ಪುರಾಣಿಕರು–ಇದ್ದುದರಲ್ಲಿ ತೃಪ್ತರಾಗಿ, ಹೆಚ್ಚಿನ ಆಶೆ-ಆಮಿಷಗಳಿಗೆ ಬಲಿಯಾಗಲಿಲ್ಲವೆಂದೇ ಸಿದ್ಧಯ್ಯ ಪುರಾಣಿಕರು, ಸಾಹಿತ್ಯ-ಅಧಿಕಾರ ಉಭಯ ರಂಗಗಳಲ್ಲಿಯೂ ಯಶಸ್ವಿಯಾದರು. ಅವರ ತುಂಬು ಜೀವನದ ಈ ಹಿರಿಮೆಗೆ, ಅವರ ಸುಖ-ದುಃಖಗಳಲ್ಲಿ ಸಹಭಾಗಿನಿಯಾಗಿ ಅವರ ಕಾವ್ಯಗಳಿಗೆ ಸ್ಫೂರ್ತಿದಾಯಿನಿಯಾಗಿರುವ ಸಹಧರ್ಮಿಣಿ ಗಿರಿಜಾದೇವಿಯವರೂ ಕಾರಣರು.

ಇಚ್ಛೆನರಿವ ಸತಿ—ಕೈಯಲ್ಲಿ ಅಧಿಕಾರ—ಮೂರು ಹೆಣ್ಣು ಒಂದು ಗಂಡು, ಪುರಾಣಿಕರ ಈ ಚೌಕೋನೀ ಕುಟುಂಬ ಮೊದಲಿನಿಂದಲೂ ಸುಖವನ್ನೇ ಕಂಡದ್ದೆಂದು ಒಂದು ಕ್ಷಣ ಭಾವಿಸಬಹುದು. ಆದರೆ ರಜಾಕಾರರ ಹಾವಳಿಯ ದಿನಗಳನ್ನು ನೆನೆಸಿಕೊಂಡಾಗ ಪ್ರತಿದಿನವೂ ಅವರಿಗೆ ಪುನರ್ಜನ್ಮವಾಗಿತ್ತಂತೆ. ಸಾಮಾನ್ಯ ನಾಗರಿಕರಂತೆ ತಲೆಮರೆಸಿಕೊಳ್ಳುವದೂ ಅವರಿಗೆ ಅಸಾಧ್ಯವಾಗಿತ್ತು. ಆಗಣ ದಿನಗಳಲ್ಲಿ ಅವರು ಗುಲಬರ್ಗಾದಲ್ಲಿ ಅಸಿಸ್ಟಂಟ ಕಮಿಶನರ ಎಂದು ಕೆಲಸ ಮಾಡುತ್ತಿದ್ದರು. ಮಡದಿ ಮಕ್ಕಳನ್ನು—ಹೆಂಡತಿಯ ತೌರುಮನೆ ಧಾರವಾಡಕ್ಕೆ ಕಳಿಸಿ ಬಿಟ್ಟಿದ್ದರು. ತಾವು ಪ್ರತಿದಿನ ಇರುವ ಸ್ಥಳವನ್ನು—ಮಲಗುವ ಸ್ಥಳವನ್ನು ಬದಲಿಸುತ್ತ ದಿನ ನೂಕಿದ—ದಿನಗಳನ್ನು ಈಗಲೂ ನೆನೆಸಿಕೊಂಡಾಗ ಮೈ "ಜುಂ" ಎನ್ನುತ್ತದೆ. ಅದರ ಬೆನ್ನು ಹಿಂದೆಯೇ ಸರದಾರ ಪಟೇಲರಿಗೆ ಅಪಾರ ಗೌರವದ ಶ್ರದ್ಧಾಂಜಲಿಗಳು. "ನಾವೆಲ್ಲ ಇಂದು ಕಲೆಕ್ಟರರಾಗಿಯೋ, ಇನ್ನೇನಾಗಿಯೋ ಮನೆದೀಪ ಹಚ್ಚುತ್ತಿರುವುದು ಪಟೇಲರ ಪುಣ್ಯ" ಎನ್ನುತ್ತಾರೆ.

ಸಾಹಿತ್ಯದಿಂದ ವಿಷಯ ದೇವರು, ಅಧ್ಯಾತ್ಮದತ್ತ ಹೊರಳುತ್ತಿರುವಾಗ ಪುರಾಣಿಕರು ಕುಳಿತಲ್ಲಿಂದಲೇ ಹೊರಗಡೆಗೆ ಲಕ್ಷ್ಯ ಹಾಕಿದರು. ಅಲ್ಲಿ ನಮಗಾಗಿ ಬೆಳಗಿನ ಉಪಹಾರದ ವ್ಯವಸ್ಥೆ ನಡೆದಿತ್ತೆಂದು ಕಾಣುತ್ತದೆ. ವ್ಯವಸ್ಥೆ ಸರಿಯಾಗಿ ನಡೆದಿದೆ ಎಂದು ಗೊತ್ತಾದಾಗ ಮತ್ತೆ ಮಾತಿಗೆ ಪ್ರಾರಂಭ.



"ಅಲ್ಲ........ದೇವರ ಅವಶ್ಯಕತೆ ಇದೆಯೆ? ಅವನು ಇದ್ದಾನೆ—ಇಲ್ಲವೆನ್ನುವ ಚಿಂತೆಗಿಂತ ಅವನ ಅಸ್ತಿತ್ವವಾದರೂ ಯಾಕೆ? ಅವನಿಂದೇನು ಪ್ರಯೋಜನ?" ಎಂದು ಕೇಳಿದೆ. ಯಾಕಂದರೆ ಆ ದೇವರು ಇರಲಿ-ಬಿಡಲಿ, ನಾನು ದುಡಿಯುವುದು ತಪ್ಪಿಲ್ಲ. ಮೂವತ್ತು ದಿನ ದುಡಿದ ಮೇಲೆ ಬರುವ ಸಂಬಳಕ್ಕೆ ಇನ್ನೊಬ್ಬನ ಹಂಗು ಯಾಕೆ? ಆತ ಇರುವ ಇಲ್ಲದಿರುವ ವೃಥಾ ಚಿಂತೆ ಏಕೆ?

ಒಂದು ಕ್ಷಣ ನಿಂತು ಪುರಾಣಿಕರು ಹೇಳಹತ್ತಿದರು-

"ನೋಡಿ, ನನಗಂತೂ ದೇವರ ಅವಶ್ಯಕತೆ ಇದೆ. ಯಾಕಂದರೆ ನನಕಿಂತಲೂ ದೊಡ್ಡದಾದ-ಶಕ್ತಿಯೊಂದು ಇದೆ ಎಂದು ತಿಳಿದರೆ ದುರಹಂಕಾರ ಬೆಳೆಯುವದಿಲ್ಲ. ನನಗಿಂತ ಇನ್ನಾರೂ ಹೆಚ್ಚಿಲ್ಲವೆಂದು ಈ ನನ್ನ ತಲೆ ಕೆಡದಿರಲು ನನಗೆ ಒಬ್ಬ ದೇವನ ಅವಶ್ಯಕತೆ ಇದೆ."

"ಸರಿ, ಆದರೆ ಆ ಒಬ್ಬನಿಗಾಗಿ ಎಷ್ಟು ಭೇದ?"

"ಅದು ನಮ್ಮ ಜ್ಞಾನವಿಕಾಸಕ್ಕಾಗಿ. ಆದರೆ ಯಾವುದೇ ಜ್ಞಾನವಿಕಾಸದ ದಾರಿ ಕೇವಲ ಪಥವಾಗಿಯಷ್ಟೇ ಉಳಿಯಬೇಕು ಪಂಥವಾಗಬಾರದು. ದೇವರು ಒಬ್ಬನೆ. ಒಂದೇ ಬೇರು. ಆದರೆ ಆ ವೃಕ್ಷ ಬೆಳೆದಂತೆ ಕಸಿ ಮಾಡುವ ಕಾರ್ಯ ಕೆಟ್ಟದೇನಲ್ಲ. ಒಳ್ಳೆಯದನ್ನು ಸ್ವೀಕರಿಸೋಣ."

"ನೀವು ಅರವಿಂದರ ಗುಂಪಿನವರು ಎನ್ನುತ್ತಾರಲ್ಲ?"

"ಅಲ್ಲ" ಎಂದರು. ನಾನು ಯಾವ ಗುಂಪಿಗೂ ಸೇರಿದವನಲ್ಲ ಒಳ್ಳೇಯದೆನ್ನುವುದನ್ನು ಎಲ್ಲರಿಂದಲೂ ಪಡೆಯಲು ಪ್ರಯತ್ನಿಸಿದ್ದೇನೆ. ಅರವಿಂದರಂತೆ, ರಾಮಕೃಷ್ಣ ಪರಮಹಂಸರು-ವಿವೇಕಾನಂದರ ಕುರಿತೂ ನನಗೆ ಪೂಜ್ಯಭಾವನೆ ಇದೆ."

"ನಮಗೊಂದು ನಿರ್ದಿಷ್ಟ ಮತ ಪಂಥವಿದ್ದಾಗ ನಡು ಮಧ್ಯ ಯಾರನ್ನಾದರೂ ಅನುಸರಿಸುವದು ಸರಿಯೆ? ತಲೆ ತಲಾಂತರಗಳಿಂದ ಅನುಸರಿಸುತ್ತ ಬಂದ ನಮ್ಮ ಸಂಸ್ಕಾರ—ಸಂಸ್ಕೃತಿಗಳ ಪೂರ್ಣ ತಿಳುವಳಿಕೆ ನಮಗಾಗದಿದ್ದಾಗ ಒಮ್ಮೆಲೆ ಇನ್ನೊಬ್ಬ ಅರವಿಂದರನ್ನೋ-ಪರಮಹಂಸರನ್ನೋ ಇಲ್ಲ ಬಾಬಾರನ್ನೊ ಬೆನ್ನು ಹತ್ತುವಲ್ಲಿ ಏನರ್ಥವಿದೆ?"

"ಹೇಳಿದೆನಲ್ಲ, ನಾನಂತೂ ಹಾಗೆ ಬೆನ್ನು ಹತ್ತಿಲ್ಲ. ಬೇರು ಬದಲಿಸ

ಬಾರದು. ಹಾಗೆ ನೋಡಿದರೆ ನಾನು ಕುರಾನ್, ಬಾಯಬಲ್ ಗೀತೆ-ಶೂನ್ಯ ಸಂಪಾದನೆ, ಅವೆಸ್ಥಾ ಎಲ್ಲವನ್ನೂ ಮೂಲದಲ್ಲಿಯೇ ಓದಿದ್ದೇನೆ. ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಿದ್ದೇನೆ. ಅವುಗಳಲ್ಲೆಲ್ಲ ಚನ್ನಾಗಿದ್ದುದನ್ನು ನನ್ನ ಜೀವನದಲ್ಲೂ ಅಳವಡಿಸಿಕೊಳ್ಳಲು ಪ್ರಯತ್ನಿಸಿದ್ದೇನೆ. ಅಧ್ಯಾತ್ಮ ಅಥವಾ ಸತ್ಯಾನ್ವೇಷಣೆ ಮೂಲತಃ ನಮಗಾಗಿ-ಹೊರತು ದೇವರಿಗಲ್ಲ. ನಮ್ಮ ವೈಯಕ್ತಿಕ ಬೆಳವಣಿಗೆಗೆ. ಬುದ್ಧಿಯ ವಿಕಾಸಕ್ಕೆ ಒಳ್ಳೆಯದನ್ನು ಹೆಕ್ಕಿಕೊಳ್ಳುವ ಹಕ್ಕು ನಮಗಿದೆ."

ಬಹುಶಃ ಅವರು ಬರೆದ ನೂರಾರು ವಚನಗಳಲ್ಲಿ ಈ ಪಕ್ವ ವಿಚಾರ ಬಂದಿರಲೂ ಸಾಕು.

ಹೊರಗಿನ ವ್ಯವಸ್ಥೆ ಪೂರ್ತಿಯಾಗಿತ್ತೆಂದು ಕಾಣುತ್ತದೆ. "ಅದನ್ನಷ್ಟು ಬಗೆಹರಿಸೋಣ ನಡೆಯಿರಿ" ಎಂದರು. ಹೋಗಿ ಕುಳಿತುಕೊಂಡೆವು. ಅಲ್ಲಿ, ಅಂಟಿನ ಉಂಡಿ, ಬರ್ಫಿ ಮತ್ತು ಬಿಸಿ-ಬಿಸಿ ಇಡ್ಲಿಗಳು ನಮಗಾಗಿ ಕಾದಿದ್ದುವು. ಉಂಡಿಯನ್ನು ತಿನ್ನುತ್ತ,

"ಬದಲಾಗುವ ರಾಜಕಾರಣಿಗಳಿಂದ, ಆಡಳಿತದ ಮೇಲೆ, ಅಧಿಕಾರದ ಮೇಲೆ ಪರಿಣಾಮ ಆಗುತ್ತದೆಯೆ? ನಿಮ್ಮ ಅನುಭವವೇನು?" ಎಂದೆ.

"ಅಂಥ ಹೇಳಿಕೊಳ್ಳುವಂಥ ಬದಲಾವಣೆಗಳೇನೂ ಆಗುವುದಿಲ್ಲ. ಸುಮಾರಾಗಿ ನಾನಂತೂ ಅವರ ಹತ್ತಿರ ಹೆಚ್ಚು ಸಂಪರ್ಕ ಬೆಳೆಸ ಹೋಗುವುದಿಲ್ಲ. ಯಾರೇ ಬರಲಿ ಹೋಗಲಿ, ನನ್ನ ಕಕ್ಷೆಯಲ್ಲಿರುವ ಕೆಲಸವನ್ನು ಸಾಧ್ಯವಿದ್ದಷ್ಟು ಸರಿಯಾಗಿ ಮಾಡಲು ಪ್ರಯತ್ನಿಸುವೆ" ಎಂದರು.

"ವಶೀಲಿಯ ಒತ್ತಾಯ ಬಂದರೆ?"

"ನಿಷ್ಠುರನಾಗಿರುವೆ........" ಅವರೇ ಹೇಳಿದ ಒಂದೆರಡು ಉದಾಹರಣೆಗಳಿಂದ ಕವಿ-ಕಾವ್ಯಾನಂದರ ಅಧಿಕಾರ ದಕ್ಷತೆಯ ಅರಿವಾಗುತ್ತದೆ. ಬೆಂಗಳೂರಿನಲ್ಲಿದ್ದಾಗ, ಒಂದು ಸಲ ಅಸಂತುಷ್ಟಗೊಂಡ ಕೆಲ ಪೀತ ಪತ್ರಿಕೆಗಳು "ನಿಮ್ಮ ಮೇಲೆ ಬರೆಯುತ್ತೇವೆ" ಎಂದು ಬೆದರಿಕೆ ಹಾಕಿದುವಂತೆ. ಅದಕ್ಕೆ ಪುರಾಣಿಕರು "ಆದಷ್ಟು ಬೇಗ ಬರೆಯಿರಿ ಮತ್ತು ಸಾಧ್ಯವಿದ್ದಷ್ಟು ಖಾರವಾಗಿರಲಿ, ನಮ್ಮ ನಿಮ್ಮ ಸಂಬಂಧ ಅನ್ಯೋನ್ಯವಾಗಿದ್ದಷ್ಟು ಜನರಿಗೆ ಸಂಶಯ" ಎಂದರಂತೆ.



"ಪ್ರಚಲಿತ ರಾಜಕಾರಣದ ಬಗ್ಗೆ ನಿಮ್ಮ ಅಭಿಪ್ರಾಯ?"

"ಸಾಮಾನ್ಯ ಜನರ ಕುರಿತು ಇನ್ನಷ್ಟು ಹತ್ತಿರ ಬರಬೇಕು. ಅವರ ಏಳ್ಗೆಗಾಗಿ ಇನ್ನೂ ಪ್ರಯತ್ನ ಆಗಬೇಕು."

"ಅಂದರೆ?"

"ಬೃಹತ್ ಕಾರ್ಯಗಳ ಹೆಸರಿನಿಂದ ಯಾವುದೋ ಒಂದು ಭವ್ಯ ಅಣೆಕಟ್ಟಿನ ನಿರ್ಮಾಣದ ಮುಂದಗತಿಯ ಬೆಳವಣಿಗೆಗಿಂತ ಪ್ರತಿ ಹಳ್ಳಿ-ಹಳ್ಳಿಗಳಿಗೂ ಚಿಕ್ಕ ನೀರಾವರಿ ಯೋಜನೆಗಳನ್ನು ಕೈಕೊಂಡರೆ ಹೆಚ್ಚು ಹಿತವಾದೀತು. ಶತಕೋಟಿ ರೂಪಾಯಿಗಳ ವೆಚ್ಚದಿಂದ ಕಟ್ಟಿದ ತುಂಗಭದ್ರೆಯ ಅಣೆಕಟ್ಟಿನಿಂದ ಕಾಲು ಶತಮಾನ ತಡೆದ ಮೇಲೆ, ಆ ಭಾಗದ ನಾಲ್ಕೋ-ಎಂಟೋ ತಾಲೂಕಿನ ಜನರು ಮಾತ್ರ ಶ್ರೀಮಂತರಾದರು. ಸುಖಿಗಳಾದರು. ಉಳಿದ ಭಾಗದ ಜನರು ಹಾಗೆಯೇ ಉಳಿದರು. ಅದೇ ಹಣವನ್ನು ಇನ್ನಷ್ಟು ಹೆಚ್ಚಿನ ಪ್ರದೇಶಗಳ ಅಭಿವೃದ್ಧಿಗೆ ಉಪಯೋಗಿಸಲು ಸಾಧ್ಯವಿತ್ತು. ಹೀಗೆ ಪ್ರಥಮ ಹಂತದಲ್ಲಿ ಪ್ರತಿಯೊಂದು ಕುಟುಂಬಕ್ಕೂ ಪ್ರಯೋಜನ ಒದಗಿಸಿದ ನಂತರ ಬೃಹತ್ ಕಾರ್ಯಗಳನ್ನು ಕೈಕೊಂಡಿದ್ದರೆ ಹೆಚ್ಚು ಅನುಕೂಲವಾಗುತ್ತಿತ್ತು. ನಾನಿದನ್ನು ಎರಡನೆಯ ಪಂಚವಾರ್ಷಿಕ ಯೋಜನೆಯ ಆರಂಭದಲ್ಲಿಯೇ ಹೇಳಿದ್ದೆ. ಅದು ಈಗ ತುಸು ಮಟ್ಟಿಗೆ ಕಾರ್ಯಗತವಾಗುತ್ತಿರುವುದು ಸಂತೋಷದ ವಿಷಯ. ಒಟ್ಟಿನಲ್ಲಿ ಸಾಧ್ಯವಿದ್ದಷ್ಟು ದ್ರವ್ಯದ ಸಮಾನ ವಿತರಣೆಯಾಗಬೇಕು."

"ಇಷ್ಟೆಲ್ಲ ಅನುಭವದ ಹಿನ್ನೆಲೆಯಲ್ಲಿ...." ಎನ್ನುತ್ತಿರುವಂತೆ "ತಕ್ಕೊಳ್ಳಿ" ಎಂದು ಮತ್ತೆ-ಮತ್ತೆ ಇಡ್ಲಿ ಚಟ್ನಿಯನ್ನು ಬಡಿಸಿದರು.

"ಈ ನಿಮ್ಮ ಅನುಭವವನ್ನು ಪ್ರತ್ಯೇಕವಾಗಿ ಪುಸ್ತಕದಲ್ಲಿ ತರುವುದು ಅವಶ್ಯ ಮತ್ತು ಹೆಚ್ಚು ಉಪಯುಕ್ತ" ಎಂದೆ.

"ಹೌದು, ಆ ವಿಚಾರ ಇದೆ. ಸಧ್ಯದ ವೇಳೆಯ ಅಭಾವ ನೋಡಿದರೆ ಬಹುಶಃ ರಿಟ್ಯಾರ ಆದಮೇಲೆಯೇ ಬರೆಯುವಂತಾದಿತು. : ನೋಡೋಣ ಅವಕಾಶ....ಆಯುಷ್ಯ..."

"ಅಂದ ಹಾಗೆ ಇನ್ನು ಎಷ್ಟು ವರ್ಷ ಸರ್ವೀಸು?"

"ನಾಲ್ಕು ವರುಷ."

ನಾಲ್ಕು ವರುಷಗಳ ನಂತರ ಪುರಾಣಿಕರು ಮನಸ್ಸು ಮಾಡಿದರೆ ನಾಡಿನ ಅಭಿವೃದ್ಧಿಯ ಕುರಿತು ಆಡಳಿತ ಚಕ್ರದ ಕೈದೀಪವಾಗಿ ಒಂದು ಅಲಭ್ಯ ಗ್ರಂಥ ಸಿಗುವ ಭರವಸೆ ಇದೆಯಂತಾಯಿತು. ಇದಲ್ಲದೆ ನಾಂದೇಡದಿಂದ ಮಡಿಕೇರಿಯವರೆಗೆ ನೌಕರಿ ಮಾಡಿದ ಪುರಾಣಿಕರು ನೃಪತುಂಗನ ಕಾವೇರಿಯಿಂದಮಾ ಗೋದಾವರಿ ವರೆಗಿನ ಕನ್ನಡ ನಾಡೆಲ್ಲವನ್ನೂ ನೋಡಿ ಬಂದಿದ್ದಾರೆ. ಈ ಹಿನ್ನೆಲೆಯಲ್ಲಿ ಐತಿಹಾಸಿಕ ಕಾದಂಬರಿಯೊಂದನ್ನು ಬರೆಯುವ ವಿಚಾರವೂ ಇದೆಯೆಂದು ಹೇಳಿದರು. ಚಹ ಕುಡಿದು ಏಳುವ ಹೊತ್ತಿಗೆ ಗಂಟೆ ಹನ್ನೊಂದು ಮೀರಿತ್ತೆಂದು ಕಾಣುತ್ತದೆ.

"ಕ್ಷಮಿಸಿ ಬಹಳ ಸಮಯ ತೆಗೆದುಕೊಂಡೆವು" ಎನ್ನುತ್ತ ಎದುರಿಗಿದ್ದ ತಟ್ಟೆಯಲ್ಲಿಯ ಯಾಲಕ್ಕಿಯೊಂದನ್ನು ಒಡೆದು ಬಾಯಲ್ಲಿಟ್ಟುಕೊಳ್ಳುವಾಗ, "ಪರವಾಯಿಲ್ಲ....ನಾವೆಷ್ಟೋ ಒಳ್ಳೆಯದನ್ನು ಚರ್ಚಿಸಿದ್ದೇವೆಂಬ ಸಂತೋಷ ನನಗಿದೆ" ಎಂದು ಮತ್ತೊಮ್ಮೆ ನಕ್ಕು ಎರಡೂ ಕೈ-ಜೋಡಿಸಿ ನಮಸ್ಕರಿಸಿದರು. ನಮ್ಮ ಜತೆಗೆಯೆ ಕೆಳಗಿಳಿದು ಗೇಟಿನವರೆಗೂ ಬಂದರು. ಬೀಳ್ಕೊಂಡು ಬಂಗ್ಲೆಯಿಂದ ಹೊರಬಂದಾಗ ಬಾಯಿಯಲ್ಲಿನ್ನೂ ಯಾಲಕ್ಕಿಯ ವಾಸನೆ ಗಮಗಮಿಸುತ್ತಿತ್ತು. ಬೆಳಗಾವಿಯ ನಡುನೆತ್ತಿಯ ಆ ಸೂರ್ಯನ "ಹೂ" ಬಿಸಿಲಿನಲ್ಲಿ ಆಕಾಶದತ್ತ ಕಣ್ಣು ಹೊರಳಿಸಿದಾಗ ಪುರಾಣಿಕರ ಪದ್ಯದ ಸಾಲೊಂದು ತುಟಿಯ ಮೇಲೆ ತಂತಾನೆ ಪುಟಪುಟಿಸಿತು.

"ಬಗೆಯ ಬಾಂದಳದಲ್ಲಿ ಬಣ್ಣವೇಳರ
ಬಿಲ್ಲದಿಬ್ಬಣ ಸಾಗಿದೆ.
ಎಲ್ಲೊ ಒಂದೆಡೆ ಭಾವ ಬುದ್ಧಿಯ
ಹಸೆಗೆ ನಿಲ್ಲುವ ಹಾಗಿದೆ."

ಅವರೊಂದು ಹಾಲು ತುಂಬಿದ ಕೊಡ!

೧೨ ಹಿಂದವಾಡಿ
ಬೆಳಗಾವಿ

—*—





# ದೃಷ್ಟಿ ಮತ್ತು ಕಾವ್ಯಸೃಷ್ಟಿ

* ಮಿರ್ಜಿ ಅಣ್ಣಾರಾಯ

೧

ಕವಿಯೊಬ್ಬ ರಸಋಷಿ. ಅವನು ರಸಿಕನಾಗಿರುವಷ್ಟೇ ಋಷಿಯೂ ಆಗಿರುತ್ತಾನೆ. ಕವಿಯ ರಸಿಕತೆಯನ್ನು ಜನ ಸಾಮಾನ್ಯರು ಸಹಜವಾಗಿ ಗುರುತಿಸಬಹುದು. ಆದರೆ ಅವನ ಋಷಿತ್ವವನ್ನು ಕಂಡು ಹಿಡಿಯುವುದು ಅಷ್ಟು ಸುಲಭವಲ್ಲ. ಅದಕ್ಕೆ ಅವನ ಕಾವ್ಯದ ಅಭ್ಯಾಸ, ಸಹವಾಸ ಮತ್ತು ನಿರೀಕ್ಷಣೆಗಳ ಅವಶ್ಯಕತೆಯು ಇದೆ. ಇವುಗಳನ್ನೆಲ್ಲ ಸಾಧಿಸಿಯೂ ಒಬ್ಬ ಕವಿಯನ್ನು ಇಲ್ಲವೆ ಅವನ ಕಾವ್ಯವನ್ನು ಸಂಪೂರ್ಣವಾಗಿ ಅರಿಯುವೆನೆನ್ನುವುದು ಕೂಡ ಸಾಹಸದ ಸಂಗತಿಯಾಗಿದೆ. ಅದರೊಡನೆ ವಿಮರ್ಶಿಸುವೆನೆನ್ನುವನಂತೂ, ದಿಟ್ಟತನವೆನಿಸುವುದು. ಅದರಲ್ಲೂ ಈಗ ನಮ್ಮೊಡನೆ ಕೂಡಿ, ಆಡಿ, ಬಾಳಿ, ಬೆಳೆಯುತ್ತಿರುವ ಕವಿಯ ಕಾವ್ಯವನ್ನು ಸಮಾಲೋಚಿಸುವುದು ಇನ್ನೂ ಕಷ್ಟದ ಕಾರ್ಯವಾಗಿದೆ. ಆದರೆ, ಕನ್ನಡದಲ್ಲಿ ಈ ಕಾರ್ಯವು ಈಗ ನಡೆಯಬೇಕಾಗಿದೆ. ಹೊಸಗನ್ನಡ ಕವಿಗಳನ್ನು ಕುರಿತು ವಿಮರ್ಶೆಯು ನಡೆಯಬೇಕು. ಆಯಾ ಕವಿಗಳ ಕಾವ್ಯದ ಬೆಲೆಯು ನಿಶ್ಚಿತಗೊಳ್ಳಬೇಕು. ಗುಣವುಳ್ಳುದು ಬೆಳಕಿಗೆ ಬರಬೇಕು. ನಿರ್ಗುಣವಾದುದು ನಿರಾಕಾರದಲ್ಲಿ ಲಯಗೊಳ್ಳಬೇಕು. ಹೊಸ ಸೃಷ್ಟಿಗೆ ಅದರಿಂದ ಆಸ್ಪದವು ಒದಗೀತು. ಸಾಹಿತ್ಯ ಪ್ರಪಂಚದೊಳಗಿನ ಗೊಂದಲವೂ ತಪ್ಪೀತು. ಇವೆಲ್ಲ ಅಪೇಕ್ಷೆಯಿಂದ ಶ್ರೀ "ಕಾವ್ಯಾನಂದ" ರ ಕಾವ್ಯಸೃಷ್ಟಿಯನ್ನು–ಹದಿನೈದು ವರ್ಷಗಳಿಂದ ಸತತವಾಗಿ ನಡೆದ ಅವರ ಕಾವ್ಯ ಕೃಷಿಯನ್ನು–ಸಮಾಲೋಚಿಸುವುದು ಅನಪೇಕ್ಷಿತವಾಗಲಿಕ್ಕಿಲ್ಲವಷ್ಟೇ? ಇದರಿಂದ ಹೆಚ್ಚಿನ ಲಾಭವಾಗದಿದ್ದರೂ ಹೊಸಗನ್ನಡ ಕಾವ್ಯಪ್ರೇಮಿಗಳಿಗೆ ಒಂದಿಷ್ಟು ರಸವನ್ನು ಸವಿಯುವುದಕ್ಕೆ

ಸಹಾಯುವಾದರೂ ಆಗಬಹುದಲ್ಲ. ಇಷ್ಟಾದರೂ ವಿಮರ್ಶೆಯ ಕಾರ್ಯ ಸಫಲವೆನ್ನಬಹುದಾಗಿದೆ. ಅಷ್ಟೇ ಈ ಲೇಖನದ ಉದ್ದೇಶವಾಗಿದೆ.

೨

"ಋಷಿಯಾಗದವ ಕವಿಯಾಗಲಾರ"—ಎಂಬುದೊಂದು ಆರ್ಷವಾಚನವಿದೆ. ಕವಿ ಪ್ರತಿ ಸೃಷ್ಟಿಕರ್ತ. ಅವನಲ್ಲಿಯ ಆ ಸೃಜನ ಶಕ್ತಿಗೆ ಮೂಲ ಕಾರಣವು ಅವನಲ್ಲಿರುವ ಋಷಿತ್ವವೇ. ಈ ಋಷಿತ್ವದಿಂದಲೇ ಕವಿಯು ಬ್ರಹ್ಮನೆನಿಸುತ್ತಾನೆ. ಈ ಕವಿಬ್ರಹ್ಮನಿಗೆ ಒಂದು ಮೂಲ ದೃಷ್ಟಿ ಇರುತ್ತದೆ. ಅದು ವಿಶ್ವಕವಿ ಪ್ರಪಂಚಕ್ಕೇನೇ ಸಾಧಾರಣವಾದುದು. ಆದರೂ ಆಯಾ ಕವಿಗಳ ಆತ್ಮರುಚಿ, ಪೂರ್ವಜನ್ಮದ ಸಿದ್ಧಿ, ಇಹದ ಸಾಧನೆಗಳಿಂದ ಆ ಮೂಲ ದೃಷ್ಟಿಯು ವಿವಿಧ ಅಂಶಗಳಲ್ಲಿ ವ್ಯಕ್ತವಾಗುತ್ತದೆ. ಆ ಅಂಶಿತ ರೂಪವು ಮೂಲ ಬೃಹತ್ ಶಕ್ತಿಯ ಒಂದು ಎಸಳೇ ಎಂಬುದರಲ್ಲಿ ಸಂಶಯವಿಲ್ಲ. ಆ ಎಸಳು ಕವಿಯ ಸಾಧನೆಗೆ ಅನುಸರಿಸಿ ಸುಗಂಧವನ್ನು ಬೀರಲು ಸಮರ್ಥವಾಗುತ್ತದೆ.

ಕವಿಯು ಸಾಧಕ, ಆರಾಧಕ. ಅವನ ಆರಾಧನೆಯು ಯಾವುದೋ ಒಂದು ಅನಂತವನ್ನು ಶಾಂತಗೊಳಿಸಿ ಪ್ರಕಟಿಸಲು ಯತ್ನಿಸುತ್ತಿರುತ್ತದೆ. ಆ ಯತ್ನ ಏನು, ಏಕೆ,—ಎಂಬುದರ ಅರಿವೂ ಕೂಡ ಕವಿಯು ಹೊರ ಮನಸ್ಸಿಗೆ ನಿಲುಕುವುದಿಲ್ಲ. ಅವನಿಗೆ ತನ್ನ ಅಂತರ್ಯದಲ್ಲಿ "ಎಲ್ಲೊ ಒಂದೆಡೆ ಭಾವ ಬುದ್ಧಿಯು ಹಸೆಗೆ ನಿಲ್ಲುವ ಹಾಗಿದೆ."*—ಎಂದೇನೋ ಎನ್ನಿಸುತ್ತದೆ. ಆಗ "ಕವನ ಜನನ" ವಾಗುತ್ತದೆ. ಇಂಥ ರಸೋದಯದ ಕಾಲ—ಮಂಗಳ ಸಮಯ—ಜೀವನದಲ್ಲಿ ಮೇಲಿಂದಮೇಲೆ ಒದಗುತ್ತಿರುವುದಿಲ್ಲ, ಭಾವ ಬುದ್ಧಿಗಳ ಲಗ್ನದ ಸುಮೂರ್ತ ಹೊಂದಿ ಬರಬೇಕು. ಅದಕ್ಕೆ "ಎನಿತೊ ದಿನಗಳು ಕಳೆದಮೇಲಿದೊ ಮತ್ತೆ ಮಸಗಿದೆ ಮಂಗಳ." ಈ ಮಂಗಲ ಸಮಯಕ್ಕಾಗಿ ಕವಿಯ ಆತ್ಮವು ಒಂದೇ ಸವನೆ ಹಾತೊರೆಯುತ್ತಿರುತ್ತದೆ. ಹೊರಗಿನ ಜೀವನದಲ್ಲಿ ಕವಿಯು ಹೇಗೆ ಹೇಗೋ ಹೊಂದಿಕೊಂಡು ತನ್ನ ಬಾಳ ನೌಕೆಯನ್ನು ನೂಕುತ್ತಿದ್ದರೂ ಅವನ ಅಂತರಂಗವೆಲ್ಲ ಆ ಭಾವ ಕನ್ನಿಕೆಯ ಮಂಗಳ ಕಾರ್ಯಕ್ಕೇನೇ ಧಾರೆಯೆರೆದು ಹೋಗಿ

* ಕಾವ್ಯಾನಂದರ "ಮಾನಸ ಸರೋವರ" ಪು. ೫.



ರುತ್ತದೆ. ಅಂತಲೇ ಅವನ "ಬಗೆಯ ಬಾನಲಿ ಬಣ್ಣವೇಳರ ಬಿಲ್ಲ ದಿಬ್ಬಣಸಾಗಿದೆ." ಅದರಲ್ಲಿ "ನೀಲಮೇಘದ ಮೇಣೆ ನೂರಿವೆ." ಅವು ಮಿಂಚಿನ ಹೆಂಗಳನ್ನು ಹೊತ್ತು ಸಾಗುತ್ತಿವೆ. ನಡು ನಡುವೆ "ಮೇಣೆ ಮೇಣೆಗೂ ಇಣಿಕಿ ನೋಡುವ ಮಿಂಚಿನಂಗನೆಯಾಸ್ಯವು" ಕವಿಯ ದೃಷ್ಟಿಗೆ ಬೀಳುತ್ತಿದೆ. ಎಲ್ಲೆಡೆಗೂ ಆಕಾಶದಲ್ಲಿ ಬಣ್ಣಬಣ್ಣದ ಹಕ್ಕಿಗಳ ಬಾವುಟಗಳು ! ಎಲ್ಲೆಡೆ ಚಂದ ಚಲ್ಲುವರಿದಿದೆ. ಶುಭದಲ್ಲಿ ಶೋಭೆ ಸೇರಿದೆ. ಸತ್ಯ ಸೌಂದರ್ಯಗಳು ಸೇರಿ ಶಿವನನ್ನು ರೂಪಿಸುತ್ತಿವೆ. ಆ ಸುಲಗ್ನದಲ್ಲಿ,

"ಹೊಳೆವ ತುಂತುರ್ವನಿಯೆ ಅಕ್ಷತೆ
ಸಾಂಧ್ಯಸ್ವರ್ಣಮೆ ಅರಿಶಿನ
ಹೊಂಗದಿರ ಮಾಂಗಲ್ಯ ಸಂಜೆಯೆ
ಕೆಂಪು ಕುಂಕುಮ ಚಂದನ" *

ವಾಗಿ ಪ್ರಕೃತಿಯೇ ಕವಿಯ ಭಾವಕನ್ನಿಕೆಯ ಲಗ್ನಕ್ಕೆ ಸಿದ್ಧವಾಗಿ ನಿಂತಿದೆ ಇಲ್ಲಿ. ಬುದ್ಧಿ ಮದುಮಗನಾದರೂ ಅವನ ಸದ್ದೇ ಇಲ್ಲಿ ಇಲ್ಲ. ಬುದ್ಧಿ ಹಿಂದೆ ದೂರದಲ್ಲಿ ಸರಿದು ನಿಂತಾಗಲೇ ಭಾವ ಪ್ರವಣತೆಯಿಂದಾಗುವದಲ್ಲವೇ ಕಾವ್ಯ ಜನನ ? ಆ ವಿಶ್ವದೃಷ್ಟಿಯ ಸಂದೇಶ ಇಲ್ಲಿದೆ.

ಹೀಗೆ "ಕವನ ಜನನ" ವಾಗುವ ಕಾಲಕ್ಕೆ ಕವಿ ಹೃದಯದಲ್ಲಿ ಒಂದು ತರದ ಪ್ರಸೂತಿವೇದನೆಯೇ ನಡೆದಿರುತ್ತದೆ. ಆಗ ಹೊರಗಿನ ಯಾವ ಶಕ್ತಿಗಳೂ ಆ ಜನ್ಮಕ್ಕೆ ತಡೆಯನ್ನು ಒಡ್ಡಲಾರವು. ಎಲ್ಲೆಲ್ಲಿಂದಲೋ ಭಾವದ ಹೊನಲುಗಳು ಪ್ರವಾಹಗಳಾಗಿ ಅಲ್ಲಿ ಧುಮುಕುತ್ತವೆ. "ಕಲ್ಪನಾ ವಿಲಾಸ" ದಲ್ಲಿ "ಭಾವಸುಂದರಿ"ಯು ಮೈವೆತ್ತಿ ನಿಲ್ಲುತ್ತಾಳೆ. ಆಗ "ಕಲೆಗಾರ"ನ ಮನಸ್ಸೊಂದು "ಜಲಪಾತ." ಅದರ ಅಬ್ಬರಕ್ಕೆ ಈ ಹೊರಗಣ್ಣು ಮುಚ್ಚಿ ಬಗೆಗಣ್ಣು ಅರಳುತ್ತದೆ. ಪ್ರಾತಿಭ ಚಕ್ಷು ಅನಿಮಿಷ ನೇತ್ರವಾಗಿ ನಿಂತು ತನ್ನ ಕಾರ್ಯವನ್ನು ಎಸಗುತ್ತದೆ. ಆಗ ಅರೂಪವಿದ್ದುದು ರೂಪುಗೊಂಡು ಅವತರಿಸುವಾಗ ಭಾವ ಸೃಷ್ಟಿಯ ಮೂಲ ಪದಾರ್ಥ ಎಲ್ಲಿಂದ, ಏನು ಎಂಬುದನ್ನು ಯಾರು ಅರಿಯಬಲ್ಲರು ? ಇದನ್ನೇ ಕವಿಯು,

* "ಮಾನಸ ಸರೋವರ" ಪು. ೬,

ಯಾವ ಕಡಲಿನ ಉಗಿಯೊ ಯಾವ ಸರಸಿಯ ಉಸಿರೊ
ಮೋಡವಾಗಿಹುದೆಲ್ಲಿ ತಂಪುವಡೆದು
ಭಾರವಾಯಿತು ಎಲ್ಲಿ ತೂರಿ ತಂದಿದು ಯಾವ
ಗಾಳಿಯಿಲ್ಲಿಗೆ ಇದನು ಅರಿವುದರಿದು ! *

ಎಂದು ಉಸುರುತ್ತಾನೆ. ಕಾವ್ಯ ಸೃಷ್ಟಿಯ ಉಗಮವೇ ಹಾಗಿರುತ್ತದೆ. ಕವಿಯ "ಮನಶ್ಶೈಲ ಶಿಖರಕೆ" ಅದು ತಾನಾಗಿಯೇ ಸಾರಿ ಬಂದು ಎರಗುತ್ತದೆ. ಭಾವ ನೀರದ ಕವಿಯ ಮನಶ್ಶೈಲ ಶಿಖರಕ್ಕೆ ಎರಗುವುದೇನೋ ನಿಜ. ಆದರೆ ಕವಿಯ ಮನಸ್ಸೂ ಶೈಲ ಶಿಖರದಂತೆ ಸುತ್ತಲಿನ ನೆಲವನ್ನು ಬಿಟ್ಟು ಮೇಲೆದ್ದಿರಲಿಕ್ಕೆ ಬೇಕು. ಸಾಗಿ ಹೋಗುವ ಮೋಡಗಳನ್ನು ಸೆಳೆದು ಮಳೆ ಸುರಿಯಿಸಿಕೊಳ್ಳುವ ಸಾಮರ್ಥ್ಯವನ್ನು ಪಡೆದಿರಬೇಕು. ಅದಕ್ಕೆ ಕವಿಯ "ಬಾಳರುಚಿ"ಯು ಹಸನಾಗಿರಲಿಕ್ಕೆ ಬೇಕು. ಅದು ನಾಲ್ಕು ಮುಖವಾಗಿರಬಹುದು. ಇಲ್ಲವೆ ನಲವತ್ತು ಮುಖವಾಗಿರಬಹುದು. ಜಡ ಸೃಷ್ಟಿಯೊಳಗಿನ ಜೋಗಿನ ಜಲಪಾತವೇನೋ ನಾಲ್ಕು ಮುಖವಾಗಿ ಹಾರುತ್ತಿರಬಹುದು. ಅದರಿಂದ ಪ್ರಚೋದನಗೊಂಡ ಕಾವ್ಯ ಸೃಷ್ಟಿಯೊಳಗಿನ ಜಲಪಾತಕ್ಕೆ ಅನಂತ ಮುಖ. ಅದು "ಹಾರಿ ಹರಿಯುತಲಿಹುದು, ಹಾಡಿ ಮೊರೆಯುತಲಿಹುದು, ಹಾಡಾಗಿ ಹರಿಯುವುದೆ ಬಾಳ ಸುಖವಾಗಿ !" ಕವಿಯ ಜೀವನದ ಸುಖವು ಅವನ ಕಾವ್ಯ ಸೃಷ್ಟಿಯಲ್ಲಿದೆ. ಅಂತಲೇ ಅದು ಧೈರ್ಯವಾಗಿ "ತನಗಾಗಿ ಆರಿಸಿದ ದಾರಿಯೇ ಬೇರೆಯಿದೆ" ಎಂದು ಧ್ವನಿಗೈಯುತ್ತಿದೆ. ಮಾರ್ಗವೇ ವೈಶಿಷ್ಟ್ಯಪೂರ್ಣವಾಗಿದ್ದಾಗ ಆದರಲ್ಲಿ ಎಲ್ಲಿಂದ ಬಂದು, ಯಾವ ನೀರು ಹರಿದರೇನು ? ವೃಕ್ಷವು ಭೂಮಿಯೊಳಗಿನ ರಸವನ್ನು ಹೀರಿ, ತನ್ನ ತನಿವಣ್ಣಿನ ರಸವನ್ನು ನೀಡಿದಂತಲ್ಲವೇ ಕಾವ್ಯರಸ ಸೃಷ್ಟಿ ? ಆ ಇನಿದಾದ ಮಾವಿನಲ್ಲಿರುವ ರಸದ ಆತ್ಮವಾಗಿರುವ ನೀರು, ರುಚಿ, ಬಣ್ಣಗಳು ಎಲ್ಲೆಲ್ಲಿಂದ ಬಂದು ಅಲ್ಲಿ ಸೇರಿವೆ ಎಂಬುದನ್ನು ವಿಂಗಡಿಸುವುದು ಸಾಧ್ಯವೇ ? ಆ ರಸ ಸೃಷ್ಟಿಗೆ ವೃಕ್ಷವೇ ಕಾರಣ. ಅದರ ಬಾಳ್ವೆ, ತಾಳ್ಮೆಗಳೇ ಮೂಲ. ಆದರೂ ಅವು ರಸದ ಅಭಿವ್ಯಕ್ತಿಗೆ ಮೂಲವೆನಿಸಬಲ್ಲುವೇ ಹೊರತಾಗಿ, ಆ ಮೂಲ ಕಾವ್ಯಗಂಗೆಯ ಗಂಗೋತ್ರಿಯನ್ನು ಕಂಡವರಾರೊ ? ಇದನ್ನೇ ಕವಿಯು,

* ಕಾವ್ಯಾನಂದರ "ಜಲಪಾತ" ಪು, ೧.



ಯಾರಿಂದ ಬಂದುದೀ ನೀರೆಂದು ವಿಂಗಡಿಸಿ
ಬೇರೆ ಬೇರಾಗಿದನು ತೋರಿಸಲು ಬಹುದೆ ?

ಎಂದು ಪ್ರಶ್ನಿಸಿರುವನು. ಕಾವ್ಯೋದಯದ ಅಗಮ್ಯತೆಯನ್ನು ಸಾರಿರುವನು.

ಕವಿತೆಗೆ ರಸ, ಭಾವ, ಕಲ್ಪನಾವಿಲಾಸಗಳು ರತ್ನತ್ರಯಗಳಿದ್ದಂತೆ. ಇವಲ್ಲದೆ ಕಾವ್ಯಕ್ಕೆ ಸಿದ್ಧಿಯಿಲ್ಲ. ರಸದ ಇರವು ಸೃಷ್ಟಿಯಲ್ಲಿ ವಿವಿಧ ಎಡೆಗಳಲ್ಲಿದೆ. ವಿವಿಧ ದೃಷ್ಟಿಗೆ ವಿವಿಧ ರೂಪದಲ್ಲಿ ವ್ಯಕ್ತವಾಗುತ್ತದೆ. ರಸದರ್ಶನದಲ್ಲಿ ಕಾವ್ಯಾಂದರ ದೃಷ್ಟಿಯು,

ಬಡವರಿಗೆ ಹಿಡಿಬೋನ ಮಜ್ಜಿಗೆಯೆ ರಸವು,
ತತ್ತ್ವವಿದರಿಗೆ ಸಚ್ಚಿದಾನಂದವೇ ರಸವು-
ನನ್ನ ರಸನೆಗೆ ನಿನ್ನ ಹೆಸರೆ ರಸವು !*

ಹೀಗೆ ವಿಶ್ವವ್ಯಾಪಿಯಾಗಿದೆ. ಅನ್ನ ಬ್ರಹ್ಮನಿಂದ ಆನಂದಬ್ರಹ್ಮನವರೆಗೆ ಅವರ ದೃಷ್ಟಿಯು ಹರಿದಿದೆ. ಕಬ್ಬಗಳಿಗೆ ಕಲ್ಪನೆಯೆ ರಸ, ಹುಬ್ಬುಗಳಿಗೆ ಹಾವಭಾವ ರಸ, ಕೆನ್ನೆಗಳಿಗೆ ನಸು ಲಜ್ಜೆ ರಸ, ಪ್ರಣಯಕ್ಕೆ ಹುಸಿ ಕಲಹ ರಸ, ರೂಪಕ್ಕೆ ಯೌವನವೆ ರಸ, ತಂಬೆಲರ ಚುಂಬನವು ಹೂವುಗಳಿಗೆ ರಸವೆನಿಸುತ್ತದೆ. ಅದರಂತೆ ಕೋಗಿಲೆಗೆ ಚಿಗುರೆಲೆಯೆ ರಸ, ಅರಗಿಳಿಗೆ ಮಧುರ ಫಲಗಳೆ ರಸ. ಆಯಾ ಜೀವಗಳ ಅಭಿರುಚಿಗೆ ತಕ್ಕಂತೆ ಸೃಷ್ಟಿಯಲ್ಲಿ ರಸವು ವ್ಯಕ್ತವಾಗುತ್ತದೆ. ಆದರೆ ಆ ಎಲ್ಲ ರಸದ ಜೀವ-ಜೀವಾಳವಾದ ಆದಿರಸವು ಈ ಕವಿಯು ಹೇಳುವಂತೆ,

ರಸೋವೈಸಃ, ರಸಾನಾಂ ರಸತಮಃ, ಶಿವನೆ ರಸವು-
ನನ್ನ ರಸನೆಗೆ ನಿನ್ನ ಹೆಸರೆ ರಸವು †

ಎಂದಿದೆ. ಈ ರಸದೃಷ್ಟಿಗೆ ರಸಋಷಿಯ ಋತದರ್ಶನವೂ ಒಂದಿದೆ. ಅದು ಕವಿಯ ಜೀವನದ ತತ್ತ್ವ; ಸತ್ವ; ಸ್ವತ್ವ. ಅದು ಜೀವನ ಒಂದು ಜೇನ್ ಕೊಡ ಎಂದು ಭಾವಿಸಿದೆ. ಅದರಲ್ಲಿ ಕಲಾಪ್ರೇಮವೇ ರಸ. ಆ ಕಲೆಯ ಫಲವು ಸೌಂದರ್ಯ ದರ್ಶನ. ಆ ಸೌಂದರ್ಯಕ್ಕೆ ಒಲವೇ ಅಮೃತ. ಅದು ಸ್ಥಾಯಿಯಾದ ರಸ, ಇದು ತಿಳಿವಿನ ತೆನೆಯಲ್ಲಿ ಕಾಳು ತುಂಬಿ ನಿಲ್ಲುವ ತನಿರಸವಾಗಿದೆ. ಅದು

* ಕಾವ್ಯಾನಂದರ "ಕರುಣಾ ಶ್ರಾವಣ" ಪು. ೧೦.
† ,, ,, ಪು. ೧೧.

ನಲವಿನಿಂದ ಪುಷ್ಟಿಗೊಂಡುದಾಗಿದೆ ಹೀಗೆ ಕಲಾಪ್ರೇಮ, ಸೌಂದರ್ಯಾರಾಧನೆ, ಪ್ರೇಮ-ಆನಂದ, ಜ್ಞಾನೋಪಾಸನೆಗಳೆಲ್ಲ ಕವಿಯ ರಸದೃಷ್ಟಿಯನ್ನು ರೂಪಿಸಿವೆ, ಮಾಗಿಸಿವೆ.

ಕಾವ್ಯಕಾಮಿನಿಗೆ ರಸವೇ ಆತ್ಮ. ಭಾವ ಪ್ರಾಣ. ಪ್ರಾಣಸ್ಪಂದನ ನಿಂತರೆ ಆತ್ಮನ ಇರುವಿಕೆ ಮಾಯವಾಗುವುದು. ಅಂಥ ಕಾವ್ಯವೊಂದು ಕೊರಡು. ಆದರಿಂದ ರಸಬ್ರಹ್ಮನ ಆರಾಧನೆಗೆ "ಭಾವಸುಂದರಿ" ಯ ಆರತಿಯ ಆವಶ್ಯಕತೆಯು ಇದೆ. ಈ ಭಾವಸುಂದರಿಯ ಪ್ರಕೃತಿಯು ಬಹು ಸೂಕ್ಷ್ಮ. "ಮುಖ ನೋಡಿ ಮಣೆ ಹಾಕುವಂಥ ವಂಚಕವೃತ್ತಿ ಇವಳಲ್ಲಿಯೂ" ಇದೆ! ಇವಳೂ ಭೇದನೀತಿಯನ್ನು ಬಲ್ಲಳು ! "ಪ್ರತಿನರನ ಮತಿಯಷ್ಟೆ ಗುಣರೂಪ ಸಿಂಗರದಿ ತೋರುವುದೆ ಇವಳ ರೀತಿ !" ಆದುದರಿಂದ "ಭಾವಸುಂದರಿ"ಯನ್ನು ಮೆಚ್ಚಿಸಲು ಕವಿಯು ಮತಿವಂತನಾಗಬೇಕು. ಆ ಮತಿಯು ವಿಶಾಲವಾಗಿರಬೇಕು. ವಿಶ್ವದ ವಿವಿಧ ಎಲ್ಲೆಗಳನ್ನೂ ಅದು ಮೀರಿ ನಿಲ್ಲುವಂತಿರಬೇಕು. ಅದಕ್ಕಾಗಿ ಕವಿಗೆ ಸತತ ತಪಸ್ಸು ಬೇಕೆಂದು ಬಲ್ಲವರು ಆಗಾಗ ಹೇಳುವರು. ಯಾಕೆಂದರೆ ಭಾವಸುಂದರಿಯು,

> ಮಿತಭಾಷಿಯಾದರೂ ಹಿತಭಾಷಿಯೀ ಚೆಲುವೆ—
> ವೃತ್ತಿಯಲಿ ಬಹಳ ಕೃಪಣೆ !
> ಆದರೂ ತನ್ನ ತಪಗೈದವಗೆ ತನ್ನನೇ
> ಕೊಟ್ಟು ಬಿಡುವವಳು ನಿಪುಣೆ ! *

ಇಂಥ ನಿಪುಣೆಯನ್ನು ವಶವಡಿಸಿಕೊಳ್ಳುವುದಕ್ಕೆ ಬಹು ನಿಪುಣನಿಗೇ ಸಾಧ್ಯ. ಹೇಗೆಂದರೆ ಇವಳು ಸರ್ವತಂತ್ರಸ್ವತಂತ್ರಳು; ಯಾರ ದಾಕ್ಷಿಣ್ಯವೂ ಇವಳಿಗೆ ಇಲ್ಲ! ಬಾರೆನಲು ಬರುವವಳಲ್ಲ! ಒಂದೆಡೆಗೆ ಇರುವವಳಲ್ಲ. ಇವಳು ವಿಶ್ವವಿಹಾರಿ! ಮೇಲಾಗಿ ವಿಶ್ವಮೋಹಿನಿ! ಆದರಲ್ಲೂ ಎಲ್ಲರನ್ನೂ ತಣಿಸುವುದೇ ಇವಳ ಚಿಂತೆ! ಇಂಥವಳಿಗೆ ನಮ್ಮ ವ್ಯಕ್ತಿತ್ವವು ಯಾವ ಗಿಡದ ತೊಪ್ಪಲು? ಆದರೂ ಕವಿಯು ಈ ಭಾವಸುಂದರಿಯ ಪಾದ ಪೂಜಿಸದೆ ಗತಿಗಾಣ, ಮತಿಗಾಣ. ಇವಳ ಪಾದವ ತೊಳೆದ ಗಂಧೋದಕದಿಂದಲೇ ಕವಿಯ ಸಿರಿಮುಡಿಯು ಪಾವನಗೊಳ್ಳಬೇಕು. ಮುಟ್ಟಿದರೆ-ಅಲ್ಲ-ಕಂಡರೆ ಮಾಸೀತು

* ''ಕರುಣಾ ಶ್ರಾವಣ'' ಪು. ೯.



ಇವಳ ಚಲುವಿಕೆ ಎನ್ನುವಂತೆ ಕಾವ್ಯಾನಂದರು ಭಾವಸುಂದರಿಯನ್ನು ಕಂಡರಿಸಿರುವರು. ಆ ಚಿತ್ರವನ್ನು ಎಷ್ಟು ಸಲ ಕಂಡರೂ ಮನಸ್ಸು ತಣಿಯದು. ನೋಡಿ ಈ ಭಾವಸುಂದರಿಯನ್ನ !

> ಕೇದಗೆಯ ರಸದಲ್ಲಿ ಕೇಸರದ ಹುಡಿಗಲಸಿ
> ಮಾಡಿರುವ ಮುದ್ದಾದ ಕನ್ನೆ–
> ಅರುಣರಾಗವ ಕುಸುಮರಸಗೆಂಪಿನೊಳು ತೆಯ್ದು
> ಆಗಿವೆಯೆ ನಿನ್ನ ಕೆನ್ನೆ ? *

ಇಂಥ ಅಪೂರ್ವವಾದ ಭಾವಮೂರ್ತಿಯನ್ನು–ಅರೂಪವಾದುದನ್ನು—ರೂಪಿಸುವುದರಲ್ಲಿ ಕವಿಯ ಯತ್ನವು ಇಲ್ಲಿ ನಡೆದಿದೆ. ಅವಳನ್ನು ನಮಗೆ ತೋರಿಸಲೆಂದು ಕವಿಯ ಅಂತರ್ ದೃಷ್ಟಿಯು ವಿವಿಧ ಉಪಮೆಗಳ ಮಾಲೆಯನ್ನೇ ಹೆಣೆದು ಅವ್ಯಕ್ತವನ್ನು ವ್ಯಕ್ತಗೊಳಿಸಲು ಹೆಣಗಿದೆ ಇಲ್ಲಿ. ಇವಳ ಹೆರಳು, ಕರಿಮೋಡಗಳ ಬಾಚಿ ಚಿಕ್ಕೆ ಹೂಗಳನಿಟ್ಟು ಹೆಣೆದಂತೆಯಂತೆ ! ಇವಳ ನಗೆ ಹೂವು ಬಾಯ್ದೆರೆದಂತೆ !–ಅಲ್ಲಲ್ಲ–ಹಸುವು ಹಾಲ್ ಕರೆದಂತೆ !–ಅದೂ ಅಲ್ಲ–ಮುತ್ತುಗಳನ್ನು ಸುರಿದಂತೆ !! ಇಲ್ಲಿ ಚಿತ್ತವು ನಮ್ಮ ಬಗೆಗಣ್ಣಿಗೆ ಕಟ್ಟುವಂತೆ ಹೇಳುವ ಕವಿಯ ಕಾವ್ಯವೈಖರಿಯ ಬಗೆಯನ್ನು ಗಮನಿಸಿ. ಹೂವು ಅರಳುತ್ತಿರುವುದನ್ನು ಕಾಣುವವರು ಎಷ್ಟು ಜನ? ಕಂಡವರಿಗಂತೂ ಸರಿಯೇ ಅರ್ಥವಾಯಿತು. ಕಾಣದವರು ಹಸುವು ಹಾಲು ಕರೆಯುವುದನ್ನು ನೋಡ ಬನ್ನಿ ! ಬಹು ಜನರು ಒದಗಿಯಾರು. ಆ ಸಮಯಕ್ಕೂ ಒದಗದವರು ಮುತ್ತುಗಳು ಸುರಿಯುವುದನ್ನು ಎಂದೂ ಕಾಣಬಹುದಲ್ಲ. ಕಾವ್ಯರಸಿಕರಲ್ಲಿ ಅಂಥವರೂ ಇರತಕ್ಕವರೇ ಅಲ್ಲ. ಇಂಥವರಿಗೆ ಹೂವನ್ನು ಅರಳಿಸುವ ಆ ಚೈತನ್ಯದ ಅರಿವು ಆಗದು. ಹಸುವಿನ ಕೆಚ್ಚಲನ್ನು ತೊರೆಯಿಸಿ, ಹಾಲನ್ನು ಕರೆಯಿಸುವ ಅಕ್ಕರೆಯ ಕಲ್ಪನೆಯೂ ಬಾರದು. ಆದರೂ ಅಂಥವರಿಗೂ ಕಾವ್ಯದ ಭಾವ ನಿಲುಕಬೇಕಷ್ಟೆ. ಹಾಗೆ ಜನಸಾಮಾನ್ಯರವರೆಗೂ ಕಾವ್ಯ ರಸ ನಿರ್ಝರಿಣಿಯು ಹರಿದಾಗಲಲ್ಲವೆ, ಆ ಕಾವ್ಯವು ಮಹಾಕಾವ್ಯವಾಗುವುದು ? ಇದರ ಕರ್ತೃವೂ ಮಹಾಕವಿ ಎನ್ನಿಸುವುದು ?

ಇದೆಲ್ಲ ಸಾಧಿಸಲಿಕ್ಕೆ ಕವಿಯ "ಕಲ್ಪನಾವಿಲಾಸ"ವು ಶಕ್ತವಿಲ್ಲದಿದ್ದರೆ

* "ಕರುಣಾ ಶ್ರಾವಣ" ಪು. ೭

ಸಾಧ್ಯವಿಲ್ಲ. ಕವಿಯ ಅನುಭವದಿಂದ ಕಲ್ಪನೆ ಕುದುರುವುದು. ಕಲ್ಪನೆಯ ವೇದಿಕೆಯೆ ಕಾವ್ಯನಟಿಯ ರಂಗಸ್ಥಳ. ಅಚಿಂತ್ಯವಾದುದನ್ನು ಕಲ್ಪನೆಯ ಕೈಚಾಚಿಯೇ ಅಪ್ಪಲೆತ್ನಿಸುವುದು ಸಾಧ್ಯ. ಇದನ್ನೇ ನಮ್ಮ ಹಿಂದಿನ ಕಾಲದ ಮಂತ್ರದ್ರಷ್ಟಾರರೆಲ್ಲ ಸಾಧಿಸಿದರು. "ನಮ್ಮ ರಸಋಷಿವರರೆಲ್ಲ ಕಲ್ಪನೆಯ ಮೃದು ಗತಿಗೆ ಕುಣಿದ ನರ್ತಕರು; ಎಂದೆಂದಿಗೂ ಇವರೆ ಯುಗಪ್ರವರ್ತಕರು; ಇವರೆ ದರ್ಶನದ ದ್ರಷ್ಟಾರರು; ಹೊಸ ರುಚಿಯ ಕರ್ತಾರರು ಅದರಿಂದ ಕವಿಯ ಕರ್ಮದಲ್ಲಿ ಕಲ್ಪನೆಗೆ ಅಪೂರ್ವವಾದ ಸ್ಥಾನವಿದೆ. ಇದನ್ನು ಗಮನಿಸಿಯೇ ಕಾವ್ಯಾನಂದರು,

ಕಲ್ಪನೆಯು ಕೂಡಿದರೆ ಮಾತೆ ಜ್ಯೋತಿರ್ಲಿಂಗ ;
ಪ್ರತಿಭಾಗ್ನಿಯಿಂ ಸಿಡಿವ ವಿಸ್ಫುಲಿಂಗ
ಪ್ರಣವನಾದದ ಮಧುರ ಮಂಗಲ ತರಂಗ ;
...... ಈ ಸೃಷ್ಟಿ ಕಲ್ಪನೆಯ ಕಾರ್ಯರಂಗ *

ಕಲ್ಪನೆಯ ಮಹತಿಯನ್ನು ಸಾರಿದ್ದಾರೆ. ಪ್ರತಿಭೆ ಎಂಬ ಅಗ್ನಿಯು ಪ್ರಜ್ವಲಿಸಿ, ವಿಸ್ಫುಲಿಂಗಗಳು ಸಿಡಿಯುವಂಥ ಸ್ಥಿತಿಯು ಒದಗುವುದು. ಕಲ್ಪನೆಯ ವೈಖರಿಯಿಂದಲೇ, ಕವಿಯ ಕಲ್ಪನಾಶಕ್ತಿಯು ಏನನ್ನು ಸಾಧಿಸಲಿಕ್ಕಿಲ್ಲ? ಕಲ್ಪನೆಯ ಹೆಜ್ಜೆಯಲ್ಲಿ ಕಲ್ಪಲತೆ ಹುಟ್ಟುವುದು. ಇದರಿಂದಲೇ ತಂದೆತಾಯಿತನ; ಸ್ನೇಹ ಕರುಣೆಯ ಸತ್ಯದ ಉದ್ಯಾನ; ಸತ್ಯದ ನೆಲದಲ್ಲಿ ಕಲ್ಪನಾವೃಕ್ಷದ ಬೇರುಗಳು ಊರಿರುತ್ತವೆ. ತಿರುಗಿ ಆ ಕಲ್ಪನಾವೃಕ್ಷದಿಂದಲೇ ಮೇಲೆ ಸುಂದರವಾದ ಸತ್ಯದ ಉದ್ಯಾನವೇ ನಿರ್ಮಾಣವಾಗುತ್ತದೆ!—ಎನ್ನುವ ಈ ಕವಿಯ ಮಾತಿನ ಮಥಿತಾರ್ಥವನ್ನು ನಾವು ಭಾವಿಸಬೇಕು. ಕಲ್ಪನೆಯಿಂದ ಸತ್ಯಸ್ಯಸತ್ಯ ಯಾವುದೋ ಅದನ್ನು ಧ್ವನಿಸಬಹುದೆಂದು ಕವಿಯ ಅನುಭವವು ಇಲ್ಲಿ ಸಾರುತ್ತಿದೆ. ಅಂತಲೇ ಅವನ ದೃಷ್ಟಿಯಲ್ಲಿ,

ಕಲ್ಪನಾಲಾಸ್ಯವಿದು ಸೃಷ್ಟಿಯಧರದ ಹಾಸ ;
ಇದರ ನಿಶ್ವಾಸವೇ ಜೀವನ ವಿಕಾಸ ;
ಇದನುಳಿದ ಜೀವನವು ಜೀವನದ ಅಭ್ಯಾಸ
ಕಲ್ಪನೆಯ ವರದಾನ ಜೀವಸೃಷ್ಟಿಯ ಗಾನ ×

---

* "ಕರುಣಾ ಶ್ರಾವಣ" ಪು. ೬.

× "ಕರುಣಾ ಶ್ರಾವಣ ಪು. ೫.



ಹೀಗೆ ಈ ಕವಿಮ ಕಲ್ಪಕತೆಯು ಜೀವಸೃಷ್ಟಿಯ ಗಾನವಾಗಿರುವುದರಿಂದಲೇ ಅವ೦ ಕಾವ್ಯವು "ಬಾಳಪೂರ್ಣತೆಯ ಹೋರಾಟಕೆ ಅಣಿಯಾಗಿ" ನಿಲ್ಲುವುದು. ಅದಕ್ಕಾಗಿ ಇವರ ಕಾವ್ಯವು ಜೀವನವನ್ನುಳಿದು ದೂರ ಸರಿಯುವದಿಲ್ಲ. ಹಾಡಿದ್ದನ್ನೇ ಹಾಡುವ ಗೊಡವೆಗೆ ಹೋಗುವುದಿಲ್ಲ. ಅಂತಲೇ "ಕವಿತೆಗೆ" ಕವಿಯು ಆಹ್ವಾನವೀಯುವುದು ಹೀಗೆ—

ಬಾ, ಬಾಳದೇಗುಲಕೆ ಭಾವನರ್ತಕಿಯಾಗಿ,
ಹೊಸ ಭಾವ-ದೀಪಗಳ ದಿವ್ಯ ಕಾರ್ತಿಕವಾಗಿ,
ಮೃಣ್ಮಯಕೆ ಋತ-ಸತ್ಯ-ಪ್ರೇಮ ಮಾತೃಕೆಯಾಗಿ,
ನೀರಸತೆ ರಸ-ರೂಪ-ರುಚಿಯು ನಾಯಿಕೆಯಾಗಿ,
ಬಾ ಚಿದಾನಂದ ಕನ್ಯೆ ಮನಕೆ-
ತಾ ವಸಂತವನು ಹೃದಯಕೆ! *

ಇಲ್ಲಿ ಚಿದಾನಂದ ಕನ್ಯೆಯಾದ ಕಾವ್ಯದೇವಿಗೆ ಸಲ್ಲುವ ಗೌರವ ಎಂಥದೆಂಬುದನ್ನು ನಾವು ಭಾವಿಸಿಕೊಳ್ಳಬೇಕು. ಕಾವ್ಯವು ಜೀವನಕ್ಕೆ ಸ್ಫೂರ್ತಿಯನ್ನೀಯಬೇಕು. ಜನಾಂಗಕ್ಕೆ ನವಜೀವನ ರಸವನ್ನು ಎರೆಯಬೇಕು ಎಂಬುದಾಗಿ ಆಧುನಿಕ ವಿಮರ್ಶಕರು ನುಡಿಯುವುದುಂಟು. ಇವರ ಕಾವ್ಯವಂತೂ "ಮೃಣ್ಮಯಕೆ ಋತ-ಸತ್ಯ-ಪ್ರೇಮ ಮಾತೃಕೆಯಾಗಿ" ನಿಲ್ಲಲು ಮೂಡಿ ಬರುವುದು. ಅಂಥ ಕವಿತೆಗೇನೇ ಕವಿಯ ಹೃದಯದಲ್ಲಿ ಎಡೆಯಿದೆ. "ಹೊನ್ನಿ ಹುಳುವಿನಲಿಯ ಕುಡಿನೋಟ"ಕ್ಕೆ ಇಲ್ಲಿ ಆಸ್ಪದವಿಲ್ಲ. ನಿರಂತರವಾಗಿ, ಚಿರಂತನವಾಗಿ ನಿಲ್ಲುವಂಥ ಚಿತ್-ಆನಂದ ಕನ್ಯೆಗೇನೇ ಈ ಕವಿಯ ಹೃದಯವನದಲ್ಲಿ ಸ್ಥಾನವಿದೆ, ಮಾನವಿದೆ.

ಹೀಗೆ ನಿತ್ಯ ನೂತನವಾಗಿ, ಹೊಸ ಬಾಳ ನರ್ತನದ ನೂಪುರ ಧ್ವನಿಯಾಗಿ, ಹೊಸ ಜಗದ ಹೊಸ ಯುಗದ ಚಿಂತನದ ಖಣಿಯಾಗಿ ನಿಲ್ಲುವ ಕಾವ್ಯವನ್ನೇ ಬರೆದೇನೆನ್ನುವ ಹಂಬಲವಿರುವುದೇನೂ ಸಾಮಾನ್ಯ ಸಂಗತಿಯಲ್ಲ. ಇದು "ಕಲೆಗಾರ" ನಲ್ಲಿರುವ ಕೆಚ್ಚಿನ ನಿದರ್ಶನವಾಗಿದೆ. ಈ ಕೆಚ್ಚು ನೆಚ್ಚನ್ನು ಕೂಡಿಕೊಂಡಿರಬೇಕಾದರೆ ಕವಿ ಹೃದಯದ ಶಿವ ಶಕ್ತಿಯು ಸದಾ ಜಾಗೃತವಾಗಿರಬೇಕಾಗುತ್ತದೆ. ಅದಕ್ಕೆ ಸೃಷ್ಟಿಕರ್ತನ ಸಾಮರ್ಥ್ಯದ ಹೊಲ

---

* " ಕರುಣಾ ಶ್ರಾವಣ" ಪು. ೩

ಬಿನ ಅರಿವುಂಟಾಗಬೇಕು. ಆಗ ಕಲೆಗಾರನ ದೃಷ್ಟಿಯಲ್ಲಿ ಈ ವಿಶ್ವವೇ ಒಂದು ಶಿವ ಸ್ವರೂಪವನ್ನು ಹೊಂದಿ ನಿಲ್ಲುವುದು. ಅಲ್ಲಿ ಕಲೆಗಾರ ಬೇರೆಯಲ್ಲ. ಶಿವ ಬೇರೆಯಲ್ಲ! "ಓಂಕಾರದ ಝೇಂಕಾರಕ್ಕೆ ಕುಣಿವನು ಕಲೆಗಾರ!" ಯೋಗವೇ ಅವನ ಡಮರುಗ, ಸಾಗರಗಳ ರಾಗಗಳೇ ಸಂಗೀತ, ಇನ-ಶಶಿಗಳೇ ಅವನ ಕೈತಾಳಗಳು. ಇಂಥ ದಿವ್ಯ ನರ್ತನವನ್ನು ಮಾಡುವ ಕಲೆಗಾರನು ಈ ಪ್ರಾಣದೇವನಿಗಾಗಿ ದೇಹದ ದಿವ್ಯ ದೇಗುಲವನ್ನು ದಿನ ದಿನವೂ ಕಟ್ಟುವ ಕುಶಲಮತಿಯಾಗಿದ್ದರೆ ಅಚ್ಚರಿ ಪಡುವ ಕಾರಣವಿಲ್ಲ. ಇಲ್ಲಿ ಕವಿಯ ದೃಷ್ಟಿಯಲ್ಲಿ ಕಲೆಗಾರನ ಮಹತಿಯೆಷ್ಟು! ಮಹಿಮೆ ಎಂಥದು! ಅವನು ಬರೆಯುವ ಕಾವ್ಯವಾದರೂ ಏನು, ಎಂಥದು ನೋಡುವ :

"ನೆಲವ ಕಾಗದ ಮಾಡಿ, ಜಲವ ಮಸಿಯನು ಮಾಡಿ,
ಸುಳಿದು ಬೀಸುವ ಗಾಳಿಯನೆ ಭಾವ ಮಾಡಿ,
ನೆಲವನಪ್ಪಿಹ ಮುಗಿಲ ನಾದಲೀಲೆಯ ಮಾಡಿ,
ಹೊಳೆವ ಬೆಂಕಿಯಲಲಂಕಾರಗಳ ಮಾಡಿ,
ಕೊಲುವ ಬಿಡಿ ಯತಿ ಕಾಲತಾಲಗಳ ಮಾಡಿ-
ಸಲೆ ಸೃಷ್ಟಿ ಕಾವ್ಯವನು ಬರಿಯುತಿಹ ಕಲೆಗಾರ ! *

ಇಲ್ಲಿ ಕವಿಯ ದೃಷ್ಟಿಯಲ್ಲಿ ಸೃಷ್ಟಿ ಬೇರೆಯಲ್ಲ; ಕಾವ್ಯ ಬೇರೆಯಲ್ಲ; ಸೃಷ್ಟಿಕರ್ತ ಬೇರೆಯಲ್ಲ; ಕಲೆಗಾರ ಬೇರೆಯಲ್ಲ. ಕವಿಯ ಎಂಥ ಕೆಚ್ಚಿದು. ಆತ್ಮವಿಶ್ವಾಸದ ಅದೆಂಥ ಪ್ರತೀಕವಿದು. ತನ್ನಲ್ಲಿರುವ ಶಿವ ಶಕ್ತಿಯ ಮೇಲಿರುವ ಅಚಲ ವಿಶ್ವಾಸದ ಉಸಿರಿದು! ಇಂಥ ಉಸಿರಿನ ಗಾಳಿಯಿಂದಲೇ ಇಂದಿನ ಕನ್ನಡ ನಾಡವರಲ್ಲಿ ನವಸ್ಫೂರ್ತಿಯು ಹೊಮ್ಮಬೇಕು; ನವ ಉತ್ಸಾಹವು ಚಿಮ್ಮಬೇಕು. ನಾಡಿನ ಹೃದಯದ ಮಿಡಿತ ಒಂದಾಗಬೇಕು. ಈ ಕವಿದೃಷ್ಟಿಯಲ್ಲಿ ಅಂಥ ಭಾವಸೃಷ್ಟಿಗೆ ಕಾವ್ಯಶಕ್ತಿಯು ಪ್ರೇರಕವಾಗಿದೆ, ಪ್ರಚೋದಕವಾಗಿದೆ.

೩

ನಿಜವಾದ ಮಹಾಕವಿಯೊಬ್ಬನ ಜನನವಾಗುವುದು ಲೋಕದ ಭಾಗ್ಯದಿಂದ, ನುಡಿಯ ಪುಣ್ಯದಿಂದ. ಕವಿತ್ವಶಕ್ತಿಯೆಂಬುದು ಕೇವಲ ಇಹಜನ್ಮದ ಸಾಧನೆಯ ಫಲದಿಂದ ಲಭಿಸುವಂಥದಲ್ಲ. ಅದನ್ನು ಹಿಂದಿನ ಹಲವು ಜನ್ಮಗಳ

* "ಕರುಣಾ ಶ್ರಾವಣ" ಪು. ೧೭.



ತಪಸ್ಸಿನ ಫಲವಾಗಿ ಪಡೆದು ಬಂದಿರಬೇಕಾಗುವದು. ಆ ಭಾಗ್ಯವನ್ನು ಪಡೆದ ವ್ಯಕ್ತಿಯೂ ಕೂಡ ಯೋಗ್ಯ ಪರಿಸರವು ಒದಗದೆ ಹೋದರೆ ಹುಟ್ಟಿದ ತಪ್ಪಿಗಾಗಿ ಬಾಳಿ ಮುಂದಿನ ಭವಕ್ಕೆ ಆ ಪುಣ್ಯವನ್ನು ಪಡೆಯಲು ಸಾಕಾಗಬೇಕಾದೀತು. ಸಮಾಲೋಚಕನ ಇಂಥ ಮಾತುಗಳಿಂದ ಕವಿಗಳಾಗಬೇಕೆಂಬ ಹಲವರು ನಿರಾಶೆಯನ್ನು ಹೊಂದಬಹುದೇನೋ ? ಆದರೆ ಆತ್ಮ ಸಂಸ್ಕಾರವೆಂಬುದೊಂದಿದೆ ಎನ್ನುವ ಯಾರೂ ಈ ಮಾತನ್ನು ಅಲ್ಲಗಳೆಯರು. ಅಲ್ಲದೆ ವಾಲ್ಮೀಕಿ, ವ್ಯಾಸ, ಕಾಲಿದಾಸ, ಷೇಕ್ಸ್‌ಪಿಯರ್ ಮತ್ತು ಟಾಗೋರರಂಥ ಕೆಲವರನ್ನು ನಾವು ಜಗತ್ತಿನಲ್ಲಿ ವಿಶ್ವಕವಿಗಳ ಸಾಲಿನಲ್ಲಿ ಕಾಣುತ್ತೇವೆಯೇ ಹೊರತಾಗಿ ಬಹುಜನರನ್ನಲ್ಲ. ಆದರೂ ಮಹಾ ಕವಿತ್ವವೆಂಬುದು ಒಬ್ಬ ಕವಿಯ ಸಕಲ ಕೃತಿಗಳಲ್ಲೆಲ್ಲ ವ್ಯಕ್ತವಾಗಿ ನಿಂತೀತೆಂದೂ ಹೇಳಲಾಗುವದಿಲ್ಲ. ಕೆಲವರ ಕೃತಿಗಳಲ್ಲಿ, ಅಲ್ಲಲ್ಲಿ ಮಿಂಚಿ ಹೋಗಿರುವ ಸಂಭವವೂ ಇದೆ. ಆಯಾ ಕವಿಗಳ ಆತ್ಮವಿಕಾಸ, ಸಂಸ್ಕಾರಬಲ, ತಪಸಿದ್ಧಿಗಳಿಂದ ಆ ಮಿಂಚಿನ ಪ್ರಕಾಶ, ದೀರ್ಘತ್ವಗಳು ರೂಪುಗೊಳ್ಳುತ್ತವೆ. ಆದರಿಂದ ಜಗತ್ತಿನಲ್ಲಿ ಅನೇಕ ಜನ ಹಿರಿ–ಕಿರಿ ಕವಿಗಳನ್ನು ನಾವು ಕಾಣಲು ಸಾಧ್ಯವಿದೆ.

ಏನಿದ್ದರೂ ನಿಜವಾದ ಕವಿಯ ವ್ಯಕ್ತಿತ್ವವೆಂಬುದು ಜನಸಾಮಾನ್ಯರಂತೆ ಇರುವುದಿಲ್ಲ. ಅವನು ಜನ ಸಾಮಾನ್ಯರಲ್ಲಿ ಬಾಳಿ, ಎಲ್ಲರಂತೆ ಒಬ್ಬನಾಗಿ ನಮಗೆ ಕಾಣುತ್ತಿದ್ದರೂ ಅವನ ಆಂತರಿಕ ಜೀವನವೆಂಬುದು ಬೇರೆಯಾಗಿರುತ್ತದೆ. ಅವನು ಓದುವ " ಬಾಳ ಹೊತ್ತಿಗೆ " ಯೇ ಬೇರೆ. ಅದರ ಪ್ರತಿಯೊಂದು ಪುಟವು ಅವನ ಸಫಲ ಜೀವನದಿಂದ ರೂಪುಗೊಂಡುದಾಗಿರುತ್ತದೆ. ಸರಿಯಾದ ಜೀವನ ಸಾಫಲ್ಯವನ್ನು ಪಡೆದವನೇ ಸಾರ್ಥಕ ಸಾಹಿತ್ಯವನ್ನು ಸೃಜಿಸಲು ಶಕ್ತನಾಗಿರುತ್ತಾನೆ. ಅವನು ತನ್ನ ಜೀವನದ ಹೊತ್ತಿಗೆಯ ಯಾವ ಪುಟವನ್ನೂ " ಬರಿ ಹಾಳೆಗಳನುಳಿಸಿ ಪಾಳ್ಕೆಯ " ನು. ಅದರಲ್ಲಿ ಅಳಲ ಹಾಡಿದ್ದೀತು, ಯೌವನದ ಚಂಚಲ ಮಿಂಚಿದ್ದೀತು, ಸೋಲಿನ ಶೂಲವಿದ್ದೀತು. ಅವನ ಲೆಕ್ಕಣಿಕೆ ಒಮ್ಮೆ ಅಮೃತದಲ್ಲಿ ಅದ್ದಿ ಬರೆದದ್ದಾದರೆ ಇನ್ನೊಮ್ಮೆ ವಿಷದಲ್ಲಿ ಮುಳುಗಿದ್ದೀತು. ಏನಿದ್ದರೇನು ? " ಬಾಳ ಹೊತ್ತಿಗೆ " ಯದು !

ಬಾಳ ಹೊತ್ತಿಗೆಯಲ್ಲಿ ಬರಿಯ ಗೆಲವಿನ ಗಲಗೆ
ಬರೆಯಬೇಕೆಂದಾರು ಕಟ್ಟು ಹಾಕಿಲ್ಲ;

ಆಸೆಯಾಗಸಬುಟ್ಟಿ ಒಡೆದಿಳೆಗೆ ಇಳಿವುದನು
ಬಣ್ಣಿಸಲು ಅದರಲ್ಲಿ ತಾಣವೇಕಿಲ್ಲ ? *

ಅದರಲ್ಲಿ ಎಲ್ಲದಕ್ಕೂ ಸ್ಥಾನವಿದೆ. ಆದರೆ ಅದು ಸಾಹಿತ್ಯವಾಗಿ ಬರಬೇಕು. ಓದುವವರ ಆಸೆ, ಆಕಾಂಕ್ಷೆಗಳನ್ನು ನೋಡಿ ಬರೆಯುವುದು. ಕವಿಯ ಲಕ್ಷಣ ವಲ್ಲ. ಓದುವವರನ್ನು ಒಲಿಸುವದಕ್ಕಾಗಿ ಗುರಿಯನ್ನು ಬಿಡುವವನು ಕವಿಯೇ ಅಲ್ಲ. ಓದುಗರೇ ಕವಿಯ ಎತ್ತರಕ್ಕೆ ಬೇಕಾದರೆ ಬರಲಿ, ಸಾಕಾದರೆ ಬಿಡಲಿ. " ಮುಡಿವವರ ಮುಖನೋಡಿ ಅರಳವು ಪುಷ್ಪಗಳು ? " ಅದಕ್ಕಾಗಿ ನಿನ್ನ ಕಾವ್ಯಕ್ಕೆ ಧಿಕ್ಕಾರವೇ ಸಿಗಲಿ ಸತ್ಕಾರವೇ ಸಿಗಲಿ ನೀನು ಮಾತ್ರ ನಿನ್ನ ಸ್ವಭಾವಕ್ಕನುಸರಿಸಿ ಬರೆ ! ಬರೆಯದೆ ನಿಲ್ಲದಿರು ! ಎಷ್ಟಾದರೂ ನೀನೊಬ್ಬ ಪಥಿಕನಷ್ಟೆ.

ಪಥಿಕನ ಗುರಿಯೇನು ? ತನ್ನ ದಾರಿಯಿಂದ ತಾನು ಮುಂದೆ ಮುಂದೆ ಸಾಗುವುದು. ಎಷ್ಟು ದೂರ ಬಂದೆ, ಮುಂದೆ ದಾರಿ ಇನ್ನೂ ಎಷ್ಟು ದೂರ ? ಎನ್ನುವ ವಿಚಾರ ನಡೆವವನಿಗೇಕೆ ? ತಾನು ಸಾಗುವ ದಾರಿ ಒಳ್ಳೆಯದಿದ್ದರಾಯಿತು. " ಬಾಳ ಬಟ್ಟೆಗಳೆನಿತೊ " ಇವೆ. ಅದಕ್ಕೆ ಹಲವು ಕವಲುಗಳು. ಮಂಕು ಕವಿಸುವ ತಾಣಗಳು ಅನೇಕ. ವೇದ, ವಾದ, ವಿಜ್ಞಾನ, ಪ್ರಜ್ಞಾನ, ಧರ್ಮ, ದರ್ಶನ ಹೀಗೆ ಒಂದೋ ಎರಡೋ " ಎನಿತು ಪಥಗಳು ಒಬ್ಬ ಪಥಿಕ ನೆದುರಿಗೆ ಅಬ್ಬ !" ಒಂದೊಂದು ಪಥದಲ್ಲಿ "ಎನಿಬರೋ ಹೋಗಿಹರು, ಎನಿ ಬರೋ ಹೊರಟಿಹರು, ಎನಿಬರೋ ಹೊರಟಾರು ಇನ್ನು ಮುಂದೆ " ಅದರಿಂದ ಯಾರನ್ನು ಕಂಡು ನೀನು ದಾರಿಯನ್ನು ಹಿಡಿಯಬಲ್ಲಿ ? ಗೊಂದಲಮಯ ಸಂಸಾರವಿದು. ಇದರಲ್ಲಿ ನಿನಗೆ ನೀನೇ ಬೆಳಕು. ಆ ಬೆಳಕನ್ನೇ ನಂಬಿ ನಿನ್ನ " ನೈತಡೆವತನಕ, ಒಳಗಿರುವ ಚೈತನ್ಯ ಕೈ ಹಿಡಿವತನಕ " ಮುಂದೆ ನಡೆ. ಎಷ್ಟಾದರೂ ನೀನು ಪಥಿಕ, ಯಾತ್ರೆಗೆ ಹೊರಟ ಯಾತ್ರಿಕ.

ಈ ಜನ್ಮದಲಿ ಪಯಣ ಮುಗಿಯದಿದ್ದರು ಮತ್ತೆ
ಹೊಸ ಜನ್ಮ ಸಿಕ್ಕಾವು ಓ ಯಾತ್ರಿಕ !
ಪಯಣ ಪೂರಣಕಾಗಿ ನೀನೆ ದಾರಿಗನಾಗಿ
ಮತ್ತೆ ಬರದಿದ್ದರೂ ಬೇರೆ ಪಥಿಕ

* " ಕರುಣಾ ಶ್ರಾವಣ " ಪು. ೩.



ನೀಮುಟ್ಟಿದೆಡೆಯಿಂದ ಮುಂದೆ ಸಾಗಲು ಬಹುದು
ಸರಿದೋರೆ ಈ ದಾರಿ ಓ ಯಾತ್ರಿಕ !
ಪಯಣ ಮುಗಿಯಲಿ ಮುಗಿಯದಿರಲಿ ಮತ್ತೊಬ್ಬರು
ಮುಂದುವರಿಸಲಿ ಪಯಣ, ಬಿಡಲಿ, ಪಥಿಕ
ನೀನು ನಡೆವಷ್ಟರೊಳೆ ನಿನ್ನ ಸಫಲತೆ ಮುಕ್ತಿ
ಬಿಡಬೇಡ ಯಾತ್ರೆಯನು ಓ ಯಾತ್ರಿಕ ! *

ಎಂಥ ಮುತ್ತಿನಂಥ ಮಾತುಗಳಿವು ! ಇದಕ್ಕಿಂತ ಹೆಚ್ಚಿನ ಜೀವನ ತತ್ವಜ್ಞಾನ ಬೇರಿನ್ನೇನು? ಸಂಸಾರಿಯಾಗಿಯೂ ಮುಮುಕ್ಷುವಾಗಿರುವ ಕವಿಯ ಅನುಭಾವ ವಾಣಿಯಿದು. " ಜನುಮ ಜನುಮದ ಜಾತ್ರೆ " ಯಲ್ಲಿ ಪಥಿಕನಾಗಿ ಸಾಗಿ, ಸಂಪಾದಿಸುತ್ತ ಬಂದ ಅನುಭವದ ಅಮೃತ ಬಿಂದುಗಳಿವು.

ಜೀವನವು ಹೀಗೆ ನಿಗೂಢವಾಗಿರುವಾಗ ಎಂಥ ಮೇಧಾವಿಯಾಗಿದ್ದರೂ " ವಿಶ್ವರಂಗದಲ್ಲಿ ನರನ ಪಾತ್ರವು ಅತಿ ಅತಂತ್ರವು. " ಅವನು ತನ್ನ ದೈವ ಒಯ್ದತ್ತ ಪ್ರವಾಹ ಪತಿತನಾಗಿ ಸಾಗುವನು. ಆದರೂ ಸಮ್ಯಗ್ ದೃಷ್ಟಿಯುಳ್ಳ ಜೀವಿಯಾಗಿದ್ದರೆ ಚಿತ್ರವಿಚಿತ್ರ ಸಂಸಾರದಲ್ಲಿಯೂ ತ್ಯಾಗದಲ್ಲಿ ಸುಖವಿದೆ ಯೆಂದು ನಂಬಿ " ಅತಿ ಸ್ವತಂತ್ರ " ತೆಯನ್ನಾದರೂ ಪಡೆದು ಬಾಳನ್ನು ಕಟ್ಟು ವನು. ಅದಕ್ಕೆ ಸಮ್ಯಕ್ತ್ವಬೇಕು, ಶರಣಭಾವಬೇಕು.

ನೀನಿರದ ಬದುಕೆ ಬಂಧ, ನೀನೆ ಬಾಳಿನ ಅಂದ.
ನಿನ್ನ ಸವಿಯನು ಕಾಂಬೆ ನೀ ಬಿಟ್ಟ ತೆನೆಯಲ್ಲಿ !
ನೀ ಸತತ ಪೀಡಿಸಲು ನನಗದುವೆ ಬಾಳ ಬಲ,
ನಿನ್ನ ಕೊಂಡಿಯೋ ನನ್ನ ಲೇಖನಿಯ ಮೊನೆಯು;—**

ಈ ಭಾವವು ಮೂಡಬೇಕಾದರೆ ಕವಿಯಲ್ಲಿ ಒಂದು ತರಹ ಸತತ ಸಂವೇದ- ನೆಯು ವ್ಯಾಪಿಸಿರಬೇಕಾಗುವುದು. ಅದೊಂದು " ಸವಿನೋವು " ಸಾಂತದಿಂದ ಚಾರಿ ಅನಂತತೆಯನ್ನು ಪಡೆಯುವ ಬಯಕೆ. ಅದು ಕೇವಲ ಬಯಕೆ ಮಾತ್ರ ವಲ್ಲ, ನಿಧಿಧ್ಯಾಸ, " ಮನಕಂಟಿದ ಪೂರ್ಣತೆಯ ಪಿಪಾಸೆ. ಎಂದಿಗಾದರೂ ಒಮ್ಮೆ ಅದನು ಪಡೆದೇನೆನ್ನುವ ಆಸೆ. " ಕವಿಗೆ ಪೂರ್ಣತೆಯನ್ನು ಪಡೆಯ ಬೇಕೆಂದಿರುವ ಚಿಂತೆಯೂ ಕೂಡ ಒಂದು ವರವೇ ! ಸಾಧಕನಿಗೆ ಅದೂ

* "ಕರುಣಾ ಶ್ರಾವಣ " ಪು. ೯೨.
** " " ಪು. ೧೯.

ಜೊತೆಗಾರ. ಚಿಂತೆಯೆಂಬ ಜೊತೆಗಾರನಾದರೂ ಪೂರ್ಣತೆಯನ್ನು ಪಡೆಯುವ ತನಕ ಹತ್ತಿರ ಇರುವೆನೆಂದು ಭಾಷೆಯನ್ನು ಕೊಟ್ಟರೂ ಸಾಕು. ಚಿಂತೆಯೊಂದು ಕರಗಸವಿದ್ದಂತೆ; ಅದು ಹೋಗುವಾಗಲೂ ಕೊರೆಯುವುದು, ಬರುವಾಗಲೂ ಕೊರೆಯುವುದು. ತನ್ನ ಅಪೂರ್ಣತೆಯ ಅರಿವಿನ ಅಂಥ ಕೊರೆತ ಇರಲಿ ಎನ್ನುವ ಕವಿಯ ಪೂರ್ಣತೆಯ ಹಂಬಲ ಎಂಥದು ! ಅದರ ಆಳ ಅಗಲಗಳು ಎಷ್ಟು !

ಇಂಥ ಹಂಬಲ ಇರುವುದರಿಂದಲೇ, ಅದು ಜಾಗೃತ, ಸ್ವಪ್ನ, ಸುಷುಪ್ತಿ ಈ ಅವಸ್ಥಾತ್ರಯದಲ್ಲಿಯೂ ಕವಿಯ ಮನಸ್ಸಿನ ಒಳಗಿನ “ ಒಳಗಿನಸ್ತರದಲ್ಲಿ ನೆಲೆಗೊಂಡಿರುವುದರಿಂದಲೇ—ಅವನ “ ಕಂಡೊಲಿವ ಕಣ್ಮನಕೆ” * ಶೃಂಗಾರ ಸೌಂದರ್ಯ, ಆನಂದಗಳು ಸೃಷ್ಟಿಯಲ್ಲಿ ಎಲ್ಲೆಲ್ಲಿಯೂ ಕಾಣುವವು ತಂಗಾ-ಳಿಯ ಸುಳಿಯಿರಲಿ, ತಿಂಗಳಿನ ಕಳೆಯಿರಲಿ, ಹೊಂದಾವರೆ ಇರಲಿ, ಸಂಧ್ಯಾ-ರಾಗವಿರಲಿ, ಅರಗಿಳಿಯ ಸಾಲಿರಲಿ, ಮಳೆಬಿಲ್ಲು-ಮಿಂಚುಗಳಿರಲಿ ಯಾವುದ-ರಲ್ಲಿಯೂ ಚೆಲುವು ಕಾಣುವುದು, ಆನಂದವನ್ನು ಕವಿಮನಕ್ಕೆ ಈಯುವುದು. ಸೃಷ್ಟಿಯ ಈ ವಸ್ತುಗಳು—ತಂಗಾಳಿ ಮೊದಲುಗೊಂಡು ಮಿಂಚಿನ ವರೆಗೆ—ಎಷ್ಟು ಅಸ್ಥಿರ ! ಏನು ಕ್ಷಣ ಭಂಗುರತೆ ! ಆದರೆ ಅವುಗಳಲ್ಲಿ ಅಡಗಿರುವ ಶಿವತ್ವವನ್ನು ಕವಿಯ ದರ್ಶನವುಗುರುತಿಸಿದೆ:—“ಸರ್ವವೂ ಶಿವವಿಲ್ಲಿ ಸರ್ವವೂ ಶಿವವಲ್ಲಿ, ಅರಿದೊಲಿವ ಹೃದಯಕ್ಕೆ ಈ ಧಾತ್ರಿಯಲ್ಲಿ” ಇದೇ ತಿಳಿವು, ಒಲವುಗಳಿಂದ ಕವಿಹೃದಯ ತುಂಬಿ ತುಳುಕುತ್ತಿದೆಯೆಂಬುದಕ್ಕೆ ಸಾಕ್ಷಿ.

೪

ಕಾವ್ಯಾನಂದರು ಒಂದೆಡೆಗೆ ಕವಿಗೆ ಹೀಗೆ ಆಹ್ವಾನವಿತ್ತಿದ್ದಾರೆ.—“ ಕವಿಯೆ ಮನಮುಟ್ಟಿ ಚಿಂತಿಸಿ ಚಿತ್ರಿಸಬೇಕೆನ್ನುವೆ—ನಿನ್ನ ಮನ ಶುದ್ಧವಿದೆಯೇ ? ಕೈಮುಟ್ಟಿ, ಬರೆಯಬೇಕೆನ್ನುವೆ—ನಿನ್ನ ಕೈ ಶುದ್ಧವಿದೆಯೇ ? ಭಾವಗೀತೆ ಹಾಡಬೇಕೆನ್ನುವೆ—ನಿನ್ನ ಭಾವ ಶುದ್ಧವಿದೆಯೆ ? ಪಂಚಶುದ್ಧಿಗಳ ಸಿದ್ಧಿಯಾಗಿದೆಯೆ ನಿನಗೆ ? “ ವಿಶ್ವಾನಿದೇವ ಸವಿತರ್ ದುರಿತಾ ನಿರಾಸುವ । ಯದ್ ಭದ್ರಂ ತನ್ನ ಆಸುವ ॥ ” ಎಂಬ ಪ್ರಾರ್ಥನೆ ನಿನ್ನ ನಿತ್ಯ ಜೀವನದ

* “ ಕರುಣಾ ಶ್ರಾವಣ ” ಪು. ೫೦.



ಉಸಿರಾಗಿದೆಯೆ ? ಇಲ್ಲವಿದ್ದರೆ ನಿನ್ನ ಮತಿದರ್ಪಣದಲ್ಲಿ ವಿಶ್ವವೇ ಹೇಗೆ ಪ್ರತಿಫಲಿಸುವುದು ? ಅನುಕಂಪ, ಅನುಭೂತಿ ಉಗಮಿಸುವುದು ಹೇಗೆ ? ರಸ ಸಾಕ್ಷಾತ್ಕಾರವಾಗುವುದು ಹೇಗೆ ? ಪ್ರಸಾದ, ಸಮತೆ, ಮಾಧುರ್ಯ, ಸುಕುಮಾರತೆ, ಅರ್ಥವ್ಯಕ್ತಿ, ಉದಾರತ್ವ, ಓಜಸ್ಸು, ಕಾಂತಿ, ಸಮಾಧಿಗಳು ಆಳವಡುವುದು ಹೇಗೆ ? ದಿಟವಾದ ಹೃದಯವು ಶಿವಮಯವಾಗಿ ಸ್ಫುಟವಾಗಿ ಎಲ್ಲೆಲ್ಲೂ ಶಿವಮಯವಾಗಿಯೇ ಬೆಳಗುವುದು ಹೇಗೆ ? * ಇದು ಕವಿಗಳಿಗೆ ನಿಜವಾಗಿಯೂ ಒಂದು ಒರೆಗಲ್ಲು. ನಿಜವಾದ ಕಾವ್ಯದ ಜನನವಾಗಬೇಕಾ-ದರೆ ಕವಿ ಹೃದಯವು ಶಿವಮಯವಾಗಬೇಕು. ಅದಕ್ಕೆ ಮೊದಲು ಮನ ಬುದ್ಧಿ, ಭಾವಗಳೆಲ್ಲ ಪರಿಶುದ್ಧವಾಗಿರಬೇಕು. ಅದನ್ನು ಗಮನಿಸಿಯೇ ಕವಿಯು “ ಬಿಂದು-ಸಿಂಧು- ”ವಿನಲ್ಲಿ

ಕ್ಷಣಕಾಲ ಬದುಕಿದರು ತಿಳಿ-ಬಾಳು ಬಾಳುವೆನು
ನನ್ನ ಪಾವಿತ್ರ್ಯವೇ ನನ್ನ ಬಾಳಸಿದ್ಧಿ ! **

ಎಂದು ಘಂಟಾಘೋಷವಾಗಿ ಸಾರುವನು. ಅವನು ವ್ಯಕ್ತಿತ್ವಹೀನವಾದ ಬೃಹದ್‌ರೂಪ, ನಿತ್ಯತ್ವ, ಚಿರಜೀವನ, ಅಮರತ್ವಗಳೇನಿದ್ದರೂ ಅವು ತನಗೆ ಬೇಡವೆನ್ನುವನು. ಆದರೆ ಆ ವ್ಯಕ್ತಿಜೀವನ ಪ್ರಿಯತೆ, ವ್ಯಕ್ತಿತ್ವ ನಿಷ್ಠೆಗಳೆಂದರೆ ಸುತ್ತಲಿನ ಜಗತ್ತಿನಿಂದ ಸಿಡಿದು ನಿಲ್ಲುವುದೆಂದಲ್ಲ. ಸಮಷ್ಟಿಯ ಸಮರಸತೆಯನ್ನು ಸಾನಂದದಿಂದಲೇ ಕವಿಯು ಸ್ವೀಕರಿಸುವನು. ಅವನಿಗೆ ವಿಶ್ವದ ಆದಿ-ರೂಪದ ಲೀಲೆಯು “ ಒಂದೊಡೆದು ಹಲವಾಗಿ ಹಲವು ಮತ್ತೊಂದಾಗಿ ” ಸಾಗಿಹುದೆಂಬುದರ ಅರಿವು ಇದೆ. ಅದರಿಂದ ಕವಿಯು “ ಆತ್ಮನಿಗೆ ಆಹ್ವಾನ ” ವೀಯುತ್ತ,

ಓ ಉತ್ತಮೋತ್ತಮ।
ಒಳಗಿನ ಪುರುಷೋತ್ತಮ।
ಪ್ರಖರವಾಗಿ ಪ್ರಕಟವಾಗು
ನರನ ಮತಿಯ ನರೋತ್ತಮ,
ಓ ಅಂತರಾತುಮ ! ***

* ಬೀದರ ಕನ್ನಡ ಸಾಹಿತ್ಯ ಸಮ್ಮೇಲನದ ಕವಿಗೋಷ್ಠಿಯ ಅಧ್ಯಕ್ಷ ಭಾಷಣದಿಂದ.
** “ ಜಲಪಾತ ” ಪು. ೩೨. *** “ ಕರುಣಾ ಶ್ರಾವಣ ” ಪು. ೨೦.

ಎಂದು ಹೃತ್ಪೂರ್ವಕವಾಗಿ ಪ್ರಾರ್ಥಿಸುತ್ತಾನೆ ಅವನಿಗೆ ಈ ಜನನ-ಮರಣ ಜಾಲವಲ್ಲಿ ಸಿಕ್ಕಿ ಸುತ್ತಿ ಸುತ್ತಿ ಸಾಕಾಗಿದೆ. ಆದಕ್ಕಾಗಿ

ಏಸು ಸಲ ಬರಿದೆ ಸತ್ತು
ಹುಟ್ಟಿ ಮತ್ತೆ ಸಾಯಲಿ ?
ಹಿಂದೆ ನೊಂದ ನೋವಿನಲ್ಲೆ
ಇಂದು ಮತ್ತೆ ನೋಯಲಿ ? *

ಎಂದು ಕೇಳಿಕೊಳ್ಳುವನು. ಆದರೆ ಇದು ಜೀವನದ ಹೋರಾಟಕ್ಕೆ ಬೇಸತ್ತು, ಸಂಸಾರ ವಿಮುಖವಾಗಿ ಎಲ್ಲಿಯಾದರೂ ಓಡಿಹೋಗುವ ಹೊಣೆಗೇಡಿಯ ಕ್ಷಣಿಕ ಅನಿಸಿಕೆಯಲ್ಲ. ತನ್ನಲ್ಲಿಯ ನರತ್ವದ ಅಂತರಾಳದಲ್ಲಿ ಅಡಗಿರುವ ಬೆಳಕಿನ ಕಿಡಿಯಾಗಿರುವ-ಅಂತರಾತುಮನನ್ನು ನರೋತ್ತಮತ್ವವನ್ನು ಆರಾಧಿಸುವ ಬಗೆಯಾಗಿದೆ. ಅದರಿಂದ ಈ ಸಾಧಕನಿಗೆ ಆತ್ಮ ಹೆಚ್ಚು, ದೇಹ ಹೀನ ಎಂಬ ಭಾವನೆಯೂ ಇಲ್ಲ. ಆದಕ್ಕಾಗಿ ಅವನು " ಚಿನ್ನ ಬಣ್ಣಗಳ ನಡುವೆ ಭಿನ್ನತ್ವ ಸಾಧ್ಯವೇ ? ಏಕೆ ಜಗಳಾಡುವಿರಿ ? ಆತ್ಮ-ದೇಹಗಳೆ ? " ಎಂದು ಕೇಳುವನು. ಆಧ್ಯಾತ್ಮದಲ್ಲಿ ಇದು ಜಡ, ಅದು ಚೇತನ ಎನ್ನುವುದೆಲ್ಲ ಬರಿ ಭ್ರಮೆಯಾಗಿದೆ. ಅವು ಕೂಡ ಆದಿಬೀಜದ ಬೆಳೆಗಳಿದ್ದಂತೆ. ಅಂತಲೇ ಅವು ಸಹ ಕವಿಗೆ

" ನೀವು ಸಹ ಆ ದಿವ್ಯ ಯೋಜನೆಯ ಅಂಶಗಳು
ನಿಮಗೆಲ್ಲ ಭಿನ್ನತ್ವ ಬೇರೆ ಅಸ್ತಿತ್ವ " **

ಎನ್ನುವ ಹಾಗೆ ದಿವ್ಯಶಕ್ತಿಯ ಕೈಗೊಂಬೆಗಳೆಂದು ನಂಬುಗೆಯಿದೆ. ಅಚಲ ಶ್ರದ್ಧೆಯಿದೆ. ಅದರಿಂದ ಆತ್ಮನಿಗೆ ದೇಹವೊಂದು ಬೇಡಿಪಂಜರವಲ್ಲ, ಜಡದ ಜಂಜಡವಲ್ಲ, ಬಾಡಿಗೆಯ ಮನೆಯಲ್ಲ. ಅದು ಆತ್ಮನ ದಿವ್ಯ ಪಯಣಕ್ಕೆ ಸಾಧನವಾಗಿರುವ ನಾಕೆ. ಅದು ಮುಳುಗುವಂಥದು. ಕಾಲನ ಬಂಡೆಗೆ ಅಪ್ಪಳಿಸಿ ಒಡೆಯುವಂಥದು. ಝಂಝಾವಾತಕ್ಕೆ ತಳವನ್ನು ಕಾಣುವಂಥದು. ಆದರೂ ಈ ಆತ್ಮನಿಗೆ ನೂರು ಜನ್ಮದಲ್ಲಿ ನೂರು ಸಲ, ನೂರು ನಾಕೆಯಾಗಿ ಬಂದು-ದಾಗಿದೆ. ಅದಕ್ಕೆ ಹೆಚ್ಚಿನ ಹಂಬಲವೇಕೆ ? ತೆರೆಯನ್ನು ತುಳಿಯುತ್ತ ತುಳಿಯುತ್ತ ಮುಂದರಿಯುವುದೊಂದೇ ಕರ್ಮ. ಕೊನೆಯನ್ನು ಮುಟ್ಟೇತೀರುವೆ

* " ಕರುಣಾ ಶ್ರಾವಣ " ಪು. ೨೧.
** " ಜಲಪಾತ " ಪು. ೪೧.



ನೆಂಬ ಹಟವಾದರೂ ಏಕೆ ಬೇಕು ? ಅದಕ್ಕೆ ತನ್ನ ಕಾರ್ಯವೆಸಗುವುದರಲ್ಲಿಯೇ ಸಮಾಧಾನ. ಅದೇ ಜೀವನ ನಿಷ್ಠೆ:—

ಮುಂದೆ ನಡೆದರೆ ದಿವ್ಯ ಪಯಣವು
ಮುಳುಗೆ ಸಲಿಲ ಸಮಾಧಿಯು !
ನಡೆಯದಿದ್ದರೆ ಮಡಿಯದಿರುವೆಯ ?
ನಡೆವುದೊಂದೇ ಹಾದಿಯು ! *

ಇಂಥ ನಿಷ್ಠೆಯೇ ಮಾನವನನ್ನು ಮಹಾಮಾನವತೆಗೆ ಎತ್ತುವ ಶಕ್ತಿ. ಈ ಶಕ್ತಿಯ ಅಂಶವಿದ್ದವರಿಗೆ ಈ ದಿವ್ಯ ಜಗತ್ತಿನ ಮೇರೆಯೂ ಕೂಡ "ದೂರವಿಲ್ಲ" ಎಂದೆನಿಸುವುದು. ಸಂಸಾರದ ಏರುಪೇರುಗಳು, ಸುಖ-ದುಃಖಗಳು ಕ್ಷಣಿಕ, ಹಗಲು ಇರುಳುಗಳಿದ್ದಂತೆ; ರಳುಬಿಸಿಲುಗಳಿದ್ದಂತೆ. ಅದರಿಂದ " ಜಗವ ಮೂದಲಿಸಿ ಗೋಗರೆ " ಯುವದು ತರವಲ್ಲ. ಯಾಕೆಂದರೆ ಒಳಗಿರುವುದು ಚೈತನ್ಯ, ಹೊರಗೆ ಕಾಣುವುದು ಜಡ. ಒಂದು ಆತ್ಮ, ಇನ್ನೊಂದು ದೇಹ. ಇವೆರಡೂ ಒಂದೇ ನಾಣ್ಯದ ಎರಡು ಮೈಗಳಿದ್ದಂತೆ. " ಒಬ್ಬರೊಬ್ಬರ ಎರಕವೇ ಇಬ್ಬರಿಗೂ ಪೂರಕ " ವಾಗಿರುತ್ತದೆ. ಇಬ್ಬರಲ್ಲಿಯೂ ತಾಳ-ಮೇಳ ಇದ್ದರೇನೇ ಹಿತ. ಅಂತಲೇ,

ಒಳಹೊರಗು ಒಂದಾಗೆ ತಳತಳಿಸಿ ಬೆಳಗೀತು
ಜೀವನದ ದೇವತೆಯ ದಿವ್ಯ ದೇಗುಲವು !
ಒಳಹೊರಗಿನಿಬ್ಬಣವೆ ಕಳವಳದ ಕಾರಂಜಿ !
ಸೃಜಿತ ಸಮ್ಮೀಳನವೇ ಸುಖದ ಬಾಗಿಲವು ! †

ಎಂದು ಕವಿಯು ನಿಸ್ಸಂಶಯವಾಗಿ ನುಡಿಯುತ್ತಾನೆ. ಈ ನಿಶ್ಚಿತ ದೃಷ್ಟಿಯೂ ಅವನಲ್ಲಿ ಸರ್ವಾರ್ಪಣಭಾವನೆಯನ್ನು ಉದಿಸಿದೆ; ಇಷ್ಟೇ ಅಲ್ಲ, ಸ್ಥಿರಗೊಳಿಸಿದೆ.

ಅಧ್ಯಾತ್ಮಿಕ ಜೀವನದಲ್ಲಿ ಸಾಧಕನ ಸರ್ವಾರ್ಪಣಸ್ಥಿತಿಗೆ ಬಹಳ ಮಹತ್ವದ ಸ್ಥಾನವಿದೆ. ಆ ಅವಸ್ಥೆಯಲ್ಲಿ ಶರಣ ಬೇರೆಯಲ್ಲ, ಶಿವ ಬೇರೆಯಲ್ಲ. ಅವನ ಕರುಣೆಯಿಂದಲೇ ಎಲ್ಲ, ಎಂಬ ನಿಷ್ಠೆಯು ಸಾಧಕನ ಜೀವನದಲ್ಲಿ ಎಲ್ಲೆಲ್ಲೋ ರೂಪು ತಾಳಿ ನಿಲ್ಲುವುದು. ಆಗ ಆತನ " ಮಾನಸ ಸರೋವರ " ದಲ್ಲಿ ಆಗಾಗ ತೆರೆಗಳು ಏಳುವವು. ನನ್ನ ಮನಸ್ಸೆಂಬುದು " ತೂತು ಬಿದ್ದಿಹ

* " ಕರುಣಾ ಶ್ರಾವಣ " ಪು.೪೨.
† " ಜಲಪಾತ " ಪು. ೪೨.

ಮಡಕೆ ". ಅದನ್ನು ತುಂಬುವೆನೆನ್ನುವ " ನಾ " ಎಂಬ ಸೋರುತಿಹ ಚಿಪ್ಪು ! " ನಾ " ಎನ್ನುವ ವರ್ಗದ ಭಾವ ಅಳಿಯದೆ ಮಾನಸ ಸರೋವರವನು ತುಂಬುವದಂತಿರಲಿ, ಅದರ ಆಳ ಅಗಲಗಳನ್ನು ಅರಿಯುವುದೂ ಸಹಿತ ಸಾಧ್ಯ ವಾಗದು. ಅದಕ್ಕಾಗಿ ಅವನ ಕರುಣೆಯೇ ಬೇಕು. ಆ ಕರುಣೆಯ ಪ್ರವಾಹವೇ ಈ ತೆರೆಯನ್ನು ತುಂಬಬಲ್ಲುದು. ನೀನು ತುಂಬು ಎಂದಾಗ ತುಂಬುವದು. ಬರಿದಾಗು ಎಂದಾಗ ಬರಿದೇ ಆಗುವದು. ಎಲ್ಲವೂ ನಿನ್ನಾಧೀನ. ನಾನು ನಿನಗೆ ಶರಣು. ಯಾಕೆಂದರೆ,

ಈ ತೆರೆಯ ಕಟ್ಟಿದವ ನಾನಲ್ಲ. ಈ ತೆರೆಯ
ತುಂಬಿಸುವ ಭಾರವೂ ನನ್ನದಲ್ಲ !
ತುಂಬದಿದ್ದರು ನನಗೆ ಅಪಮಾನವೇನಿಲ್ಲ
ತುಂಬು, ಬಿಡು, ಭರಭಾರ ನಿನ್ನದೆಲ್ಲ ! *

ಎನ್ನುವ ಸಂಪೂರ್ಣ ಆತ್ಮಾರ್ಪಣೆಯ ಭಾವವು ಇಲ್ಲಿ ಮೂಡಿ ನಿಂತಿದೆ. ತನ್ನ ಸುಖಕ್ಕಾಗಿ, ಸ್ವಾರ್ಥಕ್ಕಾಗಿ ಯಾವುದನ್ನೂ ಹಿಂದೆ ಇಟ್ಟುಕೊಂಡಿಲ್ಲ. ಎಲ್ಲವೂ ಶಿವನಿಗರ್ಪಣ. ಶಿವಸ್ವರೂಪಿಯಾದ ಜನತಾ ಜನಾರ್ದನನಿಗೆ ಅರ್ಪಣ. ಅದರಿಂದ ಎಲ್ಲೆಲ್ಲೂ ಕವಿಗೆ ಅವನ " ರೂಪ "ವೇ ಕಾಣುತ್ತದೆ. ಸದ್ರೂಪವಿರಲಿ, ಚಿದ್‌ರೂಪವಿರಲಿ, ಆನಂದರೂಪವಿರಲಿ, ಯಾವ ರೂಪದಲ್ಲಿಯೇ ಇರಲಿ, ಅದು ಅವನ " ಬಾಳ ದೀಪವೇ " ಆಗಿರುವುದು. ಇಂಥ ನಿಧಿಧ್ಯಾಸದಲ್ಲಿರುವ ಕವಿಗೆ ಪುಷ್ಪಗಳ ವರ್ಣದಲ್ಲಿ, ಪಕ್ಷಿಗಳ ವಾಣಿಯಲ್ಲಿ, ದಿನದ ಬೆಳಗು–ಬೈಗುಗಳಲ್ಲಿ, ಆಕಾಶದ ನೂರಾರು ತಾರೆಗಳಲ್ಲಿ ಕಾಣುವ ಚೆಲುವಿನಲ್ಲಿರುವ ಅಂದವೆಂಬುದೆಲ್ಲ ಆ ಪರಮಾತ್ಮನ ರೂಪವೇ ಆಗಿ ತೋರುವುದು. ಈ ಸದ್ರೂಪವನ್ನಲ್ಲದೆ,—

" ಎಲ್ಲ ತೋರ್ಕೆಯಾಚೆ ನಿನ್ನ ಚೆಲುವು ಸೊಬಗು ಬೆಡಗಿದೆ
ಶಿಲೆಯ ಮರೆಯ ಶಿಖಿಯ ತೆರದಿ ನೀನೆ ಎಲ್ಲು ಅಡಗಿದೆ " ❖

ಎಂದು ಚಿದ್ರೂಪವನ್ನು ಸಹ ಅವನ ಬಗೆಗಣ್ಣು ಕಾಣಲು ಶಕ್ತವಾಗಿದೆ. ಇಷ್ಟೇ ಅಲ್ಲ, ಕವಿಯ ಹೃದಯವು " ಆನಂದ ರೂಪ " ವನ್ನು ಕಂಡು, ಹಿಗ್ಗಿ " ನಮೋ ನಮೋ ರೂಪವೇ–ನಮೋ ಬಾಳ ದೀಪವೇ !" ಎಂದು ಹಾಡಿ ನಲಿ

* '' ಮಾನಸ ಸರೋವರ '' ಪು. ೯೪
❖ " " ಪು. ೨೪



ಯುವುದು. ಈ ಆನಂದ ಬ್ರಹ್ಮನ ಇರವಿನ ತಾಣವು ಎಲ್ಲಿ ಗೊತ್ತೇ ? "ನೆಲವು ಮುಗಿಲನಪ್ಪಿದಲ್ಲಿ, ಗಿರಿಯು ಗಗನ ಮುದ್ದಿಪಲ್ಲಿ "; ಇದರಂತೆಯೇ " ಶಶಿಯ ಸೆಳೆತದಿಂದ ಶರಧಿ ಹಿಗ್ಗಿ ಮೇಲೆ ಹರಿ " ಯುವಲ್ಲಿಯೂ ಆನಂದರೂಪವಿದೆ. ಈ ಸ್ಥಾನಗಳ ಸಂಕೇತದಲ್ಲಿ ಸಾಧಕನ ಅಂತರಂಗದ ಮೇಲ್ ಮೊಗವಾಗಿ ಸಾಗುವ ಬುದ್ಬುದ–ಅಲ್ಲ–ಕಾರಂಜಿಯೂ ಅದೂ ಅಲ್ಲ–ಮೇಲೆ ಮೇಲೆಯೇ ಏರುವ, ತಿರುಗಿ ಕೆಳಗೆ ಬೀಳದ ವಿಕಾಸವೂ ಇದೆ. ಅಂಥ ವಿಕಾಸವನ್ನು ಗುರುತಿಸಿ ಅಲ್ಲಿ ಅವತರಿಸುವ–ಅಲ್ಲ ಕೆಳಗಿನದನ್ನು ಮೇಲೆ ಸೆಳೆದುಕೊಳ್ಳುವ ಅಪಾರ ಕರುಣೆಯ ಸೂಚನೆಯೂ ಇದೆ. ಈ ಸಂಕೇತವನ್ನು ಇನ್ನೂ ಸ್ಪಷ್ಟಗೊಳಿಸುವ " ರಾಧೆಯೆದೆಯ ಕೃಷ್ಣನಾಗಿ, ಕೃಷ್ಣನೆದೆಯ ರಾಧೆಯಾಗಿ"– ಎಂಬ ಉಪಮೆಯಲ್ಲಿ ಎಂಥ ಔಚಿತ್ಯವಿದೆ, ಅದೆಂಥ ದಿವ್ಯ ಅರ್ಥದ ಅಭಿವ್ಯಕ್ತಿಯಿದೆ ! ಅದನ್ನು ಅರಿತು ಅನುಭವಿಸುವ ರಸಿಕನೂ ಆನಂದ ರೂಪದಲ್ಲಿ ತನ್ಮಯನಾಗುವುದರಲ್ಲಿ ಆಶ್ಚರ್ಯವಿಲ್ಲ. ಹೀಗೆ ಓದುಗರನ್ನು ಜಾಗೃತಗೊಳಿಸಿ ಮೇಲ–ಮೇಲಕ್ಕೆತ್ತುವ ಕಾವ್ಯವೇ ಋಷಿವಾಕ್ಯವಲ್ಲವೆ ? ಇಂಥ ಪದ್ಯಗಳಲ್ಲಿ ಮಂತ್ರಶಕ್ತಿಯನ್ನು ಅನುಭವಿಸದಿರುವ ಕಾವ್ಯಪ್ರೇಮಿಗಳೇ ವಿರಳ.

೫

ಜೀವನವು ಕವಿಗೆ ಸ್ಫೂರ್ತಿಯನ್ನೀಯುತ್ತದೆ. ಯಾವ ಕವಿಯೇ ಆಗಲಿ, ಸಾಹಿತಿಯೇ ಆಗಲಿ ತನ್ನ ಸುತ್ತಲಿನ ಜೀವನವನ್ನು ಅಲ್ಲಗಳೆದು ಕೃತಿಯನ್ನು ನಿರ್ಮಿಸಲಾರ. ಅದರಿಂದ ಕವಿಯ ವಾಣಿಯಲ್ಲಿ ಅಂದಿನ ಯುಗದ ಧ್ವನಿಯು ಮೂಡದೆ ಇರುವುದಿಲ್ಲ. ತಾನು ಬಾಳುತ್ತಿರುವ ರಾಷ್ಟ್ರ, ಜನಾಂಗ, ಸಮಾಜ, ಕಾಲಗಳ ಅಂತರ್ವಾಣಿಯನ್ನು ಅರ್ಥಮಾಡಿಕೊಳ್ಳದೆ, ಆ ಕೂಗಿಗೆ ಕಿವಿಗೊಡದೆ ಮುಂದೆ ಸಾಗುವುದು ಸಾಧ್ಯವಿಲ್ಲ. ಶ್ರೀ ಕಾವ್ಯಾನಂದರೇ ಒಂದೆಡೆಗೆ ಹೇಳುವಂತೆ " ಸಾಹಿತ್ಯವು ನಮ್ಮನ್ನು ಅನ್ನಮಯದಿಂದ ಆನಂದಮಯಕ್ಕೆ ಕರೆದೊಯ್ಯುವ ದಿವ್ಯ ಧ್ವನಿ. ಈಗ ಅನ್ನಮಯವೇ ಬರಿದಾಗಿ ಉರಿಯುತ್ತಲಿದೆ–ಆನಂದಮಯಕ್ಕೇರುವೆವೆಂಬ ಮಾತು ಗಾಳಿ ಗೋಪುರವೆನ್ನುವವರೂ ಇದ್ದಾರೆ. ಅವರಲ್ಲಿ ನಿಜಾಂಶವಿಲ್ಲದೆ ಇಲ್ಲ. * " ಕಾವ್ಯದದಿವ್ಯಧ್ವನಿ, ಸುತ್ತಲಿನ

* ಶ್ರೀ ಸಿದ್ಧಯ್ಯ ಪುರಾಣಿಕರ " ಪ್ರಬಂದ ಮಾಲೆ " ಯಿಂದ.

ಜೀವನ ಪ್ರಜ್ಞೆ ಇವೆರಡರಲ್ಲಿಯೂ ಇಂದಿನ ವಿಜ್ಞಾನದ ಹೋರಾಟದ ಯುಗದಲ್ಲಿ ಅಂತರಗೊಳ್ಳುತ್ತ ನಡೆದಿದೆ. ಅದಕ್ಕಾಗಿ ನಿಜವಾದ ಕವಿಯಾದವನು " ನವಯುಗ ಲಕ್ಷ್ಮಿ " ಯನ್ನೇ ಇಂಥ ಸಂದರ್ಭದಲ್ಲಿ ಕೇಳಬೇಕಾಗುತ್ತದೆ.

ನಿಜವನೆ ನುಡಿ ಮರೆಮಾಜದೆ ಓ ನವಯುಗ ಲಕ್ಷ್ಮಿ
ವರವಾವುದ ದಯಗೈಯುವೆ, ಒರೆ ಸರ್ವರ ಸಾಕ್ಷಿ *

ಈ ಸಂದಿಗ್ಧ ಸಮಯದಲ್ಲಿ ಸರ್ವರ ಸಾಕ್ಷಿಯೆನಿಸುವ ನವಯುಗಲಕ್ಷ್ಮಿಯೂ ಕೂಡ ನಿಜವನ್ನೇ ನುಡಿದಾಳೆನ್ನುವ ಭರವಸೆಯು ಕವಿಗೆ ತೋರುವುದಿಲ್ಲವೇನೋ ! ಯಾಕೆಂದರೆ ಜಗತ್ತಿನಲ್ಲಿ ಉದ್ಭವಿಸಿದ ಮಹಾಯುದ್ಧಗಳು ವ್ಯಕ್ತಪಡಿಸಿದ ಕ್ರೌರ್ಯವನ್ನು ಹಿಂದಿನ ಯುಗವಾವುದೂ ನೋಡಿಲ್ಲ.' ಇಂಥ ನಾಶದ ನಾಟ್ಯವನ್ನು ಜನರು ಹಿಂದೆಂದೂ ಆಡಿಲ್ಲ. ಅದರಲ್ಲೂ ವೈರದ ಬೇರುಗಳನ್ನು ಬಿಟ್ಟು ರಣವು ಮುಗಿಯುತ್ತಲಿದೆ. ಕೀಳು ಮೇಲುಗಳ ಕಾಳಕೂಟದ ವಿಷವು ಎಲ್ಲೆಲ್ಲೂ ಹಬ್ಬಿದೆ. ಇನ್ನು ಹೃದಯಶುದ್ಧಿಗೆ ಸಮಯವು ದೂರವಿದೆ. ಅಂದಮೇಲೆ ಜಗತ್ತಿನ ಜನಕ್ಕೆ ಶಾಂತಿ ಸುಖಗಳು ಎಲ್ಲಿಂದ ಬಂದಾವು ? ಮೂಲತಃ " ಮಾನವ ಸಮಾಜ " ವೇ ರೂಪವತಿಯಾದರೂ ಪಾಪಮತಿ. ಇತಿಹಾಸವೇ ಹಾಗಿದೆ.

ಆದರ್ಶವಾದಿಗಳ ಶಿಲುಬೆಗೇರಿಸಿ ಅವರ
ಕನಸುಗಳ ಕುಟ್ಟಿ—ಸ್ವಾರ್ಥಿಗಳಿಗುಣಿಪೆ
ಜ್ಞಾನಯೋಗಿಯ ಕೈಗೆ ವಿಷದ ಬಟ್ಟಲ ಕೊಟ್ಟು
ನೀಚ ನರನಾಯಕರ ಮನವ ತಣಿಪೆ ❖

ಎಂದು ನಿಷ್ಕರುಣಿಯಾದ ನಿರ್ಲಕ್ಷ್ಯ ಮಾನವ ಸಮಾಜವನ್ನು ಕವಿಯು ಸ್ಪಷ್ಟವಾಗಿ ವಿಮರ್ಶಿಸುತ್ತಾನೆ. ಕೇವಲ ವಿಮರ್ಶಿಸಿ ಸುಮ್ಮನೆ ಕೂಡುವುದಿಲ್ಲ. ಸಮಾಜಕ್ಕೆ " ನಿನ್ನ ಸರಿ ಪಡಿಸಿಕೊ, ಅನ್ಯಾಯಗಳ ಹೂಳು, ಎಲ್ಲರನು ಸಮನಾಗಿ ಕಾಣು " ಎಂದು ಎಚ್ಚರಿಸುತ್ತಾನೆ. ಅಲ್ಲದೆ ಇದನ್ನು ನೀನು ಬೇಗನೆ ಮಾಡದಿದ್ದರೆ " ನಿನ್ನನ್ನೇ ಮುರಿದು ಕರಗಿಸಿ ಮತ್ತೆ ನಮಗೆ ಬೇಕಾದಂತೆ ರೂಪಿಸುವೆವು " ಎಂದು ಧೈರ್ಯವಾಗಿ ಹೇಳುತ್ತಾನೆ ಕವಿ. ನವಸಮಾಜ

* " ಜಲಪಾತ " ಪು. ೨೪.
❖ " " ಪು. ೩.



ನಿರ್ಮಾಣದ ಸಂದೇಶ ಇಲ್ಲಿದೆ. ಅದನ್ನು ಕಾರ್ಯಗತಗೊಳಿಸುವ ಪ್ರೇರಕ ಶಕ್ತಿಯು ಕವಿಯ ವಾಣಿಗಿದೆ.

ಇಷ್ಟೇ ಅಲ್ಲ, ಕವಿಯ ಅಂತರ್ ದೃಷ್ಟಿಯು ನಮ್ಮ ಸಮಾಜದ ಸ್ವರೂಪವನ್ನೂ ಅದರ ರೂಪು-ರೇಷೆಗಳನ್ನು ಕಲ್ಪಿಸದೆ ಇಲ್ಲ. ಅವನ ನಿಡುನೋಟವು " ಬರುತಿದೆ ಬಡವರ ಯುಗ " ಎಂಬುದನ್ನು ಕಂಡುಕೊಂಡಿದೆ. ಇದರ ಬರುವಿಕೆಯೊಂದು ಅಬ್ಬರದ ತಡಸಲಿದ್ದಂತೆ ಮಹಾಜಲಪಾತದ ಒಂದಂಗವಿದು. ಇದನ್ನು ಇಂಥ ಯಾವ ಶಕ್ತಿಯೂ ತಡೆಯಲು ಸಾಧ್ಯವಿಲ್ಲ. ಯಾಕೆಂದರೆ ಈ ಕಾಲದಲ್ಲಿ ಸಮಾಜ ನಿರ್ಮಾಣದ ಅಧಿಕಾರ ಅಥವಾ ಶಕ್ತಿಯು ಧನಿಕನ ಕಡೆಗೆ ಉಳಿದಿಲ್ಲ.

ಹೊಸಲೋಕವ ಕಟ್ಟುವ ಹೊಣೆ ಇಂದಿನ ಬಡವನದು
ಹೊಸ ಬಾಳನು ರಚಿಸುವ ಹೊಣೆ ನಾಳಿನ ದುಡಿವನದು *

ಆಗಿದೆ. ಧನಪಿಶಾಚಿಯು ಮಾನವತೆಯನ್ನೇ ನುಂಗಿದ ಮೇಲೆ, ಸಿರಿವಂತರ ಸಿರಿ ಹೆಚ್ಚಿದಂತೆ ಬಡಹೊಟ್ಟೆಯ ಉರಿಯೇ ಹೆಚ್ಚುತ್ತ ನಡೆದರೆ, ಜನತೆಯಾದರೂ ಹೇಗೆ ಸುಮ್ಮನಿದ್ದೀತು. ಪೆಟ್ಟಿಗೊಂದು ಬುದ್ಧಿಯಾದರೆ ಎತ್ತಿಗೊಂದು ಬುದ್ಧಿಯು ಬಂದೇ ಬರುತ್ತದೆ. ಹೆಚ್ಚಿನ ಧನ, ಹೆಚ್ಚಿನ ಹಣ, ನನಗೂ ಬೇಡ. ರಾಷ್ಟ್ರದ ಆಸ್ತಿಯಾಗಲಿ ಎನ್ನುವನು ಬಡವ. ಎಲ್ಲರೂ ಕೂಡಿ ದುಡಿಯೋಣ, ಬಂದದ್ದನ್ನು ಕೂಡಿ ಸರಿಯಾಗಿ ಹಂಚಿಕೊಂಡು ಬಾಳೋಣ, ಹೆಚ್ಚಾದುದನ್ನು ಎಲ್ಲರಿಗಾಗಿ ಇಡೋಣ ಎಂದೂ ನಿರ್ಧರಿಸಿರುವನು. ಇದರಲ್ಲಿ ತಪ್ಪೇನು ?

ಬಡವ ಹೀಗೆ ನಿರ್ಧಾರಕ್ಕೆ ಬಂದುದು ಒಮ್ಮೆಲೆ ಅಲ್ಲ. ಅದಕ್ಕೆ ಹಲವು ತಪಗಳನ್ನು ಅಲ್ಲ—ಶತಮಾನಗಳನ್ನು—ಅವನು ಹಾಗೆಯೇ ಕಳೆದಿದ್ದಾನೆ. ಈ ಜನರ ರೀತಿಯನ್ನು ಅರಿಯಲು ಯತ್ನಿಸಿದ್ದಾನೆ. ದೇವಧರ್ಮಗಳನ್ನು ನಂಬಿ ನೋಡಿದ್ದಾನೆ. ಅಂತೂ ದೈವುಳ್ಳವನ ಪಾಲೆಂದು ಅವನು ಅನುಭವದಿಂದ ತಿಳಿದಿದ್ದಾನೆ. ತಾನು ' ದುಡಿದುಡಿದು ಸತ್ತರೂ ಮಡದಿ ಸುತರತ್ತರೂ ಬಡವನಳಲದು ಕೊಳ್ಳಕೂಡು' ತ್ತದೆ. ಅವನ ಮಕ್ಕಳೆಲ್ಲಾ ಚೊಕ್ಕಮುಕಿಗಳಿದ್ದರೂ ರೊಕ್ಕಕ್ಕೆ ಗತಿಯಿಲ್ಲ. ತುಣುಕು ಮಿದುಳಿಲ್ಲದ ಸಿರಿವಂತ ಮಕ್ಕಳಿಗೆ ಲಕ್ಷಗಟ್ಟಲೆ ದುಡ್ಡನ್ನು ಸುರಿಯುತ್ತಾರೆ. " ಹುರುಳಿಲ್ಲದಿಹ ಸಭೆಗೆ ಹೊರೆ ಹೊರೆ

* " ಜಲಪಾತ " ಪು . ೯.

ಹಾರಗಳ ಕ್ಷಣ ಮಾತ್ರದಲಿ ತೊಟ್ಟು ಕೆಡಿಸುವರು. ಗುಡಿಸಲಿಗು ಗತಿಯಿರದ ಬಡ ಹೆಣ್ಣು ಗಂಡುಗಳು " ಅರೆ ಹೊಟ್ಟೆಯುಂಡು ದುಡಿಯಬೇಕು. ಇದೆ–ಲ್ಲಿಯ ನ್ಯಾಯ, ಏನು ಅನ್ಯಾಯ ?' ಎಲೆ ನೀನು ಸುಮ್ಮನಿದ್ದರೆ

ಅಳಲೊಂದೆ ನಿನಗುಳಿದ ಸಿರಿಯು ಬಡವ
ಹೆಚ್ಚು ಹೇಳುವದೇನು ? ನಿನಗೆ ನೀನೇ ಗತಿಯು
ಇಲ್ಲದಿರೆ ನಿನ್ನಿರವೆ ನರಕ ಬಡವ *

ಎಂದು ಕವಿವಾಣಿಯು ಬಡವನಿಗೆ ಸಲಹೆಯನ್ನು ನೀಡುತ್ತಿದೆ. ನವಸಮಾಜ ನಿರ್ಮಾಣಕ್ಕೆ ಹುರಿದುಂಬಿಸುತ್ತಿದೆ. ಇಲ್ಲಿ ನಿಷ್ಕರುಣೆಯಾದ ಸಮಾಜವನ್ನು ಕಂಡು ಕವಿಹೃದಯವೂ ಕೆರಳಿ ನುಡಿದಿದೆಯಾದರೂ ಇದು ಕಟ್ಟುವ ಕೈಯೇ ಹೊರತಾಗಿ ಕೆಡಿಸುವ ಕೈಯಲ್ಲ. ಹೇಗೆಂದರೆ ಅವನು ಹೊತ್ತಿಸಿದ " ಬೆಟ್ಟದುರಿ" ಯು

" ಸುಟ್ಟು ಸಗ್ಗವ ತಟ್ಟೆ ಬೆಟ್ಟದುರಿ ಹೊತ್ತಿಸಿದೆ
ನೆಂಬ ನುಡಿ ನಿಜವಿರಲು ಸುಡು ಸಿಕ್ಕುದನು ಕೈಗೆ ! ❖

ಎಂಬ ಪ್ರಬಲ ಭಾವನೆಯು ಗಾಳಿ, ಬಿರುಗಾಳಿ, ದೆವ್ವ ಗಾಳಿಯಿಂದ ಪ್ರಜ್ವಲಿತವಾಗಿದೆ. ಆದರೂ ಈ ಗಾಳಿಗೆ ಕವಿಯ ಸದಸದ್ವಿವೇಕವು ' ಬಲು ಜೋಕೆ ಗಾಳಿಯೇ ಬಾಯಿಂದ ಆಡಿದುದು, ಕೃತಿಯಲ್ಲಿ ಮಾಡಿದುದು ಬೇರಾಗ ಎರಲಿ' ಎಂದು ಸದಾ ಎಚ್ಚರಿಸುತ್ತ ಇರುವುದು ಈ ಬೆಟ್ಟದುರಿ ಹುಟ್ಟಿದ ಬಗೆ, ಹಬ್ಬಿದ ರೀತಿಯಲ್ಲೆಲ್ಲ ಒಂದು ಸುಂದರ ರೂಪಕದಿಂದ ಕವಿಯು ಈ ಯುಗದ ವಾಣಿಯನ್ನು ಸಾರಿದ್ದಾನೆ. ಸಮಾಜವೊಂದು ಕಾನನ. ಅದರಲ್ಲಿ ಇಲ್ಲಿಯವರೆಗೆ ಒಂದನ್ನೊಂದು ಆಶ್ರಯಿಸಿ ಮಿತ್ರತ್ವದಿಂದ ಇದ್ದ ಬಿದಿರಬಾಂಧವರು ಕೆದರಿ ಕದನವನು ತೆಗೆದರು. ಆಗ ಈ " ವಂಶ " ಮಾಡಿದ ಪಾಪವು ವಿಪಿನವನ್ನೆಲ್ಲ ಸುಡತೊಡಗಿತು. ಹಿಂದೆ " ಕಾಡು ಜನರನು ಪೊರೆದ " ಗಾಳಿಯೇ ಇಂದು ಈ ದಳ್ಳುರಿಗೆ ಸಹಾಯಕವಾಗಿ ನಿಂತಿತು. ದೋಷವಿಲ್ಲದ ಅನೇಕ ಜೀವಿಗಳೂ ಕೂಡ ಉರಿಗೆ ಆಹುತಿಯಾದುವು. ಆದರೆ " ಇದು ಅನಿವಾರ್ಯ ! ಮುಂಬ–ರುವ ಹಿರಿದುಃಖ ತಡೆಯಲಿಕೆ ಈ ದುಃಖ ಅನುಭವಿಸಲೇಬೇಕು !" ಇದು

* " ಜಲಪಾತ " ಪು. ೧೨.
❖ " ಪು. ೧೬.



ತಾಯಿಯು ಹೆರಿಗೆಯ ಕಾಲಕ್ಕೆ ಬೇನೆಯನ್ನು ಅನುಭವಿಸುವಂಥ ಸ್ಥಿತಿ. ಮುಂದೆ ಉದಿಸುವ ನವ ಸಮಾಜ ಪುತ್ರನ ಜನನಕ್ಕೆ ಇದೆಲ್ಲ ಅವಶ್ಯಕ, ತೀರ ಅವಶ್ಯಕ. ಈ ಮಾತನ್ನು ನಿಷ್ಕಲ್ಮಷವಾದ ಕವಿಯ ಅಂತರಂಗವು ನುಡಿಯುತ್ತಿದೆ. ಇದಕ್ಕೆ ಯಾವ ರೋಷ, ಮಾತ್ಸರ್ಯ, ಭೀತಿಗಳ ಸೋಂಕಿಲ್ಲ. ವಿವೇಕದ ವಿಕಾಸ ಧ್ವನಿಯಿದು.

ಇದು ವಿವೇಕದ ವಿಕಾಸದ ಗುರುತೆಂಬುದಕ್ಕೆ ಕವಿಯ " ಸಲಾಮ್ ಸಾಬ್ " ದಲ್ಲಿ ವ್ಯಕ್ತವಾದ ಹೃದಯದ ಹೊಯ್ದಾಟ–ಅಲ್ಲ–ಬುದ್ಧಿ, ರಾಜಕೀಯ ವಿಚಾರಗಳ ಪ್ರಾಬಲ್ಯ ಅದನ್ನು ತಡೆದು ತನ್ನ ವಿಜಯವನ್ನು ಪಡೆದ ಅಂತಃಕರಣದ ಚಿತ್ತವನ್ನು ನಾವಿಲ್ಲಿ ಗಮನಿಸಬೇಕು. ನಡುಹಗಲಿನಲ್ಲಿ ನಿಲ್ದಾಣ ಒಂದರಲ್ಲಿ ಕವಿಯು ನಿಂತಾಗ ಹಿಂದಿನಿಂದ ಒಬ್ಬ ಭಿಕ್ಷುಕನು ಬಂದು " ಸಲಾಮ್ ಸಾಬ್ ಸಲಾಮ್ ಸಾಬ್ !" ಎಂದು ಭಿಕ್ಷೆಗಾಗಿ ಕೂಗುತ್ತಾನೆ. ಆಗ ನಡೆದ ಸಂಗತಿಯಿದು. ಅಲ್ಲಿ ಕವಿ ಮನದಲ್ಲಿ ನಡೆದ ಮಂಥನವಿದು.

ಹಿಂದಿರುಗಿ ನೋಡಿದೆನು ಹೆದರಿ ಹೌಹಾರಿದೆನು ?
ದೈನ್ಯತೆಯು ನಿಟ್ಟುಸಿರೆ ನರನಾಗಿ ನಿಂತಂತೆ
ದಾರಿದ್ರ್ಯ ದುಮ್ಮಳವೆ ಮೈದಾಳಿತೆಂಬಂತೆ
ಅಳಲಿ ಚಿತ್ಕಾರವೇ ಚರ್ಮ ತೊಟ್ಟಿರುವಂತೆ
ಕನಿಕರದ ಕಣ್ಣೀರೆ ಕೈಕಾಲ ತಳೆದಂತೆ

.... .... .... .... .... ....

ಬಾಯ್ಬಿಡುತ ನಿಂತಿತ್ತು ನರನ ಆಕೃತಿಯೊಂದು !

* * * * *

ಕಂಡೊಡನೆ ಕಲ್ಲೆದೆಯೆ ಕರಗಿಸುವ ಕನಿಕರವು
ಕಲಕಿದರು ಎದೆಯನ್ನು ಕನಲಿ ನುಡಿಯಿತು ಬುದ್ಧಿ–
" ಇವ ತುರುಕ–ಭಾರತದ ಅರಮನೆಯ ಪುರುಕ !
ಇವ ಮ್ಲೇಂಛ–ಭಾರತವ ಹಂಚಿ ಹೂಡಿಹ ಸಂಚ !
ಹಾವ್ಗೆ ಹಾಲೆರೆಯದಿರು–ಸಾಯಲಿವರೀ ರೀತಿ !"
ಎಂದು ಗುಡಗಿದ ದನಿಗೆ " ಕನಲದಿರು ಬುದ್ಧಿಯೇ !
ಭಾರತದ ವೈರಿಗಳು ಬಡ ತುರುಕರಲ್ಲ..........

ಬೆಚ್ಚಿದೆನು ಮನದಲ್ಲಿ ! ನಿಶ್ಚಯವು ಈ ಮಾತು—
ಬಡ ತುರುಕ ಬೇಡುವುದು ಅನ್ನ—ಅಲ್ಲ ಪಾಕಿಸ್ತಾನ ! *

ಭಾವನೆಯು ಗೆದ್ದಿತು. ನಾಲ್ಕಾಣೆಗಳನ್ನು ಕೊಡಲು ಆ ಭಿಕ್ಷುಕನು ಪಟ್ಟ ಸಂತಸ ಎಂಥದು ! " ಅವನ ಹಿಗ್ಗನು ಕಂಡು ಹಿಗ್ಗಿತೆನ್ನೆದೆ. " ಹಸಿದ ಹೊಟ್ಟೆಗೆ, ಹೃದಯದ ಭಾಷೆಗೆ, ಬಡತನ–ಕರುಣೆಗಳಿಗೆ ಕುಲವುಂಟೇ ? ಹುಟ್ಟಿನಲ್ಲಿ, ವೇಷದಲ್ಲಿ, ಕರಿ–ಬಿಳಿಯ ವರ್ಣದಲ್ಲಿ ಕುಲವು ಇದ್ದೀತು. ಅಲ್ಲಿಯೂ ಆತ್ಮವು ಒಂದೇ ಅಲ್ಲವೇ ? ಅದಕ್ಕೆ ಕುಲವೆಲ್ಲಿ ? ಇಂಥ ವಿಶಾಲವಾದ ಆತ್ಮೀಯತೆಯಿಂದಲೇ ಕವಿಯ ನುಡಿಯು ನಾಡ ನುಡಿಯಾಗುವುದು; ಜನತೆಯ ಹೃದಯದುಸಿರೆನಿಸುವುದು. ಯುಗದ ವಾಣಿಯಾಗುವುದು. ಈ ವಾಣಿಯು ಚೇತನಕೆ ಚೈತನ್ಯವನ್ನು ನೀಡಿ ಮುನ್ನಡೆಯಿಸುವುದು. ಇದನ್ನೆಲ್ಲ ಗಮನಿಸಿಯೇ ಕವಿವರ್ಯ ಶ್ರೀ ದ. ರಾ. ಬೇಂದ್ರೆ ಎಂ. ಎ. ಅವರು, " ಜಲಪಾತ" ದ ಮುನ್ನುಡಿಯಲ್ಲಿ " ಕಾವ್ಯಾನಂದರ ಕಾವ್ಯರಚನೆಯು ಅಸ್ತಿಭಾರಕ್ಕೆ ತತ್ವಗಳ ತೂಕವಿರುವುದರಿಂದಲೆ ಅವರ ರಾಗದ ತ್ವೇಷದ(ದ್ವೇಷದ ಅಲ್ಲ !) ನುಡಿಗಳಲ್ಲಿ ಬೆಂಕಿಯ ಜತೆಜತೆಗೆ ಬೆಳಕು ನುಗ್ಗುತ್ತದೆ " ಎಂದು ಹೇಳಿದ್ದಾರೆ.

೬

ಒಂದು ದೇಶದ ಸಾಹಿತ್ಯವನ್ನು ಅವಲೋಕಿಸಿ ಅಲ್ಲಿಯ ಸ್ಥಿತಿಗತಿಗಳನ್ನು ಅರಿಯಲು ಸಾಧ್ಯವಿದೆ. ಸಾಹಿತ್ಯವೇ ರಾಷ್ಟ್ರದ ಪ್ರಾಣ. ಈ ಪ್ರಾಣದ ಮೇಲಿಂದಲೇ ಒಳಗೆ ಆತ್ಮವಿರುವದರ ಕಲ್ಪನೆಯು ಇತರರಿಗೆ ಆಗುತ್ತದೆ. ಯಾವ ದೇಶದ ಕವಿಯಾದರೂ ತನ್ನ ದೇಶದ ಹಾಡನ್ನು ಹಾಡದೆ ಇಲ್ಲ. ಅವನು ತನ್ನ ಸ್ಫೂರ್ತಿದಾಯಕ ವಾಣಿಯಿಂದ ರಾಷ್ಟ್ರವನ್ನು ಜಾಗೃತಗೊಳಿಸುವನು. ಜನತೆಗೆ ಎಚ್ಚರಾಗಿ ಮುನ್ನಡೆಯುವ ಸಂದೇಶ ನೀಡುವನು. ಇಂಥ ರಾಷ್ಟ್ರೀಯ ಭಾವನೆಯ ಬೆಳವಣಿಗೆಯು ಕನ್ನಡ ಸಾಹಿತ್ಯದಲ್ಲಿ ಎಂದಿನಿಂದಲೂ ಆಗುತ್ತ ಬಂದಿದೆ. ಸ್ವಾತಂತ್ರ್ಯ ಪೂರ್ವದಲ್ಲಿ ನಮ್ಮ ಕವಿಗಳನೇಕರು ಸ್ವಾತಂತ್ರ್ಯ ಹೋರಾಟಕ್ಕೆ ಪ್ರೇರಣೆಯನ್ನು ನೀಡುವ ಕವನಗಳನ್ನು ನಿರ್ಮಿಸಿದ್ದಾರೆ. ಸ್ವಾತಂತ್ರ್ಯ ಬಂದಾಗ ನಲಿದಿದ್ದಾರೆ. ಕನ್ನಡ ನಾಡು ಒಂದಾಗಲೆಂದು ಹಂಬಲಿಸಿದ್ದಾರೆ. ಒಂದಾದುದನ್ನು ಕಂಡು ಸಂತಸಗೊಂಡು ಹಾಡಿ ಕುಣಿದಿದ್ದಾರೆ. ಇಂಥ ಅನೇಕ ಭಾವಗೀತೆಗಳನ್ನು ಕಾವ್ಯಾನಂದರು ಕಾಲಕಾಲಕ್ಕೆ ಉಸುರಿದ್ದಾರೆ.

* " ಜಲಪಾತ " ಪು. ೨೮, ೨೯.



ಇಂಥ ಕಾವ್ಯದ ಜನನಕ್ಕೆ ಕವಿಯಲ್ಲಿ ತುಂಬ ದೇಶಭಕ್ತಿಯು ಬೇಕಾಗುತ್ತದೆ. ಆ ಭಕ್ತನ ವಾಣಿಯೇ ಆಗಾಗ ಕಾವ್ಯವಾಗಿ ಹರಿಯುತ್ತದೆ. ಓದುಗರಲ್ಲಿಯೂ ದೇಶಭಕ್ತಿಯನ್ನು ಹುಟ್ಟಿಸುತ್ತದೆ, ಜಾಗೃತಗೊಳಿಸುತ್ತದೆ. ಹೀಗೆ ರಾಷ್ಟ್ರೀಯ ಭಾವನೆಗೆ ಪ್ರೇರಿತವಾಗಿ ನಿಲ್ಲುವ ಈ ಕವಿಯ ಕವನಗಳಲ್ಲಿ "ರಾಷ್ಟ್ರ ರಾಜೇಶ್ವರಿಗೆ" * ಬಹು ಮಹತ್ವದ ಸ್ಥಾನವಿದೆ. ಇದು ಸ್ವತಂತ್ರ ಭಾರತದಲ್ಲಿ ರಚಿತವಾದ ಕವನ. ಆದರೂ ದೇಶದ ಸ್ವಾತಂತ್ರ್ಯ ಸಂಪಾದನೆಗೆ ಎಂಥ ಬಲಿದಾನದ ಆವಶ್ಯಕತೆ ಇತ್ತೆಂಬುದರ ಕಲ್ಪನೆಯು ಇಲ್ಲದೆ ಇಲ್ಲ. "ಆತ್ಮನೈವೇದ್ಯದಲಿ ಬಲಿಪೂಜೆಯನು ಗೈವ ಕಾರಣವು ಉಳಿದಿಲ್ಲ." ಇಂದು ರಾಷ್ಟ್ರ ರಾಜೇಶ್ವರಿಯ ಕಾಲುಗಳಲ್ಲಿ ಸ್ವಾತಂತ್ರ್ಯನೂಪುರದ ಝುಣಝುಣತ್ಕಾರವಿದೆ. ಮಣ್ಣ ಬೊಂಬೆಗಳಂತಿರುವ ಭಾರತದ ಜನರು ಇಂದು–ಸ್ವಾತಂತ್ರ್ಯದ ಪ್ರಭಾವದಿಂದ ವಜ್ರದೇಹಿಗಳಾಗಿ ತಾಯ ಪೂಜೆಗೆ ನಿಂತಿಹರು. ಅವರಲ್ಲಿ ಇರುವ ಭಕ್ತಿಯ ಆಳ–ಅಗಲಗಳನ್ನು ಗಮನಿಸಬೇಕಾದರೆ,

ನಿನ್ನುದರದೊಳು ಬರುವುದೇ ಭಾಗ್ಯ ಭಗವತಿಯೆ
ಈಗ ಬದುಕಿರುವುದೋ ಪರಮ ಭಾಗ್ಯ !
ಇನ್ನೇನ ಯಾಚಿಸೆವು ನಿನ್ನನ್ನು ನಾಚಿಸೆವು
ನಿನ್ನ ನೆರಳಲಿ ನಮಗೆ ನರಕವೂ, ಸ್ವರ್ಗ ! ❖

ಕವಿಯ ಈ ವಾಣಿಯನ್ನೇ ಕೇಳಬೇಕು. ಇದರಲ್ಲಿ ವ್ಯಕ್ತವಾದ ರಾಷ್ಟ್ರಪ್ರೇಮ ಎಂಥದು. ರಾಷ್ಟ್ರದ ಉನ್ನತಿಗಾಗಿ ನೀಡುವ ಭರವಸೆಯೂ ಇಲ್ಲಿದೆ. ಕೇವಲ ಸಂಕುಚಿತ ದೇಶಪ್ರೇಮದಿಂದ ಕುರುಡಾದ ದೇಶಭಕ್ತಿಯಲ್ಲವಿದು. "ಬಾಳುವೆವು ಬಾಳಗೊಡುವೆವು ಸರ್ವಜೀವಿಗಳನ್ನು" ನರನು ಎಲ್ಲೆಂದರಲ್ಲೆ ನೋವಿಗೆ ಒಳಗಾದರೂ ಸಹಿತ ಇಲ್ಲಿ ನಮ್ಮ ಎದೆಯು ನೋಯುತ್ತದೆ. ಇಂಥ ವಿಶಾಲ ಮಾನವ ಪ್ರೇಮದಿಂದ ಪ್ರೇರಿತವಾದ ದೇಶಭಕ್ತಿಯಿದು. ಇದರಿಂದಲೆ ವಿಶ್ವ ಕಲ್ಯಾಣವಿದೆ. ಈ ಕಲ್ಯಾಣ ಭಾವನೆಗೆ ವೈರಿಗಳು ಹೊರಗೆ ಕಾಣುವದಿಲ್ಲ.

* "ಮಾನಸ ಸರೋವರ" ಪು. ೮೭.
❖ ,, ,, ಪು. ೮೭.

ತನ್ನೊಳಗೇ ವೈರಿಗಳು ಕಾಣುವರು. ಅವು ಸ್ವಾರ್ಥ, ದ್ವೇಷ ಇತ್ಯಾದಿ ದುರ್ಗುಣಗಳು. ಅವುಗಳ ಕೂಡ ಈಗ ಹೋರಾಟ ಹೂಡಬೇಕಾಗಿದೆ. ಇಲ್ಲಿ ದೇಶಸ್ವಾತಂತ್ರ್ಯದಿಂದ ಆತ್ಮಸ್ವಾತಂತ್ರ್ಯದ ಕಡೆಗೆ ಕವಿಯ ದೃಷ್ಟಿಯು ನೆಗೆದಿದೆ. ಅದರಿಂದ ಈಗ ತಾಯ ಪೂಜೆಗೆ ಶಮೆ, ದಮೆಗಳ ಅವಶ್ಯಕತೆ ಯಿದೆ. ಸಂಹಾರ, ವಿದ್ವೇಷಗಳ ಹೆಸರೂ ಕೂಡ ಆ ಸೀಮೆಯಲ್ಲಿ ಸುಳಿ ಯವು. ಸಕಲ ಸನ್ಮತಿಗೆ ಸದ್ಗತಿಗೆ ಸಹಜೀವನಕ್ಕೆ ಇಲ್ಲಿ ಆಸ್ಪದವು. ಅವು ಗಳನ್ನು ಸ್ಥಿರಗೊಳಿಸುವುದಕ್ಕಾಗಿಯೇ ಭಾರತೀಯರ ಹೋರಾಟ. ಎಂಥ ವಿಶ್ವ ಕಲ್ಯಾಣಕಾರಿಯಾದ ಭಾವನೆಯಿದು ! ಅದರ ಎಂಥ ಸುಂದರ ಚಿತ್ರಣವಿದು !

ಭಾರತಕ್ಕೆ ಸ್ವಾತಂತ್ರ್ಯವು ಪ್ರಾಪ್ತವಾದುದು ನಾಡಿನ ಪುಣ್ಯದಿಂದಲೇ ಎಂದು ಹೇಳಿದರೆ ಅತಿಶಯೋಕ್ತಿಯಾಗದು. ಅಂಥ ಪುಣ್ಯದಾನಿ ಧನ್ಯ ಗಾಂಧಿ. ಆದರೆ ಬಡವರಿಗೆ ರೊಟ್ಟಿ ಬಟ್ಟೆಗಳು ಸಿಗದಿದ್ದರೆ ಸ್ವಾತಂತ್ರ್ಯಕ್ಕೆ ಬೆಲೆಯಾದರೂ ಏನು ? ಸ್ವಾತಂತ್ರ್ಯದ ಉದ್ದೇಶವು ಸರ್ವರಿಗೆ ಸುಖ, ಶಾಂತಿ. ಅದು ಇನ್ನೂ ಬಂದಿರಲಿಕ್ಕಿಲ್ಲ. ದೇಶದಲ್ಲಿ ಆರ್ಥಿಕ ಸಂಕಟ ಇರಬಹುದು, ಮೂಢಭಾವನೆ, ಯುದ್ಧ ಭೀತಿಗಳಿರಬಹುದು. "ಆದರೂ ಸ್ವಾತಂತ್ರ್ಯ ರಕ್ಷಿಸು, ಇರಲಿ ಹೋಗಲಿ ಪ್ರಾಣವೇ !" ಎಂದು ಕವಿವಾಣಿಯು ಸ್ವಾತಂತ್ರ್ಯ ದಿನದ ಸ್ವಾಗತಗೀತೆಯಲ್ಲಿ ನುಡಿಯುತ್ತಿದೆ. ಇದು ಕೇವಲ ಇನ್ನೊಬ್ಬರಿಗೆ ಹೇಳುವ ಉಪದೇಶ ಮಾತ್ರವಲ್ಲ. ಕವಿಯೂ ಕೂಡ ಅಂದು ಆತ್ಮಸಾಕ್ಷಿಯಾಗಿ ಪ್ರತಿಜ್ಞೆಯನ್ನು ಮಾಡುತ್ತಾನೆ. ಆ ಪ್ರತಿಜ್ಞಾ ವಾಕ್ಯಗಳು ಹೀಗಿವೆ—

ಸಾವಿನೊಡನೆಯೆ ಸೆಣಸಿ ರಕ್ಷಿಪೆ ಭಾರತದ ಸ್ವಾತಂತ್ರ್ಯವ
ಪ್ರಳಯದೊಡನೆಯೆ ಕಾದಿ ಕಾಯುವೆ ಭಾರತದ ಸ್ವಾತಂತ್ರ್ಯವ
ಸಹಿಸೆನೆಂದಿಗು ಸ್ವಪ್ನದಲ್ಲಿಯು ಇನ್ನು ನಾ ಪರತಂತ್ರವ !
ಪೃಥ್ವಿಯಿಹ ಪರ್ಯಂತ ಕೇಳಲಿ ಭಾರತದ ವಿಜಯಧ್ವಾನವೆ *

ಎಂಥ ಕೆಚ್ಚಿನ ನುಡಿಗಳಿವು ! ರಾಷ್ಟ್ರಕ್ಕಾಗಿ ಸರ್ವಸ್ವವನ್ನೂ ತ್ಯಾಗ ಮಾಡುವ ವಿಚಾರವು ಇಲ್ಲಿ ವ್ಯಕ್ತವಾಗಿದೆ. ಆದಕ್ಕಾಗಿಯೇ ಪಾರತಂತ್ರ್ಯವನ್ನು ಎಂದೂ ಅದು ಸಹಿಸಲು ಸಿದ್ಧವಾಗುವದಿಲ್ಲ. ಋಷಿದಧೀಚಿಯೇ ಮೊದಲುಗೊಂಡು ಮಹಾತ್ಮಾ ಗಾಂಧಿಯವರೆಗಿನ ಅನೇಕ ವ್ಯಕ್ತಿಗಳು ರಾಷ್ಟ್ರಕ್ಕೆ ನೀಡಿದ ಬಲಿ

* 'ಜಲಪಾತ' ಪು ೫೮.



ದಾನದ ಚಿತ್ರವು ಕವಿಯ ಬಗೆಗಣ್ಣಿನೆದುರಿಗೆ ಇದೆ. ಅಂತಲೇ ಭಾರತಕ್ಕೆ ಸ್ವಾತಂತ್ರ್ಯ ಬಂದ ದಿನದಲ್ಲಿ ಅದನ್ನು "ಕಾಯಲು ಇಂದು ಶಪಥವ ತಾಳುವೆ," ಎಂದು ಆತ್ಮಸಾಕ್ಷಿಯಾಗಿ ನುಡಿಯುತ್ತಾನೆ. ಇಂಥ ಪುತ್ರರನ್ನು ಪಡೆದ ನಾಡು "ಧನ್ಯ ಭಾರತ" ಎನಿಸುವದಿಲ್ಲವೆ ?

"ಪ್ರಜಾರಾಜ್ಯ ಪಟ್ಟವೇರುತಿಹಳು ತಾಯಿ ಭಾರತಿ !" * ಆಗ ಹಿಂಸೆ, ಹುಸಿ, ಲೋಭ, ತೃಷೆ, ಪಿಸುಣತನ, ಅಹಂಕಾರ, ರಾಜ್ಯದಾಹ, ಯುದ್ಧ, ಮೋಹ, ಕಪಟ, ಕುಟಿಲ ಚಮತ್ಕಾರಗಳು ಸ್ವಪ್ನದಲ್ಲಿಯೂ ಸಹ ಸೋಂಕ ಲಾರವು ಇದು ಕವಿಯು ಭಾವಿಸಿದ ಆದರ್ಶ ಪ್ರಜಾರಾಜ್ಯದ ಲಕ್ಷಣವಾಗಿದೆ. ಈ ಲಕ್ಷಣದಿಂದ ಕೂಡಿದಾಗ ಧನ್ಯೆ ಭಾರತಿ ! ಭಾರತಿ ಧನ್ಯೆ ಧನ್ಯೆ !!

ಇಂಥ ಭಾವನೆಯು ಕಾವ್ಯಾನಂದರಲ್ಲಿ ಇರುವುದು ಸ್ವಾಭಾವಿಕವಾಗಿದೆ. ಯಾಕೆಂದರೆ ಅವರ ಕಣ್ಣೆದುರಿಗೆ ಭಾರತದ ಪ್ರಾಚೀನ ಇತಿಹಾಸ ಹಾಗೂ ಸಂಸ್ಕೃತಿಗಳು ಇವೆ. ಅವರಿಗೆ ಗೊತ್ತು.

ಸಾಮ್ರಾಜ್ಯದಾಸೆಯಲಿ ಸಂಪತ್ತಿನಾಸೆಯಲಿ
ಸಂಹಾರ ಪಿಪಾಸೆಯಲಿ ಒಮ್ಮೆಯೂ ಯುದ್ಧ
ಹೂಡದಿಹ ನಾಡೊಂದೆ ಸಕಲ ಭೂತಲದಲ್ಲಿ
ಅದುವೆ ಭಾರತವರ್ಷ—ಸರ್ವಾಂಗ ಶುದ್ಧ ! ❖

ಇಂಥ ಶುದ್ಧ ಚಾರಿತ್ರ್ಯದ ದೇಶವಾದುದರಿಂದಲೇ ಸಾಮ್ರಾಜ್ಯ ಶಕ್ತಿಯನ್ನೂ ಸಹ ಸತ್ಯ–ಅಹಿಂಸೆಗಳಿಂದಲೇ ಗೆದ್ದು ಸ್ವಾತಂತ್ರ್ಯವನ್ನು ಪಡೆಯಿತು. ಇಂದು "ನಮ್ಮ ಹಿರಿ ನಾಯಕರ ತಪದಿಂದ....ಜಾಗತಿಕ ಶಕ್ತಿ !" ಯಾಗಿ ಮೆರೆಯು ತ್ತಿದೆ. ಭಾರತದ ಈ ಶುಭ್ರಶಕ್ತಿಯು ದಿನದಿನಕ್ಕೆ ಬೆಳೆಯುತ್ತ ಇರಲಿ. ಇಷ್ಟೇ ಅಲ್ಲ, ಅದು ನಮ್ಮೆಲ್ಲರಲ್ಲಿ ಅಭಿವ್ಯಕ್ತಿಯನ್ನು ಪಡೆಯಲಿ; ಆಗ ಪ್ರತಿ ಯೊಂದು ವ್ಯಕ್ತಿಯೂ ದೀಪವಾಗುವದು. ಈ ಜೀವ–ದೀಪಾವಳಿಯಲ್ಲಿ ಒಳ ಬೆಳಕು ತುಳುಕಿದಾಗ ಅದೆಂಥ ದೀಪೋತ್ಸವವು ! ಇಂಥ ದಿವ್ಯ ದೀಪೋತ್ಸವ ವನ್ನು ಬಯಸುವ ಕವಿಯೇ ಧನ್ಯ. ಆ ಬಯಕೆಯನ್ನು ಭಾವಿಸಿ, ಪರಿಭಾವಿಸಿ ರಸವನ್ನು ಸವಿಯುವ ರಸಿಕರೂ ಧನ್ಯರಲ್ಲದೆ ಮತ್ತೇನು ? ಇಂಥ ಕಾವ್ಯ

* 'ಜಲಪಾತ' ಪು. ೫೪
❖ 'ಜಲಪಾತ' ಪು. ೬೦

ಹಾಗೂ ಕವಿಯನ್ನು ಪಡೆದ ಕನ್ನಡ ನಾಡು ಪುಣ್ಯದ ಬೀಡು. ಸಂತಸದ
ಸೂಡು.

ಈ ಭಾರತೀಯ ಭವ್ಯ ದೀಪೋತ್ಸವದಲ್ಲಿ "ಕನ್ನಡದ ದೀಪ" ಒಂದನ್ನು
ಬೆಳಗಿಸಲು ಕವಿಯು ಮುಂದಾಗದೆ ಇಲ್ಲ. ಅದಕ್ಕಾಗಿ ಕವಿಯು ಕೈಕೊಳ್ಳ
ಬಯಸುವ ತ್ಯಾಗ, ಸೇವೆಗಳು ಎಂಥವು ನೋಡಿರಿ.

ಕನ್ನಡದ ಬತ್ತಿಯೆಳೆಗಿಡಿದ ಮಂತನು ತೆಗೆಯೆ
ನನ್ನ ಕಾಯವು ಚಾಚು ಕಡ್ಡಿಯಾಗಿರಲಿ !
ಭಾರತದ ದೀವಳಿಗೆಯಲ್ಲಿ ಸಿವಗನ್ನಡದ
ಜ್ಯೋತಿಯಿದು ತೇಜಸ್ಸಿನೊಡ್ಡಿಯಾಗಿರಲಿ ! ❖

ಕನ್ನಡದ ಬತ್ತಿಯ ಮಂತನ್ನು ತೆಗೆಯುವ ಕಡ್ಡಿಯಾಗುವ ಬಯಕೆಯಲ್ಲಿ
ಎಂಥ ಮಹತ್ತಿದೆ. ಕವಿಯ ಅದೆಂಥ ಅನುಪಮ ಕಲ್ಪನಾಶಕ್ತಿ, ಸ್ಫೂರ್ತಿ
ಹಾಗೂ ಸೇವಾಭಾವಗಳು ತ್ರಿವೇಣೀ ಸಂಗಮದಂತೆ ಸೇರಿವೆಯಿಲ್ಲಿ ! ಇದ
ರಿಂದಲೇ ಈ ವ್ಯಕ್ತಿ ಕಾವ್ಯವು ನಾಡಿನ ಶಕ್ತಿಕಾವ್ಯವಾಗಿ ಪರಿಣಮಿಸುತ್ತದೆ.

ಭಾರತದ ದೀವಳಿಗೆಯಲ್ಲಿ ಕವಿಗೆ ಮೊದಲು ಕನ್ನಡದ ದೀಪವು ಇದ್ದಂತೆ
ಕಾಣುವದಿಲ್ಲ. ಹೆಚ್ಚು ನಿರುಕಿಸಿದಾಗ ಆ ದೀಪವೂ ಇದ್ದಂತೆ ಕಂಡಿರಬೇಕು.
ಆದರೇನು ? ಮಂತು ಹಿಡಿದ ದೀಪ ಚೆನ್ನಾಗಿ ತನ್ನ ಬೆಳಕನ್ನು ಬೀರದೆ ಉಳಿ
ದಿದೆ. ಆಗ ಆ ಮಂತನ್ನು ತೆಗೆಯಲು ಬೇಕಾದ ತ್ಯಾಗವನ್ನೂ ಮಾಡಲು
ಸಿದ್ಧನಾಗುವನು. ತನ್ನ ದೇಹವೊಂದು ಕಡ್ಡಿಯಷ್ಟಾದರೂ ಸಹಾಯ ಸಲ್ಲಿ
ಸಿದರೆ ಸಾಕೆನ್ನುವನು. ಮಂತು ತೆಗೆಯಲು ಕಡ್ಡಿಯೇ ಮುಖ್ಯ. ಈ ಭಾವನೆ
ಯಿಂದ ಕನ್ನಡದ ಏಳಿಗೆಗಾಗಿ ದುಡಿಯುತ್ತಿರಲು "ಕನ್ನಡದ ಬೆಳೆ" ಎಂಥ
ದೆಂಬುದರ ಕಲ್ಪನೆಯು ಆಗ ಕವಿಗೆ ಆಗುತ್ತದೆ. ಕನ್ನಡದ ಹೊಲವು ಇಂದು
ಬೀಳು ಬಿದ್ದು, ಬಂಜೆಯಾಗಿಹುದಲ್ಲ; ಹೆರರ ಹಾವಳಿಯಾಯಿತು. ನಮ್ಮ
ಮಕ್ಕಳಿಗೆ ಅನ್ನವು ಸಿಗದಿರುವಾಗ ಅನ್ಯರಿಗೆ ಇಲ್ಲಿಂದ ಹಣ್ಣನ್ನು ಕಳಿಸುತ್ತಿ
ದ್ದೇವೆ. ಇನೇ ಮೊದಲಾದ ಸಂಗತಿಗಳು ತಿಳಿಯುತ್ತವೆ. ಆಗ ನಮ್ಮಲ್ಲಿ
ಪಂಪ, ಹರಿಹರ, ಬುಕ್ಕ, ಬಸವ, ಮಾಧವರು ಮತ್ತೆ ಎಂದು ಬರುವರೋ—
ಎಂದು ಕವಿಯು ಹಗಲಿರುಳು ಹಂಬಲಿಸುತ್ತಾನೆ. ಕನ್ನಡದ ಬೆಳೆ ಹೆಚ್ಚಲಿ,

❖ 'ಜಲಪಾತ' ಪು. ೬೩.



ಅದು ಭಾರತವನ್ನಷ್ಟೇ ಅಲ್ಲ—ಮನು ಕುಲವನ್ನೆಲ್ಲ ತಣಿಸುವಂತಾಗಲಿ ಎಂದು
ಹಾರೈಸುತ್ತಾನೆ. ಇದು ಬರಿಯ ಆಳಿಮನದ ಹಾರೈಕೆ ಮಾತ್ರ ಅಲ್ಲ—

ಇದಕಾಗಿ ಒಂದಾಗಿ ದುಡಿವೆವೆ ನಾವು ?
ಈ ಗುರಿಯ ಕಡೆ ಕೂಡಿ ನಡೆಯುವೆವೆ ನಾವು ?
ಇದಕಡ್ಡ ಬಂದುದನು ತೊಡೆಯುವೆವೆ ನಾವು !
ಇದರ ಸಾಧನೆಯಲ್ಲಿ ಮಡಿಯುವೆವೆ ನಾವು ? *

ಇದಕ್ಕೆ ಯಾರು ಉತ್ತರ ಕೊಟ್ಟರೂ ಅಷ್ಟೇ, ಕೊಡದಿದ್ದರೂ ಅಷ್ಟೇ. ಕವಿ
ಮಾತ್ರ ತಾನು ಮುಂದಾಳಾಗಿ ಸಾಗುತ್ತಾನೆ. ಅವನಿಗೆ ಕನ್ನಡ "ತಾಯ
ಬರವು" ಗೊತ್ತಾಗಿದೆ. ಇದನ್ನು ಜನಕೆ ಹೇಳಿದರೆ ತಿಳಿಯದು, ಅವರು ಇವನ
ಮಾತನ್ನು ನಂಬಲಿಕ್ಕೆ ಹಿಂದೆ ಮುಂದೆ ನೋಡುತ್ತಾರೆ. ಆಗ ಆಣೆ ಇಟ್ಟು
ಹೇಳುವ ಪ್ರಸಂಗ ಬರುತ್ತದೆ.

ಪಂಪ ಹರಿಹರರಾಣೆ ನಾರಣಪ್ಪನ ಆಣೆ
ಮಹಾದೇವಿ ಚೆನ್ನಮ್ಮ ಓಬವ್ವರಾಣೆ ।
ಈಗ ಬಂದಿದೆ ಕಾಲ ತಾಯ ಬರಿಸುವ ಕಾಲ
ಇದನು ಕಳಕೊಳ್ಳದಿರಿ ಕನ್ನಡದ ಆಣೆ ! ❖

ಹೇಳುತ್ತಾನೆ, ತನ್ನ ಮಾತಿಗೆ ಸೂರ್ಯ, ಚಂದ್ರರೇ ಸಾಕ್ಷಿ ಎನ್ನುವನು.
ಕನ್ನಡ ನಾಡಿನ ಕಲಾವೈಭವ, ಪ್ರಕೃತಿ ಸಂಪತ್ತು, ಇತಿಹಾಸ ಪರಂಪರೆಗಳ
ನ್ನೆಲ್ಲ ಸಾಕ್ಷಿಯಾಗಿ ನಮಗೆ ತೋರಿಸುತ್ತಾನೆ ಕವಿ. ಆಗ ನಮಗೆ ಎಚ್ಚರ
ಹುಟ್ಟುತ್ತದೆ. ನಾಡಸೇವೆಗೆ ನಡು ಕಟ್ಟುತ್ತೇವೆ. ಕನ್ನಡದಲ್ಲಿ ನವೋದಯದ
ಕಹಳೆ ಮೊಳಗುತ್ತದೆ. ಕಾವ್ಯಧ್ವನಿಯು ಸಫಲವಾಗುತ್ತದೆ.

ಕಾವ್ಯಾನಂದರ ನಾಡು-ನುಡಿಗಳ ಪ್ರೇಮವು ಕೇವಲ ಕನ್ನಡಕ್ಕೆ ಮಾತ್ರ
ಮೀಸಲಾಗಿ ನಿಲ್ಲುವದಿಲ್ಲ. ಕನ್ನಡ ತಾಯಿ ನನ್ನ ತಾಯಿ. ಅವಳನ್ನು ಹೆತ್ತ
ವಳು ಭಾರತಮಾತೆ. ಅವಳಿಗೂ ಸೇವೆ ಸಲ್ಲಲಿಕ್ಕೆ ಬೇಕು ಎನ್ನುವ ವಿಶಾಲ
ರಾಷ್ಟ್ರೀಯ ವೃತ್ತಿಯೂ ಇಲ್ಲಿದೆ. ಇಷ್ಟು ಅಲ್ಲದೆ ಅವರ ಅಂತಃಕರಣವು
ಮಾನವ ಕಲ್ಯಾಣವನ್ನು ನೆನೆಯದೆ ಇಲ್ಲ. ಅದು ಭಾರತದ "ಜನಜೀವನ
ಜಾಹ್ನವಿಗೆ" ಜಯವೆಂದು "ಜಲಪಾತ" ದಲ್ಲಿ ಘೋಷಿಸಿ, "ಕರುಣಾ

* 'ಜಲಪಾತ' ಪು. ೬೬.
❖ 'ಜಲಪಾತ' ಪು. ೬೮.

ಶ್ರಾವಣ" ದ ಮುಖಾಂತರ "ಪೂರ್ವಾಂಗನೆ ಪಶ್ಚಿಮಾಂಗನೆಗೆ" ಆಹ್ವಾನವನ್ನಿತ್ತು, "ಮಾನಸ ಸರೋವರ" ದಲ್ಲಿ "ಜಗತೆ ಕೂಡಲಸಂಗಮು" ಎನ್ನುವ ತೆರೆಯನ್ನು ಎಬ್ಬಿಸುತ್ತದೆ ಜಗತ್ತನ್ನೇ ತನ್ನದೆಂದು–ತಾನೆಂದು–ಅಪ್ಪಿಕೊಳ್ಳಲು ಕೈ ಚಾಚುತ್ತದೆ. ಒಳಗಿದ್ದುದು ಹೊರಗೆ, ಹೊರಗಿದ್ದುದು ಒಳಗೆ ಎನ್ನುವಂತೆ ಎಲ್ಲವೂ ಒಂದೇ ಒಂದಾಗಿ ತೋರುತ್ತದೆ. ಕವಿಯ "ಆತ್ಮಪಕ್ಷಿ" ವಿಶ್ವದ ಆತ್ಮಸಾಕ್ಷಿಯಾಗಿ ನಿಲ್ಲುತ್ತದೆ. ತಾಯಪಂಜರದ ಹೊರಬಿದ್ದು ಅನಂತಾಕಾಶದ ಅಂತರಾಳದಲ್ಲಿ ಅವಿಕಲವಾಗಿ ವ್ಯಾಪಿಸಿ ನಿಲ್ಲುತ್ತದೆ. ಆ ವ್ಯಾಪ್ತಿಯ ನೆರಳು–ಅಲ್ಲ–ಹೆಜ್ಜೆಯಾಗಿ ಕಾವ್ಯವು ನಿಲ್ಲುತ್ತದೆ. ರಸಿಕನ ದೃಷ್ಟಿ ತೀಕ್ಷ್ಣವಾದಷ್ಟು, ಹೃದಯ ಸಂವೇದನಶೀಲವಾದಷ್ಟು ಆ ಹೆಜ್ಜೆಯ ಗುರುತು–ಗೆರೆಗಳು ಅವನಿಗೆ ಕಾಣುವವು. ಅದನ್ನು ಕಾಣುವದಕ್ಕೂ ವಾಚಕನಿಗೆ ಒಂದಿಷ್ಟು ಅಭಿರುಚಿ, ಅಭ್ಯಾಸಗಳು ಬೇಕಾಗುತ್ತವೆ.

ಭಾರತೀಯರ ಜೀವನವು ಎಂದಿನಿಂದಲೂ ಶಾಂತಿಪ್ರಿಯವಾದುದು. ಆ ಸಂತೃಪ್ತಿ, ಸಂತೋಷಗಳಿಗೆ ಇಲ್ಲಿ ಹಳ್ಳಿಗಳಿರುವುದೇ ಕಾರಣ. ಪಟ್ಟಣದ ಜೀವನವು ಮರುಭೂಮಿ. "ಮಾನವತೆಯ ಮೃದು ಹೃದಯದ ಸುಳಿ" ವನ್ನು ನಾವು ಹಳ್ಳಿಗಳಲ್ಲಿಯೇ ಕಾಣುತ್ತೇವೆ. ಆದರಿಂದ "ಥೀ ಗಂಗೆಯು ಹಳ್ಳಿಗರೆದೆಯಲ್ಲಿ ಧುಮ್ಮಿಕ್ಕಿದರೆ" ಭಾರತದ ಉದ್ಧಾರ–ಎಂಬ ಸತ್ಯ ಸಂಗತಿಯನ್ನು ಕವಿಯು ಕಂಡುಕೊಂಡಿದ್ದಾನೆ. ಆದರಿಂದ "ಭಾರತವೇ ಹಳ್ಳಿ" ಎಂದು ಘೋಷಿಸುತ್ತಾನೆ. ಹೀಗೆ ಭಾರತದ ಏಳಿಗೆಗೆ ಮೂಲವನ್ನು ಶೋಧಿಸಿದ ಕವಿಗೆ ಒಮ್ಮೆ "ಇಡಿಯ ಏಷ್ಯಾ ಖಂಡ ಹಿರಿಯ ಬಂದೀಖಾನೆ" ಯಾಗಿ ತೋರುವದು. "ಜಗಕೆ ಧರ್ಮವ ದಾನ ಕೊಟ್ಟ ಬೆಳಕಿನ ಬಿತ್ತು" ಏಷ್ಯಾ. ಇಂದು "ಸೂರ್ಯ ಹುಟ್ಟುವ ಸ್ಥಳದಿ ಕಾರಿರುಳು ಮುಸುಕಿಹುದು" ಎಂಥ ಅರ್ಥಪೂರ್ಣವಾದ ನುಡಿಯಿದು. ಕತ್ತಲೆಯ ಗಾಢತೆಯನ್ನು ವ್ಯಕ್ತಪಡಿಸಲು ಇದಕ್ಕಿಂತ ಸರಿಯಾದ ನುಡಿಯುಂಟೆ? ಇಂಥ ಕಾರಿರುಳು ಮುಸುಕಿದ ಕಪ್ಪು ವರ್ಣದ ಪೂರ್ವಾಂಗನೆಯಲ್ಲಿ "ಕರಿಯಳಾದರೂ ಉದಯ ನಾನು" ಎಂದು ಹೇಳುವ ಸಂಸ್ಕೃತಿಯ ಕೆಚ್ಚಿದೆ. ಆ ಸಂಸ್ಕಾರವೇ ಕಪ್ಪು–ಬಿಳಿ ಎಂಬ ವರ್ಣಭೇದ ಬೇಡ, "ವರ್ಣಮೈತ್ರಿ ಅನಿವಾರ್ಯ" ಅದು "ವಿಶ್ವ ಪ್ರಕೃತಿ" ಎಂದು ಸಾರುತ್ತಿದೆ.



ಹೊತ್ತಾರೆ ಕೆಂಪು, ಮತ್ತಷ್ಟು ಹಳದಿ,
ಹೊತ್ತೇರೆ ಬಿಳಿಪು ಗೆಳತಿ;
ನಿನ್ನಂಗ ಬಿಳಿದು, ಇದೊ ನೆರಳು ಕಪ್ಪು,
ಎಲ್ಲಿಹುದು ವೈರ ಗೆಳತಿ? *

ಎಂದು ಸಾಮರಸ್ಯವನ್ನು ಎಲ್ಲೆಲ್ಲೂ ತರಲು ಯತ್ನಿಸುತ್ತಿದೆ. ಇದೇ ಕವಿಹೃದಯದ ಹಿರಿಮೆ, ಗರಿಮೆ. ಇಂಥ ಹೃದಯವೈಶಾಲ್ಯದಿಂದಲೇ ಕವಿಗೆ "ಜಗವೆ ಕೂಡಲಸಂಗಮ" ವೆನಿಸುತ್ತದೆ. ಆ ಕೂಡಲಸಂಗಮದ ಭವ್ಯ ಕಾಣ್ಕೆಯನ್ನು ನೋಡಿರಿ.

ಪ್ರಕೃತಿಯೇ ಗುರು ಗಗನ ಲಿಂಗವು
ಜಗವೆ ಕೂಡಲಸಂಗಮ
ಹುಡಿಯೆ ಭಸ್ಮವು ಹುಲ್ಲೆ ಪತ್ರಿಯು
ಜಡವಿದೆಲ್ಲವು ಜಂಗಮ, ❖

ಪ್ರಕೃತಿಯನ್ನೇ ಗುರುವೆನ್ನುವ ಕವಿಯ ಭಾವದರ್ಶನಕ್ಕೆ ಜಗತ್ತಿನ ಮೇಲೆ ಗುಮ್ಮಟಾಕಾರದಲ್ಲಿ ಬಾಗಿದ ಆಕಾಶವು ಲಿಂಗವಾಗಿ ತೋರಿದೆ. ಇದೊಂದು ದಿವ್ಯದರ್ಶನ. ಈ ದರ್ಶನವನ್ನು ಪಡೆದ ಜೀವಿಗೆ ಕುಡಿಯುವ ನೀರೆಲ್ಲ ತೀರ್ಥ, ಶ್ರಮದ ಬೆವರೇ ಸ್ನಾನ, ಸರ್ವವೂ ಶಿವನಂಶವೆನ್ನುವುದೇ ಧರ್ಮ, ಎಲ್ಲರೂ ಎಲ್ಲರಿಗಾಗಿ ಎನ್ನುವುದೇ ಜ್ಞಾನ, ಒಲಿದು ಒಲಿಸುವದೇ ಅಮೃತನಿಧಾನ. ಇದಕ್ಕಿಂತ ಮಿಗಿಲಾದ ವೇದವಾಣಿಯೆಂಬುದುಂಟೆ? ಈ ವೇದ ಋಷಿಯ ಋತದರ್ಶನ ಹೀಗಿದೆ—

ಉಣಿಸಿ ಉಣ್ಣುವ ಭಾವ ಭಕ್ತಿಯು
ಒಲ್ಲೆನೆನೆ ಸುವಿರಕ್ತಿಯು
ಕೂಡಿ ಕಲಿಯಲು ಕೂಡಿ ಬೆಳೆಯಲು
ಕೂಡಿ ನಲಿಯಲು ಮುಕ್ತಿಯು ●

ಹೀಗೆ ರಾಷ್ಟ್ರೀಯತೆಯು ಮಾನವನ ಕಲ್ಯಾಣಕಾರಿಯಾದ ಮುಕ್ತಿಯಲ್ಲಿ

* "ಕರುಣಾಶ್ರಾವಣ" ಪು. ೭೪.
❖ 'ಮಾನಸ ಸರೋವರ' ಪು. ೨೯.
● 'ಮಾನಸ ಸರೋವರ' ಪು. ೩೦.

ಲಯವಾಗಿ ಇಲ್ಲಿ ನಿಂತಿದೆ. ಇದು ಮನುಲೋಕದ ಪುಣ್ಯದ ಒಂದಂಶವಲ್ಲದೆ ಮತ್ತೇನು ?

ಕವಿಯು ಪ್ರಕೃತಿಯ ಮಡಿಲಲ್ಲಿ ಬೆಳೆದ ಮಗು. ಪ್ರಕೃತಿಮಾತೆಯಿಂದ ಹಲವು ಪಾಠಗಳನ್ನು ಅವನು ಕಲಿಯುತ್ತಾನೆ. ಅವಳ ಹೃದಯವನ್ನು ಬಲ್ಲವರು ಅವನಷ್ಟು ಇನ್ನಾರೂ ಇಲ್ಲವೆಂದರೂ ಅತಿಶಯೋಕ್ತಿ ಎನಿಸದು. ವಿಜ್ಞಾನಿಯು ಕಾಣುವುದು ವಸ್ತುನಿಷ್ಠವಾದ ಸತ್ಯವನ್ನು. ಕವಿಯ ದೃಷ್ಟಿಯು ಆ ಸತ್ಯದ ಸತ್ಯವನ್ನು ಕಾಣುತ್ತದೆ. ಅಂತಲೇ ಅದು ಅಬಾಧಿತವಾದ—ಚಿರಂತನ ಸತ್ಯವಾಗಿರುತ್ತದೆ. ವಿಜ್ಞಾನಿಯ ಪದಾರ್ಥವಿಜ್ಞಾನವು ನಾಳೆ ಅಸತ್ಯವೆಂದೂ ಆದೀತು. ಸಂಶೋಧನೆಯು ಮುಂದರಿದಂತೆ ಹೀಗೆ ವ್ಯತ್ಯಾಸವಾಗುವುದು ಸಹಜ. ಆದರೆ ಕವಿಯು ಕಂಡ ಸತ್ಯವು ಹಾಗಲ್ಲ. ಅದು ಅಖಂಡ ಹಾಗೂ ಅವಿಕಲ. ಇಂಥ ಸತ್ಯದ್ರಷ್ಟಾರನಾಗಿರುವುದರಿಂದ ಕವಿಯು ಋಷಿಯೆನಿಸುತ್ತಾನೆ. ಅವನ ಸೃಷ್ಟಿಯ ಋತದರ್ಶನವು "ಕವಿಯಾಗು, ಕವಿಯಾಗು, ಕವಿಯಾಗು !" ಎಂದು ಹಗಲಿರುಳೂ ಎಚ್ಚರಿಸುತ್ತಿದೆ. ಸೃಷ್ಟಿಯು ಅವನೆದುರಿಗೆ ಹಣ್ಣು, ಬೆಣ್ಣೆ, ಕೆನೆಮೊಸರು, ಹಾಲು, ಜೇನುಗಳಲ್ಲೆಲ್ಲ ಸವಿಯಾಗಿ ನಿಂತು ನೀನೂ ಸವಿಯಾಗು ಎಂದು ಸಾರುತ್ತಿದೆ. ಅದರಂತೆ ತಾರೆ, ಚಂದ್ರ, ಸೂರ್ಯ, ರತ್ನ, ಚಿನ್ನಗಳಲ್ಲೆಲ್ಲ ಛವಿಯಾಗಿ ನಿಂತ ದೃಷ್ಟಿಯು "ಛವಿಯಾಗು" ಎಂದೂ ಸಾರುತ್ತಿದೆ. ಇಂಥ ಸವಿ ಛವಿಯಾಗಿ ಬಾಳಬಲ್ಲವನೇ ಕವಿಯಾಗಬಲ್ಲನು. ಅವನ ಕಾವ್ಯವು,

"ಶಬ್ದದಲಿ ಸವಿಯಾಗಿ ಅರ್ಥದಲಿ ಬೆಳಕಾಗಿ
ಬಾಳ ಭವ್ಯತೆಗಿಲ್ಲಿ ಬೆಳಕು ಸವಿ ಸಾಕಾಗಿ
ಬಾಳುವೆಯ ಸವಿಬೆಳಕ ಬರೆಯುವವ ಬೇಕಾಗಿ" *

ಇರುವಾಗ ರೂಪುಗೊಳ್ಳುತ್ತದೆ. ಇದು ಸೃಷ್ಟಿಯ ಸ್ವಾಭಾವಿಕ ಒಲವೇ ಆಗಿರುತ್ತದೆ. ಇದನ್ನರಿತ ಶ್ರೀ ಡಿ. ಎಲ್. ನರಸಿಂಹಾಚಾರ್ಯರು "ಕಾವ್ಯಾನಂದ" ರ ಕವನಗಳನ್ನು ಕುರಿತು ಹೀಗೆ ನುಡಿದಿದ್ದಾರೆ. "ಅವರ ನೈಜವಾದ ನೈಸರ್ಗಿಕ ಪ್ರೇಮ ಇಲ್ಲಿ ಬಣ್ಣಬಣ್ಣವಾಗಿ ಕಂಗೊಳಿಸುತ್ತಿದೆ. ಹೂವು, ಹಣ್ಣು, ಹಕ್ಕಿ, ಬಾನು, ಬೆಳುದಿಂಗಳು, ತಿಂಗಳು ಮುಂತಾದ ಚಿರಂತನ

* ''ಕರುಣಾಶ್ರಾವಣ" ಪು. ೧.



ರಮಣೀಯವಾದ ವಸ್ತುಗಳು ಇಲ್ಲಿ ಸಪ್ರಾಣಿಸಿ ತಂತಮ್ಮ ಸೊಗಸುಗಳನ್ನು ಸೂಸಿವೆ. ಕವಿಹೃದಯವನ್ನು ಅವು ಯಾವ ಯಾವ ತರದಲ್ಲಿ ಎಚ್ಚರಗೊಳಿಸಿ ಎಂಥೆಂಥ ಭಾವಗಳನ್ನು ಅರಳಿಸಿವೆಯೆಂಬುದನ್ನು ರಸಿಕಹೃದಯ ಅನುಭವಿಸಿ ಆನಂದಿಸುತ್ತದೆ. ಕವಿತೆಗಳಲ್ಲಿ ತುಂಬಿರುವ ಅಚ್ಚ ಸರಳತೆ, ಭಾವಲಾಲಿತ್ಯ, ಶಬ್ದಮಾಧುರ್ಯಗಳು ಶ್ರೀ "ಕಾವ್ಯಾನಂದ" ರ ಕಲೋಪಾಸನೆಯ ವೈಶಿಷ್ಟ್ಯ...." * ಇಂಥ ವಿಶೇಷ ಗುಣವಿರುವುದರಿಂದಲೇ ಇವರ ಪ್ರಕೃತಿಗೀತಗಳಿಗೆ ಕನ್ನಡ ಸಾಹಿತ್ಯದಲ್ಲಿ ಒಂದು ಅಪೂರ್ವ ಸ್ಥಾನವಿದೆ.

ಬೆಳಗು—ಬೈಗುಗಳು ಕನ್ನಡದ ಯಾವ ಕವಿಯ ಮನಸ್ಸನ್ನು ಸೆಳೆಯದೆ ಇಲ್ಲ. ಆದರೆ ಹಲವು ಕವನಗಳು ನಿಜವಾಗಿ ಸೃಷ್ಟಿಯಿಂದ ಸ್ಫೂರ್ತಿಯನ್ನು ಹೊಂದಿದವುಗಳಾಗಿರುವದಿಲ್ಲ ಜನವೆಲ್ಲವೂ ದಿನಾಲು ಸಂಜೆ ಮುಂಜಾವುಗಳನ್ನು ಕಾಣುತ್ತಲೇ ಇರುತ್ತದೆ. ಕವಿಯೂ ದಿನಾಲು ಕಾಣುತ್ತಾನೆ. ಆಗೆಲ್ಲ ಕಾವ್ಯ ಸ್ಫುರಿಸುವದಿಲ್ಲ ಕವಿಯ ದೃಷ್ಟಿ, ಸೃಷ್ಟಿಯ ಚೆಲುವುಗಳ ಸಮ್ಮಿಳನವಾದಾಗ ರಸಬಿಂದುವು ಕವಿ ಹೃದಯದಲ್ಲಿ ಒಸರುತ್ತದೆ. ಅದೇ ಕೆಲ ದಿನಗಳ ಮೇಲೆ ಮುತ್ತಾಗಿ ಕಾವ್ಯರಸವನ್ನು ಹೊಂದುತ್ತದೆ. ಮಳೆಯ ಎಲ್ಲ ಹನಿಗಳೂ ಮುತ್ತಾಗುವದಿಲ್ಲ. ಹಾಗೆ ಕಾವ್ಯೋದಯಕ್ಕೊಂದು ಸುಮೂಹರ್ತವಿರುತ್ತದೆ. ಅಂಥ ಸಮಯ ಜೀವನದಲ್ಲಿ ಆಗಾಗ ಘಟಿಸುವದಿಲ್ಲ. "ಬೈಗು ಬೆಳಗಾಗುವುದು ಬೆಳಗು ಬೈಗಾಗುವುದು ವರುಷಗಳು ಉರುಳುವವು ಬರಿದೆ ಬಳಲಿ". ಆದರೂ ಕವಿ ನಿರಾಶೆಯನ್ನು ಹೊಂದುವುದಿಲ್ಲ. ಸೌಂದರ್ಯ ದರ್ಶನಕ್ಕಾಗಿ ತಪವನ್ನು ಗೈಯುತ್ತಾನೆ. ಕೊನೆಗೆ ಒಂದು ದಿನ ಅವನ ಹೃದಯದಲ್ಲಿ ವಾಣಿ ಮೂಡುವಳು; ಆಗ,

"ಇಂದಿನುಷೆ ತಂದಿಹಳು ಸೌಂದರ್ಯ ಸಂದೇಶ;
ಜಗದ ಜೀವಿಗಳದರ ವಿವಿಧ ವೇಷ;
ವಿಶ್ವಗರ್ಭವದೆಲ್ಲ ಒಂದೆ ಜೀವದ ಕೋಶ;
ವಿಶ್ವಮಾನವ ಮೈತ್ರಿ ಪ್ರಕೃತಿಯಾದೇಶ" ❖

ಎಂದು ನುಡಿಯ ರೂಪವನ್ನು ತಳೆದು ಅವತರಿಸುವಳು. ಆಗಿನ ಬೆಳಕು

* "ಕರುಣಾಶ್ರಾವಣ" ಕ್ಕೆ ಇತ್ತ ಆಚಾರ್ಯತ್ರಯರ ಆಶೀರ್ವಚನದಿಂದ.

❖ "ಕರುಣಾಶ್ರಾವಣ" ಪು. ೨೪

"ವಿಶ್ವಾತ್ಮನಾನಂದ ಚೆಲುವಾಗಿ ಚಿಮ್ಮುನಂತೆ" ತೋರುವುದ. ಅವರಂತೆ "ಸಂಧ್ಯಾಚಿತ್ರ" ದಲ್ಲಿಯೂ ಕೂಡ,

ಮುಳುಗುತಿಹ ದಿನಕರನು ಮೂಡುತಿಹ ಉಡುಗಣಕೆ
ಹೇಳುತಿಹ : 'ಮುಗಿದುದೈ ನನ್ನ ಪಾತ್ರ !
ನೀವಿನ್ನು ಬೆಳಗಿರಿ. ನಿಮ್ಮಲ್ಲೆ ಜನಿಸಲಿ,
ರಾತ್ರಿಯನೆ ಬೆಳಗುವಾ ಶಿವನಮೃತ ನೇತ್ರ !' ❖

ಇದೊಂದು ದಿವ್ಯ ಸಂದೇಶ. ಸೃಷ್ಟಿಯಲ್ಲಿ ಒಬ್ಬರಿಲ್ಲ ಇನ್ನೊಬ್ಬರು ಬೆಳಕನ್ನು ಬೀರುತ್ತಲೇ ಇರುವರು. "ದಿವರಾತ್ರಿಯೆಂಬುದಿದು ಭ್ರಮೆಯಲ್ತೆ ?"—ಎನ್ನುವನು ಕವಿ. ಹಾಗೆ ನೋಡಿದರೆ "ಆಶೆಯೇ ಹಗಲು, ನಿರಾಶೆ ರಾತ್ರಿ !" ಅದೇನೇ ಇರಲಿ; ಬಯಲ ಭಿತ್ತಿಯ ಮೇಲೆ ಮುಗಿಲೋಳಿಯು ಹೊಂಬಿಸಿಲ ಬಣ್ಣದಲಿ ಬರೆದ ಸುಂದರ ಚಿತ್ರವನು ಸರಿಪಡಿಸುವ "ಎಲರುಗುರು" ಗಳನ್ನು ಮೊದಲು ಕಲ್ಪಿಸಿಕೊಳ್ಳಿರಿ. ಕಲ್ಪನೆಗೆ ಬಂತೆ ?—ಇಲ್ಲ! ಹಾಗಾದರೆ ನೀವು ಸಂಸ್ಕೃತ ಸಾಹಿತ್ಯವನ್ನು ಓದಿ ಸುಸಂಸ್ಕೃತ ಹೃದಯಸಂಪನ್ನರಾಗಿದ್ದರೆ "ಕಣ್ವಸುತೆ ಬರೆವ ಪ್ರಣಯಪತ್ರ" ವನ್ನು ಸ್ಮರಿಸಿಕೊಳ್ಳಿರಿ. ಇಲ್ಲಿ ವ್ಯಕ್ತವಾಗಿರುವ ಸೌಂದರ್ಯ ಸೃಷ್ಟಿ ಎಂಥದು ! ಅದನ್ನು ಊಹೆಯಿಂದಲೇ ನಮ್ಮ ಹೃದಯಕ್ಕೆ ಅಳವಡಿಸಿಕೊಳ್ಳಬೇಕು, ಆನಂದವನ್ನು ಅನುಭವಿಸಬೇಕ , ಕವಿ ಕೌಶಲ್ಯಕ್ಕೆ ಶಿರ ಬಾಗಬೇಕು.

ಆ ಬಾಗಿದ ಶಿರವನ್ನು ಸ್ವಲ್ಪ-ಅಲ್ಲ-ನಸುವೆ ಮೇಲೆತ್ತಿ ಕವಿಯು ತೋರಿಸುವ " ಸೂರ್ಯ ಮುಳುಗಿದ ಸ್ಥಳ "* ವನ್ನು ನಾವು ನೋಡಬೇಕು. ಅಲ್ಲಿ ಯಜ್ಞ ಕುಂಡದ ಬೇಗೆಯು ಹೊತ್ತಿದಂತಿದೆ. ಅದರ ಸುತ್ತಲೂ ಮೇಘಗಳೇ ಋಷಿಗಳು. ದಿಗಂಗನೆಯ ಶಿರಗಳು ಅಗ್ನಿಗೆ ಬಾಗಿವೆ. ವಿಹಂಗಮಗಳ ಮಂತ್ರ ಘೋಷ ನಡೆದಿದೆ. ನಿಂತಲ್ಲಿಯೇ ತರುಮರಾದಿಗಳು ಮಣಿದು ತಣಿದವು. ಕ್ಷಿತಿಜಕ್ಕೆ ಕ್ಷಿತಿಜವೇ " ನಯಭಯಭರಿತ ಭಕ್ತಿಯ ಭರದಲ್ಲಿ ತನ್ನನೆ ಮರೆತಿದೆ." ಇಂಥ ಸೈಪಿನ ಸುಗ್ಗಿಗೆ ಕೆಲವೇ ನಿಮಿಷಗಳ ಅವಧಿಯು ಸಾಕಾದೀತೆ ? ಆದರೆ ಪ್ರಕೃತಿನಿಯಮವನ್ನು ಮೀರುವ ಶಕ್ತಿ ಯಾರಿಗಿದೆ? ಕಾಲ ಉರುಳುತ್ತ

❖ " ಕರುಣಾಶ್ರಾವಣ " ಪು. ೭೮.
* " ಮಾನಸ ಸರೋವರ " ಪು. ೬೪.



ಹೋಗುತ್ತದೆ. ಆ ಸೌಂದರ್ಯದ ಕ್ಷಣ ಮಿಂಚಿ ಮಾಯವಾಗುತ್ತದೆ. ಅದು ಹೋದರೆ ಹೋಗಲಿ. ಕವಿಯು ತೋರಿಸುವ ಈ ರಸಚಿತ್ತವಾದರೂ ನಮಗೆ ಸ್ಥಿರವಾಗಿದೆಯಲ್ಲ. ಅದನ್ನಾದರೂ ನಾವು ನೋಡಿ ನಲಿಯೋಣ. ಸೃಷ್ಟಿಯ ಚಲುವನ್ನು ಅರಿತು ಅರ್ಥಮಾಡಿಕೊಳ್ಳಲಿಕ್ಕೆ ಕವಿಹೃದಯವೇ ಬೇಕು. ಅದರ ಮಹಿಮೆ ಇಲ್ಲಿದೆ:—

ಕಂದನಂದದ ಕೈಗಳಿಂದಾಟಿಕೆಯು ಕಳಚುವ ತೆರದಲಿ,
ತಂಬೆಲರ ಚುಂಬನಕೆ ತುಂಬರನು ಕಳಚುವರಳಿದೊ ಮರದಲಿ !
ಮೊಲೆಯ ಹಾಲಿನ ಹನಿಯು ಕೂಸಿನ ತುಟಿಗಳಿಂ ಜರಿವಂದದಿ,
ಪುಷ್ಪವೃಂದದ ಅಮೃತ ಬಿಂದುಗಳೊಗೆದುವತಿ ಆನಂದದಿ ! *

" ಸರಸಿಯ ಮೇಲೆ ಸೂರ್ಯೋದಯವಾದಾಗ ಕಂಡ ಪ್ರಕೃತಿ ಚಿತ್ರವಿದು. ಅಲ್ಲಲ್ಲಿ-ಕವಿ ಬಗೆದ ಚಿತ್ರದ ಒಂದೆರಡು ಗೆರೆಗಳಿವು. ಇವನ್ನಿಷ್ಟೇ ನಾವು ನೋಡಿದರೂ ಸಹ " ಕವಿದೃಷ್ಟಿಯಲ್ಲಿಯೆ ಸೃಷ್ಟಿಗರ್ಥವು ದೊರೆವುದೋ ? ರವಿಗೆ ಸರಸಿಗೆ ಕಾಣದುದನೇ ಕವಿಯು ಕಂಡೊರೆವನೊ ?"-ಎಂದು ನಮ್ಮ-ಷ್ಟಕ್ಕೆ ನಾವು ಕೇಳಿಕೊಳ್ಳುವೆವು. ರವಿ ಕಾಣದುದನ್ನು ಕವಿ ಕಾಣುವನೆಂಬ ಲೋಕೋಕ್ತಿಯೇನೋ ಇದೆ. ರವಿ, ಆ ಸರೋವರ ಅವೇನು ಜಡ ಪ್ರಕೃತಿಗಳು. ಜೀವಂತಮಾನವರಾದ ನಾವೇ ಕಾಣದೆ ಇದ್ದಾಗ ನಮ್ಮ ಅಲ್ಪಮತಿಗೆ ಏನೆಂದುಕೊಳ್ಳಬೇಕು ? ಕವಿಗೂ ನಮಗೂ ಇರುವ ಅಂತರವೇ ಇದು ! ಅವನ ಅನುಭವದ ಎತ್ತರಕ್ಕೆ ಏರಿದಾಗ ನಮಗದರ ಸವಿ ಸವಿಯುವ ಶಕ್ತಿ ಬಂದೀತು. ನಾಡಿನಲ್ಲಿ ರಸಿಕತೆ ಹೆಚ್ಚೀತು.

ಸುಂದರವಾದ ನೋಟ, ಅದನ್ನು ಚಿತ್ರಿಸುವ ಹಸನಾದ ಶೈಲಿ, ವಿಪುಲವಾದ ಭಾವಸಂಪತ್ತು, ಅದಕ್ಕನುಗುಣವಾದ ಪದಗುಂಫನಗಳನ್ನು " ಕಾವ್ಯಾನಂದ " ರ ಕವನಗಳೆಲ್ಲೆಲ್ಲ ನಾವು ಕಾಣುತ್ತೇವೆ. ಇದಕ್ಕೆ ಉದಾಹರಣೆಯೆಂದು ಯಾವ ಕವನವನ್ನು ನಾವು ನೋಡಬಹುದು. ಸಹಜ ಅವರ " ಕಾಶ್ಮೀರದಲ್ಲಿ ಕಾಗ್ರಾಲ " ದತ್ತ ದೃಷ್ಟಿಯನ್ನು ಹೊರಳಿಸಿದರೆ ಸಾಕು. ಭಾವ ಭಾಷೆಗಳ ಅನ್ಯೋನ್ಯತೆಗೆ ಇದೊಂದು ಮಾದರಿಯ ಕವನವಾಗಿದೆ. ಮೇಘಗಳು ಆಕಾಶ

* " ಕರುಣಾಶ್ರಾವಣ " ಪು. ೨೬.

ದಲ್ಲಿ ಗುಂಪುಗುಂಪಾಗಿ ಬಂದು, ಗುಡ್ಡಕ್ಕೆ ಅಪ್ಪಳಿಸಿ ಮಳೆ ಸುರಿಯುವ ಸನ್ನಿವೇಶದಲ್ಲಿ,

ಘನಘೋರ ಮೇಘ–ಮದದಂತಿಸೇನೆ
ಹಿಮಗಿರಿಗೆ ಢಿಕ್ಕಿ ಹೊಡೆಯೆ
ಮದಕುಂಭಿ–ಕುಂಭ ನಗ ರಾಜ ಹತಿಗೆ
ಕ್ಷತಿಗೊಂಡು ಸೀಳಿ ಒಡೆಯೆ
ಉದುರುತ್ತಲಿಹವು, ಅಣಿ ಮುತ್ತು ನೋಡು
ಕುಂಭಿನಿಯು ಕಾಂತಿವಡೆಯೆ
ಶ್ರೀನಗರ ಸರಸಿಯಲಿ ನೀರ್ ನೂರು
ತೇಂಕಾಡಿ ಜೋಲಿ ಹೊಡೆಯೆ ❖

ಈ ರೀತಿ ಪದ್ಯವು ರೂಪುಗೊಂಡಿದೆ. ಇಲ್ಲಿ ಬರುವ ಮಹಾಪ್ರಾಣಾಕ್ಷರಗಳಿಂದ ಕೂಡಿದ ವಿವಿಧ ಶಬ್ದಗಳು ಭಾವಪೋಷಣೆಗೆ, ಸನ್ನಿವೇಶದ ಕಲ್ಪನೆಗೆ ಬಹಳ ನೆರವಾಗುತ್ತವೆ. ಅದರಂತೆ " ನೆರೆ ಬಂತು ತೊರೆಗೆ, ನೊರೆ ಬಂತು ತೆರೆಗೆ, ಹರೆ ಬಂತು ದರಿಯ ಝುರಿಗೆ " ಎನ್ನುವಲ್ಲಿಯ ಲಾಲಿತ್ಯ, ಸರಳತೆಗಳನ್ನೂ ಗಮನಿಸಬೇಕು. ಕೊನೆಗೆ ಸೃಷ್ಟಿಯೇ ಶಿವಶಿವೆಯ ಪೂಜೆಗಾಗಿ ಸನ್ನದ್ಧನಾಗಿ ನಿಂತ ಬಗೆಯನ್ನು ಚಿತ್ರಿಸುವಲ್ಲಿಯಂತೂ ಕವಿಯ ಕಲ್ಪನೆ, ಭಾವ, ಭಾಷೆಗಳ ಸಮ್ಮಿಳನ ಕೌಶಲ್ಯವು ಮುಗಿಲನ್ನು ಮುಟ್ಟಿ ನಿಂತಿದೆ. ಅದನ್ನವಲೋಕಿಸದೆ ಮುಂದರಿಯಲಿಕ್ಕಾಗದು.

ಗಜಚರ್ಮ ಮೇಘ, ಭಸಿತಾಂಗ ಹಿಮವು,
ಗಂಗೋತ್ತಮಾಂಗ ಶೃಂಗ;
ಈ ಬೆಟ್ಟ ರುದ್ರ, ಶ್ರೀನಗರ ಗೌರಿ,
ರಮಣೀಯ ಉಭಯ ಸಂಗ !
ಮಳೆ ಉದಕ, ಆಲಿ ಸುಮ, ಮಿಂಚು ದೀಪ
ಶಿವಶಿವೆಯ ಪೂಜೆಗಾಗಿ
ಕಾರ್ಗಾಲ ಬಂತು ಕಾಶ್ಮೀರ ಶ್ರೀಗೆ
ಸೌಂದರ್ಯಸ್ನಾನಮಾಗಿ *

ಹೊಸಗನ್ನಡ ಸಾಹಿತ್ಯದಲ್ಲಿ ಇಂಥ ಮೇಲ್ನುಡಿಯ ಪದ್ಯಗಳು ಬಹಳಿಲ್ಲ.

---

❖ " ಕರುಣಾಶ್ರಾವಣ " ಪು. ೩೮.
* " " ಪು. ೪೦.



ಶಬ್ದಗಳ ಮೇಲಿರುವ ಪ್ರಭುತ್ವವನ್ನು ಹದವರಿತು ಉಪಯೋಗಿಸುವ ಶಕ್ತಿ ಹಾಗೂ ಸಂಯಮಗಳು ಇಲ್ಲಿ ವ್ಯಕ್ತವಾಗಿವೆ.

ಇಂಥ ಶೈಲಿಯಲ್ಲಿಯೇ ರೂಪುಗೊಂಡ " ಮೋಡ " ಹಾಗೂ " ಮಳೆ " ಎಂಬ ಕವನಗಳಲ್ಲಿ ಕವಿಯು ತೋರಿಸಿದ ಕಲ್ಪನಾವೈಭವ, ಲೋಕೋತ್ತರ ಭಾವಸೃಷ್ಟಿಗಳನ್ನು ನಾವು ನೆನೆಯಬೇಕು. ಮೋಡವು ಆರಂಭದಲ್ಲಿ ಶೃಂಗಾರ ಚೇಷ್ಟೆಗೆ ಮಿಂಚಿನ ಹುಬ್ಬ ಹಾರಿಸಿದರೂ ಮಳೆ ಸುರಿಯುವಾಗ ಅವೇ ಬಯಲ ಭಾಮಿನಿಯ ಜಡೆಗಳಿಂದ ಕಂಗೊಳಿಸುತ್ತವೆ, " ಬಯಲ ಭಾಮಿನಿ ಜಗದ ಮಣೆಯ ಮೇಲೆ " ಕುಳಿತು ಮೈದೊಳೆದುಕೊಳ್ಳುತ್ತಿರುವ ಕಲ್ಪನೆಯು ಅಗಾಧವಾದುದು. ಅದರಿಂದಲೇ ಇಲ್ಲಿ—

ನೀರಲ್ಲವಿದು ತೀರ್ಥ, ವಿಶ್ವಲಿಂಗೋದಕವು,
ಆಗಲಿನ್ನಾದರೂ ಈ ಲೋಕ ನಾಕ ! ❖

ಕವಿಯು ಭಾವಲೋಕದಲ್ಲಿ ಈ ಸೃಷ್ಟಿಸ್ವರ್ಗವಾಗಲಿ ಎನ್ನುವುದರಲ್ಲಿ ಆಶ್ಚರ್ಯವಿಲ್ಲ. ಅವನಿಗೆ ಎಲ್ಲವೂ ಸುಂದರ, ಶುಭ ಮನುಲೋಕವನ್ನೇ ಸ್ವರ್ಗವನ್ನಾಗಿ ಮಾಡುವ ಭಾವನೆಯುವನದು. ಅದರಿಂದ " ವಿಂಧ್ಯಾದ್ರಿಯಲ್ಲಿ ಚಂದ್ರೋದಯ " ವು ಶ್ರೀಗುರುವಿನ ವರದ ಹಸ್ತದಂತೆ ಅವನಿಗೆ ಕಾಣುವುದು. ಬೆಳುದಿಂಗಳು ಗುರುಬೋಧೆಯ ಸುಧೆಯು !

ಸದ್ದು ಮಾಡಬೇಡ ನೀನು
ನಿದ್ದೆ ಮಾಡುತಿಹುದು ಕಾನು
ಧ್ಯಾನದೊಳಿಹುದೀ ಗಿರಿ ! *

ಇಲ್ಲಿ ಧ್ಯಾನದಲ್ಲಿ ಯಾರಿರುವರೋ ! ಗಿರಿಯೋ ಕವಿಯೋ ! ಇಂಥ ಧ್ಯಾನಶೀಲ ಹೃದಯಕ್ಕೆನೇ ಸೃಷ್ಟಿಯು ಒಲಿದು ತನ್ನ ಮನಸ್ಸನ್ನು ಬಿಚ್ಚಿ ತೋರಿಸುವಳು. ಎಲ್ಲರೆದುರಿಗೂ ಸಿಕ್ಕಸಿಕ್ಕಲ್ಲಿ, ಸಿಕ್ಕಸಿಕ್ಕಾಗ ತನ್ನ ಒಲವನ್ನೂ ಹೊಲಬನ್ನೂ ತೋರುವ ಕಾಮಿನಿಯಲ್ಲವಳು ! ತಪಸ್ವಿನಿಯಾಕೆ. ಶಿವನಿಗೇ ಒಲಿಯುವ ಜಗನ್ಮಾತೆ ! ಅವಳ ಕೂಡ ಸರಸ ಸಲ್ಲದು. ಪವಿತ್ರಭಾವನೆಯಿಂದ ತಪವನ್ನು ಆಚರಿಸಿದರೆ ವರದ ಹಸ್ತವನ್ನಿಡುವ ಕಾರುಣ್ಯಮಯಿ ಪ್ರಕೃತಿ.

---

❖ " ಕರುಣಾಶ್ರಾವಣ " ಪು. ೩೪.
* ' ಮಾನಸ ಸರೋವರ ' ಪು. ೪.

ಅವಳ ಕರುಣಾಶ್ರಾವಣ " ಚೆಲುವಿನ ಸ್ಥಾನ ನಲವಿನ ಪಾನ !" ಯಾರಿಗೆ ? ಕಾವ್ಯಾನಂದರಂಥವರಿಗೆ. ಆ ಭಾಗ್ಯ ಎಲ್ಲರಿಗೂ ಇಲ್ಲ.

೮

" ಪ್ರೇಮ-ಕಾಮಗಳಿಲ್ಲದವನು ಕವಿಯಾಗಲಾರ, ಕಲೆಗಾರನಾಗಲಾರ, ಕೊನೆಗೆ ಸಂತನೂ ಆಗಲಾರ "—ಎಂದು ಕವಿವರ ಶ್ರೀ ಪು. ತಿ. ನರಸಿಂಹಾಚಾರ್ಯರು ಹೇಳುತ್ತಾರೆ.† ಹಾಗೆಯೇ " ಪ್ರೇಮ " ಕವನಗಳಿಗೂ ಕಾವ್ಯಾನಂದರ ಕಾವ್ಯದಲ್ಲಿ ಕೊರತೆಯಿಲ್ಲ "—ಎನ್ನುವರು. ಅಹುದು ಕಾವ್ಯಾನಂದರ " ಜಲಪಾತ " ದಲ್ಲಿ " ರಾಜಾರಾಣಿ " ಎನ್ನುವ ವಿಭಾಗನಂತೂ ಪ್ರೇಮಪ್ರವಾಹವೇ ಆಗಿದೆ. ಕವಿಯು ಅದರಲ್ಲೊಂದು ವಿಧದಲ್ಲಿ ಪ್ರೇಮ ತತ್ವದ ವಿಕಾಸವನ್ನು ಕ್ರಮ ಬದ್ಧವಾಗಿ ಹೇಳಿದ್ದಾನೆನ್ನಬಹುದು. ಅವನಿಗೆ ಜೊತೆಯಾಗಿ ಕೆಳಗಿಳಿಯುವ " ರಾಜಾ-ರಾಣಿ " ತಡಸಲಿನ ಸದ್ದು ಪ್ರಣಯಿಗಳ ಪಿಸುಮಾತುಗಳಂತೆ ಕೇಳಿಸಿದೆ. ಅವು

ಏಳು ಲೋಕಗಳನ್ನೇ ತೋಳಿನಲಿ ತಬ್ಬಿರುವ
ಪ್ರೇಮವೊಂದನೆ ನಾವು ಕೀರ್ತಿಸೋಣ ! ❖

ಎಂದು ನುಡಿಯುತ್ತಿವೆಯಂತೆ ಸೃಷ್ಟಿಗೆ ಆದಿ ಪ್ರೇಮ. ಪ್ರೇಮದಿಂದಲೇ ಜೀವ ಜಗತ್ತು ಒಂದಕ್ಕೊಂದು ಅಪ್ಪಿಕೊಂಡಿದೆ—ಎನ್ನುವ ಮಾತು ಇಲ್ಲಿ ಧ್ವನಿತವಾಗಿದೆ. ಹೀಗೆ ಆರಂಭದಲ್ಲಿ ಕವಿಯು ಪ್ರೇಮದ ಮಹತಿಯನ್ನು ಸಾರಿ, " ಆಗತಾನೆ " ಲಾಸ್ಯಮಾಡುವ ಯೌವನದ ಲೀಲೆ ಮೊದಲು ಮಾಡಿಕೊಂಡು " ಸಮರಸ " ದವರೆಗೆ ವಿವಿಧ ಪ್ರೇಮ ತರಂಗಗಳನ್ನು ಬಿತ್ತರಿಸಿದ್ದಾನೆ.

" ಸರಳ ಬಾಲೆಯು ಪ್ರಮದೆಯಾಗು " ವ ಸ್ಥಿತಿಯನ್ನು ನಾವು ನೋಡಬೇಕು. ಹೋಗಹೋಗುತ್ತ ಆಕೆ ಗಕ್ಕನೆ ನಿಲ್ಲುವಳು. ಹೆಜ್ಜೆ ಹೆಜ್ಜೆಗೆ ಲಜ್ಜೆ ತುಂಬಿ ತುಳುಕುವುದು. ದಿನಕ್ಕೆ ಎಷ್ಟೋ ಸಲ ನೈಯ ಹೊಲದಲಿ ನವಿರಸಯಿರು. ಬಯಕೆ ಬಳ್ಳಿಗೆ ಕನಸು ಹೂಗಳು. ಅವಳ ಎದೆಯಲಿ ಅವಳೇ ಅರಿಯದೆ ಇರುವ ಒಲ್ಮೆಯು ಬಿಗಿಯುತ್ತಿದೆ. ಇಂಥವಳನ್ನು " ನೋಡಿ ಬಂದ ಮೇಲೆ " ರಸಿಕನ ಹೃದಯ ಹೇಗಿದ್ದೀತು ? " ನಿನ್ನ ಕಂಡಾಕ್ಷಣವೆ ಕೆರಳಿದುವು ಆಶೆಗಳು. " " ನನ್ನ ಮನಸಿನ ರಾಜ್ಯವೆನ್ನ ಕನಸಿನ ಲೋಕ ಹೃದಯ ಸಿಂಹಾಸನವೆ ನಿನ್ನದಾಯ್ತು !" ಸರ್ವಸ್ವವನ್ನೇ ತನ್ನವಳಿಗೆ ಒಪ್ಪಿಸಿಬಿಡುತ್ತಾನೆ. ತಾನು ಮದುವೆಯಾಗಲಿರುವ ಕನ್ಯೆಯನ್ನು ನೋಡಲಿಕ್ಕೆ ಹೋದಾಗಿನ ಭಾವ ಸೃಷ್ಟಿಯು ಇಲ್ಲಿ ಗುಡಿಗಟ್ಟಿ ನಿಂತಿದೆ. ಅಂದು " ನಿನ್ನ ಬಂದಿಗೆ ನೀನೆ ವಂದಿಸುತ ಮರೆಯಾದೆ " ಎನ್ನುವನು. ಹೀಗೆ ಮನಸೋತಮೇಲೆ

" ನಿನ್ನ ನನ್ನವಳೆಂದರನ್ಯಾಯವೇ ಕಾಂತೇ ?
ನೀನೆ ನಿರ್ಣಯಮಾಡು ನಿನ್ನಿಚ್ಛೆಯಂತೆ !" *

ಎಂದು ಅವಳ ನಿರ್ಣಯಕ್ಕೂ ಆಸ್ಪದನನ್ನು ಕೊಡುವನು. ಆದರೂ ಅವಳು ಮಾಡಿದ ಮೋಡಿಯು ಇವನನ್ನು ತನ್ನ ಪಂಜರದಿಂದ ಹೊರಗೆ ಬಿಡದು. ಅವನ ಬಾಳಿನ ಏಕ ರೂಪತೆಯೇ ತೊಡೆದುಹೋಯಿತು-ಹಗಲಿರುಳೂ ಬಗೆಗಣ್ಣಿನೆದುರಿಗೆ ಅವಳದೇ ಚಿತ್ರ. " ಏನಿದ್ದೆ ಏನಾದೆ ನಿನ್ನ ನೋಡಿ " ಎಂದು ಅವನದವನಿಗೇ ಎನಿಸುವದು. ತನ್ನಿರವೆ ಕಲ್ಪನೆಯಾಗಿ ಸಾಗಿರುವುದು. ಕೊನೆಗೆ ಆತ,

ಇದಕಾಗಿ ನಾ ನಿನಗೆ ಚಿರಋಣಿಯು ಓ ಚಲುವೆ
ನಿನ್ನ ನಾ ಪಡೆಯಲಿ ಪಡೆಯದಿರಲಿ !
ಈ ನನ್ನ ಪ್ರೇಮಕ್ಕೆ ಫಲವು ದೊರೆತರೆ ದೊರೆಯ-
ಲಿಲ್ಲದಿರೆ ನೀನಿತ್ತ ನೋವೆ ಬರಲಿ ! ❖

ಈ ಪ್ರಣಯದ ವಿಫಲತೆಯ ಕಲ್ಪನೆಯಿಂದ ಅವನಿಗೆ ಜಗತ್ತಿನಲ್ಲೆಲ್ಲ " ಇಜ್ಜೋಡಿ " ನ ಜೋಡಿಯೋ ಕಾಣುವದು. " ಚಂದ್ರ. ಕಣ್ ಚಿವುಟುತಿರೆ, ತಾರೆಗಳು ಕರೆಯುತಿರೆ, ಕಮಲಿನಿಯು ಕೊರಗುವಳು ದಿನಪಗಾಗಿ !" ಹೀಗೆ ನದಿ, ಮರ, ಬೆಟ್ಟಗಳೆಲ್ಲದರಲ್ಲೂ ಇಜ್ಜೋಡಿನ ಸಂತೆಯೇ. " ಒಂದನೊಂದೊಲಿದಿರುವ ಜೋಡಿಗಳೆ ವಿರಲ. " ಸುತ್ತಲೂ—ಎಲ್ಲೆಲ್ಲೂ—

ಒಲಿದವರ ಬಿಟ್ಟು, ತನಗೊಲಿಯದವರನೆ ಬಯಸಿ
ಕಳವಳಿಸಿ ಕಂಗೆಟ್ಟ ಜನವೆ ಸುತ್ತು ●

ಇತ್ತ ನಲ್ಲನಲ್ಲಿ ಈ ಕಳವಳವು ಕಂಗೆಡಿಸುತ್ತಿದ್ದರೆ ಅತ್ತ ನಲ್ಲಳಲ್ಲಿ ವಿರಹ

---

† " ಮಾನಸ ಸರೋವರ " ದ ಮುನ್ನುಡಿಯಲ್ಲಿ.
❖ " ಜಲಪಾತ " ಪು. ೭೬.

* " ಜಲಪಾತ " ಪು. ೮೨.
❖ " ಪು. ೮೪.
● ,, ಪು. ೮೫.

ಮರಿಯು ದಹಿಸುತ್ತಿದೆ. ನಲ್ಲನನ್ನು ಹುಡುಹುಡುಕಿ, ಮಿಡುಮಿಡುಕಿ ಅವಳು
ಚಣಕ್ಕೊಮ್ಮೆ ಸಾಯುತ್ತಿದ್ದಾಳೆ. ನಲ್ಲ ಇನ್ನೆಲ್ಲಿ ಬರುವನು ?—ಎಂದು ಗೆಳ
ತಿಯ ಮಾತು ಮನಕ್ಕೆ ಕರಗಸವಾಯಿತು. ವಿಶ್ವಾಸ ಜೊಳ್ಳಾಯಿತು.
ಸಂಶಯು ಸುತ್ತಿತು. ಆದರೂ ಅವಳ ಮನಸ್ಸಿಗೆ " ಬರದಿದ್ದರೇನಾಯ್ತು ಬರು
ವನೆಂಬುವ ಆಸೆಯೇ ಸಮಾಧಾನವನ್ನು ತರುತ್ತಿದೆ. ಈ " ಆಸೆಯು ಅಸರ
ತಪ್ಪಿದರೆ ಸಂಸಾರ ಹೊರಲಾರದಂಥ ತಲೆಭಾರ " ವೆನಿಸುತ್ತದೆ. ಅದರಿಂದ
ಆಶಾವಾದಿಗೆ " ಬಾಳು ಕಹಿಯಾದರೂ ನೆನಹು ಕಹಿಯಲ್ಲ !"—ಎಂದು ಆತ
ಅವಳನ್ನು ಆಗಾಗ " ಕಾವ್ಯದ ಮುಚ್ಚಿದೋಲೆಗಳ ತೆರೆಯುವಂತೆ ನೆನೆಯು-
ತ್ತಾನೆ. ಒಂದು ಕ್ಷಣ ಅವಳು ತನಗೆ ಒಲಿದಿಲ್ಲವೆಂದು ಭಾವಿಸುತ್ತಾನೆ.
ಇನ್ನೊಮ್ಮೆ ಒಲಿದೇನು ? ಎಂದು ತನ್ನಷ್ಟಕ್ಕೆ ತಾನೇ ಕೇಳಿಕೊಳ್ಳುತ್ತಾನೆ.
ಕೊನೆಗೊಮ್ಮೆ ಅವನ " ಶಂಕಾ—ಸಮಾಧಾನ " ವಾಗುತ್ತದೆ. ಆಗ
ಒಮ್ಮೆಲೇ ಹರುಷದಿಂದ ಕೂಗುವನು.

ನಾ ಬಲ್ಲೆ, ಓ ಚಲುವೆ, ನಿನ್ನೆದೆಯ ಬಯಲಿನಲಿ
ಹರಿವ ಪ್ರೇಮದ ತೊರೆಯ ಆಳವನ್ನು *

ಆದರೂ ನಲ್ಲಳ ಗುಣರೂಪಗಳು ಬಹಳ ಹೆಚ್ಚಿನವು. ಅವುಗಳನ್ನು ಹೊಂದಲು
ತಾನು ಸರಿಯಲ್ಲ—ಎಂಬ ಅನುಮಾನವೂ ಉಂಟಾಗುತ್ತದೆ. ಇವಳನ್ನು
ತಾನು ಮದುವೆಯಾಗುವುದೆಂದರೆ " ಕಿರಿಯ ತೆರೆಯೊಂದರಲಿ ಸೂಸಿ ಹರಿ
ಹರಿಯುವ ಗಂಗೆಯನ್ನು ತಡೆದು ನಿಲ್ಲಿಸಿದಂತೆ. " ಅದರಿಂದ

" ಗುಣ ರೂಪ ಸಿರಿಯಲ್ಲಿ ನಿನಗೆ ಸರಿಯಾದವನ
ಕೊರಳಲ್ಲಿ ಹಾಕುವುದು ಪ್ರೇಮಮಾಲೆ !
ನಿಮ್ಮಿಬ್ಬರುದರದಲಿ ಮನ್ಮಥನು ಹುಟ್ಟಲಿ
ಬೇಡೆನ್ನ ಪಡೆವಾಸೆ ಬಾಲೆ !" ❖

ಎಂದು ಸ್ಪಷ್ಟವಾಗಿ ಹೇಳಿಯೇ ಬಿಡುವನು. ಅದಕ್ಕೆ ಒಲಿದ ನಲ್ಲಳ ಉತ್ತರ
ವೇನು ಗೊತ್ತೆ ?

* " ಜಲಪಾತ " ಪು. ೯೦.
❖ " ಪು. ೯೧.



" ಒಲಿದವರ ಕೊಲ್ಲುವೊಡೆ ಮಸೆದ ಕೂರಲಗೇಕೆ ?
ಒಲ್ಲೆನೆಂದೊಡೆ ಸಾಕು ನಲ್ಲ !
ತಲೆಬಾಗಿ ನಿಂತಿಹುದು ಪ್ರೇಮ ಪೌರುಷದಿದಿರು
ಸಲ್ಲಬೇಕಿಲ್ಲದೊಡೆ ಸಾವು ನಲ್ಲ !" *

ಇಷ್ಟು ನಿರ್ಧಾರದ ಕೊನೆಗೆ ಮದುವೆಯ ಬ್ರಹ್ಮಗಂಟೆಗೆ ಅರ್ಥವೇನು ?
ಇಂಥವರಿಬ್ಬರೂ ಜನ್ಮಜನ್ಮಗಳಿಂದ ಸತಿ-ಪತಿಗಳಾಗಿ ಬಂದುದರಲ್ಲಿ ಸಂಶ-
ಯವೇ ಇಲ್ಲ. ಇಂಥ ನವ ದಾಂಪತ್ಯವು—ಈ ಭವದಲ್ಲಿ—ಮತ್ತೆ ಆರಂಭ
ವಾದಲ್ಲಿ " ಹೊಸ ಹೆಂಡತಿಗೆ " ಗಂಡ ಹತ್ತಿರ ಕರೆದು ಕಿವಿಮಾತು ಹೇಳುವು
ದರಲ್ಲಿ ಹೊಸದೇನಿದೆ ? " ಹೊಸ ಗಂಡನಿಗೆ " ನಲ್ಲೆಯು " ಅರ್ಪಿಸಿಕೋ ಓ
ಪ್ರಿಯತಮ "—ಎಂದು ತನ್ನ ಸರ್ವಸ್ವವನ್ನೂ ಪುನಃ ಸಲ್ಲಿಸುವಳು. ಆಗ
" ಗಂಡು ಹೆಣ್ಣಿನ ಬಾಳು ಗಂಡಭೇರುಂಡದೊಲು ಎರಡು ಮುಖ, ಒಂದಾತ್ಮ
ದುಃಖ ಹರುಷ. " ಹೀಗಾದ ಮೇಲೆ ಕೇಳುವದೇನು ಸಂಸಾರ ಸುಖ ? ಅವನ
ನೂರು ತಾಪಕ್ಕೆ ಅವಳ ಓರೆ ನೋಟ ಒಂದೇ ಸಾಕು. ಬಗೆಯ ಬೇಗೆಗೆ ನಗೆಯೆ
ಸಾಕು. ವಿಶ್ವಸ್ವರ ಮೇಳದಲಿ ತಮ್ಮ ಸ್ವರವನು ಬೆರಸಿ ಬಾಳ ವೀಣೆಯನ್ನು
ಬಾಜಿಸತೊಡಗುವರು. ಇಲ್ಲಿ ಜೀವನದ ಸಫಲತೆಯಿದೆ, ಸವಿಯಿದೆ—ಆದರೆ
ಉನ್ಮಾದದಂಶವಿಲ್ಲ. ಅಂತಲೇ ಇದು ಜೀವನ ರಸಿಕತೆಯೆನಿಸುತ್ತದೆ.

ಇಂಥ ಒಲವಿನ ಸಂಸಾರದಲ್ಲಿ ಕೆಲವು ಕಾಲ ಇಬ್ಬರಲ್ಲಿಯೂ ಧ್ಯೇಯದ
ದೃಷ್ಟಿಯು ಮಂಕಾದರೆ ಆಶ್ಚರ್ಯಪಡಬೇಕಾಗಿಲ್ಲ. ತಾರುಣ್ಯದ ಹುಚ್ಚು
ಹೊಳೆಯ ಜಲಪಾತದ ಅಬ್ಬರವೇ ಅಂಥದು. ಆದರ ಸಪ್ಪಳದಲ್ಲಿ ಬೇರೇನೂ
ಹೊಳೆಯದು, ಕೇಳಿಸದು. ಆ ಅಬ್ಬರ ಇಳಿದೊಡನೆ ಪ್ರಕೃತಿಯೇ ಮೊದಲು
ಎಚ್ಚರಗೊಳ್ಳುವುದು. ಅವಳೇ ಕರ್ತವ್ಯದ ನೆನಪು ಕೊಟ್ಟು ಹೇಳುವಳು.

ಸಾಕೇಳು ನಲ್ಲ, ಮರೆತು ಪ್ರೇಮದ ಸೊಲ್ಲ.
ಗಂಡುತನಕಿದು ಹೊಲ್ಲ. ಓ ನಲ್ಲ, ಏ ನಲ್ಲ, ನಲ್ಲ. ❖

* ಜಲಪಾತ ಪು. ೯೧.
❖ ಜಲಪಾತ ಪು, ೧೦೩.

ನಲ್ಲನೂ ಕೂಡ "ಮನೆಯಿಂದ ಹೊರಡುವಾಗ" ಲೋಕವ್ಯಾಪಾರಗಳ ಕುಟಿಲ ಕಾಠಿನ್ಯಗಳನ್ನು ನಿನ್ನ ನಗೆಯನ್ನು ನೆನೆದು ಮರೆಯುವೆನೆಂದು ಹೇಳಿ ಹೊರಡುವನು. ಎಲ್ಲಿ ಹೋದರೂ ಅವನಿಗೆ ತನ್ನ ನಲ್ಲಳ ನೆನಪು. ಮನುಜ ಸೃಷ್ಟಿ ಎಲ್ಲವೂ ನಗುನಗುತ್ತಿರುವಂತೆಯೇ–ಅದೂ ನಲ್ಲಳ ನಗೆಯಂತೆ–ಕಾಣಲೆಂದು ಬಯಸುವನು. "ತನ್ನ ನಯನಕೆ ಪ್ರೇಮದ ದೃಷ್ಟಿ" ಬರಲೆಂದು ಅಪೇಕ್ಷಿಸುವನು. ಹೀಗೆ ಕೂಡಿ ಬಾಳಿದವರ ಜೀವನವು "ಸಮರಸ" ವಾಗಿ ಸಾಗುವದು. ಆಗ ಮಾತಿಲ್ಲ, ಮೌನ. ಅದೇ ಮೇಲು. ಯಾಕೆಂದರೆ,

ಕೂಡಿದಾಗಿನ ಸುದ್ದಿ ಆಡಲೂ ಬರುತಿರಲು
ಕೂಡಿಕೆಯ ಪರವಶಕೆ ಅದುವೆ ಕೊರತೆ
ಗಾಡಿಕಾರನು ಬರಿದೆ ನೋಡಲೆನ್ನನೆ ಮರೆತೆ
ಮೋಡಿಯಿಂತಿಹುದವನ ಕೂಡಿ ಏನರಿಯೆ !
ಹೇಗೆ ಹೇಳಲಿ ಸಖಿಯೆ ಭೋಗಿ ನಲ್ಲನ ಸುದ್ದಿ
ಮೂಗಿಯಾಗಿರುವುದೇ ಮೇಲು ಗೆಳತಿ ! *

ಎನ್ನುವಂಥ ಪರವಶತೆಯು ಪ್ರೇಮದಲ್ಲಿ ಉತ್ಪನ್ನವಾಗುತ್ತದೆ. ಅಲ್ಲಿ ಪ್ರತಿಯೊಬ್ಬರೂ ತನ್ನತನವನ್ನು ಮರೆತು ತನ್ನವರಲ್ಲಿ ಬೆರೆಯುತ್ತಾರೆ. ಇದೇ ಪ್ರೇಮದ ವೃದ್ಧಿ, ಸಿದ್ಧಿ.

ಇಂಥ ಪ್ರೇಮದ ಸಿದ್ಧಿಯನ್ನು ಪಡೆಯಲಿಕ್ಕೆ ಕವಿಯು ಪ್ರೇಮ, ಕರ್ಮ, ಜ್ಞಾನ, ಸೌಂದರ್ಯಗಳಲ್ಲಿ ಒಂದು ತಾತ್ವಿಕ ಹೊಂದಾಣಿಕೆಯನ್ನು ರೂಪಿಸಿಕೊಂಡುದೂ ಉಂಟು. ಅದು ಭಕ್ತನ ಸತಿಪತಿಯ ಭಾವದಲ್ಲಿ ವ್ಯಕ್ತವಾದ ಆಧ್ಯಾತ್ಮಿಕ ಪ್ರೇಮದ ಪರಿಯಾಗಿದೆ. ಲೌಕಿಕದಿಂದ ಅಲೌಕಿಕಕ್ಕೆ ಏರಿದೆ. ಅದು "ಕಾಯಕ" ದಲ್ಲಿ—

ಪ್ರೇಮವಿಲ್ಲದ ರೂಪ ವಿಷಯ ಭೋಗಿಗಾಗಿ
ಸೇವೆಯಿಲ್ಲದ ಪ್ರೇಮ ಬರಿಯ ಸೋಗಿಗಾಗಿ
ಪರಿಶುದ್ಧ ಕಾಯಕವು ಪ್ರೇಮ ಯೋಗಿಗಾಗಿ ○

ಎಂದು ಸಾಧನೆಗೆ ಮೆಟ್ಟಲದ ಏಣಿಯೊಂದನ್ನು ನಿರ್ಮಿಸಿಕೊಂಡಿದೆ. ಆದರಿಂದ

* ಜಲಪಾತ ಪು. ೧೧೧,

○ ಜಲಪಾತ ಪು. ೪೪.



ಕವಿಯ ದೃಷ್ಟಿಯು "ಜ್ಞಾನ–ಪ್ರೇಮ" ಗಳಲ್ಲಿ ಸಮನ್ವಯವನ್ನು ಸಾರುತ್ತಿದೆ. "ತಿಳಿಯುವುದೆ ಒಲಿಯುವುದು ಒಲಿಯುವುದೆ ತಿಳಿಯುವುದು ಒಂದು ಹಿಡಿದರೆ ಸಾಕು ಇನ್ನೊಂದು ದೊರೆಯುವುದು." ಒಂದು ತಂದೆಯಾದರೆ ಇನ್ನೊಂದು ತಾಯಿ. ಅದರಿಂದ ಜ್ಞಾನ ಹಾಗೂ ಪ್ರೇಮಗಳಲ್ಲಿ ಒಂದು ಹೆಚ್ಚು ಇನ್ನೊಂದು ಕಡಿಮೆ ಎಂದು ಹೇಳಲಿಕ್ಕೆ ಆಗದು. ಇನ್ನು "ಸೌಂದರ್ಯ–ಪ್ರೇಮ" ಗಳ ಜೊತೆಯೂ ಕೂಡ ಹೀಗೆಯೇ ಇದೆ. "ಒಲವು ಕಣ್ದೆರೆದಾಗ ಚೆಲುವಿಗಿಹ ಬೆಲೆಯಲ್ಪ ?" ಇದು ನಿತ್ಯಸತ್ಯ. ಚೆಲುವಿದ್ದಲ್ಲಿ ಮೊದಲು ಒಲವು ಉಂಟಾಗುವುದೇನೋ ನಿಜ. ಆದರೆ ಒಲಿದ ಹೃದಯಕ್ಕೆ ಆ ಚೆಲುವಿನ ಮಾಧ್ಯಮದ ಆವಶ್ಯಕತೆಯು ಉಳಿಯುವದಿಲ್ಲ.

ಈ ಮಾತನ್ನು ಕೇಳಿದಾಗ ಚೆಲುವೆ ಸಹಜವಾಗಿಯೇ ನಗಬಹುದು. ಆಗ "ಏಕೆ ನಕ್ಕೆ ?" ಎಂದರೆ ಏನೆಂದು ಉತ್ತರಿಸಿಯಾಳು. ನಲ್ಲನ ಈ ಪ್ರಶ್ನೆಯನ್ನು ಕೇಳಿ, ಮತ್ತೊಮ್ಮೆ ನಕ್ಕಾಳು–ಅದೂ "ಶೋಕನಗುವ ತೆರದಲಿ." ಮೊದಲು ನಕ್ಕ ನಗೆ–ಈ ನಗೆ ! ಎರಡನ್ನು ನೋಡಿ ಏನೆನ್ನಬಹುದು. ತಿರುಗಿ ಅವಳನ್ನೇ ಕೇಳುವನು.

ನಿನ್ನ ಚೆಲುವ ನೀನೆ ಮೆಚ್ಚಿ ಹಿಗ್ಗು ಹೆಚ್ಚಿ ನಕ್ಕಿಯಾ ?
ನಕ್ಕರೆಷ್ಟು ಚೆಂದ ಕಾಣ್ವೆನೆಂದು ನೋಡೆ ನಕ್ಕಿಯಾ ?

* * * *

ಚೆಲುವು ಕೊನೆಗೆ ಒಲವಿನೆದುರು ದಾಸಿಯೆಂದು ನಕ್ಕಿಯಾ ?
ಬರಲಿ ಮನೆಗೆ–ದಾಸರಾರು ತೋರ್ವೆನೆಂದು ನಕ್ಕಿಯಾ ? ●

ಇದಕ್ಕೆ ಅವಳು ಉತ್ತರ ಕೊಡುವ ಗೊಡವೆಗೇ ಹೋಗುವುದಿಲ್ಲ. ಅದರ ಆವಶ್ಯಕತೆಯೂ ಉಳಿಯುವದಿಲ್ಲ. ಯಾಕೆಂದರೆ ಅವಳಿಗೆ ಮನೆಯಲ್ಲಿ ಇಲ್ಲಿಯವರೆಗೂ "ನೀನಾರು ?" ಎಂದು ಕೇಳಿದವರೇ ಇಲ್ಲ. ಎಲ್ಲರೂ "ನಾನಾರು ?" ಎಂದೇ ಕೇಳುವರು. ಅವರು ಸಹ ಸಂಜೆ ಮನೆಗೆ ಬಂದಾಗ "ಬೆಣ್ಣೆಯಾಸೆಯ ಬೆಕ್ಕಿನಂತೆ ಬಂದೆನೆ ಮುಚ್ಚಿ...."ನಾನಾರು ?" ಎಂದು ಕೇಳುವರು. "ಯಾರಿಗುತ್ತರವ ಹೇಳಲೇ ?" ಎಂಥ ಮಧುರ ಜೀವನವಿದು ! ಹೇಗೆ ರಸಿಕರ ಮನ

● ಮಾನಸ ಸರೋವರ ಪು. ೧೧–೧೨.

ಸ್ಸನ್ನು ಸೂರೆಗೊಳ್ಳುತ್ತಿದೆ. ಹೀಗೆ ಮನಸ್ಸನ್ನು ಸೆರೆ ಹಿಡಿಯುವುದಕ್ಕೆ ಮಧುರ ಭಾವವನ್ನು ಬೆಳೆಯಿಸಿ ಬಿತ್ತರಿಸುವ ವಿರಹಗೀತೆಗಳೂ ಇವೆ. ಪ್ರೇಮಕ್ಕೆ ಕಳೆ ಗಟ್ಟುವುದು ವಿರಹದಿಂದಲೇ. “ಬರಲಿಲ್ಲ!” ಎಂದು ಹೂವಿನಂಥ ಹೆಣ್ಣು “ಪತಿ ಯಳಿದ ರತಿಯಂತೆ” ಹಂಬಲಿಸುತ್ತಿರುವುದು. ಮನದಲ್ಲಿ—

ಬರಲಿಲ್ಲ ಈ ತಟಕೆ ನೀನಾದರೂ
ಬರಲಿಲ್ಲ ಆ ತಟಕೆ ನಾನಾದರೂ ॥ ಪ ॥
ಆಗಲಿಕೆಯೆ ಆಗಲಲಿಲ್ಲೇನಾದರೂ
ಹಗಲೊಂದು ಹಲವಾರು ಯುಗವಾದರೂ ❖

ಎಂದು ಒಂದೇ ಸಮನೆ ಕೊರಗುತ್ತಿರುವುದರ ಚಿತ್ರವು ಮುಂದಿನ ಪ್ರೇಮದ ಸ್ಥಾಯಿಗೆ ನೆಲಗಟ್ಟಾಗಿದೆ. ಇಂಥ ಕವನ ಪಲ್ಲವಿಗಳು ಕಾವ್ಯಪ್ರೇಮಿಗಳಿಗೆ ಕಲ್ಲುಸಕ್ಕರೆಯ ಹರಳುಗಳಿದ್ದಂತೆ. ಅವುಗಳನ್ನು ಸವಿದಷ್ಟೂ ರಸ ಒಸರುವುದು.

೯

ಕವಿಯ ಅಂತರಂಗ ಅರಳಿದಷ್ಟು ಕಾವ್ಯವಲ್ಲಿಯು ವಿಸ್ತಾರವಾಗಿ ಹಬ್ಬುವದು. ಕಾವ್ಯಾನಂದರೇ ಒಂದೆಡೆಗೆ ಹೇಳಿದಂತೆ “ಹೃದಯವು ಸಾಹಿತ್ಯದ ಗರ್ಭಗುಡಿ. ಸದಯ ಹೃದಯವೇ ಸ್ವರ್ಗ—ಅದಯ ಹೃದಯವೇ ನರಕ! ಆದರೆ ಹೃದಯದಲ್ಲಿ ಅಮೃತವೂ ಇದೆ, ಹಾಲಾಹಲವೂ ಇದೆ. ಸಾಹಿತ್ಯ ಹೃದಯದ ಹಾಲಾಹಲವನ್ನು ಹೀರುತ್ತದೆ—ಹರನಂತೆ; ಅದರ ಅಮೃತವನ್ನೂ ಹಂಚುತ್ತದೆ—ಮೋಹಿನೀ ರೂಪದ ಹರಿಯಂತೆ. ನಮ್ಮ ಹೃದಯದಲ್ಲೇ ಅಮೃತವಿದ್ದರೂ ಅದು ನಮಗೆ ದೊರಕುವುದು ಸಾಹಿತ್ಯದ ಮೂಲಕವೇ....ಆ ಅಮೃತ ನಮಗೆ ಒದಗಬೇಕಾದರೆ ಹೃದಯಮಥನವೇ ಹಾದಿ.” * ಇಂಥ ಹೃದಯಮಥನ ಕ್ರಿಯೆಯು ಒಂದೇ ಸಮನೆ ನಡೆದುದನ್ನು ಇವರ ಕಾವ್ಯದುದ್ದಕ್ಕೂ ನಾವು ಕಾಣುತ್ತೇವೆ. ಇವರ ಅಂತರಂಗ

❖ ಮಾನಸ ಸರೋವರ ಪು. ೩೨.

* ಶ್ರೀ ಸಿದ್ಧಯ್ಯ ಪುರಾಣಿಕರ “ಪ್ರಬಂಧಮಾಲೆ” ಯ 'ಸಾಹಿತ್ಯ ಸಂಪಾದನೆ' ಯಿಂದ



ವೆಂಬುದು ಒಂದು ಅಂತರಿಕ್ಷದಂತೆ ವಿಶಾಲವಾದುದು. ಅದರಲ್ಲಿ ಊಹೆ, ಕಲ್ಪನೆ, ಗ್ರಹಣ, ಮನನಗಳೆಲ್ಲ ಸೇರಿ ಯುಗ ಯುಗಗಳವರೆಗೆ ತಪಸ್ಸನ್ನು ಮಾಡಿದರೂ ಆ ತಪಕ್ಕೆ ನಿಲುಕದ ಗುಹ್ಯ ವಿಷಯಗಳು ಎಷ್ಟೋ ಇವೆ.

ಸಣ್ಣದೆಂದರೆ ಸಣ್ಣದಿದು ಭಾ—
ವಿಸಲು ಭೂಮದಿ ಭೂಮವು
ಘಟದ ಹಿಂಗಡೆ ತಟವೆ ತೋರದ
ಅಂತರಂಗದ ವ್ಯೋಮವು! ●

ಈ ಅಂತರಂಗದ ಆಕಾಶವು ಆಕಾರದ ಹಿಂದೆ ಅಡಗಿದ ನಿರಾಕಾರದಿಂದ ಕೂಡಿದೆ ಎಂಬುದರಲ್ಲಿ ಎಂಥ ಸತ್ವವಿದೆ, ಸತ್ಯವಿದೆ. ಇಂಥ ನಿರಾಕಾರದಿಂದ ರೂಪುಗೊಂಡ ಕಾವ್ಯಗಂಗೆಯು ಭೂಮಿಗೆ ಅವತರಿಸಬೇಕಾಗುತ್ತದೆ. ಅವಳು ಅವತರಿಸುವ ಪೂರ್ವದಲ್ಲಿ ಅಲ್ಲಿ ನಡೆಯುವ ಸಂಚು–ಮಿಂಚುಗಳಿಗೆ ಲೆಕ್ಕವೇ ಇಲ್ಲ. ಆ ಅಂತರಂಗದ ಅಂತರಿಕ್ಷದಲ್ಲಿ ಪ್ರತಿಭೆಯೇ ವಿದ್ಯುನ್ನಟಿಯು; ಸ್ಫೂರ್ತಿಯು ಮಿಂಚಿನಂಥ ಚಂಚಲೆಯು; ಪ್ರೇಮವೆಂಬುದೇ ಚಂದ್ರ; ಕನಸು—ಸ್ವಪ್ನ—ಅವನ ಪ್ರೀತಿಯ ರೋಹಿಣಿಯು; ದುಗುಡ ತಾಳಮೇಘ; ಸುಖವೇ ಶರದೃತುವಿನ ನೀರದ; ಆಶೆಗಳೇ ತಾರೆ; ನಿರಾಶೆಯೇ ಕತ್ತಲೆ; ಧೃತಿಯೆ ಧ್ರುವನಕ್ಷತ್ರ; ಕಲಾಮತಿಯು ಬಾನ ಬಯಲಿನಲ್ಲಿ ಮೂಡುವ ಚಿತ್ರ; ಕಾಮವೇ ಇಂದ್ರಧನುಸ್ಸು; ಗರ್ವವು ಮೇಘ ಗರ್ಜನೆ; ಕ್ರೋಧವೇ ಶಿಖಿ; ಬೆಳ್ಳಿ ಚುಕ್ಕೆಯೇ ಚಿಂತನೆ—ಇಂಥ ಅಂತರಂಗದಲ್ಲೆ ನಾಕ, ಇಲ್ಲೆ ನರಕ. ಬಯಸಿದೊಡೆ ಕೈಲಾಸ. ಹೀಗೆ ಕವಿಯು ಅಂತರಂಗದ ಚಿತ್ರವನ್ನು ಆಕಾಶದ ಘಟನೆಗಳೊಡನೆ ರೂಪಿಸಿದುದು ಕನ್ನಡ ಕಾವ್ಯಪ್ರಪಂಚದಲ್ಲಿ ಹೊಸದಾಗಿದೆ. ಇಲ್ಲಿ ನಿರಾಕಾರಕ್ಕೆ ಆಕಾರವನ್ನು ಕೊಟ್ಟು ತೋರಿಸುವ ಅಪೂರ್ವ ಪ್ರಯತ್ನವು ನಡೆದಿದೆ. ಪ್ರತಿಭೆ, ಸ್ಫೂರ್ತಿ, ಪ್ರೇಮ, ಕನಸು, ದುಗುಡ, ಸುಖ, ಆಸೆ ಇವೇ ಮೊದಲಾದವುಗಳು ಭಾವಪ್ರಪಂಚಕ್ಕೆ ಸೇರಿದುವು. ಇವುಗಳ ಸ್ವರೂಪವನ್ನು ಕುರಿತು ಹೇಳುವುದು ಕಷ್ಟ. ಆ ಕಷ್ಟತರ ಕೆಲಸವನ್ನು ಕವಿಯು ಅವುಗಳಿಗೆ ಅನುಗುಣವಾದ ಆಕಾಶದ ಘಟನೆಗಳಿಂದ ರೂಪಿಸಿ ತೋರಿಸುವ ಅತುಲ ಸಾಹಸವನ್ನು ಮಾಡಿ ಯಶಸ್ಸನ್ನು ಸಂಪಾದಿಸಿದ್ದಾನೆ.

● ಮಾನಸ ಸರೋವರ ಪು. ೧೯

ಇದೇ ವಿಚಾರವನ್ನು— ಉದಾತ್ತೀಕರಣವನ್ನು ಹೊಂದಿ ಅವ್ಯಕ್ತವಾದ ಆನಂದರೂಪವಾದ ವಿಚಾರಶಕ್ತಿಯನ್ನು— ಗಗನದಿಂದ ಹಳ್ಳಿಯ ಚಾವಡಿಗೆ ಕರೆತಂದು "ಚಿತ್ತವೊಂದು ಚಾವಡಿ" ಎಂದು ಉಸುರಿದ್ದಾರೆ. ಆ ಚಾವಡಿಯಲ್ಲಿ ಯಾವಾಗಲೂ ಗಲಭೆ, ಗಡಿಬಿಡಿ. ಅಲ್ಲಿ ಗರ್ವವೆಂಬ ಗೌಡ, ಆಶೆ ಎಂಬ ಶಾನುಭೋಗ, ದಾಸಬುದ್ಧಿ ಓಲೇಕಾರ, ಚಂಚಲತೆಯ ತಳವಾರ, ಪಂಚೇಂದ್ರಿಯಗಳೆ ಪಂಚರು. ಇಲ್ಲಿ ಜನರು ಬರುವರು, ಜಗಳಗಳನ್ನು ತರುವರು, ವಾದಮಾಡಿ ದಣಿವರು, ಬೋಧೆಮಾಡಿ ಕುಣಿಸರು. ಎಂಥ ಹೊಸಕಾಲ ಬಂದರೂ ಶಾಸನ ಸಭೆಗಳು ಮೂಡಿದರೂ,

ಅದೇ ಆಶೆ ಅಮಿಷ
ಅದೇ ಮೊದಲಿನ ತಾಮಸ
ಅದೇ ಹಳೆಯ ಚಾವಡಿ
ಅದೇ ಹಳೆಯ ಗಡಿಬಿಡಿ
ಚಿತ್ತವೊಂದು ಚಾವಡಿ ಅಲ್ಲಿ ಗಲಭೆ ಗಡಿಬಿಡಿ! *

ನಡೆಯುತ್ತಲೇ ಇದೆ. ಮಾನವನ ಮನೋವೃತ್ತಿಯಲ್ಲಿ ಏನೂ ವ್ಯತ್ಯಾಸವಾದಂತೆ ಕಾಣುವುದಿಲ್ಲ. ಮೂಲ ಪ್ರವೃತ್ತಿಯಲ್ಲಿ ಉದಾತ್ತೀಕರಣವೇ ತೋರುವುದಿಲ್ಲ. ಇದನ್ನು ಕಂಡು ಯಾವ ಸಹೃದಯಿಗೆ ನೋವಾಗಲಿಕ್ಕಿಲ್ಲ? ಅಂತಲೇ ಅವನ "ಮನ ಮಸಣ" ವೆನಿಸಿದರೆ ಬಲ್ಲವರು ಹಳಹಳಿಸುವ ಕಾರಣವಿಲ್ಲ. ಸುತ್ತಲೂ ನೀಚತೆ, ದೌರ್ಜನ್ಯ, ನಗ್ನ ಕಾಮ, ಸ್ವಾರ್ಥಗಳೇ ಕುಣಿಯುತ್ತಿವೆ. ವಿಶ್ವಾಸ, ನೀತಿ, ಆದರ್ಶ, ಸಮತೆಗಳು ಅವುಗಳ ಪಾದತಳದಲ್ಲಿ ಹೂಳಿ ಹೋಗುತ್ತಿವೆ. ಈ ಮಸಣದಲ್ಲಿ "ಕಲೆಗಳ ಕೊಳೆತ ಹೆಣಗಳನು ಒಲವಿನ ತಲೆಬುರುಡೆಯನ್ನು!" ನೀನು ಕಾಣುವಿ.

ಇಸ್ಸಿ......
ಏನು ದುಸ್ಸಹ ದುರ್ವಾಸನೆ!
ಇದು ನರಕ
ಈ ಲೋಕದ ನರಕ!
ಎಲ್ಲ ಲೋಕಗಳ ಎಲ್ಲ ಗಂಧಗಳ ತಂದರೂ
ಹೋಗದೀ ದುರ್ಗಂಧ,

* ಮಾನಸ ಸರೋವರ ಪು. ೫೨



ಓ ಸ್ವಾರ್ಥಾಂಧ
ದುಷ್ಕಾಮ ತಮಂಧ!

* * * *

ಮೂಗು ಮುಚ್ಚು! ಮೂಗು ಮುಚ್ಚು!
ಹುಚ್ಚ, ಎಲ್ಲಿಯವರೆಗೆ ಮುಚ್ಚುವೆ?
ಮೂಗು ಮುಚ್ಚು,
ಉಸಿರುಗಟ್ಟಿ ಸಾಯಿ!
ಮುಚ್ಚದಿರು
ಈ ದುರ್ಗಂಧ ಕುಡಿದು ಸಾಯಿ! ●

ಇಂಥ ದುರ್ಗಂಧಯುಕ್ತ ಈ ಮಸಣದಲ್ಲಿಯೇ ಹಿಂದೆ ಸ್ನೇಹ, ಸಹಕಾರ, ಸದ್ಗುಣಗಳ ನಂದನವನವು ಬೆಳೆದಿತ್ತು. ಮತ್ತೆ ಅಂಥ ವನವನ್ನು ಬೆಳೆಸುವುದು ಸಾಧ್ಯ. ಅದಕ್ಕೆ ನಿನಗೆ ನೀನೇ ಗುರುವಾಗಬೇಕು. ನಿನ್ನನ್ನು ನೀನೇ ಸರಿಪಡಿಸಿಕೊಳ್ಳುವವನು. ಅನ್ಯರು ಬಂದು ನಿನ್ನನ್ನು ಉದ್ಧರಿಸಲಾರರು. ಅದರಿಂದ ನಿನ್ನ ರಾಕ್ಷಸ ಭಾವವು "ಮಾನಸಕೆ ನೊರೆ" ಯಿಡಲಿ.

ಬಾ, ಪರುಷ ಬಾರ
ಓ ಹರುಷ ಬಾರ
ಪ್ರತಿ ನಿಮಿಷ ಜನಿಸಿ ಬಾರ!
ರಸವರ್ಷ, ಜೀವ-
ದುತ್ಕರ್ಷ ಬಾರ
ಸಂಘರ್ಷವಳಿಸು ಬಾರ! *

ಹೀಗೆ ಅಂತರಂಗದ ಕದವನ್ನು ತೆರೆದು ನೊರೆಯಿಟ್ಟಾಗ ಒಳಗಿರುವ ಒಲವು, ಮಲಗಿರುವ ಚೆಲುವುಗಳೆಲ್ಲ ಚೇತರಿಸಿ "ಮೈಮುರಿದು ಮೇಲೇಳು" ವವು. "ಹೃದಯದ ಹುಲ್ಲೆ" ಯು ಅವನ-ಶಿವನ-ನಿರ್ಲಕ್ಷ್ಯದಲ್ಲಿಯೂ ಕೂಡ ಅರ್ಪಣದ ವೀಣೆಯನ್ನು ನುಡಿಸುತ್ತಲೇ ಇರುವುದು. ಜಿಗಿಯುತ್ತಲೇ ಇಹುದು —ನೆಗೆಯುತ್ತಲೇ ಇಹುದು!

● ಮಾನಸ ಸರೋವರ ಪು. ೭೭–೭೮
* " " ಪು. ೨೮.

ಇಂಥ ಅಂತರಂಗದ ವಿಕಾಸವೇ ಕಾವ್ಯ ಬೀಜದ ಮೊಳಕೆಗೆ ಹೊಲವಾಗಿದೆ, ಹರಗಿದ ಹೊಲವಾಗಿದೆ. ಅಂದಮೇಲೇನು? "ಕಾವ್ಯಾನಂದ" ರ ಬೆಳೆಯು ಹುಲುಸಾಗಿಯೇ ಬಂದಿದೆ, ಇನ್ನೂ ಬಂದೀತು. ಅಲ್ಲಿಯ ಸೀತೆನೆ ಗಳನ್ನು ಸವಿಯುವ ರಸವಕ್ಕಿಗಳ ಬಳಗ ಹೆಚ್ಚಾಗಬೇಕು. ಹಿಂಡುಗಟ್ಟಿ ಬರಬೇಕು. ರಸವನ್ನುಂಡು ತಣಿಯಬೇಕು, ನಲಿಯಬೇಕು. ಅಂದರೆ ಕನ್ನಡ ನಾಡಿನಲ್ಲಿ ಕಾವ್ಯದ ಬೆಳೆಯು ಇನ್ನೂ ಹೆಚ್ಚುವುದು. ಕನ್ನಡ ತಾಯಿಯ ಸಿರಿ ಕಳೆಯು ಬೆಳಗುವುದು, ತೊಳಗುವುದು. ಅದರಲ್ಲಿಯೇ ಕನ್ನಡಿಗರ ಆನಂದವಿದೆ, ಉತ್ಕರ್ಷವಿದೆ.

ಶಾಂತಿ ಸೇವಾ ಸದನ
ಶೇಡಬಾಳ

—❋—



# ಕಲ್ಲೋಲಮಾಲೆ

ಸ. ಸ. ಮಾಳವಾಡ

ಪ್ರತಿಭೆ, ಪಾಂಡಿತ್ಯ, ವೃದ್ಧಸೇವಾನುರಾಗಗಳಿಂದಾಗಿ ಕಾವ್ಯಾನಂದರು ಕಾವ್ಯಶಕ್ತಿಯನ್ನು ಪಡೆದವರಾಗಿದ್ದಾರೆ. ಸಂವೇದನಾಶೀಲವಾದ ಕವಿಮನದ ಜಲಾಶಯವಲ್ಲಿ ಆಗಾಗಿನ ಸೃಷ್ಟಿ ನಿರೀಕ್ಷಣೆ, ಲೋಕಾನುಭವ ಇವುಗಳನ್ನು ಕುರಿತು ಚಿಂತನೆಯ ಅಲೆಗಳನ್ನು ಎಬ್ಬಿಸಿದೆ. ಹಾಗೆ ಎದ್ದ ಅಲೆಗಳನ್ನು ಸುಂದರವಾಗಿ, ಸಮರ್ಥವಾಗಿ ಅಭಿವ್ಯಕ್ತಿಗೊಳಿಸಿ "ಕಲ್ಲೋಲಮಾಲೆ" ರಚಿಸಿ ಕನ್ನಡ ಓದುಗರಿಗೆ ಒದಗಿಸಲಾಗಿದೆ.

ನಮ್ಮ ನಾಡಿನ ಸುಸಂಸ್ಕೃತ-ವ್ಯಕ್ತಿಗಳಲ್ಲಿ ಕಾವ್ಯಾನಂದರ ಸ್ಥಾನ ಎತ್ತರದಲ್ಲಿದೆ. ಅವರು ಬಿತ್ತರದ ಪಾಂಡಿತ್ಯ ಗಳಿಸಿದ್ದಾರೆ. ಬಾಳಿನ ವಿಶಾಲವಾದ ಅನುಭವ ಅವರಿಗೆ ಒದಗಿ ಬಂದಿದೆ. ಹಿರಿದಾದ ಪದಪ್ರಭುತ್ವವೂ ಅವರಿಗೆ ಸಾಧಿಸಿದೆ. ಸುಂದರ ಕಲ್ಪಕತೆಯನ್ನು, ಗಭೀರ ಚಿಂತನೆಯನ್ನು ಅವರು ರೂಢಿಸಿಕೊಂಡಿದ್ದಾರೆ. ಇವೆಲ್ಲವುಗಳ ಫಲವಾಗಿ ರೂಪುಗೊಂಡಿರುವ "ಕಲ್ಲೋಲಮಾಲೆ" ಯು ಕನ್ನಡ ಕವನ ಲೋಕದಲ್ಲಿ ವಿಶಿಷ್ಟ ಸ್ಥಾನಕ್ಕೆ ಅರ್ಹವಾಗಿದೆ.

ರಾಜರತ್ನಂರ "ಹನಿಗಳು" ದಿವಾಕರರ "ಅಂತರಾತ್ಮನಿಗೆ" ಕುವೆಂಪು ಅವರ "ಕಿಂಕಿಣಿ" ಇವುಗಳ ರುಚಿ ಒಂದೊಂದು ವಿಧ. "ಕಲ್ಲೋಲ ಮಾಲೆ" ಇನ್ನೊಂದು ವಿಧದ ರುಚಿಯನ್ನು ಕನ್ನಡಕ್ಕೆ ತಂದಿದೆ. ಅದು ಇಂದಿನ ಸಾರ್ವಜನಿಕ ಬಾಳಿಗೆ ಕನ್ನಡಿ ಹಿಡಿದಿದೆ; ವ್ಯಕ್ತಿಗತ ಬಾಳಿಗೆ ಬೆಳಕನ್ನು ತಂದಿದೆ. ಸುತ್ತಣ ಬಾಳಿನಲ್ಲಿಯ ಅಟ್ಟಹಾಸ, ಮೌಲ್ಯ ರಹಿತ ವ್ಯವಹಾರ ಆತ್ಮವಂಚನೆ-ಪರವಂಚನೆಗಳ ವ್ಯರ್ಥ ಸಾಹಸ ಇವುಗಳಿಂದ ವ್ಯಗ್ರಮನಸ್ಕರಾಗುವುದು ಒಂದು ಹಾದಿ. "ಕಲ್ಲೋಲ ಮಾಲೆ" ಯನ್ನು ರಚಿಸಿಕೊಂಡು ತನಗಾಗಿ, ಇತರರಿಗಾಗಿ ಸಾಂತ್ವನ ಬೆಳಕುಗಳನ್ನು ಕಂಡುಕೊಳ್ಳುವುದು ಎರ

ಡನೆಯ ಹಾದಿ. ಈ ಬಗೆಯ ಎರಡನೆಯ ಪ್ರಯೋಜನಕಾರಿಯಾದ ಹಾದಿಯಲ್ಲಿ ಕಾವ್ಯಾನಂದರು ಸಾಗಿದ್ದಾರೆ. ಕ್ಷಣದಲ್ಲಿ ಮಿಂಚಿ ಮಾಯವಾಗುವ ಭಾವಲಹರಿಗಳನ್ನು, ಆಲೋಚನಾ ತರಂಗಗಳನ್ನು ಹಿಡಿದಿಟ್ಟು ಅವುಗಳಿಗೆ ಸುಂದರ ರೂಪು ಕೊಟ್ಟು ಅವು ಬಹುಕಾಲ ಉಳಿಯುವಂತೆ " ಕಲ್ಲೋಲಮಾಲೆ " ರಚಿಸಿದ ಕಾವ್ಯಾನಂದರು ಕನ್ನಡಿಗರ ಕೃತಜ್ಞತೆಗೆ ಪಾತ್ರರಾಗಿದ್ದಾರೆ. ಈ ಪುಸ್ತಕವು ಪ್ರಕಟಗೊಂಡ ಬಗೆಯು ಸುಂದರವೂ ವೈಶಿಷ್ಟ್ಯಪೂರ್ಣವೂ ಆಗಿದೆ.

ನವ್ಯಕಾವ್ಯದ ಈ ಕಾಲದಲ್ಲಿ ಇದೊಂದು " ಸತ್ಕಾವ್ಯ." ಅಪಕ್ವ ಇಲ್ಲವೆ ವಿಕೃತ ಅನುಭವದ ನಿರೂಪಣೆಯೋ " ಸ್ವಂತಿಕೆ " ಯೆಂಬ ಭ್ರಮೆಯು ಬೆಳೆದು ಬರುತ್ತಿರುವಾಗ ಈ " ಅನುಭಾವ ಗೀತ " ಸಂಕಲನವು ಪರಿಶುದ್ಧ ಅಭಿರುಚಿಯನ್ನು, ಪಕ್ವ ಅನುಭವವನ್ನು, ರಮಣೀಯ ಅಭಿವ್ಯಕ್ತಿಯನ್ನು ಒದಗಿಸುವಂತಿದೆ. ಈಗ "ಚುಟುಕುಗಳು" ಹೆಚ್ಚಾಗಿ ಬರುತ್ತಿವೆ. ರವೀಂದ್ರನಾಥ ಠಾಕೂರರ Stray Birds ದ ಮಾದರಿ ನಮ್ಮ ಮುಂದೆ ಇದೆ. ಕಾವ್ಯಾನಂದರು ಈ ದಿಸೆಯಲ್ಲಿ ಸಾಗಿ ಯಶಸ್ವಿಯಾಗಿದ್ದಾರೆ. ಬಿಡಿ ಬಿಡಿಯಾದ ಉಕ್ತಿಗಳಿಂದ, ಸಂಕ್ಷಿಪ್ತ ಚಿತ್ರಣದಿಂದ, ಸಂಕೇತಗಳಿಂದ ಉತ್ಕಟ ಭಾವ–ಆಲೋಚನೆಗಳನ್ನು ಇಲ್ಲಿ ನಿರೂಪಿಸಲಾಗಿದೆ. " ಜನತಾ " " ಸ್ವಾತಂತ್ರ್ಯ " " ಫೇರಾವ " ಯುಗದಲ್ಲಿ ಬಾಳಿನ ಮೌಲ್ಯಗಳೇ ತಲೆ ಕೆಳಗಾಗುವ ಭಯವಿದೆ. ಆದುದರಿಂದ ಬಾಳಿನ ಅರ್ಥವನ್ನು, ಘನತೆಯನ್ನು, ಮೌಲ್ಯಗಳನ್ನು " ಕಲ್ಲೋಲಮಾಲೆ " ಯಲ್ಲಿ ಕಮನೀಯವಾಗಿ ಚಿತ್ರಿಸಿದ ಕಾವ್ಯಾನಂದರು ಒಳ್ಳೆಯ ಮಟ್ಟದ ಲೋಕಸೇವೆಗೈದಿದ್ದಾರೆಂದು ನಾನು ಭಾವಿಸುತ್ತೇನೆ.

೨

ಆಧುನಿಕ ಯುಗದ ಮಾನವನನ್ನು ಕುರಿತ ಕವಿಯ ಚಿತ್ರಣವಿದು:

ವಾನರನು ನರನಾದ ಉತ್ಕ್ರಾಂತಿಯಲ್ಲಿ
ನರನು ವಾನರನಾದ ನವ ಕ್ರಾಂತಿಯಲ್ಲಿ
ಸಕಲ ಸಂಪದ ಬಂತು–ಶಾಂತಿಯೆಲ್ಲಿ ?
ಜೀವನವೆ ಸಾಗಿಹುದು ಬರಿ ಭ್ರಾಂತಿಯಲ್ಲಿ !

ನವಯುಗದ ಬಾಳಿನಲ್ಲಿ ಭ್ರಾಂತಿ ತುಂಬಿರಬಹುದು. ಆದರೆ ಶಾಂತಿಯನ್ನು



ಅರಸುವುದು ಕವಿಯ ಗುರಿ. ನಮ್ಮೆಲ್ಲರ ಗುರಿಯೂ ಆಗಬೇಕು. ಆ ದಿಶೆಯಲ್ಲಿ ಸಾಗಿದ ಕವಿಯು, ಭ್ರಾಂತಿಯು ಏಕೆ ಮತ್ತು ಹೇಗೆ ತುಂಬಿದೆಯೆಂಬುದರ ವಿಶ್ಲೇಷಣೆಗೆ ತೊಡಗುತ್ತಾನೆ.

ಇಂದಿನ ಸಾರ್ವಜನಿಕ ಜೀವನವನ್ನು ಕುರಿತ ಕವಿಯ ವ್ಯಾಖ್ಯಾನವಿದು:

ಒಳತಿಗೆ ವನವಾಸ ಬಂತು
ರಾಜಕೀಯ ದ್ಯೂತದಿ
ಕೆಡುಕಿಗೆ ಅಧಿಕಾರ ಬಂತು
ಅಧಿಕ ಜೀವ ಜಾತದಿ

ಕೆಡುಕಿಗೆ ಅಧಿಕಾರ ಬಂತು ಒಳಿತಿಗೆ ವನವಾಸ ಬಂದುದನ್ನು ಇಂದಿನ ಸಾರ್ವಜನಿಕ ರಂಗದಲ್ಲಿ ನಾವು ಕಾಣುತ್ತೇವೆ.

ಪಂಚಶೀಲ ಪಾಂಚಾಲಿಯ
ವಸ್ತ್ರಹರಣ ನಡೆದಿದೆ
ದುರ್ಯೋಧನ ದುಶ್ಶಾಸನ
ರಟ್ಟಹಾಸ ನಡೆದಿದೆ
ಹಾಗಿದ್ದರೆ ಮುಂದೇನು ಗತಿ ?
ತಾಳು ಧರ್ಮ–ದ್ರೌಪದಿ
ಮುಗಿಯಲಿದೆ ಪಣದ ಅವಧಿ
ಬರುವ ಪುಣ್ಯ ಪಾರ್ಥನಿಗೆ
ಋತದ ಪಾರ್ಥಸಾರಥಿ

ಅಧರ್ಮದ ಅಟ್ಟಹಾಸ ಕೆಲಕಾಲ ಸಾಗುತ್ತಿದೆ. ಧರ್ಮ–ದ್ರೌಪದಿಯು ತಾಳಿಕೊಳ್ಳಬೇಕು. ಋತವನ್ನು ಸ್ಥಾಪಿಸುವ ಪಾರ್ಥಸಾರಥಿ ಬಂದೇ ಬರುತ್ತಾನೆ. ಇದು ಕವಿಯ ಆಶ್ವಾಸನ. ಈ ಬಗೆಯ ಆಶ್ವಾಸನವಿಲ್ಲವಾದರೆ ಬಾಳು ಅಸಹನೀಯವಾಗುತ್ತಿದೆ. ಬಾಳನ್ನು ಸಹ್ಯಗೊಳಿಸುವ ಪಾತ್ರ ಕವಿಯದು.

ಜೀವನದ ವಿಚಿತ್ರ ದೃಶ್ಯಾವಳಿಯನ್ನು ಕಂಡು ಮಾನವ ಭಯಚಕಿತನಾಗಬಹುದು. ಆದರೆ ಪಕ್ಕಕ್ಕೆ ಸರಿದು ಬಾಳನ್ನು ಪರಿಕಿಸುವ ದೃಷ್ಟಿಯನ್ನು ಕವಿಯು ಒದಗಿಸುತ್ತಾನೆ.

ಇಂದಿನ ಸಾರ್ವಜನಿಕ ಜೀವನದಲ್ಲಿ ಭ್ರಷ್ಟಾಚಾರ ತಲೆಯೆತ್ತಿದೆ. ಅದನ್ನು ಕುರಿತು ಕವಿಯ ಚಿತ್ರಣ ಹೀಗೆ ಮೂಡಿ ಬಂದಿದೆ.

ಕೀಳು ರಾಜ ಕಾರಣಿ
ಹತ್ತು ಮುಖದ ರಾವಣ
ಸ್ವಾರ್ಥಶೂರ್ಪನಖಿಯ ಮಾತ-
ಕೇಳಿ ಸುಗುಣವೆಂಬ ಸೀತೆ-
ಯನ್ನು ಕದ್ದು ದುರುಳತನದಿ
ಇಟ್ಟು ಬಿಟ್ಟ ಶೋಕವನದಿ

ಸಾರ್ವಜನಿಕ ಜೀವನನಿಂದ ಸುಗುಣವೆಂಬ ಸೀತೆ ಮರೆಯಾಗಿದ್ದಾಳೆ. ಆದುದರಿಂದ ಸಂಸ್ಕೃತಿಯೆಂಬ " ಶ್ರೀರಾಮ ಹಲಬುತಿಹ ವನವನದಿ " ಈ ಪರಿಸ್ಥಿತಿಯಲ್ಲಿ ಏನು ಮಾಡುವುದು ? ಕಾವ್ಯಾನಂದರ ಉತ್ತರ ಹೀಗೆ:

ಸಾಹಿತ್ಯದ ಆಂಜನೇಯ
ಹುಡುಕಿ ಬಾರೊ ಹಾರಿ ಜಲಧಿ
ಸುಗುಣವೆಂಬ ಸೀತೆಯ
ಪೂತೆ ಖ್ಯಾತೆ ತ್ರಾತೆಯಾ

ಸಾಹಿತ್ಯವೀಗ ಆಂಜನೇಯನಾಗಬೇಕು. ಜಲಧಿಯನ್ನು ಹಾರಿ ಸುಗುಣವೆಂಬ ಸೀತೆಯನ್ನು ಹುಡುಕಿ ತರಬೇಕು. ಸುಗುಣ ಸೀತೆ ಸಂಸ್ಕೃತಿ ಶ್ರೀರಾಮ ಇವರಿಬ್ಬರ ಪುನರ್ಮಿಲನವಾಗುವದಿಸೆಯಲ್ಲಿ! ಸಾಹಿತ್ಯವು ತನ್ನ ಪಾತ್ರವಹಿಸಬೇಕಾಗಿದೆ. ಈ ಬಗೆಯ ಪಾತ್ರವನ್ನು " ಕಲ್ಲೋಲಮಾಲೆ " ನಿರ್ವಹಿಸುತ್ತಿದೆ. ಸಾರ್ವಜನಿಕ ಬಾಳಿನಲ್ಲಿ ಸುಗುಣವನ್ನು ವ್ಯಕ್ತಿಗತ ಬಾಳಿನಲ್ಲಿ ಆತ್ಮಬಲವನ್ನು ತಂದುಕೊಡುವ ದಿಸೆಯಲ್ಲಿ ಈ ಕೃತಿಯು ಸಹಾಯಕಾರಿಯಾಗಿದೆ. ರಾಮಾಯಣ ಮಹಾಭಾರತಗಳ ಸಂದೇಶವನ್ನು ನವೀನವಾಗಿ ಚಿತ್ರಿಸುತ್ತಿದೆ. ಬಾಳನ್ನು ಇಡಿಯಾಗಿ ಕಂಡು ಸಮುಚಿತವಾಗಿ ಅರ್ಥಯಿಸಿಕೊಳ್ಳುವ ದೃಷ್ಟಿಯನ್ನು ನೀಡುತ್ತಿದೆ.

ಬಾಳಿನಲ್ಲಿ "ಗುಡುಗು ಸಿಡಿಲುಗಳಷ್ಟೇ ಇಲ್ಲ! ಇಂದ್ರಚಾಪವೂ ಇದೆ." ಆದರೆ ನಾವು ಕಣ್ತೆರೆದು ನೋಡಬೇಕು. ಮಾನವನ " ಹೃದಯ ಸಮುದ್ರದಲ್ಲಿ, ಮೀನು ಮೊಸಳೆಗಳಷ್ಟೆ ಇಲ್ಲ, ಮುತ್ತು ರತ್ನಗಳೂ ಇವೆ." ಆದರೆ ನಾವು ಹುಡುಕಿ ನೋಡಬೇಕು. ಮೇಲು ಪದರಿನ ದೃಶ್ಯವನ್ನು ಕಂಡು ಮಾನವ ಭಯಚಕಿತನಾಗಬಹುದು. ಆದರೆ ಆಳದಲ್ಲಿ ಅಡಗಿದ ಗೂಢ ಸತ್ಯವನ್ನು ನಾವು ಕಂಡುಕೊಳ್ಳಬೇಕು:



ಒಳ್ಳೆಯದು ಎಲ್ಲವೂ
ಆಗೊಮ್ಮೆ ಈಗೊಮ್ಮೆ
ಜೀವನವು ಸಾಗುವದು
ಹಾಗೊಮ್ಮೆ ಹೀಗೊಮ್ಮೆ

ಬಾಳು ಒಂದೇ ಬಗೆಯಾಗಿಲ್ಲ ನಿಜ. ಆದರೆ ಬಾಳಿನ ಹಿಂದೆ ಅವಿತಿರುವ ಪರಮ ಸತ್ಯವು ಒಂದೇ ಆಗಿರುವುದನ್ನು ನಾವು ಅರಿತುಕೊಳ್ಳಬೇಕು:

ಸೋಲಿನ ಸರ್ಪದ ಹೆಡೆಯಲ್ಲಿ ಗೆಲವಿನ ರತ್ನವಿದೆ
ಶೋಕದ ತಂತಿಯಲ್ಲಿ ಅಶೋಕದ ಆಲಾಪನೆಯಿದೆ
ನಿರಾಶೆಯ ಬಸಿರಿನಲ್ಲಿ ಆಶೆಯ ಬೀಜವಿದೆ

ವಿರೋಧಾಭಾಸದಂತೆ ತೋರುವ ಉಕ್ತಿಗಳಿಂದಲೂ ಕವಿ ಆಳವಾದ ಅರ್ಥವನ್ನು ಹೊರಹೊಮ್ಮಿಸಬಲ್ಲ.

ಅಭಾವವನ್ನು ಹೇಗಾದರೂ ಸಹಿಸಿಕೊಳ್ಳಬಹುದು
ಸಮೃದ್ಧಿಯನ್ನು ಸಹಿಸಿಕೊಳ್ಳುವದೇ ಕಷ್ಟ
; . . . . . . . . .
ಬಡತನವನ್ನು ಹೇಗಾದರೂ ಸಹಿಸಿಕೊಳ್ಳಬಹುದು
ಒಡೆತನವನ್ನು ಸಹಿಸಿಕೊಳ್ಳುವುದೇ ಕಷ್ಟ

ಇಂದಿನ ಅಮೇರಿಕೆಯ ಐಹಿಕ " ಸಮೃದ್ಧಿ " ಯನ್ನು ಭಾರತದ ರಾಜಕೀಯ ರಂಗದ " ಒಡೆತನ " ವನ್ನು ಗಮನಿಸುವಾಗ ಮೇಲ್ಕಂಡ ಮಾತುಗಳು ಅರ್ಥಪೂರ್ಣವೆನಿಸುತ್ತಿವೆ.

ಮಾನವೀಯ ಬಾಳಿನಲ್ಲಿ ವಿವಿಧ ಮುಖಗಳಿವೆ:

ಶೈಶವ " ಲೀಲಾಲೋಲೆ "
ಬಾಲ್ಯ " ಕ್ರೀಡಾ ಶೀಲೆ "
ತಾರುಣ್ಯ " ಒಲವಿನ ಉಯ್ಯಾಲೆ "
ವಾರ್ಧಕ್ಯ " ಅನುಭವದ ಕಣ್ಣು ಮುಚ್ಚಾಲೆ "

ಆದರೆ ಜಗತ್ತು ಕೂಗಿ ಹೇಳುತ್ತದೆ: " ನಾನು ಕರ್ತವ್ಯದ ಯಜ್ಞ ಶಾಲೆ " ಶ್ರೀಅರವಿಂದರುಹೇಳಿದ್ದಾರೆ. ಕರ್ತವ್ಯ ನಿರತನಾಗಿರುವುದು ಸಾಮಾನ್ಯ ಬಾಳಿನ ಗುರಿ ದೈವೀಸಾಕ್ಷಾತ್ಕಾರದ ಪಥದಲ್ಲಿ ಸಾಗುವುದು ಆಧ್ಯಾತ್ಮ ಜೀವನದ ಗುರಿ.

ಇಲ್ಲಿಯ ಕವನಗಳಲ್ಲಿ ನಾವು ಅರ್ಥಪೂರ್ಣತೆ, ಅನುಭವ ಗಮ್ಯತೆ, ನುಡಿಯ ರಮ್ಯತೆಗಳನ್ನು ಕಾಣುತ್ತೇವೆ:

ದಿಟ, ಚೆಲುವು, ಒಲವು.
ಬಾಳ ಬನಕ್ಕೆ ಮೂರು ಫಲಗಳು:
ಒಲಿ, ಒಲಿಸು, ಕೂಡಿ ನಲಿ.
ಬಾಳಿನ ಆಗಸದ ಮೂರು ನಕ್ಷತ್ರಗಳು:
ಸ್ನೇಹ, ಸೈರಣೆ ಸಮತೆ.
ಬಾಳ ಕಡಲಿನ ಮೂರು ಮುತ್ತುಗಳು:

ಹೂವು ಅರಳುತ್ತಿರುವಾಗ ಸುತ್ತಣಿಂದ ಹಲವಾರು ಹಂಬಲಗಳು ಹೊರಹೊಮ್ಮಿ ಬರುತ್ತಿವೆ:

ಗಾಳಿ: ನನಗೆ ನಿನ್ನ ಗಂಧ ಬೇಕು.
ಭ್ರಮರ: ನನಗೆ ನಿನ್ನ ಮಧು ಬೇಕು.
ಚಿಟ್ಟೆ: ನಿನ್ನ ಮುತ್ತು ಬೇಕು.
ಕೀಟ: ನನಗೆ ನಿನ್ನನ್ನು ಕೊರೆವುದೇಬೇಕು.

ಆಗ ಹೂ:

ಹುಟ್ಟಿದ ತಪ್ಪಿಗೆ
ಎಷ್ಟು ಜನರನ್ನು ತುಷ್ಟಿಗೊಳಿಸಬೇಕು
ಇನ್ನು ಬಹಳ ಹೊತ್ತು ಬದುಕಬಾರದು ಎಂದಿತು

ಸವಿ ಬೆಳಕುಗಳ ಸಂಗಮವಾಗಿರುವ ಕಲ್ಲೋಲಮಾಲೆಯ ಕವನಗಳು ಉದಾತ್ತ ನೀತಿಯನ್ನು ತಂತ್ರವನ್ನು ನಿರೂಪಿಸುತ್ತಿವೆ:

ಎತ್ತರದಲ್ಲಿರುವ ಹಿಮಶಿಖರದ ಹೆಮ್ಮೆಯ ಮಾತಿಗೆ ಕೆಳಗಿರುವ ಮಣ್ಣು ಹೇಳುತ್ತಿದೆ:

" ಹರಿದು ಬರಲು ಹಗುರಾಗಲೆಂದೇ ಹರ ನಿನ್ನನ್ನು ಎತ್ತರದಲ್ಲಿರಿಸಿ-ದ್ದಾನೆ. ಬಿಮ್ಮಿನಿಂದ ಬೀಗಲೆಂದಲ್ಲ!"

ಸ್ಥಾನಬಲದಿಂದ ಬಿಮ್ಮನೆ ಬೀಗುವ ಮಾನವರು ಗಮನಿಸಬೇಕಾದ ಮಾತಿದು.

ಮೇಲೆ ಮರ ಚಲಿಸಿದರೆ
ಚಲಿಪ ಚಂಚಲ ಛಾಯೆ
ನಿನಗೆ ಗತಿ ಶೀಲತೆಯ ಗರ್ವ ಬೇಡ

ಪರಮಾತ್ಮನ ಶಕ್ತಿಯಿಂದ ಸಾಗಬೇಕಾದಾಗ ಮಾನವನಿಗೆ ಎಚ್ಚರಿಕೆಯಿದು.

ಅಹಂಕಾರವನ್ನು ಮೆರೆಯುವ ಹವ್ಯಾಸವುಳ್ಳ ಜನವನ್ನು ಕುರಿತು ರೂಪಕವೊಂದು ಹೀಗೆ ಮೂಡಿ ಬಂದಿದೆ.

ಮೋಡಗಳೆ,.....................ನಾವು ರವಿಶಶಿಗಳನ್ನು ಮರೆಮಾಡಬಲ್ಲೆ-



ವೆಂಬುದನ್ನು ತೋರುವ ಹವ್ಯಾಸವೇ ನಿಮಗೆ ? ತೋರಿರಿ. ಎಷ್ಟು ಹೊತ್ತು ತೋರುವಿರಿ !

ಮೋಡಗಳ ರೂಪು ಆಚ್ಛಾದನೆ ಕ್ಷಣಿಕವಷ್ಟೇ. ಅಂತೆಯೆ ಸಾರ್ವಜನಿಕ ರಂಗದ ಪದಾಧಿಕಾರಿಗಳ ಬಗೆ. ಹೀಗೆ ರೂಪಕ, ಅನ್ಯೋಕ್ತಿ ವಿಡಂಬನಗಳ ಮೂಲಕ ಮಾರ್ಮಿಕ ಅರ್ಥವನ್ನು ಕವಿ ಹೊರಹೊಮ್ಮಿಸಬಲ್ಲ. ನೇರವಾಗಿ ಮೂಡಿಬಂದ ಮಾತುಗಳೂ ಇವೆ.

ಸುಳ್ಳಿಗಿಹುದು ನೂರು ದಾರಿ
ಸತ್ಯಕೊಂದೆ ದಾರಿ
. . . . . . .
ಜಗದ ಭಾಷೆ ನೂರು ವಿಧ
ಹೃದಯ ಭಾಷೆಯೊಂದೆ

ಹೃದಯುದ ಭಾಷೆಯನ್ನು; ಸತ್ಯದ ದಾರಿಯನ್ನು ಮರೆತವರಿಗೆ ಮತ್ತೆ ಮತ್ತೆ ಈ ಮಾತು ಹೇಳಬೇಕಾಗಿದೆ.

" ಏಕ ", " ಅನೇಕ " ಗಳ ಮೀಮಾಂಸೆಯಿಂತಿದೆ:
ಕೂದಲ ನೋಡಿ ಪ್ರಕೃತಿಪೂಜಕ ಅಂದ: ಅನೇಕ, ಅನೇಕ
ಜೈತಲ ನೋಡಿ ದ್ವೈತಿ ಅಂದ: ಎರಡು ಎರಡು
ತುರುಬು ನೋಡಿ ಅದ್ವೈತಿ ಅಂದ: ಏಕ, ಏಕ.
ಇಡಿಯಾಗಿ ತಲೆಯನ್ನು ಕಂಡಭಕ್ತ ಅಂದ: ಒಂದು, ಒಂದು.
ಇದನ್ನು ವಿವರಿಸುವ ಮಾತೂ ಬಂದಿದೆ:

ಸಾವಿರಾರು ಲಕ್ಷ ಅಲೆಯು
ಸಿಂಧು ಮಾತ್ರ ಒಂದೇ
ಒಂದು ಒಡೆಯೆ ಮೂರೋ ನೂರೋ
ಒಂದು ಮಾತ್ರ ಒಂದೇ

ಗಹನ ತತ್ವವನ್ನು ಹಗುರಗೊಳಿಸುವ ನುಡಿಗಳಿವು. ರೂಢವಾಗಿರುವ ಕಲ್ಪನೆಗೆ ಹೊಸ ದೃಷ್ಟಿ ಕೊಡುವ ಮಾತುಗಳೂ ಇವೆ. ತ್ರಿಪುಟಿಯ ಉದಾಹರಣೆ ನೋಡಬೇಕು.

ಯಾರು ಅಹಿತರು ನಿನಗೆ ಈ ಮೂವರೊಳಗೆ
ನೀನಿತ್ತ ಕಸ ನುಂಗಿ ರಸವನೀಯುವ ಮಣ್ಣೋ ?

ಬೆಂಕಿಯೊಳು ಸುಟ್ಟು ಅಲಂಕಾರವಾಗುವ ಹೊನ್ನೋ ?
ಬಾಳ ಹಣತೆಯೊಳೆಣ್ಣೆಯಾಗಿ ಉರಿಯುವ ಹೆಣ್ಣೋ ?
ಯಾರು ಅಹಿತರು ನಿನಗೆ ಈ ಮೂವರೊಳಗೆ ?
ಪ್ರಾಣದೇವನ ಸಾಕಿ ಸಲುಹುತಿಹ ತನುವೊ ?
ಮೂಲೋಕದೊಡೆಯನನೆ ಮಡಗಿಕೊಳ್ಳುವ ಮನವೊ ?
ತನ್ನನಿತ್ತು ಹಿತವೀವ ಧನವೊ ?
ಯಾರು ಅಹಿತರು ನಿನಗೆ ಈ ಮೂವರೊಳಗೆ ?

ದೃಷ್ಟಿಯಲ್ಲಿಯ ಕಿಲ್ಮಿಷವನ್ನು ವಸ್ತುವಿಗೆ ಏಕೆ ಆರೋಪಿಸ
ಕವಿಯ ಸವಾಲು.

ಗಳ ಮೂಲಕವೂ ಕವಿ ತತ್ವ ಬೋಧಿಸುತ್ತಾನೆ :

ಕೇದಗೆಯ ಚಂದನದ ಗಂಧವನು ಬಯಸುವೊಡೆ
ಸರ್ಪಗಳ ವಿಷದಂತಕಂಜಬೇಡ
ಜೇಂಗೊಡದ ಸವಿ ಜೇನಿನಾಸ್ವಾದ ಬಯಸುವೊಡೆ
ಜೇನು ಹುಳಗಳ ಕಡಿತಕಂಜಬೇಡ
ಜೀವನದ ಮಾಧುರ್ಯ ಸೌಂದರ್ಯ ಬಯಸುವೊಡೆ
ಜೀವನದ ಕಹಿ ವಿಕೃತಿಗಂಜಬೇಡ

struct delightfully ಎಂಬ ಸೂತ್ರಕ್ಕೆ ಮಾದರಿಯಾಗಿದೆ.
ದ ಸಂವಾದವನ್ನು ಕವಿ ಬಳಸುತ್ತಾನೆ.

ಕ್ಕೆ—
ರಾಶೆಯೋ ನಿನಗೆ, ಅನವರತ ಅಲೆಗಳಲ್ಲಿ ಚಡಪಡಿಸುತ್ತ
ೀ ಇರುವಿ. ನನ್ನ ಐಶ್ವರ್ಯ ನೋಡಿ ಅಸೂಯೆಯೆ ?"

ಕ್ಕೆ—
ನುರಾಶೆಯೋ ನಿನಗೆ—ಲೆಕ್ಕವಿಲ್ಲದ ಚಿಕ್ಕೆ ಕಣ್ಣುಗಳನ್ನು
ಡುತ್ತಲೇ ಇರುವಿ. ನನ್ನ ಮುತ್ತು ರತ್ನಗಳ ಮೇಲೆ ಕಣ್ಣಿ

ಅಸಹ್ಯವೆನಿಸಿರುವ ಅಮಾವಾಸ್ಯೆಯೆ, ಕತ್ತಲೆಯಿಂದ ಬೆಳ
ಯಾವಾಗ ಕಲಿಯುವೆ ?"



ಅಮಾವಾಸ್ಯೆ—

"ನಾನು ಚಂದ್ರನಿಗೆ ಜನ್ಮವಿತ್ತರೆ ನೀನವನ ಕ್ಷಯಕ್ಕೆ ಕಾರಣವಾಗುವೆ. ಯಾರು ಕತ್ತಲೆಯಿಂದ ಬೆಳಕಿನೆಡೆಗೆ ನಡೆಯುವರೆಂಬುದನ್ನು ನೀನೇ ನಿರ್ಣಯಿಸು."

ತಡಸಲು—

"ನನ್ನ ವೇಗ ಹೆಚ್ಚು."

ಕಾರಂಜಿ—

"ಕೆಳಗಿಳಿಯುವುದು ಸುಲಭ, ಮೇಲೇರುವದು ಕಷ್ಟ."

ಜ್ಞಾನ—

"ನನಗೆ ತಿಳಿದಿದೆ."

ಅಜ್ಞಾನ—

"ನಾನೂ ಇದೇ ತಪ್ಪನ್ನು ಮಾಡಿ ಅಜ್ಞಾನವಾದೆ."

ಮಾತು—

"ನನ್ನ ಶಬ್ದ ಕಿವಿ ಗಡಚಿಕ್ಕಿಸುತ್ತದೆ."

ಕೃತಿ—

"ನನ್ನ ಮೌನ ನಿನ್ನ ಸದ್ದಡಗಿಸುತ್ತದೆ."

ಬದನೆಕಾಯಿ ಹಾಗಲಕಾಯಿಗೆ—

"ಒಳಗೆ ವಿಷವಿದ್ದರೂ ಹೊರಗೆ ವೇಷ ಚೆನ್ನಾಗಿದೆ ನಿನಗೆ, ಹಾಗಲಕಾಯಿ ! ದುರ್ಜನರೆಲ್ಲ ಹೀಗೆಯೇ !"

ಹಾಗಲಕಾಯಿ ಬದನೆಕಾಯಿಗೆ—

"ನಾನು ಅಧರಕ್ಕೆ ಕಹಿ, ಉದರಕ್ಕೆ ಸಿಹಿ, ಬದನೆಕಾಯಿ, ನೀನು ಮಾತ್ರ ಅಧರಕ್ಕೆ ಸಿಹಿ, ಉದರಕ್ಕೆ ಕಹಿ ! ಯಾರು ದುರ್ಜನರು ನೀನೇ ನಿರ್ಣಯಿಸು !"

ಕಸ್ತೂರಿಮೃಗ—

"ನಾನೆಂಥ ಬೆಪ್ಪು, ಕಸ್ತೂರಿ ನಾಭಿಯಲ್ಲಿಯೇ ಇದ್ದರೂ ಇನ್ನೆಲ್ಲಿಯೋ ಇರಬೇಕೆಂದು ಅಡವಿ ಅಡವಿ ಅಲೆದೆ."

ಮನುಜ—

“ನಿನಗಿಂತ ಚಿಪ್ಪು ನಾನಿಲ್ಲಿದ್ದೇನೆ. ಈ ಮೃಣ್ಮಯದಲ್ಲಿಯೇ ಚಿನ್ಮಯನಿದ್ದರೂ ಅವನಿಗಾಗಿ ಕ್ಷೇತ್ರ ತೀರ್ಥಗಳನೆಲ್ಲಾ ಅಲೆದು ಬಂದೆ !”

ಮೃಣ್ಮಯದಲ್ಲಿ ಚಿನ್ಮಯನಿರುವನೆಂಬುದನ್ನು ಎತ್ತಿ ಹೇಳುವ ಕಾರ್ಯವನ್ನು ಋಷಿಗಳು, ಶರಣರು, ಕವಿಗಳು ಹೇಳುತ್ತ ಬಂದಿದ್ದಾರೆ. ಮನುಜನ ಚಿಪ್ಪುತನ ಇನ್ನೂ ಕಡಿಮೆಯಾಗಿಲ್ಲವೆಂದು ತೋರುತ್ತಿದೆ. ಅಂತೆಯೆ ಆ ಮಾತನ್ನು ಮತ್ತೆ ಮತ್ತೆ ಹೇಳಬೇಕಾಗಿದೆ.

ಗಹನ ತತ್ವವನ್ನು ಬೋಧಿಸುವ ಕವಿ ಸರಸ ದಾಂಪತ್ಯವನ್ನು, ಸರಳ ಸುಖವನ್ನು ಮರೆತಿಲ್ಲ.

ಪ್ರೀತಿ ತುಳುಕುವ ಮನೆಯೆ ಸ್ವರ್ಗವು
........ ........ ........

ಘನತರವು ಗಾರ್ಹಸ್ಥ್ಯ ಯೋಗವು
ಪ್ರೀತಿಸಿರೆ ದಂಪತಿಗಳು

— — —

ನನಗೆ ಅಮೃತ ಬೇಕಿಲ್ಲ
ಮಡದಿ ಕಡೆದೀವ ಮಜ್ಜಿಗೆಯೆ ಸಾಕು !

........ ........ ........
........ ........ ........

ಸುಧೆಯೆ ಬೇಕೆನುವೆ ಸುರಸುಂದರಿಯು ಬೇಕಿಲ್ಲ
ರೊಟ್ಟಿ ತಟ್ಟುವ ಸರಳ ಸತಿಯೆ ಸಾಕು !

ಹೂವು–ಕವಿ ಸಂವಾದದಲ್ಲಿ ಕವಿದೃಷ್ಟಿಯು ಸ್ಪಷ್ಟವಾಗಿ ಮೂಡಿ ಬಂದಿದೆ.

ಸದ್ಭಾವ ಸುಗಂಧ ಕಲ್ಪಾಂತರ ಸ್ಥಾಯಿ
ವಿಚಾರಬಿಂದು ಅಕ್ಷಯ
ಮನದ ಚೆಲುವು ಅವಿನಾಶಿ

ಅಂತೆಯೆ ಕವಿಯು ಹೇಳುತ್ತಾನೆ.

ಮನದೊಳಗೆ ಬೆಳಿಸೈ
ಮನದ ಚೆಲುವಿನ ಸಿರಿ ಬೆಳೆ



ಮನದ ಚೆಲುವಿನ ಸಿರಿ ಬೆಳೆಯನ್ನು ಬೆಳಿಸುವ ಆವಶ್ಯಕತೆ ಎಂದಿಗಿಂತ ಇಂದು ಹೆಚ್ಚಾಗಿದೆ. ಮನದ ಮಲಿನತೆಯೆ ಇಂದು ಹುಲುಸಾಗಿ ಬೆಳೆಯುವ ಸನ್ನಿವೇಶಗಳು ತಲೆದೋರಿವೆ.

ಕವಿತೆಯ ಸೊಬಗಿನೊಂದಿಗೆ ಬೆಲೆ ಬಾಳುವ ಸಂದೇಶವನ್ನು ಕಾವ್ಯಾನಂದರು ನಮಗೆ ಒದಗಿಸಿದ್ದಾರೆ.

ಮೆಲ್ಲಮೆಲ್ಲನೆ ತೀಡು ಗಾಳಿಯೆ
ಮೊಗ್ಗು ತುಟಿಗಳ ತೆರೆಯಲಿ
ಮೆಲ್ಲಮೆಲ್ಲನೆ ಕುಟ್ಟು ಗೆಳತಿಯೆ
ಅಕ್ಕಿ ಕೌಡನು ತೊರೆಯಲಿ

........ ........ ........

ಮೆಲ್ಲಮೆಲ್ಲನೆ ಅರಳು ಜೀವನ
ಶೀಲಸೌರಭ ಸುರಿಯಲಿ

ಮನದ ಮಲಿನತೆಯಿಂದ ಶೀಲಸೌರಭದತ್ತ ಮನುಜನಿಂದು ಸಾಗಬೇಕಾಗಿದೆ.

ಹಣ್ಣಾಗದಿಹ ಹೂವೆ ಸಣ್ಣಾಗದಿರು ಮನದಿ
ಮಣ್ಣಾಗಿ ಹೋಗದೇ ಹಣ್ಣು ಕೂಡ ?

........ ........ ........

ಹೆಸರಾಗದಿಹ ಜೀವಿ ಬಸವಳಿಸದಿರು ಮನದಿ
ವಿಸ್ಮೃತಿಯನಪ್ಪದೆ ಹೆಸರು ಕೊನೆಗೆ

ಹೆಸರಿನ ಹಪಾಪಿ ಬೆಳೆದ ಈ ಕಾಲದಲ್ಲಿ ಈ ಬಗೆಯ ಸಂದೇಶ ಉಪಯುಕ್ತವಾದೀತು. ಇರುವ ಹೆಸರುಗಳನ್ನು ಮರೆ ಮಾಡಿ ತಮ್ಮ ಹೆಸರನ್ನು ಬರೆಯಿಸಿಕೊಳ್ಳುವ ಭೂಪರಿದ್ದಾರೆ.

ಈ ಬಂಡಿಗೆ ಯಾವ ಎತ್ತುಗಳನ್ನು ಹೂಡಲಿ ?
ಈ ರಥಕ್ಕೆ ಯಾವ ಕುದುರೆಗಳನ್ನು ಕಟ್ಟಲಿ ?
ಈ ಕ್ಷಿಪಣಿಗೆ ಯಾವ ನಿಯಂತ್ರಕನನ್ನು ನಿಯಮಿಸಲಿ ?

ಹಲವಾರು ಬಗೆಯ ಚಟುವಟಿಕೆಗಳು, ಸಂಘಟನೆಗಳು, ಅವಿಶ್ರಾಂತ ಯೋಜನೆಗಳು, ಕುಯುಕ್ತಿಗಳು ನಡೆದ ಈ ಕಾಲದಲ್ಲಿ ಇಂತಹ ಪ್ರಶ್ನೆಗಳು ಅನಿವಾರ್ಯ. ಕವಿಯು ಉತ್ತರಗಳನ್ನು ಗಮನಿಸುವುದು.

ಹೂಡುವವನೆ,

ಹೂಡು ನಿನ್ನನೆ ಮೊದಲು ಹದುಳದ ಬಂಡಿಗೆ

ಕಟ್ಟುವವನೆ,

ಕಟ್ಟು ನಿನ್ನನೆ ಮೊದಲು ಲೇಸಿನ ರಥಕೆ

ನಿಯಮಿಸುವವನೆ

ನಿಯಮಿಸು ಮೊದಲು

ನಿನಗೊಬ್ಬ ನಿಯಂತ್ರಕನನ್ನು

"ಹದುಳದ ಬಂಡಿ" "ಲೇಸಿನ ರಥ" "ನನ್ನನ್ನು ನಾನೇ ನಿಯಂತ್ರಿಸುವುದು"—ಇವು ಇಂದು ಬೇಕಾಗಿವೆ. Double Talk, Double Think, ಒಳಗೊಂದು ಹೊರಗೊಂದು ರೀತಿ ಇವುಗಳನ್ನು ಹೊಡೆದೋಡಿಸಬೇಕು. ಈ ಬಗೆಯ ಪರಿಸರ ಸುತ್ತಲೂ ವ್ಯಾಪಿಸಿ ಕತ್ತಲೆ ಕವಿದಂತಾಗಿರಬಹುದು. ಆದರೂ ಏನಂತೆ ?

"ಬಡ ದೀಪವೇ ಸುತ್ತುಮುತ್ತಿರುವ ಕತ್ತಲೆಯಲ್ಲಿ
ಏಕೆ ಮಿಣಮಿಣನೆ ಮಿಣುಕುತ್ತಲಿರುವೆ ?"
"ಕತ್ತಲೆಯ ಕಾಳಕರಾಳ ಗರ್ಭದಲ್ಲಿಯೂ ಬೆಳಕು
ಬದುಕಬಲ್ಲದೆಂಬುದನ್ನು ತೋರಿಸಲು"

ಮಿಣಮಿಣನೆ ಮಿಣುಕುವ ಬಡದೀಪ ಒಬ್ಬೊಬ್ಬರೂ ನಾವಾಗಬೇಕು. ಕತ್ತಲೆಯ ಕಾಳಕರಾಳ ಗರ್ಭದಲ್ಲಿಯೂ ಬೆಳಕು ಬದುಕಬಲ್ಲದೆಂಬುದನ್ನು ತೋರಿಸುವ ಧೀರ ನಿಲುವೆಯನ್ನು ತಳೆಯಬೇಕು. ಇಂತಹ ನಿಲುವೆಯನ್ನು ತಳೆಯುವಲ್ಲಿ "ಕಲ್ಲೋಲಮಾಲೆ" ಉತ್ಸಾಹ ಪ್ರೋತ್ಸಾಹ, ಪ್ರಚೋದನೆಗಳನ್ನು ಒದಗಿಸುತ್ತಿದೆ. ಅಲ್ಲದೆ ಅದು ಪ್ರಬೋಧಕವೂ, ಪ್ರಮೋದಕವೂ ಆಗಿದೆ.

ಧಾರವಾಡ



## ಮೊದಲು ಮಾನವನಾಗು

ಪಾಂಡುರಂಗ ಕುಲಕರ್ಣಿ.

ಕನ್ನಡ ಸಾಹಿತ್ಯ ಸಾಗರದಲ್ಲಿ ನವ್ಯದ ಗಾಳಿ ಬೀಸಿ– ಬಿರುಗಾಳಿಯಾಗಿ ಅಲ್ಲೋಲ ಕಲ್ಲೋಲವಾದ ಸಂಕ್ರಮಣ ಕಾಲದಲ್ಲಿ ಕನ್ನಡ ಕಾವ್ಯ ರಸಿಕರಿಗೆ ದಿಗ್ಭ್ರಮೆಯಾಗುವದು ಸಹಜ. ಐತಿಹಾಸಿಕ ಅನಿವಾರ್ಯತೆಯ ಹೆಸರಿನಲ್ಲಿ– ಕಾವ್ಯದಲ್ಲಿ ವೈಯಕ್ತಿಕತೆ ತಲೆದೋರಿ ಚಿತ್ರ ವಿಚಿತ್ರ ಪ್ರತಿಮೆ, ಗೂಢವಾದ ಭಾಷೆ, ಜೀವನದ ಸಂಕೀರ್ಣತೆಯನ್ನು ರೂಪಿಸುವ ಅವಸರದಲ್ಲಿಯೇ ಅರ್ಥವಾಗದ ಅಸ್ಪಷ್ಟತೆ ಇವು ನವ್ಯಕಾವ್ಯದಲ್ಲಿ ಮೂಡಿ ಬಂದಿವೆ. ಸರ್ವ ಸಾಮಾನ್ಯ ಕನ್ನಡ ಕಾವ್ಯ ರಸಿಕರಿಗೆ ಇದರಿಂದ ದಿಕ್ಕು ತಪ್ಪಿದಂತಾಗಿದೆ. ನವ್ಯ ಕಾವ್ಯದ ಅವಶ್ಯಕತೆ, ಅನಿವಾರ್ಯತೆ, ಮುಂತಾದ ವಿಷಯಗಳು ಇರಲಿ, ಸಧ್ಯಕ್ಕೆ ಸಮಕಾಲೀನ ಭಾವನೆಗಳನ್ನು ಸುತ್ತಲಿನ ಜೀವನದ ಆಗುಹೋಗುಗಳನ್ನು, ರಾಜಕೀಯ, ಸಾಮಾಜಿಕ ಸ್ಥಿತ್ಯಂತರಗಳನ್ನು ಸರಳವಾಗಿ ತಿಳಿಯುವಂತೆ, ಕಾವ್ಯರಚನೆ ಗೈಯ್ಯುವದು ಅವಶ್ಯವೆಂದೇ ನನ್ನ ಭಾವನೆ. ಈ ದೃಷ್ಟಿಯಿಂದ ಕಾವ್ಯಾನಂದರ "ಮೊದಲು ಮಾನವನಾಗು" ಕವನ ಸಂಗ್ರಹವು ತೀರ ಯಶಸ್ವಿಯಾಗಿದೆ ಎಂಬುದು ಸಂಶಯಾತೀತವಾದ ಸತ್ಯವಾಗಿದೆ.

ಸ್ವಾತಂತ್ರ್ಯವು ದೊರೆತು ಕಾಲುಶತಮಾನ ಕಳೆದರೂ "ಸ್ವತಂತ್ರ" ಪ್ರಜ್ಞೆ ನಮ್ಮಲ್ಲಿ ಮೂಡಿ ಬಂದಿಲ್ಲ. ಸ್ವಾತಂತ್ರ್ಯದ ಉಪಭೋಗದಲ್ಲಿ ಅನಿವಾರ್ಯವಾದ ಅಡೆತಡೆಗಳು, ಸದಾ ಜಾಗ್ರತವಾಗಿ ಉಳಿಯಬೇಕಾದ ಸ್ವತಂತ್ರ ಪ್ರಜ್ಞೆ ಇವು ಇನ್ನೂ ಮೈಗೂಡಿಲ್ಲ. ಈ ಸಂಗ್ರಹದಲ್ಲಿಯ "ಬಿಡುಗಡೆಯ ಬದುಕಿನಲಿ ನಚ್ಚಿರಲಿ" ಎನ್ನುವ ಕವಿತೆ ಈ ಮಾತನ್ನು ಸುಂದರವಾಗಿ ನಿರೂಪಿಸುತ್ತದೆ.

ಹಣ್ಣೆಲ್ಲ ತನಗೆಂಬ ಸಣ್ಣತನ ಬಿಟ್ಟು ಬಿಡು
ಹೊಟ್ಟೆ ಬಂದೀತೊಂದೇ ಹಣ್ಣಿನಿಂ ಬೀಗಿ
ವನವು ಘನ ತರು ಬಹಳ ಫಲ ವಿಪುಲ–
ಕರುಬೇಕೆ ಕೊರಗೇಕೆ ಹೊಟ್ಟೆಯುರಿಯೇಕೆ?
ವನದಗಲ ಮನವಿರಲಿ ದೊಡ್ಡ ದೃಷ್ಟಿಯು ಬರಲಿ
ಬಿಡುಗಡೆಯ ಬಾಳಿನಲಿ ಅಲ್ಪತನವೇಕೆ?

ಸ್ವಾತಂತ್ರ್ಯದ ನಂತರ ಸ್ವಾರ್ಥವೇ ಬೆಳೆದು, ವಿಶಾಲವಾಗಿ ಉನ್ನತವಾಗಿ ಬೆಳೆಯಬೇಕಾದ ನಮ್ಮ ದೇಶದ ಮರಕ್ಕೆ ಹುಳ ಹತ್ತಿ ನಮಗೆ ಆಶ್ರಯವಾದ ಮರವೇ ಹಾಳಾಗುತ್ತಿದೆ ಎನ್ನುವ ಕೊರಗು "ಮರಗೂಳುಣಿ" ಎನ್ನುವ ಇನ್ನೊಂದು ಕವನದಲ್ಲಿ ವ್ಯಕ್ತವಾಗಿದೆ. ತಮಗೆ ಆಶ್ರಯವಾದ ಮರವನ್ನೇ ತಿನ್ನುವ ಈ ಸ್ವಾರ್ಥದ ಕೀಟಗಳಿಗೆ ಕವಿಗಳು ಸರಿಯಾದ ಎಚ್ಚರಿಕೆ ನೀಡಿದ್ದಾರೆ.

ಮರಗೂಳಿನಿಂದಲೇ ಬದುಕಿರುವ ಕೀಟಗಳೆ
ಮರವನ್ನು ಉಳಿಸಿ ನೀವೂ ಉಳಿಯಿರಿ
ಮರವಳಿದರೆ ನೀವೂ ಅಳಿವಿರಿ.........
ಎಂಥ ಮರಕೆ ಎಂಥ ಗತಿ ಬಂದಿದೆ!
ಯಾವ ವಿಧಿಯಿದಕೆ ಈ ಗತಿ ತಂದಿದೆ!

ದೇಶದ ಸ್ವಾತಂತ್ರ್ಯದ ನಂತರ ಕೇವಲ ವಿಷಮತೆಯೇ ಬೆಳೆದಿಲ್ಲ, ಹಾಕಿಕೊಂಡ ಕೈಗೂಡಿದ ಯೋಜನೆಗಳು ಅನೇಕ ರೀತಿಯಲ್ಲಿ ದೇಶದ ಮುನ್ನಡೆ, ಆಶಾ–ದಾಯಕವಾಗಿದೆ. "ತುಂಗಭದ್ರಾ ಜಲಾಶಯ ಈ ಮಾತನ್ನು ವಿವರಿಸುತ್ತದೆ.

ಭಾರತದ ಬಿಡುಗಡೆಯ ಮರದ ಬೇರೊಂದು
ಹೀರುತಿದೆ ನೀರನಿಲ್ಲಿ
ಹರಡಲಿದೆ ಆ ಮರದ ರೆಂಬೆಯೊಂದಕ್ಕೆ
ಇಲ್ಲಿ ಪಲ್ಲವಿಸುತಿಹ ಸಮೃದ್ಧಿ-ವಲ್ಲಿ
ಈ ಕಲ್ಪವೃಕ್ಷದ ಎಲ್ಲ ಬೇರುಗಳಿಗೆ
ಇಂಥ ನೀರಿನಾಸರ ದೊರೆತರೆ–
ಈ ಸುರ ತರುವಿನ ಎಲ್ಲ ರೆಂಬೆಗಳಿಗೆ
ಇಂಥ ಕಲ್ಪವಲ್ಲಿ ಹರಡಿದರೆ–



ಕಿಚ್ಚು ಹಚ್ಚಿಂದ ಸ್ವರ್ಗಕ್ಕೆ
ಸುರರೆ ಬರಬಹುದು ಭಾರತದ ಮಾರ್ಗಕ್ಕೆ

ಇದು ದೇಶದ ಪರಿಸ್ಥಿತಿಯಾದರೆ, ಸ್ವಂತ–ಶಕ್ತಿಯನ್ನು ಬೆಳೆಸಿಕೊಳ್ಳುವ ಮುಂದುವರಿದ ದೇಶಗಳ ವೈಜ್ಞಾನಿಕ ಪ್ರಗತಿಯು ಮನುಕುಲಕ್ಕೆ ಮಾರಕವಾದ ಅಸ್ತ್ರಗಳನ್ನು ನಿರ್ಮಿಸುತ್ತಿದೆ. ಈ ಪ್ರಗತಿಯ ಅತಿರೇಕವು–ಒಂದು ಆಕಸ್ಮಿಕ ತಪ್ಪಿನಿಂದಲೇ–ಲೋಕಸಂಹಾರಕವಾಗಬಲ್ಲುದು. ಅಂತಹ ಸ್ಥಿತಿಗೆ ಮಾನವನು ಇಳಿಯಬಾರದು. ಎನ್ನುವ ಮಾತನ್ನು ತುಸು ನವ್ಯದ ರೀತಿಯಲ್ಲಿಯೇ "ಒತ್ತು ಗುಂಡಿಯ ಮೇಲೆ ಬೆರಳು" ಎನ್ನುವ ಇನ್ನೊಂದು ಪದ್ಯ ಸಮರ್ಥವಾಗಿ ನಿರೂಪಿಸುತ್ತದೆ.

"ಹಿಂದೆಂದು ಇನಿತೊಂದು ಜೀವಿಗಳ ಭವಿತವ್ಯ
ಒಂದೆ ಬೆರಳಿನ ಕ್ರಿಯೆಯ ನವಲಂಬಿಸಿತ್ತು?
ಹಿಂದೆಂದು ಇನಿತೊಂದು ಮಾರಕಾಸ್ತ್ರವ ಪಡೆದ
ದೇಶದೆದೆಯೇ ಅದುರಿ ಕಂಪಿಸಿತ್ತು?..............
ಎತ್ತೆತ್ತಲೂ ಶಸ್ತ್ರರಾಶಿಯಿದ್ದವರಿಗೇ ಭೀತಿ ಒಳಗೆ
ಇಲ್ಲ–ದವರಿಗೋ ಜನನ ಮರಣ ಪ್ರತಿ ಘಳಿಗೆ..............
ಭದ್ರತೆಯ ಹೆಸರಿನಲೆ ಅಧ್ರುವದ ಬೀಜಾರೋಪಣ–
ಒತ್ತು ಗುಂಡಿಯ ಜನನ"!

ಇದು ವಿನಾಶಿಕೆಗಳ ಜನನದ ಭಯಂಕರ ರೂಪವಾದರೆ, ನಾವು ಮಾಡಬೇಕಾದುದೇನು? ಅದಕ್ಕೂ ಉತ್ತರವಿದೆ.

"ಎಲ್ಲ ಯತ್ನವ ಮಾಡಿ ಒತ್ತು ಗುಂಡಿಯ ಬಳಿಗೆ
ಕೋತಿಬಾರದ ಹಾಗೆ ನೋಡಿಕೊಳ್ಳೋಣ
ಕೈ ಮೀರಿ ಕೋತಿ ಬಂದರೂ ಸಹಿತ ಅದಕೆ
ಹೆಂಡ ಸಿಕ್ಕದ ಹಾಗೆ ಏರ್ಪಾಟು ಮಾಡಿಕೊಳ್ಳೋಣ"

ಎಂತಹ ಸರಳ ರೀತಿಯಲ್ಲಿ, ಎಷ್ಟೊಂದು ಸುಂದರವಾದ ನಿರೂಪಣೆ ಕಾವ್ಯಾನಂದರ ಕಾವ್ಯವು ಜೀವಂತ ಕಾವ್ಯ ಎನ್ನುವದಕ್ಕೆ ಬೇರೆ ಸಾಕ್ಷಿ ಬೇಕೆ? ಇಂತಹ ಅನೇಕ ಸಾಲುಗಳನ್ನು ಉದಾಹರಿಸಬಹುದು.

ಯಾವ ಕಾಲದಲ್ಲಿಯೇ ಆಗಲಿ ಕವಿ ತನ್ನ ಸುತ್ತಲಿನ ಸಮಾಜದ ರೀತಿ

ನೀತಿಗಳ ಪ್ರಭಾವ, ಒಳಿತು ಕೆಡಕುಗಳ ಪರಿಣಾಮದಿಂದ ದೂರವಾಗಿ ಉಳಿಯಲಾರ. ಸಮಾಜ ಜೀವನದಲ್ಲಿ ಸಂಕುಚಿತ ವೃತ್ತಿಗಳು, ಕಿಡಿಗೇಡಿತನವೂ ಇರತಕ್ಕವುಗಳೇ ಈ ವಿಷಯಗಳನ್ನು ಕೂಡ ಕಾವ್ಯಾನಂದರ ಕಾವ್ಯ ಒಳಗೊಂಡಿದೆ. "ಯಾರೋ ಹೇಳಿದರು" ಅನ್ನುವ ಅವರ ಒಂದು ಪದ್ಯದ ಸಾಲುಗಳನ್ನು ನೋಡಿದರೆ ಸಾಕು.

"ಯಾರೋ ಹೇಳಿದರಂತ".
ಹೇಳ್ದೀನ ಮಾಡ್ತಾರ?
ಕಿವಿಗೊಡೋವ್ರು ಇರ್ತಾರಂತ
ಹೇಳೋವ್ರು ಹುಟ್ಟತಾರ

"ತನ್ನ ದೋಷವ ನೂರ ಬೆನ್ನ ಹಿಂದಿಟ್ಟು ತಾ" ಎನ್ನುವ ಸರ್ವಜ್ಞನ ವಚನದಂತೆ ಇತರರ ಬಗ್ಗೆ ಆಡಿಕೊಳ್ಳುವ ಜನರು ಯಾವಾಗಲೂ ಇರುತ್ತಾರೆ.

ಎಂಥಾ ಕಾಲದಾಗೂ
  ಇಂಥೋವ್ರು ಇದ್ದೇ ಇರ್ತಾರ............
ಸುದ್ದಿ ಸೂರಕ್ಕಗಳು
  ಚಾಡಿ ಚೌಡಪ್ಪಗಳು
ಇವರೆಂಥ ಸರದಾರರು
  ಇನ್ನೊಬ್ರ ಸುಖದ ದರೋಡೆ ಖೋರರು।

ಇದು ಒಂದು ರೀತಿಯಾದರೆ ಇಲ್ಲದ ಸುದ್ದಿ ಎಬ್ಬಿಸಿ ಅದರಿಂದ ಸ್ವಂತದ ಲಾಭ ಪಡೆಯುವವರಿಗೂ ಕೊರತೆಯಿಲ್ಲ ಅದನ್ನೂ, ಕಾವ್ಯವಾಗಿಸಿದ್ದಾರೆ ಕಾವ್ಯಾನಂದರು.

"ಇದೂ ಒಂದು ಸುದ್ದಿ–
ನಾಳಿಗದೇ ರದ್ದಿ".
ಜನದ ಮನದ ಮದ್ದು ಮನೆಗೆ
ಕಿಡಿಯ ನುಡಿವ ಸುದ್ದಿ
ಮಂಗ ಮತಿಗೆ ಮದ್ಯ ಕುಡಿಸಿ
ಚೇಳ ಕಡಿಪ ಸುದ್ದಿ
ನಂಬಿಕೆಗಳ ಹಾಲಿನಲ್ಲಿ
ಹುಳಿಯ ಹಿಡಿವ ಸುದ್ದಿ–



ಹೊಸೆಯೋ ಹೊಸ ಸುದ್ದಿ
ಮಾಡಿ ಬಿಡು ಪ್ರಸಿದ್ಧಿ

ಎಲ್ಲಿ ನೋಡಿದರೂ ಲಂಚದ ಮಾತು ಈಗ ಕೇಳ ಬರುತ್ತದೆ. ರಾಜಕೀಯ ಮುಂದಾಳುಗಳು, ಸಮಾಜ ಸೇವಕರು, ಸಾಮಾನ್ಯರು ಎಲ್ಲರ ಬಾಯಲ್ಲಿಯೂ ಈ ಮಾತು ಬರುತ್ತದೆ ಅಂದಮೇಲೆ ಕವಿಗೂ, ಇದು ಕಾವ್ಯದ ವಿಷಯವಾಗಬೇಕಲ್ಲವೆ? ಈ ಕೆಳಗಿನ ಸಾಲುಗಳಲ್ಲಿ ಕಾವ್ಯಾನಂದರು ಅದನ್ನು ಮೂಡಿಸಿದ್ದನ್ನು ನೋಡಬಹುದು.

ಪಾಲುಂಡು ಮೇಲುಂಬರೇ ?
  ಈಗ ನಡೆದಿದೆಯಲ್ಲ
ಪಾಲುಂಡೂ ಮೇಲುಂಬ ತನ್ನ
  ಪಾಲುಂಡೂ ಮೇಲುಂಬ ಭಂಡಾಟ
ಹೀಗುಣ್ಣುವವರ ಕೊಂಡಾಟ

ಹೀಗೆ ಪ್ರಾರಂಭವಾದ ಕಾವ್ಯ ಲಂಚಾವತಾರದ ವಿಡಂಬನೆಯನ್ನು ಹೃದಯ ಕ್ಕೊಪ್ಪುವಂತೆ ಮೂಡಿಸುತ್ತದೆ.

ಮಾಡದಿರು ಶಬ್ದ ಚಕಾರ
  ಪಾಲುಂಡು ಮೇಲುಂಬರೆ,
ಉಂಡವರೇನು ಧರ್ಮಲಂಡರೆ ?
  ಹೇಳಿಯೇ ಇದೆಯಲ್ಲ–
ಹುಚ್ಚು ಮುಂ......ಯ ಮದುವೆಯಲ್ಲಿ
  ಉಂಡವನೇ ಜಾಣ
ಉಣ್ಣದಿದ್ದವ ಕೋಣ ;

ಸ್ವಾತಂತ್ರ್ಯದ ನಂತರದ ಜೀವನದ ಅನುಭವಗಳು, ರಾಜಕೀಯ ಪ್ರಭಾವ, ಅಂತರ್ರಾಷ್ಟ್ರೀಯ ವಿಷಯಗಳು, ಸಮಾಜ ಜೀವನದ ವಿವಿಧ ಮುಖಗಳನ್ನು ಸಮರ್ಥವಾಗಿ ಚಿತ್ರಿಸಿದ ಕಾವ್ಯಾನಂದರು ಈ ಸಂಗ್ರಹದ ಇತರ ಕವಿತೆಗಳಲ್ಲಿ ವೈಯಕ್ತಿಕ ಚಿಂತನೆಯನ್ನೂ ಅಭಿವ್ಯಕ್ತಗೊಳಿಸಿದ್ದಾರೆ "ಮೊದಲು ಮಾನವನಾಗು" "ಕಾಲದ ಕರೆ" "ಅವಿಭಕ್ತಂ ವಿಭಕ್ತೇಷು" "ಬದುಕಗೊಡಿ" "ಕುರುಡಿ" ಮುಂತಾದ ಕವನಗಳಲ್ಲಿ ಕವಿಯು ಅನುಭವಿಸಿದ ವಿಷಯಗಳು ಚಿಂತನೆಯಾಗಿ ಮೂಡಿ ಬಂದಿವೆ.

ಜೀವನದ ವಿಷಮತೆಯನ್ನು ಸವಿದರೂ ಜೀವನ ನಿಷ್ಠೆಯಿಂದ ವಿಷವನ್ನೇ ರಸವಾಗಿ ಮಾಡುವ ಕೆಚ್ಚು ಬದುಕಬೇಕೆನ್ನುವವರಿಗೆ ಅವಶ್ಯ. "ಕೊಟ್ಟು ಬಿಡು ಕಾಲ" ಎನ್ನುವ ಕವಿತೆಯಲ್ಲಿ ಈ ವಿಷಯ ಬಂದಿದೆ.

ಕುಡಿದು ಬಿಟ್ಟೆನು ವಿಷವ
ಹೀರಿತೇನದು ಅಸುವ ?
ಇಲ್ಲ ನಿನಗೀಯೆ ನಾನು ಆಜಸವ !
ನನ್ನ ಜೀವನ ನಿಷ್ಠೆ
ನಿನ್ನ ವಿಷವನೆ ಹೀರಿ
ರಸವ ಮಾಡಿದುದನ್ನು
ನೋಡಿ ಬೆರಗಾಗು ಕಾಲ.
ನೋಡಿ ಬೆರಗಾಗು

ಸಮಾಜದಲ್ಲಿ ನಡೆಯುವ ಅನ್ಯಾಯಕ್ಕೆ ಕೊರತೆಯಿಲ್ಲ. ನ್ಯಾಯವನ್ನು ನೀಡುವವಳೇ ಕುರಡಿಯಾದರೆ ? ನಾವೆಲ್ಲರೂ ಅನ್ಯಾಯವನ್ನು ಸಹಿಸುತ್ತಲೇ ಬಂದಿದ್ದೇವೆ. ನ್ಯಾಯ–ಅನ್ಯಾಯಗಳನ್ನು ಸರಿಯಾಗಿ ತೂಗುವ ಗೌರಿ ಬರುವದೆಂದು ? ಎಂಬುವೇ "ಕುರುಡಿ" ಕವನದ ವಿಷಯ.

ತೂಗುತಲೆ ಬಂದಿರುವೆ ಯುಗಯುಗದಿ
ಮಾಡಿರುವರಾರು ನಿನ್ನ ತೂಕವ ನಿಗದಿ ?
ಒಪ್ಪುತಲೆ ಬಂದಿಹೆವು ನಿನ್ನ ತೂಕವ ನಾವು
ಚೌಕಶಿಯ ಮಾಡದಲೆ ! ಬೆಲ್ಲವೆಂದಿತ್ತೆ ಬೇವು !
ಎಂದು ಬರುವಳೋ ನಿನ್ನ
ಕೈಯ ತಕ್ಕಡಿಯನ್ನ
ಕಸಿದು ತೂಗುವ ಕಣ್ಣುಳ್ಳ ಗೌರಿ !

ಇಂದಿನ ಯುಗವು ವೇಗದ ಯುಗ. ಪ್ರತಿಯೊಂದಕ್ಕೂ ಅವಸರ. ನಾಗರಿಕತೆ ಬೆಳೆದಂತೆ, ನಗರಗಳು ವಿಸ್ತಾರವಾದಂತೆ ವೇಗವೇ ಜೀವನದ ಲಕ್ಷಣವಾಗುತ್ತಿದೆ. ಅತಿ ವೇಗವು ಆಪತ್ತುಗಳನ್ನು ತರಬಲ್ಲದು ಅಂತೆಯೇ "ನಿಂತು ಮುಂದೆ ಸಾಗು" (Halt and Proceed) ಎನ್ನುವದು ಕವಿಯ ಎಚ್ಚ
ಈ ವೇಗವು ಉನ್ನತಿಯ ಕಡೆಗೆ ಸಾಗದೆ ಅವನತಿಯತ್ತ ಧಾವಿಸುವದೇ ಕೊರಗು.



ಮೇಲೆರುವದು ತಡ
ಕೆಳಗಿಳಿಯಬಹುದು ಬಡಬಡ
ಈ ವೇಗ ಉನ್ನತಿಯ ಅಳತೆಗೋಲೆ ?
ಮೇಲೇರಿಕೆಗಿಂತ ಕೆಳಗಿಳಿವುದೆ ಮೇಲೆ
ಸ್ವರ್ಗಕ್ಕೇರಲು ಸಾಸಿರ ವರ್ಷ ಬೇಕು
ನರಕಕ್ಕಿಳಿಯಲು ನಿಮಿಷ ಮಾತ್ರ ಸಾಕು

ಅನೇಕ ಪ್ರಭಾವಗಳಿಗೆ ಒಳಗಾಗಿ ವ್ಯಕ್ತಿ ಜೀವನವಿಂದು ಅಸಹ್ಯವಾಗುತ್ತಿದೆ. ಸುತ್ತಲಿನ ಪರಿಸರದಿಂದ ದೂರ ಉಳಿದು ತನ್ನ ಬುದ್ಧಿ ಹೃದಯಗಳಿಗೆ ತೋಚಿದಂತೆ ಬಾಳುವದು ಪ್ರಜ್ಞಾವಂತ ಮನುಷ್ಯನಿಗೆ ಕಠಿಣವಾಗುತ್ತ ನಡೆದಿದೆ. ಈ ನೋವನ್ನು ಅನುಭವಿಸಿದ ಕವಿ "ಬದುಕಗೊಡಿ ನನ್ನನು ಬದುಕಗೊಡಿರಿ" ಎಂದು ಕೇಳುತ್ತಾನೆ.

ಘಟನೆ ನೀಡುವ ಮೂಲಭೂತ ಹಕ್ಕುಗಳಲ್ಲ
ನಟನೆ ನೀಡುವ ದಾನ ದಯೆಯ ಬಿಕ್ಕುಗಳಲ್ಲ
ಜೀವಿಸುವ ಹಕ್ಕನ್ನು ಮಾತ್ರ ಕೊಡಿರಿ
ನನ್ನ ಗೋಜಿಗೆ ನನ್ನ ಬಿಟ್ಟುಬಿಡಿರಿ
ಬದುಕಗೊಡಿ ನನ್ನನೂ ಬದುಕಗೊಡಿರಿ

ಹತ್ತು ಹದಿನೆಂಟು ಇಸಂ ಗಳು ಅವುಗಳ ಬಗ್ಗೆ ನಡೆಯುವ ಪ್ರಚಾರ ಜನರ ಮೇಲೆ ಒತ್ತಾಯದಿಂದ ಹೇರಲಾಗುವ ಅನೇಕ ವಿಚಾರಗಳು ಇವುಗಳಿಂದ ಮುಕ್ತಿ ಪಡೆದು ತನ್ನಷ್ಟಕ್ಕೆ ತಾನು ಬಾಳುವದು, ತನ್ನ ವಿಚಾರದಂತೆ ತನ್ನ ಜೀವನವನ್ನು ರೂಪಿಸಿಕೊಳ್ಳುವ ದುಸ್ತರವಾದ ಪರಿಸ್ಥಿತಿಯನ್ನು ಮೇಲಿನ ಕವಿತೆ ಸುಂದರವಾಗಿ ನಿರೂಪಿಸುತ್ತದೆ.

ಮೇಲೆ ಹೇಳಿದ ಅನೇಕ ಗೊಂದಲಗಳಿಂದ, ಪ್ರಭಾವಗಳಿಂದ ಮುಕ್ತಿ ಪಡೆದು ಮನುಷ್ಯ ಮನುಷ್ಯನಾಗಿ ಬಾಳಬೇಕಾಗಿದೆ. ಯಾವ ಕ್ಷೇತ್ರವನ್ನೇ ಆರಿಸಿಕೊಳ್ಳಲಿ, ಯಾವ ಧರ್ಮವನ್ನೆ ಆಚರಿಸಲಿ, ಸಾಹಿತಿ, ಕಲೆಗಾರ, ವಿಜ್ಞಾನಿ ಏನೇ ಆಗಿರಲಿ ಮೂಲತಃ ಮನುಷ್ಯನಾಗಿ ಬಾಳುವದೇ ಮುಖ್ಯವಾದದ್ದು. "ಮೊದಲು ಮಾನವ" ನಾಗಿ ಬಾಳುವದೇ ಮನುಷ್ಯನಲ್ಲಿರಬೇಕಾದ ಅತ್ಯವಶ್ಯವಾದ ಗುಣ. ಕಾವ್ಯಾನಂದರ ದೃಷ್ಟಿಯೂ ಇದೆ.

ಓದಿ ಬ್ರಾಹ್ಮಣನಾಗು
ಕಾದಿ ಕ್ಷತ್ರಿಯನಾಗು
ಶೂದ್ರ ವೈಶ್ಯನೇ ಆಗು
ದುಡಿದು ಗಳಿಸಿ
ಏನಾದರೂ ಆಗು
ನಿನ್ನೊಲವಿನಂತಾಗು
ಏನಾದರೂ ಸರಿಯೇ
ಮೊದಲು ಮಾನವನಾಗು

ಹೀಗೆ ಸಾಮಾಜಿಕ, ರಾಜಕೀಯ, ಬೌದ್ಧಿಕ ಜೀವನದ ವಿವಿಧ ಅನುಭವಗಳನ್ನು ಕಾವ್ಯವಾಗಿಸಿದ ಕಾವ್ಯಾನಂದರು ಮೇಲೆ ಉದಾಹರಿಸಿದ ಕವನಗಳಲ್ಲಿ ತಮ್ಮ ಅಂತರ್ಮುಖತೆಯನ್ನು ತೋರಿದ್ದಾರೆ. ಅನೇಕ ಕಾರಣಗಳಿಂದ, ಪ್ರಭಾವಗಳಿಂದ ಸಂಕೀರ್ಣವಾಗುತ್ತ ನಡೆದ ಜೀವನವನ್ನು ತಮ್ಮದೇ ಆದ ದೃಷ್ಟಿಯಲ್ಲಿ, ತಮ್ಮದೇ ಆದ ರೀತಿಯಲ್ಲಿ ಪ್ರತಿಬಿಂಬಿಸಿದ್ದಾರೆ. ಮೇಲೆ ವಿವರಿಸಿದ ಕವನಗಳಲ್ಲದೆ. "ಹೃದಯ ನಿಕ್ಷೇಪ" "ನೋಟ" ಮುಂತಾದ ಕವನಗಳು ತಮ್ಮದೇ ಆದ ಸೌಂದರ್ಯದಿಂದ ನಮ್ಮ ಮನಸ್ಸನ್ನು ಸೆರೆ ಹಿಡಿದರೆ, "ಭಾವದ ಲಕ್ಷ್ಮಿ ಬಾರಮ್ಮ" "ಬಸವನ ಬಳಕೇ" "ಬಾಗಿಲನು ತೆರೆಯೋ" ಎನ್ನುವ ಗೀತಗಳು ಕಾವ್ಯ ರಚನೆಯ ದೃಷ್ಟಿಯಿಂದಲೇ ಮಹತ್ವದ ಕವನಗಳಾಗಿವೆ. ಚೀನ, ಪಾಕಿಸ್ತಾನಗಳ ದಾಳಿಯ ಸಮಯದಲ್ಲಿ ಮೂಡಿ ಬಂದ ದೇಶ ಭಕ್ತಿ ಗೀತಗಳೂ ಇದರಲ್ಲಿವೆ. "ಸಹೃದಯನಿಗೆ" ಎನ್ನುವ ಕವನವು ಸಾಹಿತ್ಯ ಕಾವ್ಯ ವಿಷಯಕವಾದ ಕಾವ್ಯಾನಂದರ ದೃಷ್ಟಿಯನ್ನು ಸ್ಪಷ್ಟವಾಗಿಸುತ್ತದೆ.

"ಬಾಳ ಬೆತ್ತಲೆ ಚಿತ್ರ ಬಯಸಬೇಡ
ಚಂದಿರನ ಹಿಂಬದಿಯ ನೋಡಬೇಡ
ಸಹೃದಯ ನೋಡಬೇಡ"

ವಾಸ್ತವಿಕತೆಯ ಹೆಸರಿನಲ್ಲಿ"ನವ್ಯವಾಗಿ ಬರುತ್ತಿರುವ ಸಾಹಿತ್ಯ"ಮಣ್ಣಿನ ವಾಸನೆ ನೆಪದಲ್ಲಿ ಮೂಡಿ ಬರುತ್ತಿರುವ "ಕಾಮ" ಭಾವನೆಗಳು ಅದೇ ಸಾಹಿತ್ಯವೆನ್ನುವ ಹಟ, ಮುಂತಾದ ಮಾತುಗಳನ್ನು ಲಕ್ಷದಲ್ಲಿರಿಸಿದಾಗ ಕಾವ್ಯಾನಂದರು ಸಹೃದಯನಿಗೆ ಕಳಕಳಿಯಿಂದ ಬೇಡಿಕೊಂಡದ್ದು. "ಬಾಳ ಬೆತ್ತಲೆ ಚಿತ್ರ



ಬಯಸಬೇಡ" ಎಂಬ ಮಾತು ಅರ್ಥಪೂರ್ಣವಾಗಿದೆಯಲ್ಲದೆ ಕವಿಯ ಸುಸಂಸ್ಕೃತ ಜೀವನದೃಷ್ಟಿಯನ್ನು ತೋರಿಸುತ್ತದೆ.

ಇಷ್ಟೆಲ್ಲ ಹೇಳಿದ ಮೇಲೆ ಕಾವ್ಯಾನಂದರ ಭಾಷೆಯ ಬಗ್ಗೆ ಒಂದು ಮಾತು ಹೇಳಬೇಕು. ಯಾವ ವಿಷಯವನ್ನೇ ಆಗಲಿ. ಕಾವ್ಯವನ್ನಾಗಿಸುವಲ್ಲಿ ಕಾವ್ಯಾನಂದರು ಬಳಸಿದ ಭಾಷೆ ಹಿತಮಿತವಾದದ್ದು, ರಸಭರಿತವಾದದ್ದು. ಅಡೆ-ತಡೆಗಳಿಲ್ಲದೆ ಅವರ ಕವನಗಳು ಸುಂದರವೂ, ಬಂಧುರವೂ ಆಗಿವೆ. ಕಾವ್ಯಾನಂದರ ಕಾವ್ಯ ತರಂಗಿಣಿ ನಿರ್ಮಲವಾಗಿ, ಸುಲಲಿತವಾಗಿ ಹರಿಯುವ "ತಿಳಿನೀರಿನ ಪ್ರವಾಹ" ಅವರ ಕವನಗಳು ತಮ್ಮ ಜೀವಂತತನದಿಂದ ರಸಿಕರ ಹೃದಯವನ್ನು ಮುಟ್ಟುವದಷ್ಟೇ ಅಲ್ಲದೆ, ಯಾವ ಸದ್ದು-ಗದ್ದಲವಿಲ್ಲದೆಯೇ ನಮ್ಮ ಹೃದಯದಲ್ಲಿ ವಿಚಾರದ ಅಲೆಗಳನ್ನು ಎಬ್ಬಿಸಬಲ್ಲವು.

ಈ ರೀತಿ ಜೀವನಾನುಭವದ ವಿವಿಧ ಭಾವನೆಗಳನ್ನು ಕಾವ್ಯವಾಗಿಸಿದ ಕಾವ್ಯಾನಂದರ ಜೀವನ ನಿಷ್ಠೆ, ಆಶಾವಾದ, ಅನುಕರಣೀಯವಾದದ್ದು. ಐವತ್ತರ ಗಡಿ ದಾಟಿದ ಈ ಕವಿಯ ಹಂಬಲವೆಂದರೆ ಅರ್ಥಪೂರ್ಣವಾಗಿ ಬದುಕುವದು, ಹುಡುಕಿದ ಅರ್ಥವನ್ನು ಕಾವ್ಯವಾಗಿಸುವದು ಈ ದೃಷ್ಟಿಯಿಂದ ಅವರ "ನೊರೆ" ಎನ್ನುವ ಕವಿತೆಯನ್ನು ನಾನು ವಿಶೇಷವಾಗಿ ಮೆಚ್ಚಿಕೊಂಡಿದ್ದೇನೆ.

"ಇರವಿಗೊಂದು ಗುರಿಯ ತೋರು
ಅದನೆ ಬೇಡಿಕೊಳ್ಳುವೆ
ಬದುಕಿಗೊಂದು ಅರ್ಥ ತೋರು
ಅದನೆ ಹಾಡಿ ಕೊಳ್ಳುವೆ"

ಇಲ್ಲಿಯವರೆಗೆ ನಡೆಸಿದ "ಮೊದಲು ಮಾನವನಾಗು" ಕವನ ಸಂಗ್ರಹದ ಹಕ್ಕಿನೋಟವು ಈ ಸಂಗ್ರಹದ ಸಮಗ್ರವಾದ ಅಭ್ಯಾಸವೇನೂ ಅಲ್ಲ. ಅಂತಹ ಕೂಲಂಕಷವಾದ ಮತ್ತು ವಿವರವಾದ ಅಭ್ಯಾಸಕ್ಕೆ ಈ ವಿವೇಚನೆ ಪ್ರಚೋದಕವಾಗಬಲ್ಲುದೆಂದು ನನ್ನ ಭಾವನೆ. ಕನ್ನಡದ ಇತ್ತೀಚಿನ ಕವಿಗಳಲ್ಲಿ ಯಾರ ಬಗ್ಗೆಯೂ ವಿವರವಾದ ಅಭ್ಯಾಸ ವಿಮರ್ಶೆ ಇನ್ನೂ ಆಗಿಲ್ಲ. ಆ ಕಾಲ ಇನ್ನೂ ಬರಬೇಕಾಗಿದೆ. ಅಂತಹ ಅವಕಾಶ ಬಂದಾಗ ಕಾವ್ಯಾನಂದರ ಕಾವ್ಯ ವಿಪುಲವಾದ ಸಾಮುಗ್ರಿಯನ್ನು ಒದಗಿಸಬಲ್ಲದು.

೧೨೯ ಹಿಂದವಾಡಿ, ಬೆಳಗಾವಿ.

## ಬಾಳ ಗುಬ್ಬಿಯ ಗುಟುಕುಗಳು........

ಜಗವೆ ದೇಗುಲ ಜೀವ ದೇವನು
ಜೀವನವೆ ಆರಾಧನೆ
ಹಗಲು ದೀಪವು ರಾತ್ರಿ ಅಕ್ಷತೆ
ಗೈದುದೆಲ್ಲವು ಸಾಧನೆ

ಪ್ರೀತಿ ತುಳುಕುವ ಮನೆಯೆ ಸ್ವರ್ಗವು
ಪ್ರೀತಿಪರೆ ದೇವತೆಗಳು
ಘನತರವು ಗಾರ್ಹಸ್ಥ್ಯ ಯೋಗವು
ಪ್ರೀತಿಸಿರೆ ದಂಪತಿಗಳು

◆◆◆◆

ನನಗೆ ಅಮೃತ ಬೇಕಿಲ್ಲ
ಮಡದಿ ಕಡೆದೀವ ಮಜ್ಜಿಗೆಯೆ ಸಾಕು !
ಕಲ್ಪವೃಕ್ಷದ ಹಣ್ಣು ಬೇಕಿಲ್ಲ
ನಾನೆ ದುಡಿದುಣುವ ಕಜ್ಜಾಯ ಸಾಕು !
ಸ್ವರ್ಗ, ನಂದನ, ಅಲಕ ಬೇಕಿಲ್ಲ–
ಒಲ್ಮೆಯುಕ್ಕುವ ಮುರುಕು ಮನೆಯೆ ಸಾಕು !
ಸುಧೆಯೆ ಬೇಕೆನುವ ಸುರಸುಂದರಿಯು ಬೇಕಿಲ್ಲ
ರೊಟ್ಟಿ ತಟ್ಟುವ ಸರಳ ಸತಿಯೆ ಸಾಕು !



## ಶರಣ ಚರಿತಾಮೃತ

* ಡಾ|| ಎಂ. ಚಿದಾನಂದಮೂರ್ತಿ

ಶಿವ ಶರಣರ ಚರಿತ್ರೆಗಳನ್ನು ತಿಳಿಸುವ ಆಧುನಿಕ ಗದ್ಯ ಗ್ರಂಥಗಳು ಕೆಲವಿವೆ. ಅವುಗಳಲ್ಲಿ ಫ. ಗು. ಹಳಕಟ್ಟಿಯವರ 'ಶಿವಶರಣರ ಚರಿತ್ರೆ'ಗಳು ಮೊದಲು ಉಲ್ಲೇಖವಾಗಬೇಕಾದ್ದು. (ಭಾಗ 1. 1944), ತ. ಸು. ಶಾಮರಾಯರ 'ಶಿವಶರಣ ಕಥಾರತ್ನ ಕೋಶ' 1967ರಲ್ಲಿ ಪ್ರಕಟವಾಯಿತು. ಸಿದ್ಧಯ್ಯ ಪುರಾಣಿಕರ "ಶರಣ ಚರಿತಾಮೃತ" ಪ್ರಕಟವಾದದ್ದು 1964ರಲ್ಲಿ, ಶಾಮರಾಯರ ಕೃತಿಗಿಂತ ಮೂರು ವರ್ಷ ಮುಂಚೆ.

ಹಳಕಟ್ಟಿಯವರ ಉದ್ದೇಶ ಶಿವಶರಣರ ಚರಿತ್ರೆಗಳನ್ನು ಆದಷ್ಟು ಸಂಗ್ರಹಿಸಿ ಕೊಡುವದು. ಅವರ ಪ್ರಯತ್ನ ಬಹುತೇಕ ಪ್ರಥಮವಾದ್ದರಿಂದ, ಅಲ್ಲಿ ವ್ಯವಸ್ಥೆ, ಸ್ಪಷ್ಟ ಉದ್ದೇಶಗಳನ್ನು ನಿರೀಕ್ಷಿಸುವದು ತಪ್ಪಾಗುತ್ತದೆ. ತಮಗೆ ತಿಳಿದ ಸಂಗತಿಗಳನ್ನು ಅವರು ಯಥಾವತ್ತಾಗಿ ನಿರೂಪಿಸಿದ್ದಾರೆ. ಇಂದಿಗೂ ಅವು ವೀರಶೈವ ಸಾಹಿತ್ಯಾಭ್ಯಾಸಿಗಳು ಉಪಯೋಗ ಮಾಡಿಕೊಳ್ಳುತ್ತಿರುವ ಗ್ರಂಥಗಳಾಗಿವೆ. ಶಾಮರಾಯರದು ಕೋಶದ ರೀತಿ: ವೀರಶೈವ ಕಾವ್ಯ, ಪುರಾಣಗಳಲ್ಲಿ ಬರುವ ಶರಣರ, ದೇವತೆಗಳು, ಭಕ್ತರ ಕತೆಗಳನ್ನು ಅಕಾರಾದಿಯಾಗಿ ಜೋಡಿಸಿದ್ದಾರೆ: ಕತೆಯ ಕೊನೆಯಲ್ಲಿ ಆಕರಗಳನ್ನು ಕೊಟ್ಟಿದ್ದಾರೆ. ಯಾವುದಾದರೂ ಕತೆಯ ವಿವರಗಳು ಬೇಕಾದಲ್ಲಿ ಆ ಪುಸ್ತಕಗಳನ್ನು ಮೊದಲು ನೋಡಬೇಕೆನ್ನಿಸುತ್ತದೆ. ಸಿದ್ಧಯ್ಯ ಪುರಾಣಿಕರ "ಶರಣಚರಿತಾಮೃತ" ಇವೆರಡಕ್ಕಿಂತಲೂ ಬೇರೆಯಾದ ಉದ್ದೇಶವನ್ನು ಹೊಂದಿದೆ.

ಇಲ್ಲಿ ಅರವತ್ತುಮೂರು ಶಿವಶರಣರನ್ನು ಆರಿಸಿಕೊಂಡಿದ್ದಾರೆ. (ಇವರು ತಮಿಳುನಾಡಿನ ಅರುವತ್ತುಮೂವರಲ್ಲ) ಇದರಲ್ಲಿ ಭಾರತದ ಎಲ್ಲ ಪ್ರದೇಶಗಳ, ಪ್ರಾರಂಭದಿಂದ ಇತ್ತೀಚಿನ ವರೆಗಿನ, ಬೇರೆ ಬೇರೆ ಕಾಯಕಗಳ ಶಿವಶರಣರು ಮತ್ತು ಶಿವಶರಣೆಯರು ಇದ್ದಾರೆ. ತಾವು ಆರಿಸಿಕೊಂಡ ಶರಣನ ಅಥವಾ (ಶರಣೆಯ) ಜೀವನದ ಬಗ್ಗೆ ಎಷ್ಟೆಷ್ಟು ಅಭ್ಯಾಸ ಮಾಡಬಹುದೋ ಅಷ್ಟನ್ನು ಮಾಡಿ, ಪವಾಡಗಳಿಗಿಂತ ಅವರ ಮಾನವೀಯತೆಯನ್ನು ದೊಡ್ಡದು ಮಾಡಿ

ಭಕ್ತರಾಗಿ ಅವರು ಸಿದ್ಧಿಯನ್ನು ಪಡೆದುದು ಹೇಗೆ ಎಂಬುದನ್ನು ನಿರೂಪಿಸಿದ್ದಾರೆ. ಇದು ಅಷ್ಟು ಸುಲಭವಾದ ಕೆಲಸವೇನೂ ಅಲ್ಲ. ಬೇರೆ ಬೇರೆ ಗ್ರಂಥಗಳಲ್ಲಿ ಬರುವ ಶರಣರ ಚರಿತ್ರೆಗಳಲ್ಲಿ ವಿರೋಧಗಳುಂಟು, ಅನೇಕ ವಿವರಗಳು, ಬೇಕೆಂದರೂ ಸಿಗುವದಿಲ್ಲ; ಯಾರನ್ನು ಉಳಿಸಿಕೊಳ್ಳಬೇಕು, ಯಾರನ್ನು ಬಿಡಬೇಕು, ಬಿಡುವದಾದರೂ ಯಾವ ಕಾರಣಕ್ಕಾಗಿ ಇತ್ಯಾದಿ ಸಮಸ್ಯೆಗಳನ್ನು ಎದುರಿಸಬೇಕು. ಶರಣರ ಕತೆಗಳನ್ನು ಬರೆಯುವದು ಮುಖ್ಯ ಉದ್ದೇಶವಾದರೂ ಅವುಗಳ ಬಗ್ಗೆ ಇನ್ನೂ ಸಾಕಷ್ಟು ಕೆಲಸ ನಡೆಯದಿರುವ ಸನ್ನಿವೇಶದಲ್ಲಿ ಸಿದ್ಧಯ್ಯ ಪುರಾಣಿಕರು ಸಂಶೋಧಕನಂತೆ ಸಾಮಗ್ರಿಯನ್ನು ಸಂಗ್ರಹಿಸಿ, ವಿಶ್ಲೇಷಿಸಿ, ವಿಮರ್ಶಕನಂತೆ ಸಾರಾಸಾರವನ್ನು ನಿರ್ಣಯಿಸಿದ್ದಾರೆ. ಹಾಗೆ ಅನೇಕ ಸಮಸ್ಯೆಗಳನ್ನು ಎದುರಿಸಿದ್ದನ್ನು ಆರಂಭದಲ್ಲಿಯೇ ಹೇಳಿಕೊಂಡಿದ್ದಾರೆ. ಇಂತಹ ಕಡೆ ಕೆಲವು ಸಾರಿ ಅವರ ನಿಲುವನ್ನು ಒಪ್ಪುವದು ಬಿಡುವದು ನಮಗೆ ಬಿಟ್ಟದ್ದು, ಶಿವಶರಣರ ಕತೆಗಳ ಕಾಡಿನಲ್ಲಿ ಒಂದು ಸುಂದರ ನಂದನ ದಂತಿರುವ ಈ ಕೃತಿ ರಚನೆಗಾಗಿ ಅವರು ಅಪಾರ ಶ್ರಮ ಪಟ್ಟಿದ್ದಾರೆ. ದೇಹದ ಜೊತೆಗೆ ಮನಸ್ಸನು ಬಳಲಿಸಿದ್ದಾರೆ. ಎಂಬ ಬಗ್ಗೆ ಅನುಮಾನವೇ ಇಲ್ಲ. ಈ ಪುಸ್ತಕ ಅವರ ತೀವ್ರವಾದ ಶ್ರದ್ಧಾಸಕ್ತಿಗಳ ಫಲ.

ವಿಷಯ ಸಂಗ್ರಹದಲ್ಲಿ ಸಂಶೋಧಕ ವಿಮರ್ಶಕರಾಗಿ ಕೆಲಸ ಮಾಡಿದ ಅವರು ನಿರೂಪಣೆಯಲ್ಲಿ ಸಹೃದಯ ಕವಿಯಾಗಿದ್ದಾರೆ. ಅವರ ನಿರೂಪಣೆಯಲ್ಲಿ ವಚನಕಾರರ ವಚನಗಳು, ಹರಿಹರನ ರಗಳೆಗಳು, ಇತರ ಅನೇಕರ ಕೃತಿಭಾಗಗಳು ಗದ್ಯದೊಡನೆ ಕೋದುಕೊಂಡು ಬರುತ್ತವೆ. ತಾವೇ ಸ್ವತಃ ಕವಿಯಾದ್ದರಿಂದ ಅವರ ಭಾಷೆ ಭಾವುಕವಾಗುತ್ತದೆ. ಭಾವುಕರಾದ ಭಕ್ತರ ಜೀವನ ಚರಿತ್ರೆಗೆ ಉಚಿತವಾದ ಶೈಲಿ. ಕೆಲವು ಉದಾಹರಣೆಗಳು: "ರಾಗಯೋಗಿ" ರಾಗದ ಸಂಕಣ್ಣನ ಬಗ್ಗೆ ಹೀಗೆ ಬರೆಯುತ್ತಾರೆ. (ಪು. 79)

"ಸಂಕಣ್ಣನು ಮಾತ್ರ ಎಂದಿನಂತೆಯೇ ಅವಿಚಲ ಚಿತ್ತನಾಗಿದ್ದನು. ಸರಳ ಭಕ್ತನಾಗಿದ್ದನು. ಅದೇ ತಾದಾತ್ಮ್ಯ, ಅದೇ ತನ್ಮಯತೆ! ಸ್ತುತಿ, ನಿಂದೆ, ಹಿಗ್ಗು, ಕುಗ್ಗು, ಪರಿಮಿತ ಮಾನಾಪಮಾನ, ಸೋಲು ಗೆಲವುಗಳು ಏನೆಂಬುದನ್ನೇ ಅರಿಯದ ಆ ಶರಣ ಶಿವಾಲಯದಲ್ಲಿ ಸಂಗೀತ ಸೇವೆ ಸಲ್ಲಿಸುತ್ತಲೇ ಕೊನೆಯ ದಿನಗಳನ್ನು ಕಳೆದನು. ದಾಸೋಹವನ್ನು ಮಾಡುತ್ತಲೇ ಮುಂದಿನ ದಿನಗಳನ್ನು ಮುಗಿಸಿದನು. ಶಿವನೆದರು ಹಾಡಿ ಹಾಡಿ ಶಿವನೇ ತಾನಾಗಿ ಬಿಟ್ಟನು."



ಅವರ ಗದ್ಯ ಭಾವುಕತನದಿಂದ ಇನ್ನೂ ಒಂದು ಹೆಜ್ಜೆ ಮೇಲೇರಿ ಕಾವ್ಯವಾಗುವದೂ ಉಂಟು. ಕೆಳಗಿನ ವಾಕ್ಯವನ್ನು ನೋಡಿ "ಆತನು ಹದಿನಾರರ ಹರೆಯದಲ್ಲಿ ಕಾಲಿಟ್ಟಕೂಡಲೆ ಗಂಡುಗಾಡಿ ಗೆಲುವಿನ ಕೇಕೆಯನ್ನು ಹಾಕಿತು" ಇಂತಹ ಶೈಲಿ ಸಿದ್ಧಯ್ಯ ಪುರಾಣಿಕರಿಗೆ ಸಹಜವಾದುದು. ಬಲವಂತದಿಂದ ಎಳೆದು ತಂದುದಲ್ಲ. ಅವರ ಬರವಣಿಗೆಯಲ್ಲಿ ಒಂದು ತನ್ಮಯತೆ ಇದೆ. ಅದೇ ಅವರ ಗದ್ಯದ ಗುಟ್ಟು, ಬಲವೆಂದು ತೋರುತ್ತದೆ.

ಇದರಲ್ಲಿ ಶರಣರ ಹೆಸರನ್ನು ಲೇಖಕರು ಹೇಳುವ ರೀತಿಯನ್ನು ಗಮನಿಸಬೇಕು. ಶಿವನಾಟದ ಸವಿಗಂಡ ಗುಂಡಯ್ಯ, ಬಾಗಿದ ತಲೆಯ ಮುಗಿದ ಕೈಯ ಬಸವ, ಜೈಸಿದ ಅಯ್ದಕ್ಕಿ ಮಾರಯ್ಯ ಲಕ್ಕಮ್ಮರು ಇತ್ಯಾದಿ. ಆಯಾ ಶರಣ, ಶರಣೆಯರ ವ್ಯಕ್ತಿತ್ವದ ಮಿಂಚು ಪರಿಚಯ ಈ ವಿಶೇಷಣಗಳಲ್ಲುಂಟು.

ಈ ಗ್ರಂಥದಲ್ಲಿ ಬಸವಣ್ಣನವರಿಗಿಂತ ಹಿಂದಿನ ಶರಣರು, ಅವರ ಕಾಲದವರು ಮತ್ತು ಈಚಿನವರಿದ್ದಾರೆ. ಹೆಚ್ಚಿನ ಸಂಖ್ಯೆಯವರು ಬಸವಣ್ಣನವರ ಸಮಕಾಲೀನರು ಇದೂ ಸಹಜವೇ ಶರಣರ ಕತೆಗಳಲ್ಲಿ ಹರಿಹರ ಕವಿಗೂ ಸ್ಥಾನ ದೊರಕಿದೆ. ಈ ಶತಮಾನದ ಮಹಾಪುರುಷರಲ್ಲಿ ಒಬ್ಬರಾದ ಹಾನಗಲ್ಲ ಕುಮಾರ ಸ್ವಾಮಿಗಳವರ ಕಥಾಮೃತವೂ ಇಲ್ಲಿದೆ. ಗ್ರಂಥವನ್ನು ಓದಿದರೆ ಒಂದು ಇಡೀ ಪರಂಪರೆಯೇ ಎದ್ದು ನಿಲ್ಲುತ್ತದೆ. ಇಲ್ಲಿ ಬಂದಿರುವ ಶರಣರು ಒಂದೇ ಭಕ್ತಿವಾರಿಧಿಯ ಬೇರೆ ಬೇರೆ ತರಂಗಗಳಾಗಿ ಕಾಣಿಸುತ್ತಾರೆ.

ಈ ಗ್ರಂಥವನ್ನು ಪ್ರಕಟಿಸಿರುವದು ಮೈಸೂರು ದೇಶದ "ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿ" ಇದೇ ಸೂಚಿಸುತ್ತದೆ. ಈ ಗ್ರಂಥ ರಚಿತವಾಗಿರುವದು ಜನತೆಗಾಗಿ, ಹೊಸದಾಗಿ ಓದನ್ನು ಕಲಿತ ಜನಸಾಮಾನ್ಯರಿಗಾಗಿ ಎಂಬುದನ್ನು ಪುರಾಣಿಕರ ಭಾಷೆ ಅಲ್ಲಲ್ಲಿ ಕಷ್ಟವಾಗಿದ್ದರೂ ಸಂದರ್ಭದ ಮೇಲೆ ಒಟ್ಟಾರೆ ಅರ್ಥ ಮಾಡಿಕೊಳ್ಳಲು ಸಾಧ್ಯ. ಆದರೆ ಇದು ಬರಿಯ ವಯಸ್ಕರಿಗಾಗಿ,ಹೊಸದಾಗಿ ಓದು ಕಲಿತವರಿಗಾಗಿಯೇ ರಚಿತವಾದದ್ದೆಂದು ಭಾವಿಸಿದರೆ ತಪ್ಪಾದೀತು. ವೀರಶೈವ ಸಾಹಿತ್ಯದಲ್ಲಿ ಆಸಕ್ತಿ ಪ್ರವೇಶವುಳ್ಳವರೂ ಈ ಗ್ರಂಥದಿಂದ ಧಾರಾಳ

ವಾಗಿ ಲಾಭವನ್ನು ಪಡೆಯಬಹುದಾಗಿದೆ. ಆದರಲ್ಲೂ ಈಚಿನ ಶಿವಶರಣರ ಜೀವನ ಚಿತ್ರಗಳನ್ನು ಅವರು ಕೊಟ್ಟಿರುವದನ್ನು ಗಮನಿಸಬೇಕು– ಬಸವಣ್ಣ, ಅಲ್ಲಮಪ್ರಭು ಇವರು ನಮ್ಮ ಕಣ್ಣಿಗೆ ಬೀಳುವ ಹಾಗೆ ಈಚಿನವರು ಬೀಳುವದಿಲ್ಲ. ಆದರೆ ಶ್ರೇಷ್ಠತೆಗೆ ಕಾಲದ ಮಿತಿಯೆಲ್ಲಿದೆ? ಈ ಗ್ರಂಥವನ್ನು ಬರೆದು ಕನ್ನಡದ, ವೀರಶೈವ ಸಾಹಿತ್ಯದ ಸಿರಿವಂತಿಕೆಯನ್ನು ಸಿದ್ಧಯ್ಯ ಪುರಾಣಿಕರು ಹೆಚ್ಚಿಸಿದ್ದಾರೆ ಎಂಬಲ್ಲಿ ಸಂದೇಹವೇನೂ ಇಲ್ಲ.

—❋—

ಕನ್ನಡ ಅಧ್ಯಯನ ಕೇಂದ್ರ
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು–9



# ರಜತರೇಖೆ

*

ನಿಂಗಣ್ಣ ಸಣ್ಣಕ್ಕಿ

## ಪೀಠಿಕೆ

ಸಾಹಿತ್ಯದಲ್ಲಿ ನಾಟಕಗಳ ರಮ್ಯತೆಯು ಪ್ರಬಲವಾದುದು. ಈ ಮಾತು ಎಲ್ಲ ಭಾಷೆಗಳಿಗೂ ಅನ್ವಯಿಸುತ್ತದೆ.

ಪ್ರಾಚೀನ ಕನ್ನಡದಲ್ಲಿ ಕಾವ್ಯಗಳೇ ಪ್ರಮುಖ ಸ್ಥಾನವನ್ನು ಪಡೆದವು. ಕಾವ್ಯಗಳಲ್ಲಿ ನಾಟಕೀಯತೆ ಮೂಡಿ ನಿಂತಿದೆ. "ಕಾವ್ಯೇಷು ನಾಟಕಂ ರಮ್ಯಂ" ಎಂಬ ಮಾತು ಪ್ರಾಮುಖ್ಯವಾಗಿದೆ.

ಕನ್ನಡ ಸಾಹಿತ್ಯ ಚರಿತ್ರೆಯನ್ನು ಅವಲೋಕಿಸಿದಾಗ ೧೭ನೆಯ ಶತಮಾನದ ಚಿಕ್ಕ ದೇವರಾಜ ಒಡೆಯರ ಆಸ್ಥಾನದಲ್ಲಿದ್ದ ಸಿಂಗರಾರ್ಯರು ಬರೆದ "ಮಿತ್ರವಿಂದಾ ಗೋವಿಂದ" ನಾಟಕವೇ ಮೊದಲಿನದು ಎಂದು ಗೊತ್ತಾಗುವುದು. ಆದರೆ ಅದು ಅನುವಾದ ಕೃತಿ. ಬಳಿಕ ಹದಿನೆಂಟನೆಯ ಮತ್ತು ಹತ್ತೊಂಬತ್ತನೆಯ ಶತಮಾನಗಳಲ್ಲಿ ಕೂಡ ಸಂಸ್ಕೃತ ಹಾಗೂ ಇಂಗ್ಲೀಷ ನಾಟಕಗಳು ಅನುವಾದಗೊಂಡು ರಂಗಭೂಮಿಗೂ ಬಂದವು. ಮೈಸೂರು ಅರಮನೆಯಲ್ಲಿ ನಾಟಕಗಳು ಪ್ರಯೋಗಗೊಂಡವು.

ಇಪ್ಪತ್ತನೆಯ ಶತಮಾನದಲ್ಲಿ ನವೋದಯ ಕನ್ನಡ ಸಾಹಿತ್ಯವು ಪ್ರಾರಂಭವಾಯಿತು. ಕನ್ನಡ ಸಾಹಿತ್ಯಕ್ಕೆ ಒಂದು ಮಹಾಪೂರವೇ ಬಂದಂತಾಯಿತು. ಸಾಹಿತ್ಯದಲ್ಲಿ ಬೇರೆ ಬೇರೆ ಪ್ರಕಾರಗಳು ರಚನೆಯಾದಂತೆ ನಾಟಕಗಳೂ ರಚನೆಗೊಂಡವು. ಅವುಗಳಲ್ಲಿ ರಜತರೇಖೆಯೂ ಒಂದು. ಅದರ ಸಮೀಕ್ಷೆ ಈ ಲೇಖನದ ಉದ್ದೇಶ.

"ರಜತರೇಖೆ" ಕವಿ ಕಾವ್ಯಾನಂದರ ನಾಟಕ ಮಂಜರಿ. ಈ ಮಂಜರಿಯಲ್ಲಿ ಮೋಹನ ಮಂತ್ರ, 'ಷಾ' ಗೆ ಶ್ರದ್ಧಾಂಜಲಿ, ತುಂಗಭದ್ರೆ ಮಂಗಲೆ ಮತ್ತು ರಜತರೇಖೆ ಸ್ವತಂತ್ರ ವಿಚಾರಗಳಿಂದ ವಸ್ತುನಿಷ್ಠವಾಗಿ ರಚಿತವಾದವುಗಳು.

ಮಧು ಮಹೋತ್ಸವವನ್ನು ಪಂಪನಿಂದಲೂ, ಮಾಯಾ ಕೋಲಾಹಲವನ್ನು ಚಾಮರಸನಿಂದಲೂ, ದುಃಖ ಸೇತುವನ್ನು 'ಶ್ರೀ' ಯವರಿಂದಲೂ ಮತ್ತು ಗಿರಿಜೆಯ ಗೆಲವು-ವನ್ನು ಕಾಳಿದಾಸ ಮತ್ತು ಹರಿಹರನಿಂದಲೂ ನೆರವು ಪಡೆದವುಗಳಾಗಿವೆ. ಈ ನಾಲ್ಕು ನಾಟಕಗಳು ವಸ್ತುಗಳನ್ನು ನೆರವು ಪಡೆದರೂ ಕನ್ನಡದ ಸ್ವತಂತ್ರ ರಚನೆಗಳಾಗಿವೆ.

೧

'ಮಧು ಮಹೋತ್ಸವ' ಈ ಶೀರ್ಷಿಕೆಯನ್ನು ಪಂಪನಿಂದ ತೆಗೆದುಕೊಂಡುದುದು. ಪಂಪನ ಅನುಗ್ರಹ ಈ ರೂಪಕಕ್ಕಿದೆ. ಕತೆಗಾರ ವಸಂತಾಗಮನವನ್ನು ಮನೋರಂಗಕ್ಕೆ ತಂದಿರುವನು. ಮೇಳದವರು ಋತುರಾಜನಾದ ವಸಂತನನ್ನು ಬಾ ಬಾ, ಬಾ ಬಾ ಎಂದು ಸ್ವಾಗತ ಕೋರುವರು. ಕವಿಯು ನಡುವೆ ತನ್ನ ಜ್ಞಾನದಿಂದ ಪ್ರತ್ಯಕ್ಷ ಪಾತ್ರಧಾರಿಯಾಗಿ ಹಾಡತೊಡಗುವನು.

ವಾಸಂತಿಯ ವಿರಹಮಾಗಿ
ಋತುರಾಜನ ಉದಯವಾಗಿ
ಎತ್ತೆತ್ತಲು ಮಕರಂದವು
ಏನಂದವು ಬಲು ಚಂದವು
ಆನಂದವೇ ಆನಂದವು ॥

ಹೀಗೆ ಕವಿ ಪಾತ್ರಧಾರಿಯಾಗಿ ಋತುರಾಜನ ವಿರಹವನ್ನು ಸೃಷ್ಟಿ ಜೀವಿಗಳಿಗಾಗುವ ಆನಂದವನ್ನು ವಿವರಿಸುತ್ತಾನೆ. ವಾಸಂತಿ ಹಾಗೂ ಋತುರಾಜರ ಪ್ರೇಮಕ್ಕಾಗಿ ನದಿಯ ನೀರು ತಿಳಿಯಾದದ್ದನ್ನು ತಿಳಿಸಲಾಗಿದೆ.

ಕತೆಗಾರನು ವಸಂತನ ಬರವನ್ನು ಹೇಳುತ್ತಿರುವಾಗ—

ಮೇಳವು—ಬರುವನಿದೊ ವಸಂತರಾಜ
ಬೆಡಗಿನೊಡನೆ ಬರುವನು
ಸಡಗರದಲಿ ಬರುವನು
ಬನಕೆ ದಿನಕೆ ಜನಕೆ ದನಕೆ
ನವ ಜೀವನ ತರುವನು
ಸಂಜೀವನ ತರುವನು ॥

ಎಂದು ಎದೆ ತೆರೆದು ಹಾಡುವನು. ಮೇಳವು ನಿಸರ್ಗ ನಿಯಮದ ಹಿಗ್ಗುವಿಕೆ



ಯನ್ನು ವಸಂತರಾಜನಿಗೆ ನಮಸ್ಕಾರದೊಂದಿಗೆ ಹೇಳುವುದು. ಹೀಗೆ ಎಲ್ಲರೂ ಸಜ್ಜಾದಾಗ ಕೋಕಿಲವು ತನ್ನ ಇರುವಿಕೆಯನ್ನೂ, ವಸಂತನ ಆಗಮನವನ್ನೂ ಮತ್ತು ಸೃಷ್ಟಿಗೆ ಬೇಕಾಗಿರುವ ಸಂಗೀತವನ್ನೂ ತೋರುವದಕ್ಕಾಗಿ ಕುಹೂ ಕುಹೂ ಕೂಗು ಹಬ್ಬಿಸುವುದು. ಮಧು ಮಹೋತ್ಸವದ ಸಂತೋಷದ ಏಳ್ಗೆಯಲ್ಲಿ ಕೋಕಿಲ, ಮಲ್ಲಿಕಾ, ಕಮಲ, ಮಧುಕರ, ವಾಸಂತಿ, ಕತೆಗಾರ, ವಸಂತ, ಕವಿ, ಸಖಿಯರು ಎಲ್ಲರೂ ಕೂಡಿ ಮಧುಮಯ ವನವನ್ನು ನಿರ್ಮಾಣ ಮಾಡುತ್ತಾರೆ. ಸಂಗೀತ ಬಾರಿಸುತ್ತಾರೆ. ನಾಟ್ಯವಾಡುತ್ತಾರೆ. ಗೀತೆ ಹಾಡುತ್ತಾರೆ. ಅಮೃತ ಸಿಂಚನ ಮಾಡುತ್ತಾರೆ. ರೋಮಾಂಚನ ಮಾಡುತ್ತಾರೆ. ವಂಚನೆಯನ್ನು ದೂರ ಹಾಕುತ್ತಾರೆ. ಮಧು ಮಹೋತ್ಸವದ ಜೀವನವನ್ನು ಕುಣಿದು–ಮಣಿದು ಬೇಡುತ್ತಾರೆ. ನಿಸರ್ಗ ಜೀವಿಗಳಿಗೆ ಸರ್ವ ಸುಖಕರವಾದ ಮಧು ಮಹೋತ್ಸವವನ್ನು ಸಂಜೀವನವನ್ನಾಗಿ ಮಾಡುತ್ತಾರೆ. ಹೀಗೆ ರಜತ ರೇಖೆಯಲ್ಲಿ ಮಧು ಮಹೋತ್ಸವವು ಗೀತರೂಪಕವಾಗಿ ನಾಟ್ಯವಾಡಿದೆ.

೨

'ಮೋಹನ ಮಂತ್ರವು' ರಜತರೇಖೆಯ ಎರಡನೆಯ ನಾಟಕವು. ಈ ನಾಟಕಕ್ಕೆ ಕೇಂದ್ರ ವಸ್ತು ಮಹಾತ್ಮಾ ಗಾಂಧೀಜಿ, ಗಾಂಧಿ ಜಯಂತಿಯ ದಿನ ಹಳತು–ಹೊಸತು ಸಂಸ್ಕೃತಿಯನ್ನು ಪಡೆದ ಆರ್ಯ ಕೀರ್ತಿಯ ಮನೆಯಲ್ಲಿಯ ಚರ್ಚೆಯೇ ನಾಟಕರೂಪ ತಾಳಿದೆ. ಯುಗ ಪುರುಷ ಗಾಂಧೀಜಿಯವರನ್ನು ಹಳೆಯ ಪರಂಪರೆಯವರೂ ಒಪ್ಪುವರು. ಹೊಸ ಪರಂಪರೆಯವರೂ ಒಪ್ಪುವರು. ಆರ್ಯಕೀರ್ತಿ, ಅವನ ಮಗ ಸತ್ಯಪಾಲ, ಸತ್ಯಪಾಲನ ಹೆಂಡತಿ ಸತ್ಯಭಾಮೆ, ಆರ್ಯಕೀರ್ತಿಯ ಮೊಮ್ಮಕ್ಕಳಾದ ಮಧುಕರ ಮತ್ತು ಮಧುಮತಿಯರೆಲ್ಲರೂ ತಮ್ಮ ಮಾತುಗಳಲ್ಲಿ ಗಾಂಧೀಜಿಯವರನ್ನು ಸಮೀಕ್ಷಿಸುವರು.

ಆರ್ಯಕೀರ್ತಿ ಹಳೆಯ ತಲೆಮಾರಿನ ಹಿರಿಯ. ಅತನು ಗಾಂಧೀಜಿಯವರನ್ನು ಒಮ್ಮೆಲೆ ರಾಷ್ಟ್ರದ ತಂದೆ ಎಂದು ಒಪ್ಪುವನು. ಗಾಂಧೀಜಿ ಸತ್ಯೇಂದ್ರನು. ಹರಿಜನ ಮತ್ತು ಗಿರಿಜನರ ಭಾಗ್ಯವಿಧಾತನು ಎಂದು ನುಡಿಯುವನು. ಸೊಸೆ ಸತ್ಯಭಾಮೆ ನಮೋ ಬಾಪು ಎಂದು ಹೇಳಿ, ಬಾಪು ವಿಶ್ವದೀಪವೆಂದೂ; ಶಾಂತಿರೂಪನೆಂದೂ ಆಕೆಯ ಹೃದಯ ಮಿಡಿವುದು.

ಸತ್ಯಪಾಲನು "ಗಾಂಧೀಜಿಯವರು ಮೃತರಾಷ್ಟ್ರದಲ್ಲಿ ಮತ್ತೆ ಜೀವಕಳೆ ತುಂಬಿದ" ವೀರನೆಂದು ವೀರಗಾಥೆಯನ್ನೇ ನುಡಿಸುವನು. ಸತ್ಯಭಾಮೆ ಮತ್ತು ಗಾಂಧೀಜಿಗೆ ಜಯವನ್ನು ಹೇಳುವಳು. ಆರ್ಯಕೀರ್ತಿ, ಸತ್ಯಭಾಮೆ ಮತ್ತು ಸತ್ಯಪಾಲ ಕೂಡಿಕೊಂಡು ಗಾಂಧೀಜಿಯವರ ಜೀವನವನ್ನು ಮತ್ತು ಬದುಕನ್ನು "ಹೊಸ ಬಾಳಿಗೆ ನಾಂದಿ" ಎಂದು ಕರೆಯುವರು. ಮಧುಕರನು ಗಾಂಧೀಜಿಯವರ ತತ್ವಗಳಿಗೆ ಮಹತ್ವವೀಯುವನು. ಚಿತ್ರಪೂಜೆ ಯೋಗ್ಯವಲ್ಲವೆಂಬುದನ್ನು ಸಮರ್ಥಿಸಿ ತಿಳಿಸುವನು. ಸತ್ಯಪಾಲ ಮಧುಕರನನ್ನು "ಬಾಪುವಿನ ಭಕ್ತರನು ಜರೆವ ಕ್ರೂರ!" ನೆಂದು ನಿಂದೆಯಾಡುವನು. ಈ ನಿಂದೆಗೆ ಕವಿ ಕಾವ್ಯಾನಂದರು ಮಧುಕರನ ಪಾತ್ರದ ಮುಖಾಂತರ ಸಮಕಾಲೀನ ಮತ್ತು ಭವಿಷ್ಯತ್ಕಾಲೀನ ಸತ್ಯವನ್ನು ಹಾಡಿಸಿರುವರು.

ಮಧುಕರ—ಗೋಡಸೆಯು ಕೊಂದದ್ದು ಒಂದೇ ಸಲ ಗಾಂಧಿಯನು  
ನಿತ್ಯವೂ ಅವನಾತ್ಮ ಕೊಲ್ಲುವಿರಿ ನೀವು!  
ಬಾಪು ಭಕ್ತಿಯ ನಟಿಸಿ ಬಾಪುವಿನ ಹೆಸರಿನಲೆ  
ಶೋಷಣೆಯ ಸತ್ರವನು ನಡೆಸಿಹಿರಿ ನೀವು!  
ಹಸಿದ ಜೀವಿಗಳಸುವ ತೊರೆಯಲನುವಾದರೂ  
ಕಳ್ಳ ಪೇಟೆಯ ಕಾಳು ಹೊರಗೆ ಬರದು!

ಹೀಗೆ ಬಟ್ಟೆ ನೆಯ್ದ ಕೂಲಿಕಾರನಿಗೂ, ಹೈಯ ಬರಿದಾಗಿರುವದನ್ನೂ, ಹರಿಜನರನ್ನು ಮುಟ್ಟಲು ಹಿಂಜರಿಯುವವರನ್ನೂ, ಮಡಿವಂತಿಗೆಯ ಸೋಗು ಹಾಕಿದವರನ್ನೂ ಮಧುಕರ ಹಿಂಜಿ ನೋಡುತ್ತಾನೆ. ಗಾಂಧೀಜಿಗೆ ಏನಾಗಬೇಕಾಗಿತ್ತೊ ಅದು ಈ ದೇಶದಲ್ಲಿ ಆಗಲಿಲ್ಲ. ಅವರ ಜೀವನವನ್ನು ಜನ ತಿಳಿಯಲಿಲ್ಲವೆಂಬುದನ್ನು ಮಧುಕರ ಪರಾಮರ್ಶಿಸುತ್ತಾನೆ. ಮಧುಮತಿ ಗಾಂಧೀಜಿಯನ್ನು ಕ್ರಿಸ್ತ, ಕೃಷ್ಣ, ಬುದ್ಧ ಬಸವರ ಶ್ರೇಣಿಯಲ್ಲಿ ನಿಲ್ಲಿಸುತ್ತಾಳೆ. ಕಾವ್ಯಾನಂದರು ಮಧುಕರನ ಮನೋಭೂಮಿಯಲ್ಲಿ ನಿಂತು ಜನ ಪರಿವರ್ತನೆಗೆ ಮನಸ್ಸಿನ ಅರಿವಿನ ಕ್ರಾಂತಿಯನ್ನೇ ಕೆದರುತ್ತಾರೆ.

ಅದು ಹೀಗೆ—ಸತ್ಯವೊಂದೇ ಸಿರಿಯು!  
ಅದುವೆ ಬಾಳಿನ ಗುರಿಯು  
ಅದುವೆ ಸೌಖ್ಯದ ಸಿರಿಯು



ಚೆಲುವು ನಿನ್ನಯ ಝುರಿಯು  
ಅರ್ಥ ಕಾಮವೇ ಬಾಳು  
ಉಳಿದುದೆಲ್ಲವೂ ಗೋಳು  
ಮೊದಲು ದೊರೆಯಲಿ ಕೂಳು  
ಆಗ ತತ್ವವ ಹೇಳು

ಸತ್ಯಭಾಮೆಯ ಪಾತ್ರದಿಂದ ಮುಂದೊರೆದು ಕಾವ್ಯಾನಂದರು ಗಾಂಧೀಜಿಯನ್ನು ವಾತ್ಸಲ್ಯ ಮತ್ತು ಕಾರುಣ್ಯದಿಂದ ಕಾಣುವರು. ಬಾಳಿನ ಬೆಲೆಯನ್ನು ಗಾಂಧೀಜಿಯ ವ್ಯಕ್ತಿತ್ವದಿಂದ ಆಯ್ಕೆ ಮಾಡುವರು. ಅವರ ಪರಮಾನುಭವವನ್ನು ಬಾಳ ಸಹಕಾರದಲ್ಲಿ ಫಲಗೊಳಿಸಲು ತಿಳಿಸುವರು. ನಾವು ಅವರಿಂದ ತಿಳಿಯಬೇಕಾದುದನ್ನು ತಿಳಿಯಬೇಕೆಂದು ಗಾಂಧೀಜಿ ಸೃಷ್ಟಿಯನ್ನು ತಿಳಿಸುವರು. ಈ ಸೃಷ್ಟಿಗೆ ಎಲ್ಲರೂ ತಮ್ಮ ತಮ್ಮ ಮನೋಭೂಮಿಕೆಯನ್ನು ವಿವರಿಸಿ ಸತ್ಯದಿಂದ ಮೋಹನ ಮಂತ್ರವನ್ನು ಪಠಿಸಲು ಸಿದ್ಧರಾದಾಗ ನಾಟಕ ಮುಕ್ತಾಯಗೊಳ್ಳುತ್ತದೆ.

ಕಾವ್ಯಾನಂದರು ಕನ್ನಡ ನಾಟಕ ನವೋದಯದ ನಂತರ ಬರೆದ ನಾಟಕಕಾರರು. ಅವರು ಆಯ್ಕೆ ಮಾಡಿಕೊಂಡ ವಸ್ತುವು ಗಾಂಧೀಜಿಯವರ ಪರಿಸರ. ಗಾಂಧೀಜಿಯ ಜೀವನವನ್ನರಿತ ಕವಿ ಪಾತ್ರ ಮುಖಾಂತರ ಗಾಂಧೀಜಿಯವರನ್ನು ಸಮೀಕ್ಷೆ ಮಾಡುತ್ತ ಮೀಮಾಂಸೆ ಮಾಡುತ್ತಾರೆ. ಅವರ ವಿಶ್ವಜೀವನಕ್ಕೆ ಕಾವ್ಯಾನಂದರು ಬರೆದ ಮೋಹನ ಮಂತ್ರವು ಕನ್ನಡ ಸಾಹಿತ್ಯದಲ್ಲಿ ಗಾಂಧೀ ಸಾಹಿತ್ಯ ರಾಶಿಗೆ ಒಂದು ತೆನೆ.

೩

"ಮಾಯಾ ಕೋಲಾಹಲ" ರಜತರೇಖೆಯೊಳಗಿನ ಮೂರನೆಯ ನಾಟಕವು. ಚಾಮರಸನ "ಪ್ರಭುಲಿಂಗ ಲೀಲೆ" ಯನ್ನು ಆಧರಿಸಿ ಬರೆದ ನಾಟಕವು. ಪ್ರಭು ಮಾಯೆಯನ್ನು ಸೋಲಿಸಿದ ಕಥೆಯೂ ಇದಾಗಿದೆ.

ಕೈಲಾಸದಲ್ಲಿ ಶಿವನ ಒಡ್ಡೋಲಗದ ದೇವಗಣವು ಶಿವನ ಜಯಕಾರವನ್ನು ಹೇಳುತ್ತಿರುವಾಗ, ಜಗಜ್ಜನನಿಯಾದ ಪಾರ್ವತಿಯ ನಿಜ ಸಖಿ ಪ್ರಶ್ನೆ ಹಾಕುವಳು. ಆ ಪ್ರಶ್ನೆಗೆ ನಿಜದ ನೆಲೆಯನ್ನೂ, ನಿಜ ಸ್ವರೂಪವನ್ನೂ ತೋರುವವನು ಅಲ್ಲಮನಿದ್ದಾನೆಂದು ಶಿವ ಉತ್ತರಿಸುವನು. ಆ ಅಲ್ಲಮ

ನನ್ನು ಸೋಲಿಸಲು ಪಾರ್ವತಿ ಮಾತನ್ನಿತ್ತು, ತನ್ನ ತಾಮಸಕಳೆಯಾದ
ಮಾಯೆಯನ್ನು ಭೂಲೋಕಕ್ಕೆ ಕಳಿಸುವಳು. ಮಾಯೆಯು ಅಲ್ಲಮನನ್ನು
ಸೋಲಿಸಲು ಭೂಲೋಕಕ್ಕೆ ಬಂದು ಅಲ್ಲಮನ ಮನ ಒಲಿಸುವ ಕಾರ್ಯಕ್ಕೆ
ಸಿದ್ಧಳಾಗುವಳು. ನಾಟಕದಲ್ಲಿ ಕತೆಗಾರ ಮತ್ತು ಮೇಳದವರು ಅಲ್ಲಮನ
ಚರಿತೆಯನ್ನೂ, ಮಾಯೆಯನ್ನೂ ಪರಿಚಯಿಸುತ್ತಾರೆ. ಮಾಯೆಯ ಬರು
ವಿಕೆ ಮತ್ತು ಸೌಂದರ್ಯ ಉಪಮೆಗಳಿಂದ ತುಂಬಿ ಹೋಗುತ್ತದೆ. ಆಕೆ
"ವರ್ಷ ಋತುವಿನ ಮಯೂರಿಯಂತೆ" ನಲಿದು; "ಕುಣಿಯುವ ಹಾಗೆ
ಊರ್ವಶಿ" ಯಾಗುತ್ತಾಳೆ. ಮಾಯೆಯು ರತಿಯ ರೀತಿಯಾಗುತ್ತಾಳೆ.
ಸಂಗೀತ ಹರಡುತ್ತದೆ. ಕುಣಿಯುತ್ತಾಳೆ. ಮಾಯೆ ಮೋಹಿನಿಯಾಗುತ್ತಾಳೆ.
ಜೊತೆ ಸಹಾಯಕ್ಕಾಗಿ ಸಖಿಯರನ್ನು ಎಳೆದು ತಂದಿರುತ್ತಾಳೆ. ಸಖಿಯರಾದ
ಕಾಮರೇಖೆ, ಪ್ರೇಮಕಾರಣಿ, ಮದಮಾನಿ, ಕಳಾವಿಳಾಸಿ, ಭೋಗಿ, ರಾಗಿಣಿ
ಯರೆಲ್ಲರೂ ಮಾಯೆಯ ಗುಣಗಳನ್ನು ಹೊಗಳುತ್ತಾರೆ. ಮತ್ತು ಅಲ್ಲಮನು
ಮಾಯೆಗಾತುರವಾಗಲೆಂದು ಪ್ರೇರೇಪಿಸುವರು. ನಾಗವಾಸದಲ್ಲಿ ನಾಟ್ಯದ
ಪಾಠ ನಡೆಯಿಸಿದ ಅಲ್ಲಮನಲ್ಲಿ ಮಾಯೆ ಹೋಗಿ, ತನ್ನನ್ನು
ಚರಣದಾಸಿಯನ್ನಾಗಿ ಮಾಡಿಕೊಳ್ಳಲು ಕೇಳಿಕೊಳ್ಳುತ್ತಾಳೆ. ಅಲ್ಲಮ
ಪ್ರಭು ತಾತ್ವಿಕ ತತ್ವನಿಷ್ಠೆಯನ್ನು ವಿವರಿಸುವನು. ಪ್ರೇಮದ ಬಗ್ಗೆ ಆತುರ
ಳಾಗುತ್ತಾಳೆ ಮಾಯೆ. ಪ್ರೇಮ ಕಾಮವಲ್ಲವೆಂಬುದನ್ನು ತಿಳಿಸುತ್ತಾನೆ.
ಅಲ್ಲಮ. ಮಾತು ಕಲೆಯ ಕಡೆಗೆ ಸಾಗುತ್ತದೆ. ನಾಟ್ಯಕಲೆಯನ್ನು ಕಲಿ
ಸುವ ಗುರು ಅಲ್ಲಮನೆ. ಆದರೆ ಮಾಯೆ ಅಲ್ಲಮನನ್ನು ಅಪ್ಪ ಬೇಕೆಂಬಾಶೆ
ಯಿಡುವಳು. ತನ್ನ ಮಾಯಾ ಮಂದಿರದ ಏಳು ಬಾಗಿಲುಗಳು ಭದ್ರವಾಗಿವೆ
ಎಂಬುದನ್ನು ತಿಳಿಸುವಳು. ಅಲ್ಲಮನನ್ನು ಅಪ್ಪಲು ಹೋಗುವಳು. ಬಯ
ಲನ್ನಪ್ಪಿದಂತಾಗುವದು ಆಕೆಗೆ. ಬೀಳುವಳು. ಚೀರುವಳು. ಸಖಿಯರು
ಬಾಗಿಲ ತೆರೆದು ನೋಡುವರು. ಅಲ್ಲಮ ಅಲ್ಲಿಲ್ಲ. ಅವನು ಗಾಳಿಯಂತೆ,
ಬೆಳಕಿನಂತೆ, ಬಯಲಿನಂತೆ ಇರುವಾತ. ಆ ಮೃದಂಗಕಾರನನ್ನು ಅಪ್ಪಲಿ
ಕ್ಕಾಗಲಿಲ್ಲ. ತಾಮಸಕಳೆಯಾದ ಮಾಯೆ; ಶಿವಕಳೆಯಾದ ಅಲ್ಲಮನನ್ನ
ಪ್ಪಲಿಕ್ಕಾಗಲಿಲ್ಲ. ಅವಳ ವ್ರತ ವಿಫಲವಾಯ್ತು. ಇನ್ನೂ ಪ್ರಯತ್ನ ಮಾಡುವ
ಹಠ ಮಾಯೆಗೂ, ಸಖಿಯರಿಗೂ ಇದೆ. ಈ ಮದ್ದಳೆಯ ಅಲ್ಲಮನ ಸ್ವರೂ



ಪವು ಶಿವ ಸ್ವರೂಪಕ್ಕಿಂತ ವಿಚಿತ್ರವಾಗಿ ಅವರಿಗೆ ತೋರುವುದು. ಕಡೆಯ
ಪ್ರಯತ್ನಕ್ಕೆ ಕೈ ಹಾಕುವಳು ಮಾಯೆ. ಅಲ್ಲಮ ಕಾಣದಾಗುವನು. ಸಖಿಯ
ರೊಡನೆ ಮಾಯೆ ಅಡವಿಯಲ್ಲಿ "ಗುಡುಗು, ಸಿಡಿಲು, ಮಳೆ, ಗಾಳಿಯಲ್ಲಿ
ಎಡವುತ್ತ" ಕುಂಟುತ್ತ ಸಾಗುತ್ತಾರೆ. ವಿಮಳೆ ಪ್ರಭುವಿಗಾಗಿ ಹಲುಬುತ್ತಾಳೆ.
ಹಟಾತ್ತಾಗಿ ಅಲ್ಲಮ ಪ್ರಕಟವಾಗುತ್ತಾನೆ. ಮಾಯೆ ಮತ್ತು ಸಖಿಯರು
ಸಂತೋಷ ಪಡುತ್ತಾರೆ. ಪರಿಪರಿಯಾಗಿ ಅಲ್ಲಮನನ್ನು ಅಪ್ಪಲು ಮಾಯೆ
ಮಾತಿನಿಂದಲೂ, ಶರೀರದಿಂದಲೂ ಮುಂದಾದಾಗ, "ಸುಮ್ಮನೆ ಕಾಡಿ, ಬೇಡಿ
ಬಾಡದಿರು!" ಎಂದು ಅಲ್ಲಮ ತಿಳಿಸುತ್ತಾನೆ. ಎದುರಿಗಿದ್ದ ಅಲ್ಲಮನಿಗೆ "ಬಿಡೆ
ನಿನ್ನ" ಎಂದು ಮಾಯೆ ಹೇಳಲಾಗಿ,

ಅಲ್ಲಮ— "(ಗಹಗಹಿಸಿ) ಬಯಲು ಬಂಧಿಸುವೆಯಾ ಮಾಯೆ
ಹಹ್ಹಹ್ಹ...."ಅವನ ದನಿ ಬಯಲನ್ನು ಮೀರಿ ಕೈಲಾಸದಲ್ಲಿ ನುಡಿಯುತ್ತಿರು
ವಾಗ ಶಿವನೂ ಅದಕ್ಕೆ ದನಿಗೂಡಿಸುವನು.

ಆಗ ಪಾರ್ವತಿಗೆ ತನ್ನ ಶಪಥ ವಿಫಲವಾದ ಅರಿವಾಯಿತು. ದೇವನಿಗೆ
ಇದೇನು ಉಪಹಾಸವೇ ಎಂದು ನುಡಿಯುವಳು. ಶಿವನು ಅಲ್ಲಮನನ್ನು
ಗೆದೆಯುವ ಆತ್ಮರತಿ ಮತ್ತು ಸಾತ್ವಿಕ ಸಂಪತ್ತನ್ನು ತಿಳಿಸುವನು. ನಿರ್ಮಲ
ಸುಮತಿಯರ ಮಗಳಾಗಿ ಜನಿಸಿ, ಮಹಾದೇವಿಯೆನಿಸಿ ಮಾಯಾ ಕೋಲಾ
ಹಲನಾದ ಅಲ್ಲಮನನ್ನೇ ವಾದದಲ್ಲಿ ಜಯಿಸಿ" ನಿಲ್ಲಲಿ ಎಂಬುದನ್ನು ಶಿವ
ಶಕ್ತಿಗೆ ತಿಳಿಸುವನು. ಆಗ ಪಾರ್ವತಿ ಹರ್ಷಿತಳಾಗುವಳು. ದೇವಗಣ ಹಿಗ್ಗು
ವುದು. ಜಗದೀಶ್ವರನಿಗೆ ಜಯ ಹೇಳುವರು. ಇಲ್ಲಿಗೆ ಮಾಯಾ ಕೋಲಾಹಲ
ಮುಕ್ತಾಯವಾಗುವುದು.

ನಾಟಕ ಮುಗಿದಾಗ, ಓದುಗನಿಗೆ ಮಾಯಾ ಕೋಲಾಹಲದ ಬಗ್ಗೆ
ಮುಂದಿನ "ಮಹಾದೇವಿ" ಬಗ್ಗೆ ಆತುರ ಮೂಡಿ ನಿಲ್ಲುವುದು. ಆದರೆ ಆ
ಭಾಗವನ್ನು ಕಾವ್ಯಾನಂದರು ಇಲ್ಲಿ ರಚಿಸದೆ ಹೋದರು. ಮಾಯಾ ಕೋಲಾ
ಹಲದ ಚೌಕಟ್ಟಿನಲ್ಲಿ ನಾಟಕ ಚಾಮರಸನ ಕಾವ್ಯ ವಸ್ತುವಾದರೂ ಗದ್ಯ
ದಿಂದ ಸ್ವತಂತ್ರ ರಚನೆಯಾಗಿ ನಿಲ್ಲುವದು. ಉತ್ತರ ಕರ್ನಾಟಕದ ಜಾನ
ಪದ ನಾಟಕಗಳಲ್ಲಿ "ಮಾಯೆ" ಆಟವು ಇದೆ. ಅದನ್ನು ಕೆಲವರು ಸಣ್ಣಾಟ
ವನ್ನಾಗಿಯೂ, ಕೆಲವರು ದೊಡ್ಡಾಟವನ್ನಾಗಿಯೂ ಆಡುವರು. ಅಲ್ಲಮ

ಮಾಯೆಯರ ಮುಖಾಂತರ ತತ್ವವಿವೇಚನೆಯೇ ಮುಖ್ಯ. ಅದು ಮಾಯೆ ಜಾನಪದ ಆಟದಲ್ಲಿ ಹೆಚ್ಚಿಗಿದೆ. ಆದರೆ ಈ ನಾಟಕದಲ್ಲಿ ತತ್ವ ವಿವೇಚನೆ ಗಿಂತ ಕಥೆ ಶ್ರೀಸಾಮಾನ್ಯರ ಹೃದಯಕ್ಕೆ ಮುಟ್ಟುವಂತಾಗಿದೆ. ಮತ್ತು ಕಾವ್ಯಾನಂದರ ವಿಶಿಷ್ಠ ಕಾವ್ಯಮಯ ಶೈಲಿಯಿಂದ ನಾಟಕದ ಗಾತ್ರ ಕಿರಿದಾದರೂ ಹಿರಿತನವನ್ನು ಪಡೆದಿದೆ.

೪

"ಷಾನಿಗೆ ಶ್ರದ್ಧಾಂಜಲಿ" ನಾಟಕವು ರಜತ ರೇಖೆಯ ನಾಲ್ಕನೆಯ ನಾಟಕವು. ಷಾನ ಜೀವನವನ್ನು ಮತ್ತು ಕೃತಿಗಳನ್ನು ಅರಿತು, ಮೂಡಿಸಿ, ಬರೆದ ಸ್ವತಂತ್ರ ಕೃತಿ "ಷಾನಿಗೆ ಶ್ರದ್ಧಾಂಜಲಿ" ಜಾರ್ಜ ಬರ್ನಾರ್ಡಷಾ ವೈಚಾರಿಕ ಜಗತ್ತಿನ ಅರಸನಾಗಿದ್ದಾನೆ. ಉಷಾರಾಣಿ, ಶಿಶಿರ ಕುಮಾರ, ತಾರಾನಾಥ, ಸೂರ್ಯಕಾಂತ, ಚಂದ್ರಕಾಂತ, ಇವರೆಲ್ಲರೂ ಷಾನ ಮರಣದ ನಂತರ ಅವನ ಬಗ್ಗೆ ಚರ್ಚೆ ಮಾಡುತ್ತಾರೆ. ಸಮೀಕ್ಷೆಯಿಂದ ವಿವರಣೆ ನೀಡುತ್ತಾರೆ.

ಉಷಾರಾಣಿ ಶಿಶಿರ ಕುಮಾರನ ಮ್ಲಾನವಾದ ಮುಖವನ್ನು ನೋಡಿ ಮಾತನಾಡಿಸುತ್ತಾಳೆ. ಶಿಶಿರ ಕುಮಾರ ತನ್ನ ನೋವನ್ನು ವಿವರಿಸುತ್ತ ಷಾನ ಬಗ್ಗೆ ಮಾತನಾಡುವನು. ಬಳಿಕ ಉಳಿದ ಪಾತ್ರಗಳೆಲ್ಲ ಬಂದು ಷಾನ ಕೃತಿಗಳನ್ನು ಮತ್ತು ಜೀವನವನ್ನು ಕುರಿತು ಸಮೀಕ್ಷೆ ನಡೆಸುವವು. ಶಿಶಿರ ಹೇಳುವಂತೆ "ಜಗತ್ತಿನ ಸಲುವಾಗಿ " ಷಾ ಇನ್ನಷ್ಟು ದಿನ ಬದುಕಬೇಕಾಗಿತ್ತು ಎಂಬ ಮಾತಿನ ಮಹತಿಯನ್ನು ಉಷಾರಾಣಿ ಒಪ್ಪದೇ ವಾದ ಮಾಡುವಳು. ಶಿಶಿರನಿಗೆ ಬೆಂಬಲವಾಗಿ ತಾರಾನಾಥ ಗಾಂಧೀಜಿಯನ್ನೂ ಷಾನನ್ನೂ ತೂಗಿ ನೋಡುವನು. ಉಷಾರಾಣಿ ಗಾಂಧೀಜಿಯವರ ಪಾತ್ರವನ್ನು ಎತ್ತಿ ಮಾತಾಡುವಳು. ಗಾಂಧೀಜಿಯನ್ನು ಸ್ತ್ರೀ ಸಮಾಜದ ಉದ್ಧಾರಕನೆಂದು ಹೇಳುವಳು. ತಾರಾನಾಥನು ಷಾನ ಮರಣದಿಂದಾದ ಸ್ತ್ರೀ ಸಮಾಜದ ಕಣ್ಣೀರನ್ನು ಹೇಳಿ, ಸ್ತ್ರೀಯರಿಗೆ ಷಾ ರೋಮಾನ್ಸ ಬೇಡ ಬೇಡಿರಿ ಫೈನಾನ್ಸ ಬೇಡಿರಿ ಎಂಬ ಮಾತನ್ನು ನೆನಪಿಗೆ ಹಾಕುವನು. ಸೂರ್ಯಕಾಂತನು ಷಾನು ಪ್ರತಿಭಾಶಾಲಿ ಎಂಬುದರಲ್ಲಿ ಸಂಶಯವಿಲ್ಲವೆಂಬ ಮಾತನ್ನು ತಿಳಿಸಿದರೆ, ಚಂದ್ರಕಾಂತನು ಷಾನ "ಜೀವನ ಶಕ್ತಿ" ಬರ್ಗಸನ್ನನ "ಜೀವನ ಸತ್ವ" ಕೃತಿಗಳ ಅತಿ-ಮಾನಸ ವಾದಗಳನ್ನು ಎತ್ತಿ ಹಿಡಿಯುತ್ತಾನೆ. ಮತ್ತು ವಿಮರ್ಶಿಸುತ್ತಾನೆ. ತಾರಾನಾಥನು ಷಾನು ಹುದ್ದರಿಗಳನ್ನು ನೆನೆಯುವ ಬಗೆಯನ್ನು ಅರಹುತ್ತಾನೆ. "ವಿಚಾರಕ್ಕಿಂತ ಜೀವನವು ದೊಡ್ಡದು, ಅದನ್ನು ನಿರಾಕರಿಸಬೇಡ, ಜೀವನಶಕ್ತಿ ಎಲ್ಲಕ್ಕಿಂತ ದೊಡ್ಡ ತತ್ತ್ವ, ಅದೊಂದೇ ಸತ್ಯ, ಅದನ್ನು ಸ್ವೀಕರಿಸು ಅನ್ನುತ್ತಾನೆ ಷಾ" ಇಂತಹ ವಿಚಾರಗಳನ್ನು ಶ್ರೀ ಸಿದ್ಧಯ್ಯಾ ಪುರಾಣಿಕ ಅವರು ಸಹಜಶಕ್ತಿಯಿಂದ ಪಾತ್ರ ಮುಖೇನ ಅರುಹಿದ್ದಾರೆ.

ಸೂರ್ಯಕಾಂತ ಡಾರ್ವಿನ್ನನ ವಿಕಾಸವಾದವನ್ನು ಕೆದರಿದಾಗ, ಅತಿಮಾನವನ ನಿರ್ಮಾಣವನ್ನು ಷಾ ತೋರಿಸಿಕೊಟ್ಟ ಬಗೆಯನ್ನು ತಾರಾನಾಥ ತಿಳಿಸುತ್ತಾನೆ. ಮತ್ತು ಷಾನ ಅಖಂಡ ಆಶಾವಾದಿತ್ವವನ್ನು ಅರಹುತ್ತಾನೆ. ಷಾ ಪ್ರೇಮದ ಪ್ರೇಮ ಬೇಕೆನ್ನುತ್ತಾನೆ. ಷಾ ಯುದ್ಧ ಬೇಡವೆನ್ನುವ ವಿಚಾರದವನಲ್ಲ; ಆದರೆ ಯುದ್ಧದ ಮೋಹ ಬೇಡವೆನ್ನುವ ವಿಚಾರವಾದಿ. ಪರಂಪರಾಗತವಾಗಿ ಬೆಳೆದು ಬಂದ ತಪ್ಪು ನೀತಿಗಳನ್ನು ಖಂಡಿಸುತ್ತಾನೆ. ಷಾನ ಈ ಬಗೆಯ ವ್ಯಕ್ತಿತ್ವವನ್ನು ತಿಳಿಸಿದಾಗ, ರುಚಿಯಾದ ಪ್ರಶ್ನೆಗಳೊಂದಿಗೆ ಉಷಾರಾಣಿ ಮಾತಾಡುತ್ತಾಳೆ. ಮತ್ತು ರೂಪಲಾವಣ್ಯಗಳ ಅರಳುವಿಕೆಯನ್ನು ವಿವರಿಸುತ್ತಾಳೆ. ತಾರಾನಾಥ ಅದಕ್ಕಿಂತಲೂ ಮಿಗಿಲಾದ ಷಾನ ಆತ್ಮಾನುಭೂತಿ (Self consciousness) ಯನ್ನು ತಿಳಿಸುತ್ತಾನೆ. ಅವನ ಸಿದ್ಧಿಯ ಬಗೆಗೆ ಯಾರಿಗೂ ಸಂಶಯ ಬೇಡವೆನ್ನುತ್ತಾನೆ. ಇವಕ್ಕೆ ಅವನ ಕೃತಿಗಳೇ ಆಧಾರ.

"ಷಾ ಸಾಹಿತಿ, ರಾಜಕಾರಣಿ, ಕಲಾವಿಮರ್ಶಕ ಫೇಬಿಯನ್ ಪ್ರಭೇದದ ಸಮಾಜವಾದಿ ಅರ್ಥ ಶಾಸ್ತ್ರಜ್ಞ, ಪ್ರಾಣಿಶಾಸ್ತ್ರ ಪಾರಂಗತ, ಮೂರ್ತಿಭಂಜಕ ದಾರ್ಶನಿಕ, ಪತ್ರಿಕಾ ಲೇಖಕ, ಸ್ವತಂತ್ರನೀತಿ ಪ್ರಣಾಲಿಯ ಪ್ರತಿಪಾದಕ, ಪ್ರಚಾರಕ, ಮಾತುಗಾರ, ಸೃಜನ ಶೀಲ, ವಿಕಾಸವಾದಿ, ಶಾಕಾಹಾರವಾದಿ ಇನ್ನೂ ಏನೇನೋ !" ಎಂದು ಹೇಳುವ ತಾರಾನಾಥ ಮನಬಿಚ್ಚಿ ಮಾತನಾಡಿದನು. ಷಾ ಸಾಮಾನ್ಯರ ಬಗೆಗೆ ಆದರ ಉಳ್ಳವನಾಗಿದ್ದನು. ಕ್ರಿಸ್ತನ ಬಗ್ಗೆ ಪೂಜ್ಯಭಾವ ಧರ್ಮದ ಬಗ್ಗೆ ಹೆಮ್ಮೆ. ಈ ಮಹಾನಾಟಕಕಾರ ಧರ್ಮವನ್ನು ಹುಡುಕುವದರಲ್ಲಿ ಅಲ್ಲಲ್ಲಿ ಪಳಗಿದವನು.

......ನನಗೆ

ಧರ್ಮಮಂ ಬಿಟ್ಟನ್ನ ಸಿರಿಯಿಲ್ಲ. ಧರ್ಮಸಹಿತಂ

ವಿಪಿನನರಮನೆ; ಧರ್ಮರಹಿತಮೀ ರತ್ನಮಯ
ರಾಜ ಸೌಧಂ ಸ್ಮಶಾನಕೆ ಮಿಗಿಲ್ ಭೀಕರಂ.

ಎಂದು ಶ್ರೀರಾಮಚಂದ್ರನು ವಿಪಿನಾಂತರಕ್ಕೆ ಹೊರಟಾಗ ತನ್ನ ನಿರ್ಧಾರವನ್ನು ಹೇಳುವನು. ಇಲ್ಲಿ ಶ್ರೀರಾಮಚಂದ್ರ ಮಹಾಕವಿ ಕುವೆಂಪು ಧರ್ಮದ ಬಗೆಗೆ ಮುಖವನ್ನು ತೋರಿದರೆ, ಷಾನ ಬಗ್ಗೆ ಕವಿ ಕಾವ್ಯಾನಂದರು ಧರ್ಮದ ಮೂರು ಮುಖಗಳನ್ನು ಅವನ ಜೀವನದಲ್ಲಿ ತೋರಿದ್ದಾರೆ. ಈ ಎಲ್ಲ ವಿಚಾರಗಳಲ್ಲಿ ಷಾನನ್ನು ಉಷಾ ಮಹಾಮಾನವ ಮತ್ತು ಮಹಾ ಪುರುಷ ಎಂದು ಒಪ್ಪುತ್ತಾಳೆ. ಬಳಿಕ ಶಿಶಿರ ಷಾನ ಸ್ಮಾರಕ ಬಗ್ಗೆ ಸೂಚನೆಯನ್ನು ಕೇಳಿಕೊಳ್ಳುತ್ತಾನೆ. ಷಾನ ನಾಟಕವನ್ನು ಕನ್ನಡಿಸುವದೇ ನಿಜವಾದ ಶ್ರದ್ಧಾಂಜಲಿ ಎಂದು ತಾವೆಲ್ಲರೂ ಒಪ್ಪುವರು. ಇಲ್ಲಿಗೆ ನಾಟಕ ಮುಗಿಯುಯುತ್ತದೆ.

ಕಾವ್ಯಾನಂದರ ಈ ರೂಪಕದ ಬಗ್ಗೆ ಹೆಮ್ಮೆಪಡಬೇಕೆಂದೆನಿಸುತ್ತದೆ. ಅವನ ಒಂದಾದರೂ ಕೃತಿಯನ್ನು ನಾಟಕಕಾರರು ನಾಟಕದಲ್ಲಿ ವಿಮರ್ಶಿಸದೆ ಪರಿಚಯ ರೂಪವನ್ನು ಪಾತ್ರಗಳಿಂದ ಆಡಿಸಿದ್ದಾರೆ. ಒಂದಾದರೂ ಕೃತಿ ವಿಮರ್ಶಿಸಿದ್ದರೆ ? ಎಂಬ ಪ್ರಶ್ನೆ ಬರುವುದು. ಆದರೆ ನಾಟಕ ಮತ್ತೊಂದು ರೂಪವನ್ನು ತಾಳುತ್ತಿತ್ತು.

೫

"ತುಂಗಭದ್ರೆ ಮಂಗಲೆ" ರಜತ-ರೇಖೆಯ ಐದನೆಯ ನಾಟಕವು. ತುಂಗಭದ್ರಾ ಯೋಜನೆಯು ಕನ್ನಡ ನಾಡಿನ ಸಿರಿ ಹಬ್ಬಿಸುವ ಸಫಲತೆಯ ಸ್ಮಾರಕ. ನದಿಗಳೆಲ್ಲವೂ ಭಗಿನಿಯರಾಗಿ ಪ್ರತ್ಯಕ್ಷ ಮಾತನಾಡುವ ಶೈಲಿಯನ್ನೂ ಸಜೀವತನವನ್ನೂ ನಾವಿಲ್ಲಿ ಕಾಣುತ್ತೇವೆ. ಪ್ರಾರಂಭದಲ್ಲಿ ಕವಿ ಕಲ್ಪನೆ ಸುಂದರತನದಿಂದ ಸಾಗಿದೆ. ಹರಿಯು ವಿಶ್ವವನ್ನು ಬದುಕಿಸಿದ ರೀತಿ, ವಿಷ್ಣುವು ವರಾಹವಾಗಿ ವಿಶ್ವವನ್ನೆತ್ತಿ ಪ್ರತಿಷ್ಠಾಪನೆ ಮಾಡಿದಾಗ, ಅವನ ಬೆವರು ಕೋರೆಯಿಂದಿಳಿದು ತುಂಗೆಯಾಗಿ, ಇನ್ನೊಂದು ಕೋರೆಯಿಂದಿಳಿದ ಬೆವರು ಭದ್ರೆಯಾಗಿ ಅವಳಿ ನದಿಗಳಾಗಿ ಬೇರೆ ಬೇರೆ ಹರಿದು ಕೂಡಲಿ ಕ್ಷೇತ್ರದಲ್ಲಿ ಸಂಗಮವಾಗಿ ತುಂಗಭದ್ರೆಯೆಂದು ಹೆಸರಿಸಿಕೊಳ್ಳುತ್ತಾರೆ. ಭದ್ರೆ ತುಂಗೆ



ಯನ್ನು ಪ್ರೀತಿಯಿಂದ ಕರೆಯುತ್ತಾಳೆ. ತುಂಗೆ ತನ್ನನ್ನು ಬಿಗಿದಪ್ಪಲು ಸ್ವಾಗತವನ್ನೀಯುತ್ತಾಳೆ. ಕೂಡಲಿಯಲ್ಲಿ ಅವರಿಬ್ಬರ ಮಧುರ ಮಿಲನವಾಗುತ್ತದೆ.

ಕುಮುದ್ವತಿ ಮತ್ತು ವರದೆಯರು ಭಗಿನಿಯರಾಗಿ "ತುಂಗಾಪಾನ"ದ ಮಹಿಮೆ ಹೇಳಿ ತಾವು ಕೂಡಿಕೊಳ್ಳುತ್ತಾರೆ. ಇವರಂತೆಯೇ ಹರಿದ್ರಾ ವೇದಾವತಿಯರೂ ಮಿಲನವಾಗುತ್ತಾರೆ. ತುಂಗಭದ್ರೆಯನ್ನು ಮಂಗಲಾಂಗಿನಿ ಎಂದು ಹೆಸರಿಸುತ್ತಾರೆ. ನಾಟಕದಲ್ಲಿ ಕತೆಗಾರನು ಕಾಲಗರ್ಭದ ಲೀಲೆಯನ್ನು ಹೇಳುತ್ತ ನಡೆಯುತ್ತಾನೆ.

"ನದಿಗಳ ದಡದಲ್ಲಿ ನೀರಡಿಕೆಯೆಂದರು" ಎಂಬಂತೆಕ್ಷಾಮಪ್ರದೇಶಗಳಾದ ರಾಯಚೂರ, ಬಳ್ಳಾರಿ, ಕರ್ನೂಲ ಪ್ರದೇಶಗಳ ಸ್ಥಿತಿಯಾಗಿತ್ತು. ಈ ಪ್ರದೇಶದ ಕ್ಷಾಮ ಕಳೆಯಲು ೧೬೫ ಅಡಿ ಎತ್ತರ; ೧೫೦ ಅಡಿ ಅಗಲ, ೮೦೦೦ ಅಡಿ ಉದ್ದ ಕಟ್ಟೆಯನ್ನು ಕಟ್ಟಿದ್ದಾರೆ. ಪಂಪನಾಥನ ಸಮೀಪದಲ್ಲಿ ನಿಂತು ಜೀವಿಗಳನ್ನು ಸಂತಯಿಸಿ, ಸಮುದ್ರನಾಥನನ್ನು ಸೇರುವ ಬಗೆಯನ್ನೂ, ಮಾನವರು ವಿಜಯಿಗಳಾದ ಬಗೆಯನ್ನೂ ತುಂಗಭದ್ರೆ ವಿವರಿಸುತ್ತಾಳೆ. ಸಮುದ್ರನಾಥನ ಬಗೆಗೆ ಭಗಿನಿಯರೆಲ್ಲರೂ ಚಿಂತಿಸುತ್ತಾರೆ. ಮಾಡುವುದೇನು ? ಮಾನವರ ಸುಖಕ್ಕಾಗಿ ಈ ಕಟ್ಟೆಯ ಪ್ರೇಮ ಬಂಧನದಲ್ಲಿ ನಿಂತು, ಮತ್ತೆ ಹೆಜ್ಜೆ ಹಾಕಬೇಕು ಸಮುದ್ರನಾಥನಲ್ಲಿ. ಅಷ್ಟರಲ್ಲಿ ತೇಜೋರೂಪೆ ಬಂದು; ತುಂಗಭದ್ರೆಗೆ ಲಕ್ಷಾವಧಿ ಮಾನವರ ಸಲುವಾಗಿ, ಕೋಟ್ಯಾವಧಿ ಸಸ್ಯ ಶಿಶುಗಳ ಸಲುವಾಗಿ, ಪಶುಪಕ್ಷಿಗಳ ಸಲುವಾಗಿ ತ್ಯಾಗಿಯಾಗಿ ನಿಲ್ಲಬೇಕೆಂದು ತಿಳಿಸುತ್ತಾಳೆ. ಈ ಪ್ರದೇಶದ ಬರಗಾಲದ ಭವಣೆಯನ್ನು ತಿಳಿಸುತ್ತಾಳೆ. ಅವರ ಕಣ್ಣೀರು ಮತ್ತು ಸಾವು ಬಾರದಂತೆ ನೀನು "ನೀಡು ನೀರನ್ನಿವರಿಗೆ !" ಎಂದು ಹೇಳುತ್ತಾಳೆ. ನೀರು ನೀಡುವದರಿಂದ ಭೂದೇವಿ ಹಸಿರು ಮಡಿಯನ್ನು ಉಡುವ ರೀತಿಯನ್ನು ತುಂಗಭದ್ರೆಗೆ ತೋಜೋರೂಪೆ ಮತ್ತೆ ವಿವರಿಸುವಳು. ಭೂದೇವಿ ತುಂಗಭದ್ರೆಯಿಂದ "ಸುಜಲಾಂ, ಸುಫಲಾಂ, ಸಸ್ಯಶಾಮಲಾಂ ಆಗಿ ಶೋಭಿಸುವಳು." ಕೃಷ್ಣೆಯ ಕೂಡುವಿಕೆಗಾಗಿ ತುಂಗಭದ್ರೆ ಚಡಪಡಿಸುವಳು. ಕೃಷ್ಣೆಯೂ ಮುಂದಿನ ಯೋಜನೆಗಳಲ್ಲಿ ನಿನ್ನಂತೆ-ತ್ಯಾಗಮಯಳಾಗುವಳೆಂಬ ಬಗೆಯನ್ನು ತೇಜೋರೂಪೆ ಮನದಟ್ಟು ಮಾಡಿಕೊಡುವಳು. ತೇಜೋರೂಪೆ ತುಂಗಭದ್ರೆಗೆ ಅಮರಳಾಗುವ ಬಗೆಯನ್ನು

ಆಕೆಯ ದಡದಲ್ಲಿ ಹೆಸರುವಾಸಿಯಾದ ಮಹಾಪುರುಷರ ಹೆಸರುಗಳನ್ನು ಹೇಳಿ; ಮುಂಬರುವ ಐತಿಹ್ಯವನ್ನೂ ವಿವರಿಸಿ ಇಂದಿನಿಂದ "ತುಂಗಭದ್ರೆ ಮಂಗಲೆ! ಎಂದು ಹೆಸರಿಸಿ; ಜಯಗೀತ ಹೇಳುತ್ತಿರುವಾಗಲೇ ವೃಂದಗೀತೆಯು ಮೊಳಗಿತು.

ನಾಡಿನ ನದಿಗಳಿಗೆ ಕಟ್ಟುವ ಕಟ್ಟೆಯೊಂದರ ಈ ಘಟನೆಯಿಂದ ಕವಿ ಕಾವ್ಯಾನಂದರು ಪ್ರತ್ಯಕ್ಷ ಜಲದೇವತೆಯರನ್ನು ಪಾತ್ರ ಸೃಷ್ಟಿಗೆ ತಂದು, ಜನಜೀವನದ ಸಂಪತ್ತಕ್ಕೆ ಎಂತಹ ಅದ್ಭುತ ರಮ್ಯವನ್ನೂ ಸರಾಗವಾಗಿ ಕುಣಿಸಿ ಬಿಟ್ಟಿದ್ದಾರೆ. ಅವರಿಗಿರುವ ಅಧ್ಯಾತ್ಮ ಹಾಗೂ ಭೌಗೋಲಿಕ ಜ್ಞಾನಕ್ಕೆ ಈ ನಾಟಕ ಸಾಕ್ಷಿ. ಅವರು ಸಾಹಿತ್ಯಮಯವಾಗಿ ಚಿತ್ರಿಸಿರುವ ಈ ನಾಟಕ ಸಾಹಿತ್ಯಕ್ಕೂ ನಾಡಿನ ಜನತೆಗೂ ಐತಿಹ್ಯ ನಿರ್ಮಿತಿಗೂ ಕಾರಣ. "ಸಾಹಿತ್ಯವು ಸಂತೋಷಕ್ಕಾಗಿ ಎಂದು ಹೇಳುತ್ತೇವೆ. "ಕಾವ್ಯಮಾನಂ. ದಾಯ" ಎಂಬ ಉಕ್ತಿ ಪ್ರಸಿದ್ಧವಾಗಿದೆ. ಸಾಹಿತ್ಯ ನಿರ್ಮಿತಿಯಿಂದ ಸಾಹಿತಿ- ಸಂತೋಷ ಹೊಂದುತ್ತಾನೆ. ರಸಿಕರಿಗೆ ಅದನ್ನು ನೀಡುತ್ತಾನೆ. ಸಾಹಿತ್ಯದಿಂದ ಮುಖ್ಯವಾಗಿ ಬಯಸಬೇಕಾದದ್ದು ನಿರ್ಮಿತಿಯ ಮತ್ತು ಅದರ ರಸಗ್ರಹಣದ ಆನಂದ." * ಸ್ವರಚಿತ ವಸ್ತುವಿನ ಆಯ್ಕೆಯಲ್ಲಿ ನಾಟಕಕಾರರಾದ ಶ್ರೀ ಸಿದ್ಧಯ್ಯಾ ಪುರಾಣಿಕ ಅವರಿಗೆ ಈ ಮಾತು ಸಲ್ಲದೇ ಇಲ್ಲ.

೬

"ದುಃಖ ಸೇತು" ರಜತ ರೇಖೆಯ ಆರನೆಯ ನಾಟಕವು. ನಾಟಕ ಕಾರರು ವಸ್ತುವನ್ನು ಬಿ. ಎಂ. ಶ್ರೀಯವರ ಇಂಗ್ಲೀಷ ಗೀತೆಯಿಂದ ಆಯ್ಕೆ ಮಾಡಿ ಸ್ವತಂತ್ರ ನಾಟಕ ಸೃಜಿಸಿದ್ದಾರೆ.

ನಿರ್ಗತಿಕಳಾಗಿ ಸಾವನ್ನಪ್ಪಿದ ಭಗಿನಿಯನ್ನು ಪರಿಚಯಿಸಲು ಉಷಾ ಮತ್ತು ಆಶಾ ಸಾಗುತ್ತಾರೆ. ಅವರ ಮಾತುಗಳೆಲ್ಲವೂ ಕಾವ್ಯಮಯ. ಅವರ ಹೇಳುವಿಕೆಯಲ್ಲವೂ ಹೃದಯಂಗಮಯ. ಅದರಿಂದ ಪರಿಚಯವಾಗುವದಿಲ್ಲ- "ಹೆಣ್ಣು ಹೆಣ್ಣಲ್ಲ; ಹೆಣ್ಣು ರಕ್ಕಸಿಯಲ್ಲ; ಹೆಣ್ಣು ಪ್ರತ್ಯಕ್ಷ ಪರಮಾತ್ಮ" ಈ

* ರಂ. ಶ್ರೀ. ಮುಗಳಿ. ಸಾಹಿತ್ಯ ವಿಮರ್ಶೆಯ ಮಾರ್ಗದರ್ಶಕ ಸೂತ್ರಗಳು ಪು. ೬೯.



ಸ್ಥಿತಿಯಲ್ಲಿದ್ದರೂ, ಊರಲ್ಲಿ ಮನೆ-ಜನ-ನೆರೆ ಇವಳಿಗಿಲ್ಲದುದರಿಂದ ಅನಾಥೆ ಯಾಗಿದ್ದಾಳೆ. "ಮರಣವೇ ಶರಣು !" ಎಂದಿದ್ದಾಳೆ. ಆಶಾ ನಿಷ್ಕರುಣಿಯನ್ನು ನಿಂದಿಸುತ್ತಾಳೆ. ಆದರೆ ಆಕೆಯಲ್ಲಿ ರೋಷ ಮತ್ತು ದುಃಖಗಳೇಳುತ್ತವೆ. ಮೋಸದ ಬಗ್ಗೆ ಕೊರಗುತ್ತಾಳೆ. ಮೋಹದಿಂದ ಮೋಸ ಬಂದದ್ದನ್ನು ಗೊತ್ತು ಹಚ್ಚುತ್ತಾಳೆ. ಈ ಮೋಸಕ್ಕಾಗಿ ಬಾಳನ್ನೇ ಬೀಸಾಡಿದ ಬಗೆಯನ್ನು ಪ್ರೇಕ್ಷಕ ರಿಗೆ ತಿಳಿಸುತ್ತಾಳೆ. ಈ ಭೂಮಿಯಲ್ಲಿ ನಡೆದ ದುಃಖಗಳ ಪಟ್ಟಿಯನ್ನು ಮರ- ಕಳಿಸುತ್ತಾಳೆ. ಹೆಣ್ಣು ಜೀವಿಗಳು ಹತಭಾಗ್ಯರಾದ ಬಗೆಯನ್ನು ನೆನಪಿಸಿ, ನಿರ್ಭಾಗ್ಯ ಸಹೋದರಿ ಗತಿಗಾಣದೆ ಹೊಳೆಗೆ ಹಾರಿದ ಬಗೆಯನ್ನು ಮುಳುಗಿ ತೇಲಿದ ಸಂಕಟವನ್ನು ತೊರೆಯಂತೆ ತೋರುತ್ತಾಳೆ ಉಷಾ. ಮಾನಭಂಗ ಮಾಡಿದ ಕಾಮುಕನನ್ನು ಕರೆಯುತ್ತಾಳೆ. "ಇವಳೊಡನೆ ಮುಳುಗ ಬಾ, ಪಾಪಿ ಇವಳೊಡನೆ ಮುಳುಗ ಬಾ" ಎಂದು ಕರೆಯುತ್ತಾಳೆ. ಆ ಪಾಪಿ ಎಲ್ಲಿ ! ಮೋಸಗಾರ !! ಬಳಿಕ ವಿಧಿಯನ್ನು ಹಳಿಯುತ್ತಾಳೆ. ಆಮೇಲೆ ಉಷಾ- ಆಶಾರು ತಪ್ಪು ಯಾರದೆಂಬ ಚರ್ಚೆ ಮಾಡುತ್ತಾರೆ. ವಾದ ವಿವಾದ ಅವ- ರೀರ್ವರಲ್ಲಿ ನಡೆಯುತ್ತದೆ. ಇವರೀರ್ವರ ಈ ಚರ್ಚೆ, ವಿಮರ್ಶೆ, ಸಮೀಕ್ಷೆ ಗಳಲ್ಲಿ ದುಃಖವೇ ತೂರಿ ಬರುತ್ತದೆ. ಕೊನೆಗೀರ್ವರೂ ಜಗದ ತಂದೆಯಲ್ಲಿ ಮೊರೆಹೋಗುತ್ತಾರೆ. ಆಹುತಿಯಾದ ಆ ಸಹೋದರಿಯನ್ನು ಸ್ವೀಕರಿಸೆಂದು ಆ ಕರುಣ ಸಿಂಧುವನ್ನು ಕೇಳಿಕೊಳ್ಳುತ್ತಾರೆ. ಇಲ್ಲಿಗೆ ಈ ನಾಟಕವು ಮುಕ್ತಾಯವಾಗುತ್ತದೆ.

ನಾಟಕವು ಈರ್ವರಿಂದ ಸಾಗಿದರೂ ಹೃದಯ ಪರಿವರ್ತನೆಗೆ ವಿಚಾರ ವೈಖರಿಗೆ ಮಾದರಿಯದಾಗಿದೆ. ಸಮಾಜದ ಅರಿವನ್ನು ಮೂಡಿಸುವಲ್ಲಿ; ರೀತಿ- ನೀತಿಗಳ ಬಲಾಬಲವನ್ನು ತೋರಿಸುವಲ್ಲಿ; ಅನ್ಯಾಯವನ್ನು ರಾಹುಗನ್ನಡಿ ಯಲ್ಲಿ ನಿಲ್ಲಿಸಿ; ತೋರುವಲ್ಲಿ ಕಾವ್ಯಾನಂದರ ಈ ನಾಟಕವು ಸಫಲವಾಗಿದೆ.

೭

"ರಜತರೇಖೆ" ನಾಟಕವು ರಜತ ರೇಖೆಯ ನಾಟಕ ಮಂಜರಿಯ ಏಳ ನೆಯ ಫಲವಾಗಿದೆ. ಮಳೆಗಾಲದ ಮೇಘ ಮಾಲೆಯಲ್ಲಿಯ ಮಿಂಚು, ಗುಡುಗು, ಸಿಡಿಲು ಮತ್ತು ಮಳೆಯನ್ನು ಕಂಡು; ಕವಿ ತತ್ವದರ್ಶಿ, ವಿಜ್ಞಾನಿ, ನರ್ತಕಿ, ರಾಜಕಾರಣಿ, ವ್ಯಾಪಾರಿ, ವಿರಹಿಣಿ, ತಾತ್ವಿಕ ಇವರೆಲ್ಲರೂ ತಮ್ಮ

ತನ್ನ ಮನೋಭೂಮಿಕೆಯಿಂದ ಹೊರಹೊಮ್ಮಿಸಿದ ವಿಚಾರಗಳೇ ರಜತ ರೇಖೆಯ ವಿವರಣೆಯಾಗಿದೆ.

ಕವಿ ಶ್ಯಾಮಲ ಮೇಘ ಮಂಡಲವನ್ನು ವರ್ಣಿಸುವನು. ಕವಿಗೆ ಮೂಢನೆಂದು ಕರೆದವರಿಗೆ ಬ್ರಹ್ಮಸೃಷ್ಟಿಯ ವಿವರಣೆ ಹೇಳುವನು. ಸೌಂದರ್ಯದಾನಂದವನ್ನು ವಿವರಿಸುವನು. ಕಾರ್ಮೋಡದಲ್ಲಿ ಮನವನು ಸೆಳೆಯುವ ರಜತ ರೇಖೆಯ ಶಕ್ತಿಯನ್ನು ತಿಳಿಪಡಿಸುವನು. ಇದೆಲ್ಲವನ್ನು ತಾತ್ವಿಕನು "ಒಪ್ಪಿದೆ ಕವಿ ಸುಂದರ ಭುವಿ" ಎಂದು ಒಪ್ಪಿಗೆ ಕೊಟ್ಟು; ರಜತ ರೇಖೆಯಿಂದ "ನಂದನವಾಗಲಿ ನಮ್ಮಿಯ ಚೆಲುವು ಭುವಿ" ಎಂದು ಕೋರಿಕೆ ಇಡುವನು.

ತತ್ವದರ್ಶಿ ಕವಿಗೆ ಬೆಂಬಲಿಗನಾಗಿರುವನು. ಕವಿ ದೃಷ್ಟಿಗೆ ಮೋಡವು ಮೂಲವಾಗಿದೆ ಎಂದು ಹೇಳಿ ಹೆಚ್ಚಿನ ವಿವರವನ್ನು ಕವಿಯಿಂದಲೇ ಕೇಳುವನು.

ವಿಜ್ಞಾನಿಯು ಯಂತ್ರಬಲಗಳಿಂದ ಮೋಡಗಳನ್ನು ನಿರ್ಮಿಸುವೆನು ಎಂದು ಹೇಳಿಕೆಗಳನ್ನಿಡುವನು. ಇದರಲ್ಲಿ ಅವನ ಹೆಮ್ಮೆ ಮಾತ್ರ ಯಶ ಕಾಣದು.

ನರ್ತಕಿ ನವಿಲಿಗೆ ಕುಣಿಯಲು ಹೇಳುವಳು. ಮಿಂಚಿನ ಗೊಂಚಲದ ಚೆಲುವನ್ನು ಮತ್ತು ಗುಡುಗು-ಸಿಡಿಲುಗಳ ಸಂಗೀತವನ್ನು ಕುಣಿತದಲ್ಲಿ ಅಳವಡಿಸಲು ಪ್ರಯತ್ನಿಸುವಳು.

ರಾಜಕಾರಣಿಯು ಮಳೆ ಬಂದರೆ, ಅನಾಹುತವಾಯಿತೆಂದೂ, ಚುನಾವಣೆ ನಡೆಯುವದಿಲ್ಲವೆಂದೂ, ತನ್ನ ಭಾಷಣ ಹಾಳೆಂದೂ, ಸ್ವಾರ್ಥದ ಬುಗ್ಗೆಯಾಗಿ ಮಳೆಯನ್ನು ಶಪಿಸುವನು. ಅದರಂತೆಯೇ ವ್ಯಾಪಾರಿಯ ಗತಿಯಲ್ಲಿ ಕೇಳಿ ಬರುವುದು.

ವಿರಹಿಣಿ ಮೇಘ ಸಂದೇಶವನ್ನು ಕಾಯ್ದು ಮೇಘವನ್ನು ಹಿತ ಬಂಧುವೆಂದು ಕರೆಯುವಳು.

ತತ್ವದರ್ಶಿ ಜಗದ ಜೀವನವನ್ನು ಕಾಯುವ ಸೃಷ್ಟಿ ರಜತ ರೇಖೆಯ ಮಳೆರಾಯನಿಗಿದೆ ಎಂದು ಶಿವನ ರಮಣೀಯ ಸೃಷ್ಟಿಯನ್ನು ಉನ್ಮಾದದಿಂ-ದೊಪ್ಪುವನು.

ಸೃಷ್ಟಿಯಲ್ಲಿ ಮೂಡಿ ನಿಲ್ಲುವ ರಜತ ರೇಖೆಯನ್ನು ಇನ್ನಷ್ಟು ವಿವರಿಸ



ಬೇಕಾಗಿತ್ತೆಂದು ಅನ್ನಿಸುತ್ತದೆ. ರಜತ ರೇಖೆಯನ್ನು ವಿಜ್ಞಾನಿ ಮೂಡಿಸುವ ಬಗೆಯನ್ನು ನಾಟಕಕಾರರು ಇನ್ನಷ್ಟು ರಚಿಸಬೇಕಾಗಿತ್ತು.

೮

"ಗಿರಿಜೆಯ ಗೆಲವು" ರಜತ ರೇಖೆಯ ಕೊನೆಯ ನಾಟಕವು. ಕಾಳಿದಾಸನ ಸಂಸ್ಕೃತ ಕೃತಿ "ಕುಮಾರ ಸಂಭವ" ದಲ್ಲಿ ಮತ್ತು ಹರಿಹರನ ಕನ್ನಡ ಕೃತಿ "ಗಿರಿಜಾ ಕಲ್ಯಾಣ" ದಲ್ಲಿ ಗಿರಿಜೆಯ ಗೆಲುವಿನ ವಸ್ತುವು ಮೂಡಿನಿಂತಿದೆ. ಆ ವಸ್ತುವಿನ ಮೂಲವೇ ಈ ನಾಟಕದಲ್ಲಿದ್ದರೂ, ಈ ಗೀತ ನಾಟಕವು ಸ್ವತಂತ್ರ ಶಕ್ತಿಯಿಂದ ರೂಪ ತಾಳಿದೆ.

ಪಾರ್ವತಿಯು ಪರಮೇಶ್ವರನನ್ನು ಮದುವೆಯಾದುದೇ ನಾಟಕದ ವಿಷಯ. ಆ ಶಿವನಿಗೆ ಮದುವೆ ಮಾಡುವವರಾರು ? ಮದುವೆಯ ಕಾರಣವೇನಿತ್ತು ? ಮದುವೆಯಾಗುವವರಾರು ? ಈ ಪ್ರಶ್ನೆಗಳಿಗೆ ವಿವರವಾದ ಉತ್ತರಗಳನ್ನು ಈ ನಾಟಕದಲ್ಲಿ ಕಾಣುತ್ತೇವೆ. ಶಿವನಿಗೆ ಮದುವೆ ಮಾಡುವ ಮನ-ಸ್ಸನ್ನು ನಾರದರು ಮಾಡಿದರು. ಅದಕ್ಕೆ ತಾರಕಾಸುರನನ್ನು ಕೊಲ್ಲುವದೇ ಕಾರಣವಾಗಿತ್ತು. ಆದರೆ ಶಿವನನ್ನು ವರಿಸುವವಳು ಶಕ್ತಿರೂಪಿಯಾದ ಪಾರ್ವತಿಯಷ್ಟೆ.

ತಪಶ್ಚರ್ಯೆಗೆ ಕುಳಿತ ಶಿವನ ಮನಸ್ಸನ್ನು ಶಕ್ತಿಯೆಡೆಗೆ ಎಳೆಯಬೇಕಾದಲ್ಲಿ ಮದನನು ತನ್ನ ಪೂಬಾಣಗಳಿಂದ ಅವನನ್ನು ಎಚ್ಚರಿಸಬೇಕಾಯಿತು. ಎಚ್ಚರಿತ ಶಿವನ ಉರಿಗಣ್ಣಿನಿಂದ ಮದನ ಸಾವನ್ನಪ್ಪಿದ. ರತಿ ದುಃಖಭರಿತ-ಳಾದಳು. ಈ ಘಟನೆಯೇ ನಾಟಕದ ಘರ್ಷಣೆ. ಶಿವಶಕ್ತಿಯರ ಮಿಲನದಿಂದ ಕುಮಾರ ಜನ್ಮ ತಾಳಿ, ತಾರಕಾಸುರನನ್ನು ಕೊಂದು ಹಾಕುವನು.

ನಾಟಕದ ಪ್ರಾರಂಭವು ಮೇಳ ಸಂಗೀತ, ಗೀತಗಳಿಂದ ಪ್ರಾರಂಭವಾಗುತ್ತದೆ. ಗೀತವು ಸೃಷ್ಟಿಯ ಸೌಂದರ್ಯವನ್ನು ವಿವರಿಸುವುದು.

ನಾಟಕ ಮುಕ್ತಾಯಕ್ಕೆ ಜಗತ್ತಿನ ಮಾತಾಪಿತರಾದ ಶಿವ-ಶಕ್ತಿಯರಿಗೆ ದನಿ ನಮನ ಸಲ್ಲಿಸುತ್ತದೆ.

**ಉಪಸಂಹಾರ**

ಪ್ರಾಚೀನ ವಸ್ತುಗಳನ್ನು ಆಧುನಿಕವಾಗಿ ಚಿತ್ರಿಸುವಂತಹ ಶೈಲಿ ಕಾವ್ಯಾನಂದರಿಗಿದೆ. ಕಾವ್ಯದೃಷ್ಟಿಯಲ್ಲಿ ಕಾವ್ಯಾನಂದರು ಮುಕ್ತಛಂದಸ್ಸಿನಲ್ಲಿಯೂ,

ನಾಟ್ಯ ಛಂದಸ್ಸಿನಲ್ಲಿಯೂ, ಗದ್ಯದಲ್ಲೂ ನಾಟಕಗಳನ್ನು ಸೃಜಿಸಿದ್ದಾರೆ. ಛಂದಸ್ಸಿನ ರಮಣೀಯತೆಯನ್ನು ನಾಟಕದಲ್ಲಿ ಕಾಣದೇ ಇರಲಾರೆವು. ಕಾವ್ಯಾನಂದರ ನಾಟಕ ಛಂದಸ್ಸನ್ನು ಪ್ರತ್ಯೇಕವಾಗಿಯೇ ಬರೆದು, ಓದಿ ತಿಳಿದು ಕೊಳ್ಳಬೇಕು ಮುಖ್ಯವಾಗಿ ಕಾವ್ಯಾನಂದರದು ಕವಿಯ ಹೃದಯ. ಅವರ ಕಾವ್ಯದಿಂದ ನಾಟಕಗಳು ತಾತ್ಕಾಲಿಕ ಮೌಲ್ಯಗಳನ್ನು ಎತ್ತಿ ಹೇಳಿವೆ. ಮುಂದಿನ ನಾಟಕಕಾರರಿಗೂ ಈ ತಾತ್ಕಾಲಿಕ ಮೌಲ್ಯಗಳು ಬಹು ಮೌಲ್ಯವಾಗಿ ಪರಿಣಮಿಸುವದರಲ್ಲಿ ಯಾವ ಆತಂಕವಿಲ್ಲ. ರಜತರೇಖೆ ಒಂದು ಸ್ವತಂತ್ರ ವಿಚಾರ ಶಕ್ತಿಯ ಪ್ರತಿಮೆಯಾಗಿದೆ. ಈ ಕೃತಿ ಸುಂದರವಾದ ನಾಟಕ ಮಂಜರಿ ಎಂದು ಹೇಳುವಲ್ಲಿ ಯಾವ ಸಂದೇಹವೂ ಇಲ್ಲ. ಶ್ರೀ ಸಿದ್ಧಯ್ಯಾ ಪುರಾಣಿಕರ ಹೆಸರನ್ನು ಕನ್ನಡ ನಾಟಕ ಚರಿತ್ರೆಯಲ್ಲಿ ಮೂಡಿಸಿದೆ.

ಗೋಕಾಕ.



## ಭಾರತವೀರ ಮುತ್ತು ಇತರ ನಾಟಕಗಳು

ಕುಲಕೃಷ್ಣ

ಈ ಶತಮಾನದ ಮೂರು ಮತ್ತು ನಾಲ್ಕನೆಯ ದಶಕಗಳು ನಾಡಿನ ಬುದ್ಧಿ ಜೀವಿಗಳಿಗೆ, ಸ್ವಾತಂತ್ರ್ಯ ಪ್ರೇಮಿಗಳಿಗೆ ಪರ್ವಕಾಲವಾಗಿದ್ದುವು. ಅರಿವು ಇದ್ದ ಪ್ರತಿಯೊಂದು ವ್ಯಕ್ತಿ ತನ್ನ ಶಕ್ತ್ಯಾನುಸಾರ ಒಂದಿಲ್ಲೊಂದು ವಿಧದಲ್ಲಿ ದೇಶಸೇವೆಯನ್ನು ಮಾಡಿದ್ದಾನೆ. ಅವರಲ್ಲೆಲ್ಲ ಸಂಘಟನಾ ಚತುರರ ಪಾತ್ರ ಹಿರಿದಾಗಿತ್ತು. ಧಾರವಾಡ ವಿಜಾಪುರ ಬೆಳಗಾವಿಗಳತ್ತ ದಿವಾಕರ ರಂಗರಾಯರು, ಬೇಂದ್ರೆಯವರು ಮಾಡಿದ ಕಾರ್ಯ ಅವಿಸ್ಮರಣೀಯವಾಗಿದೆ. ಅದರಂತೆ ಹೈದರಾಬಾದು ಕರ್ನಾಟಕದಲ್ಲಿ ಸಂ. ತಾರಾನಾಥರಾಯರು, ಮಾನ್ವಿ ನರಸಿಂಗರಾಯರು ಮಾಡಿದ ಕೆಲಸ ಮರೆಯಲಾರದ್ದು. ಅವರ ಗರಡಿಯಲ್ಲಿ ಪಳಗಿದ ಶ್ರೀ ಸಿದ್ಧಯ್ಯ ಪುರಾಣಿಕರು ವಿದ್ಯಾರ್ಥಿದೆಶೆಯಲ್ಲಿಯೇ ಸಾಹಿತ್ಯಕ್ಕೆ ಕೈ ಹಾಕಿ ತನ್ಮೂಲಕ ಜನಜಾಗೃತಿಯನ್ನು ಮಾಡಲು ಪ್ರಯತ್ನಿಸಿದರು. ಅದರ ಫಲ, ಆತ್ಮಾರ್ಪಣ, ಬೆಳವಡಿ ಮಲ್ಲಮ್ಮ, ಮತ್ತು ಕಿತ್ತೂರ ಚೆನ್ನಮ್ಮ ನಾಟಕಗಳ ರಚನೆಯಾದುವು.

ದಾಸ್ಯದ ಶೃಂಖಲೆಗಳನ್ನು ತೊಟ್ಟ ಭಾರತೀಯರಿಗೆ ತಮ್ಮ ಪೂರ್ವಜರ ನೆನಪು ತರುವುದು ಅವಶ್ಯವಾಗಿತ್ತು. ನಾವು ಜಾತ್ಯತಃ ದಾಸರಲ್ಲ. ನಮಗೂ ನಮ್ಮತನ ಒಂದಿದೆ. ನಮಲ್ಲೂ ಧೈರ್ಯವಿದೆ, ಸಾಹಸವಿದೆ. ಶಕ್ತಿ ಇದೆ ಯುಕ್ತಿ ಇದೆ ಎಂದು ತೋರಿಸುವ ಬೆಳವಡಿ ಮಲ್ಲಮ್ಮ ಕಿತ್ತೂರ ಚೆನ್ನಮ್ಮರ ಆದರ್ಶ ನಾಟ್ಯರೂಪದಲ್ಲಿ ಜನರನ್ನು ಬಡಿದೆಬ್ಬಿಸಿದುವು. ಐತಿಹಾಸಿಕ ವೀರ ವ್ಯಕ್ತಿಗಳು. ಅದಕ್ಕೆ ತಕ್ಕಂತೆ ಸಂಭಾಷಣೆ ರಂಗಭೂಮಿಯ ಮೇಲೆ ಯಶಸ್ವಿಯಾದುವು. ಅದೇ ಗತಿಯಲ್ಲಿ ಮೂಡಿ ಬಂದ ಇನ್ನೊಂದು ನಾಟಕ "ಆತ್ಮಾರ್ಪಣೆ" ಭಕ್ತಿ ಭಾಂಡಾರಿ ಬಸವಣ್ಣನವರ ಸುತ್ತ ಹೆಣೆದ ನಾಟಕ ಉದಾತ್ತ ಧ್ಯೇಯ ಹೊಂದಿದುದು.

ಇವು ಮೂರು ಲೇಖಕರ ಆರಂಭದ ಕೃತಿಗಳೆನಿಸಿದರೂ, ಆಗಿನ ಕಾಲ, ಅದರ ಪ್ರಭಾವ ಸಹಜವಾಗಿ ಜನರ ಮನವನ್ನು ಸೆಳೆದುವು. ಅಲ್ಲದೆ ಮೂಲತ: ಕವಿ ಹೃದಯದವರಾದ ಶ್ರೀ ಸಿದ್ಧಯ್ಯ ಪುರಾಣಿಕರ ಸುಕೋಮಲ ಭಾಷೆ ನಾಟಕಗಳಿಗೆ ಹೆಚ್ಚು ಕೀರ್ತಿಯನ್ನು ತಂದುವು. ಇಲ್ಲೆಲ್ಲ ಸಾಹಿತಿಯ ಮೇಲೆ ತನ್ನೆದುರಿಗಿದ್ದ ಪರಿಸರ ಹೇಗೆ ಪ್ರಭಾವ ಬೀರಬಹುದೆಂಬುದನ್ನು ನೋಡಬಹುದು. ಇದರ ಸಂಪೂರ್ಣ ಚಿತ್ರ ಸಿಗುವುದು ಮುಂದೆ ಮೂವತ್ತು ವರುಷಗಳ ನಂತರ ರಚಿಸಿದ "ಭಾರತವೀರ" ನಾಟಕದಲ್ಲಿ.

ವಸ್ತು ಅಂಥದೇ, ದೇಶ ಅದೇ, ಜನ ಅವರೇ ಲೇಖಕ ಒಬ್ಬನೇ ಆದರೆ ಕಾಲ ಬೇರೆ. ದೇಶ ದಾಸ್ಯದ ಶೃಂಖಲೆಗಳನ್ನು ಕಿತ್ತೊಗೆದು ಸ್ವತಂತ್ರವಾಗಿ ಬಾಳಬೇಕೆಂದು ಅದೇ ಆಗ ಅಡಿಗಳನ್ನಿಡುತ್ತಿರುವಾಗ ನಂಬಿದ ಗೆಳೆಯನೊಬ್ಬ ಬೆನ್ನಲ್ಲಿ ಚೂರಿ ಇಟ್ಟುದು. ೧೯೬೨ ರ ಚೀನಿಯರ ದುರಾಕ್ರಮಣ ಲೇಖಕರ ಮೇಲೆ ಮಾಡಿದ ಪರಿಣಾಮ "ಭಾರತ ವೀರ" ನಾಟಕ.

೧೯೬೨ ರ ಅಕ್ಟೋಬರ ೨೦ ನೆಯ ದಿನಾಂಕ ! ಇದ್ದಕ್ಕಿದ್ದಂತೆ ಹಿಮಾಲಯದ ಶಾಂತಿ ಕದಡಿ ಸಿಡಿ ಮದ್ದಿನ ನಾತ ಹರಡಿತು, ನೀಫಾ ಲಡ್ಡಾಖುಗಳಲ್ಲಿ ! ಚೀಣಿಯರ ಯುದ್ಧ ದಾಹ ಸ್ನೇಹದ ಹೃದಯಕ್ಕೆ ಗುಂಡಿಟ್ಟು ಹೊಡೆಯಿತು ! ವಿಶ್ವದ ಇತಿಹಾಸದಲ್ಲಿಯೇ ಇಂಥ ವಿಶ್ವಾಸಘಾತದ ಪ್ರಸಂಗಗಳು ವಿರಳ ! ಈ ಘಟನೆ ನಡೆದ ಎರಡು ದಿನಗಳಲ್ಲಿಯೇ ರಾಷ್ಟ್ರನಾಯಕ ಪಂ. ಜವಾಹರಲಾಲ ನೆಹರು ಅವರು ಭಾರತದ ವಾರ್ತಾ ಮಂತ್ರಿಗಳ ಸಭೆಯನ್ನುದ್ದೇಶಿಸಿ ಮಾತನಾಡಿದಾಗ ಲೇಖಕರಿಗೂ ಉಪಸ್ಥಿತರಿರುವ ಭಾಗ್ಯ ಲಭಿಸಿತ್ತು. ರಾಷ್ಟ್ರದ ಧಮನಿಗಳಲ್ಲಿ ವಿದ್ಯುದೂರ್ಮಿಗಳು ನರ್ತಿಸತೊಡಗಿದ ಆ ಅವಿಸ್ಮರಣೀಯ ಪ್ರಸಂಗ ಲೇಖಕರ ಮನದ ಮೇಲೆ ತನ್ನ ವಜ್ರದ ಮುದ್ರೆಯನ್ನು ಮೂಡಿಸಿತು. ರಾಷ್ಟ್ರರಕ್ಷಣೆಯ ಪ್ರಯತ್ನಗಳಿಗೆ ನೆರವಾಗಬಲ್ಲ ನಾಟಕವೊಂದನ್ನು ಬರೆಯಬೇಕೆಂಬ ಸಂಕಲ್ಪ ಆಗಲೇ ಅವರ ಮನದಲ್ಲಿ ಉದಯಿಸಿತು. ಹೀಗೆಂದು ಲೇಖಕರೇ ತಮ್ಮ ನಾಟಕದ ಮೊದಲಲ್ಲಿ ಹೇಳಿಕೊಂಡಿದ್ದಾರೆ.

ನಿಜವಾಗಿ ಒಂದು ವಿಷಮ ಪ್ರಸಂಗ, ಅದರ ಉಪಯೋಗವನ್ನು ಸಾಹಿತಿ ಹೇಗೆ ಮಾಡಿಕೊಳ್ಳಬಲ್ಲ ಎಂಬುದಕ್ಕೆ ಯೋಗ್ಯ ಉದಾಹರಣೆ



"ಭಾರತ ವೀರ" ನಾಟಕ. ಅದರ ಕಥೆ ಏನೇ ಇರಲಿ. ಐತಿಹಾಸಿಕವಾಗಿ ಸತ್ಯವಾಗಿರಬಹುದು ಇಲ್ಲವೆ ಸಂದಿಗ್ಧವಾಗಿರಬಹುದು. ಆದರೆ ಪ್ರಸ್ತುತ ಪರಿಸ್ಥಿತಿಯಲ್ಲಿ ಆ ವಸ್ತುವಿನ ಮೂಲಕ ರಾಷ್ಟ್ರದ ಒಗ್ಗಟ್ಟಿನ ಮಹತ್ವವನ್ನು ಒತ್ತಿ ಹೇಳಿದುದು ವಿಶೇಷ.

ಒಂದು ಸಣ್ಣ ಪಾತ್ರದ ಮುಖದಿಂದ ಹೇಳಿಸಿದ ಕಥೆ ಅವರ ದೇಶಪ್ರೇಮವನ್ನು ಸಾರಿ ಹೇಳುತ್ತದೆ. ಅಷ್ಟೆ ಅಲ್ಲ ಪ್ರತಿಯೊಬ್ಬನಿಗೂ ಚಿಂತಿಸುವಂತೆ ಮಾಡುತ್ತದೆ.

ಒಬ್ಬ ತಂದೆ ತನ್ನ ಮಕ್ಕಳಿಗೆ ಬಹಳ ಆಸ್ತಿ ಗಳಿಸಿಟ್ಟು ಸತ್ತನಂತೆ. ಆ ಆಸ್ತಿಯ ಆಶೆಗೆ ಆ ಮನೆಗೆ ಪದೇ, ಪದೇ ಕಳ್ಳರು ಕನ್ನಾ ಹಾಕಿದ್ದರಂತೆ. ಅದಕ್ಕೆ ಮಕ್ಕಳು "ನಮ್ಮ ತಂದೆ ಯಾಕಾದರೂ ಈ ಆಸ್ತಿ ಗಳಿಸಿ ಹೋದನಪ್ಪಾ—ಈ ಆಸ್ತೀನೇ ಇರದಿದ್ದರೆ ನಮಗೆ ಕಳ್ಳರ ಕಾಟಾನೇ ಇರತಿರಲಿಲ್ಲ !" ಎಂದು ತಂದೆಯನ್ನೇ ಶಪಿಸಿದರಂತೆ !

ಹೌದು, ನಮ್ಮ ಪರಿಸ್ಥಿತಿ ಕೂಡ ಹೀಗೆಯೆ ಆಗಿದೆಯಲ್ಲವೆ ?

ಅಲ್ಲಲ್ಲಿ ಬರುವ ದೇಶ, ಧರ್ಮದ ಕುರಿತಾದ ಸಂಭಾಷಣೆಗಳು ಓದುಗನನ್ನು ವಿಚಾರಿಸಲು ಪ್ರಚೋದಿಸುತ್ತವೆ.

"ದೇಶ ದೇಹವಾದರೆ ಧರ್ಮ ಆತ್ಮ. ಆದುದರಿಂದ ದೇಶರಕ್ಷಣೆ ವಾಸ್ತವವಾಗಿ ಧರ್ಮರಕ್ಷಣೆಯೆ" ಇಂದಿನ ಮಠಾಧಿಪತಿಗಳೂ ಚಿಂತಿಸುವ ಮಾತಿದು.

"ಭಾರತದ ರಕ್ಷಣೆಯೆಂಬುದು ಬಡ್ಡಿಯ ವ್ಯವಹಾರವೆ? ರಾಷ್ಟ್ರಭಕ್ತಿಯನು ತಕ್ಕಡಿಯಲ್ಲಿಟ್ಟು ತೂಗಬಹುವೆ?" ರಾಷ್ಟ್ರರಕ್ಷಣೆಯು ಪ್ರತಿಫಲಾಪೇಕ್ಷೆಯಿಲ್ಲದೆ ಮಾಡುವ ಪವಿತ್ರ ಕರ್ತವ್ಯ. ಈ ಕರ್ತವ್ಯ ಪಾಲನೆಯಿಂದ ದೊರೆಯುವ ದೈವೀ ಆನಂದವೇ. ಅದರ ಅನುಪಮ ಪ್ರತಿಫಲ" ಹೌದು ಆದರೆ ಇಂದಿನವರಿಗೆ ಆ ದೈವೀ ಆನಂದ ಬೇಕಲ್ಲ ! ಎಷ್ಟು ಜನ ರಾಜಕಾರಣಿಗಳು ಈ ಬಡ್ಡಿಯ ವ್ಯವಹಾರದಿಂದ ವ್ಯತಿರಿಕ್ತರಾಗಿದ್ದಾರೆ. ಇಂಥ ಅನೇಕ ಚಿಂತನಶೀಲ ಮಾತುಗಳಿಂದ ಲೇಖಕರು ಸ್ವತಃ ತಮ್ಮನ್ನು ತಾವೇ ಅಲ್ಲದೇ ರಾಷ್ಟ್ರದ ಅತ್ಯುನ್ನತ ಪದವಿಯಿಂದ ಸಾಮಾನ್ಯ ಜನರವರೆಗೂ ಪ್ರತಿಯೊಬ್ಬರನ್ನು

ದೇಶಪ್ರೇಮದ ಒರೆಗಲ್ಲಿಗೆ ತಿಕ್ಕಿದ್ದಾರೆ. ಆದರೆ ಅದನ್ನು ತಿಳಿಯುವುದು ಅದರಂತೆ ನಡೆಯುವುದು ಬೇರೆ ಮಾತು !

ಇದು, ಕೃತಿಯ ರಚನೆ, ವಸ್ತು, ಶೈಲಿ ಮತ್ತು ಸಂಭಾಷಣೆಯ ವಿಷಯವಾಯಿತು. ಆದರೆ ನಾಟಕವೆಂದರೆ ಇಷ್ಟಕ್ಕೆಯೆ ಮುಗಿಯಲಿಲ್ಲ. ಮುಖ್ಯವಾಗಿ ನಾಟಕ ಆಡಲು ಯೋಗ್ಯವಾಗಿರಬೇಕು. ೧೦೨ ಪುಟದ ಮೂರಂಕಿನ "ಭಾರತವೀರ" ನಾಟಕದಲ್ಲಿ ಮೂವತ್ಮೂರು ದೃಶ್ಯಗಳಿವೆ. ಹದಿನಾಲ್ಕು ಪ್ರಮುಖ ಪಾತ್ರಗಳಲ್ಲದೆ ಹತ್ತಾರು ಉಪಪಾತ್ರಗಳೂ ಇವೆ. ಅಭಿನಯಿಸಬೇಕು ಎನ್ನುವವರಿಗೆ ಇದು ಯಾವ ಮಾತಲ್ಲವಾದರೂ ಪಾತ್ರ–ದೃಶ್ಯಗಳ ಸಂಖ್ಯಾ ಬಾಹುಳ್ಯದಿಂದ ನಾಟಕವನ್ನು ಸುಲಭವಾಗಿ ರಂಗದಮೇಲೆ ತರಲು ಕಷ್ಟವಾಗುತ್ತದೆ. ಆದರಿಂದ ಪ್ರಯೋಗ ಸಾಧ್ಯತೆ ವಿರಲವಾಗುತ್ತದೆ.

ಸುಂದರವಾದ ಕಲ್ಪನೆ, ಚತುರ ಸಂಭಾಷಣೆಗಳ ಶಕ್ತಿಯನ್ನು ಹೊಂದಿದ ಲೇಖಕರಿಂದ ಇಂಥ ಸಮಕಾಲೀನ ಪ್ರಜ್ಞೆಯ, ಪ್ರಯೋಗ ಸಾಧ್ಯವಿರುವ ನಾಟಕಗಳು ಇನ್ನಷ್ಟು ಹೊರಬರಲಿ. ಅವು ಮುಂಬರುವವರಿಗೆ ಮಾರ್ಗದರ್ಶನವಾಗಲಿ.

೧೨೬ ಹಿಂದವಾಡಿ
ಬೆಳಗಾವಿ



## ಸಿದ್ಧೇಶ್ವರ ವಚನಗಳಲ್ಲಿ: "ಕಾವ್ಯಾನಂದ"

—ಮಿರ್ಜಿ ಅಣ್ಣಾರಾಯ.

ಕನ್ನಡ ಸಾಹಿತ್ಯದಲ್ಲಿ ಶಿವಶರಣರ ವಚನಗಳಿಗೊಂದು ವಿಶಿಷ್ಟ ಸ್ಥಾನವಿದೆ. ವಚನಕಾರರು ಮೊದಲು ಶರಣರಾಗಿದ್ದಾರೆ; ಶಿವತ್ವವನ್ನು ಅನುಭವಿಸಿದ್ದಾರೆ. ಅಂಥ ಅನುಭಾವ ವಾಣಿಯೇ ವಚನರೂಪದಲ್ಲಿ ಮೈದಾಳಿ ನಿಂತಿದೆ. ಆದಕ್ಕಾಗಿಯೇ ಅವುಗಳಿಗೊಂದು ವಿಶಿಷ್ಟ ಸ್ಥಾನವಿದೆ. ಈ ವಚನಕಾರರ ಪರಂಪರೆಯಲ್ಲಿ ಇಂದಿನ ಕನ್ನಡ ನಾಡಿನ ಶ್ರೇಷ್ಠ ಕವಿಗಳೂ, ಲೇಖಕರೂ, ಅನುಭಾವಿಗಳೂ ಆದ ಶ್ರೀ ಸಿದ್ಧಯ್ಯ ಪುರಾಣಿಕರೊಬ್ಬರಾಗಿದ್ದಾರೆ. ಅವರು "ಸ್ವತಂತ್ರಧೀರ ಸಿದ್ಧೇಶ್ವರ" ಎಂಬ ಅಂಕಿತದಿಂದ ಹಲವಾರು ವಚನಗಳನು ನಿರೂಪಿಸಿದ್ದಾರೆ. ಅವೆಲ್ಲ ಅನುಭವದ ನುಡಿಗಳು. ಅವುಗಳಲ್ಲಿ "ಕಾವ್ಯಾನಂದ"ರ ಅಂತರಂಗ ಪ್ರತಿಫಲಿಸಿನಿಂತಿದೆ. ಅಧ್ಯಾತ್ಮಿಕ ದೃಷ್ಟಿ ರೂಪುಪಡೆದಿದೆ. ಅದರ ಸ್ಥೂಲ ಚಿತ್ರವನ್ನು ಕೊಡಲಿಕ್ಕೆ ಇಲ್ಲಿ ಯತ್ನಿಸಲಾಗಿದೆ.

"ಸ್ವತಂತ್ರಧೀರ ಸಿದ್ಧೇಶ್ವರ ವಚನಗಳು" ಆಗಾಗ "ತುಣುಕು–ಮಿಣುಕು" ಆಗಿ "ಜೀವನ ವಿಕಾಸ"* ಪತ್ರಿಕೆಯಲ್ಲಿ ಮೂರು–ನಾಲ್ಕು ವರ್ಷಗಳಿಂದ ಪ್ರಕಟವಾಗುತ್ತ ಬಂದಿವೆ. ಅವೆಲ್ಲ ಗ್ರಂಥ ರೂಪದಲ್ಲಿ ಒತ್ತಟ್ಟಿಗೆ ಬಂದು ಓದುಗರ ಕೈಗೆ ಲಭಿಸಿದಾಗ ಸುಮಾರು ಇನ್ನೂರಕ್ಕೂ ಮಿಕ್ಕುವ ಅಮೌಲ್ಯ ವಚನ ಸಂಗ್ರಹವೊಂದು ಹೊಸ ಕನ್ನಡ ಸಾಹಿತ್ಯದಲ್ಲಿ ಬೆಳಕಿಗೆ ಬಂದಂತಾಗುತ್ತದೆ. ಕನ್ನಡ ನುಡಿಯ ಅಂತಸ್ತು ಇನ್ನಿಷ್ಟು ಹೆಚ್ಚುತ್ತದೆ. ಆಗ ಸಹೃದಯ ಸಮಾಲೋಚಕರ ದೃಷ್ಟಿಯು ಕಾವ್ಯಾನಂದರ ಕಾವ್ಯಸಿದ್ಧಿಯತ್ತ ಹೊರಳುವಂತಾಗುತ್ತದೆ. ಅಲ್ಲಿಯ ವರೆಗೆ ನಮ್ಮ ಈ ತುಣುಕು–ಮಿಣುಕು ಪ್ರಯತ್ನವೊಂದು ಹಣತೆಯ ದೀಪವಿದ್ದಂತೆ, ಸಿದ್ಧೇಶ್ವರ ವಚನಗಳ ಮೇಲೆ ಬೆಳಕು ಬೀರಲಿಕ್ಕೆ, ಆದರಿಂದ ಇದೊಂದು ಶ್ರೀ ಪುರಾಣಿಕರ ವಚನಗಳ ಭಾವ

* ಕಲಬುರ್ಗಿಯಿಂದ ಪ್ರಕಟವಾಗುವ ಶೈಕ್ಷಣಿಕ ಮಾಸಪತ್ರಿಕೆ.

ದೀಪ್ತಿಯು ಸಾಮಾನ್ಯ ಪರಿಚಯ ಲೇಖನವೆಂದು ಸಹೃದಯರು ಸ್ವೀಕರಿಸುವುದು.

ಶ್ರೀ ಸಿದ್ಧಯ್ಯ ಪುರಾಣಿಕರು ಸರಕಾರದ ದೊಡ್ಡ ಹುದ್ದೆಯಲ್ಲಿದ್ದು ಕೆಲಸ ಮಾಡುವಂಥವರು. ಅದರ ಜೊತೆಗೆ ಸಂಸ್ಕೃತಿ, ಸಾಹಿತ್ಯ, ನಾಡು, ನುಡಿ, ಸಮಾಜಸೇವೆಗಳಲ್ಲಿಯೂ ಮನಸ್ಸನ್ನು ತೊಡಗಿಸಿದವರು. ಅಪಾರವಾದ ಸ್ನೇಹಿತರ ಬಳಗ ಅವರದು. ಅದರಿಂದ ನಿತ್ಯ ಜೀವನದಲ್ಲಿ ಬಿಡುವೆಂಬುದೇ ಇಲ್ಲ. ದಿನದಲ್ಲಿ ಹದಿನೆಂಟು-ಇಪ್ಪತ್ತು ಗಂಟೆಗಳ ಕಾಲ ಕೆಲಸ. ಅದಕ್ಕಾಗಿ "ಸ್ಫುರಿಸಿದಾಗ ಲಿಪಿಸಲಾಗದೆ ವಿಸ್ಮರಿಸಿ ಹೋದ ವಚನಗಳೇ" ಬಹಳ. ಆದರೂ ಅವುಗಳನ್ನು ಸ್ಮರಿಸಿಕೊಂಡು ಬಿಡುವಾದಾಗ ಲಿಖಿತಗೊಳಿಸುವ ಪ್ರಯತ್ನ ಅವರದು. ಅವು ಮರಳಿ ಸ್ಮೃತಿ ಪಥಕ್ಕೆ ಬರಲೆಂಬ ಹಾರೈಕೆ ಅವ-ರದು. "ನಾನು ಪರಾಧೀನ, ಸಮಯಾ-ವಿಹೀನ, ದೀನ" ನೆಂಬ ಅರಿವು ಅವರಿಗಿದೆ. ಅದರಿಂದ ತನ್ನ "ಉಪೇಕ್ಷೆಯನ್ನು ಲಕ್ಷಿಸದೆ ಇನ್ನೊಮ್ಮೆ ಬನ್ನಿ ದಯವಿಟ್ಟು ಬನ್ನಿ ! ನೀವೂ ಬರುವ ದಾರಿಯನ್ನು ತೋರಿದರೆ ನನ್ನ ನೋಟಗಳನ್ನು ಬಿತ್ತುವೆನು ಅದರುದ್ದಕ್ಕೂ, ಆ ಹಾದಿಯಲ್ಲಿ ನಿಮ್ಮ ಹೆಜ್ಜೆ ಮೂಡಿದರೆ ಮಜ್ಜನಮಾಡಿಸುವೆನವಕೆ ನನ್ನ ಕಂಬನಿಗಳಿಂದ;"* ಎಂದು ದೀನನಾಗಿ ಪ್ರಾರ್ಥಿಸುವರು. ಇಲ್ಲಿ "ಕಾವ್ಯಾನಂದ"ರಿಗೆ ವಚನಗಳು ಕೇವಲ ಸಮಯ ಸಿಕ್ಕಾಗ ಏನಾದರೂ ಗೀಚುವ ಬರಹಗಳಲ್ಲ. ಅವುಗಳ ಅವತರಣಕ್ಕೂ ಒಂದು ಅಧ್ಯಾತ್ಮಿಕ ಹಿನ್ನೆಲೆಯಿದೆ. ಪಂಪಮಹಾಕವಿಗೆ "ಪರಮ ಜಿನೇಂದ್ರವಾಣಿಯೆ ಸರಸ್ವತಿಯಾಗಿ ಕಾವ್ಯರೂಪದಲ್ಲಿ ಅವತರಿಸಿದಂತೆ. ಅದರಿಂದ ಇವರ ವಚನಗಳು ಸ್ವತ್ವವನ್ನು ಕೆರಳಿಸಿ ಬರುತ್ತವೆ. ಚಿತ್ತವನ್ನು ಅರಳಿಸಿ ಬರುತ್ತವೆ, ಮತ್ತು ಉರುಳಿಸಿ ಬರುತ್ತವೆ. ಮೇಲಾಗಿ ಜೀವಿ, ಜೀವನ, ಜನ, ಜಗದೀಶ್ವರನ ಕುರಿತು ಮೈದಾಳಿ ಬರುತ್ತವೆ; ಜೀವ ಜೀವಾಳದಲಿ ಬೆರೆತು ಬರುತ್ತವೆ. ಹೀಗೆ ಅನುಭವ, ಅನುಭಾವ ಗಮ್ಯವಾಗಿವೆ, ಈ ವಚನ ಸೃಷ್ಟಿ ಅಂತರಂಗದ ದೃಷ್ಟಿ.

ಜೀವಿ, ಜೀವನಗಳನ್ನು ಕುರಿತು ವಚನಗಳು ಸ್ಫುರಿಸುವಾಗಲೆಲ್ಲ

* ಜೀವನ ವಿಕಾಸ-ಆಗಷ್ಟ ೧೯೭೨. ವಚನ ಕ್ರಮಾಂಕ ೧೬೭



"ಕಾವ್ಯಾನಂದ"ರ ಜೀವನದ ಅಪಾರ ಅನುಭವ ಅವುಗಳಲ್ಲಿ ಕೆನೆಗಟ್ಟನಿಂತಿದೆ. "ಗಾಳಿ ಬೀಸಿದತ್ತ ಹುಟ್ಟು ಹಾಕಿದರೆ ಹರಿಗೋಲು ಉಳಿಯಬಹುದಾಗಲಿ ಗುರಿ, ನಿಲುಕದು" ಎಂಬ ಸಂಗತಿಯೂ ಆ ಸಾಧಕ ಜೀವಿಗೆ ಗೊತ್ತಿದೆ. ಅದರಿಂದ "ಸುಲಭವಾದುದೆಲ್ಲ ಶುಭಕರವಲ್ಲ, ಕಠಿಣವಾದುದೆಲ್ಲ ಕಷ್ಟಪರವಲ್ಲ" ಎಂಬುದನ್ನು ಅವರು ಬಲ್ಲರು. ಆದಕ್ಕಾಗಿ ಗುರಿಯ ದಿಕ್ಕಿನಲ್ಲಿ ಸಾಗಲು ಎಂಥ ಕಷ್ಟ ಸಂಕಷ್ಟಗಳ ದಾರಿಯಲ್ಲಿಯೂ ಮುನ್ನಡೆಯುವ ಧೀರರವರು. ಅದರಿಂದಲೇ ಅವರ ವಚನಗಳು "ಸ್ವತಂತ್ರಧೀರ ಸಿದ್ಧೇಶ್ವರ"ನ ವಾಣಿಯಾಗಿ ಸ್ಫುರಿಸಿವೆ. ಅದರೆ ಸಾಧಕರಾದ ಅವರಿಗೆ ಒಂದೇ ಚಿಂತೆ:

"ಮೈಯ ರಾಟಿಯ ತಿರುಹಿ
 ಮೂಗಿನ ಕದಿರಿನಿಂದ
ಉಸಿರ ನೂಲ ನೂಲುತ್ತಿಹುದಯ್ಯ ಕಾಣದ ಕೈ
 ಆಯುಷ್ಯದ ಕುಕ್ಕಡಿ ತುಂಬುತ್ತ ನಡೆದಿದೆ
ಕುಕ್ಕಡಿ ತುಂಬುವ ಮೊದಲೇ
 ಎಳೆ ಹರಿವುದೋ ಹಂಜಿ ಮುಗಿವುದೋ—
ನೀನೇ ಬಲ್ಲೆಯಯ್ಯ ಸ್ವತಂತ್ರಧೀರ ಸಿದ್ಧೇಶ್ವರಾ;" *

ಆದರಿಂದ ಒಂದೇ ದಾರಿಯಲ್ಲಿ ಮುಂದೆ ನಡೆಯುವ ಬಯಕೆ ಅವರಿಗಿಲ್ಲ. ಯಾಕಂದರೆ ಬಹುದೂರ ಹೋಗುವ ಇಚ್ಛೆಯಿಲ್ಲ ? ತನ್ನದೇ ದಾರಿ-ಯೊಂದನ್ನು ರೂಪಿಸಿಕೊಳ್ಳಬೇಕೆ ? ತುದಿ ಮೊದಲ ತಿಳಿದುಕೊಳ್ಳುವ ತವಕವೂ ಇಲ್ಲ. ಎಲ್ಲ ದಾರಿಗಳನ್ನು ತುಳಿಯುವ ತವಕ, ಎಲ್ಲ ಬಟ್ಟೆಗಳಲ್ಲೂ ನಡೆಯುವ ಬಯಕೆ. "ಎಲ್ಲಿ ಮುಟ್ಟುವೆನೋ ಮುಟ್ಟುವೆ ಕೊನೆಗೆ ! ಎಲ್ಲಿಗಾ-ದರೂ ಮುಟ್ಟಿಸು. ಮುಟ್ಟಿದಲ್ಲಿ ನೀನಿರು."† ಎಂಬುದೇ ಅವರ ಜೀವನ ದೃಷ್ಟಿಯಾಗಿದೆ. ಅವನ ಹತ್ತರ ಸೇರುವುದೇ ಗುರಿಯಾಗಿದೆ.

ಹೀಗೆ ಸಾಧಕನಾಗಿ ಬಾಳಿ, ಪರಮಾತ್ಮನ ಸಾನಿಧ್ಯವನ್ನು ಸೇರುವುದು ಸುಲಭ ಸಾಧ್ಯವೇನಲ್ಲ. ಅದಕ್ಕೆ ತನ್ನತನವನ್ನುಳಿದ ಅನಂತದಲ್ಲಿ ಲೀನವಾಗುವ ವಿನೀತಭಾವ ಬೇಕಾಗುತ್ತದೆ. ತನ್ನ ಬಾಳಿನ ಅವಧಿಯು ಅನಂತ

* ಜೀವನ ವಿಕಾಸ-ಆಗಷ್ಟ ೧೯೭೨. ವ. ಕ್ರ. ೧೬೭.

† ಜೀವನ ವಿಕಾಸ-ಮಾರ್ಚ ೧೯೭೦ ವ. ಕ್ರ. ೫.

ಕಾಲದಲ್ಲಿ ಒಂದು ಕ್ಷಣ ಮಾತ್ರ, ತಾನು ಅನಂತ ವಿಶ್ವದಲ್ಲಿ ಒಂದು ಕಣ ಮಾತ್ರ, ಅನಂತ ಪ್ರಾಣ-ಪ್ರವಾಹದಲ್ಲಿ ಒಂದು ಅಲೆ ಎಂಬರಿವು ಮೂಡ ಬೇಕಾಗುತ್ತದೆ. ಅದರ ಜೊತೆಗೇನೇ ಆ ಅನಂತದ ಅಭಿನ್ನ ಅಲೆ ತಾನೆಂಬ ಭಾವ ಮನದಲ್ಲಿ ನೆಲೆಗೊಳ್ಳಬೇಕು. ಅದರಿಂದ ಜೀವನದಲ್ಲಿ ಸಾಮರಸ್ಯ ವುಂಟಾಗಿರುತ್ತದೆ. ಅಂಥ ಜೀವನಕ್ಕೆ "ಏನು ಪಡೆದೆವೆಂಬುದು ಮುಖ್ಯವಲ್ಲ, ಹೇಗೆ ದುಡಿದೆವೆಂಬುದು ಮುಖ್ಯವಯ್ಯಾ !" * ಎಂಬ ಸೂತ್ರವು ರೂಪು ಗೊಳ್ಳುತ್ತದೆ. ಇಲ್ಲಿ ನುಡಿಗಿಂತ ನಡೆ ಮುಖ್ಯ, ಗಳಿಕೆಗಿಂತ ಬಳಿಕೆ ಮುಖ್ಯ, ಕೇಳಿಕೆ ಹೇಳಿಕೆಗಿಂತ ಬಾಳು ಮುಖ್ಯ. ಬಾಳೇ ಬೆಳಕು ಇವರಿಗೆ. ಅದರಿಂದ "ನಿನ್ನ ಮಂದಿರದ ನಂದಾದೀಪವಾಗುವ ಸುಕೃತವಿಲ್ಲದಿರೆ ಹೋಗಲಿ, ಅದರ ಪೂರೆಕೆಯಾಗುವ ಪುಣ್ಯವನ್ನಾದರೂ ಅನುಗ್ರಹಿಸಯ್ಯಾ !"* ಎಂಬ ಆರ್ತ ವಾಣಿಯವರದು. ಇಂಥ ಸೇವಾಭಾವದಲ್ಲಿಯೇ ಅವರ ಜೀವನದ ಸಾಫಲ್ಯವಿದೆ.

ಇಂಥ ಜೀವಿಯು ಜೀವನ ಸಾಧನ-ಸಾಮುಗ್ರಿಗಳಲ್ಲಿ ವಿಪುಲತೆಯನ್ನು ಆಶಿಸುವುದಿಲ್ಲ. ಸಫಲತೆಯ ಕಡೆಗೆ ಇವನ ಗಮನವಿರುತ್ತದೆ. "ಹೊನ್ನವರೆ ಯಂತೆ ಹೊರಲಾರದಷ್ಟು ಹೂ ಬಿಟ್ಟು ಫಲವೇನಯ್ಯಾ ? ಮುಡಿಯಲು ಮನವಿಲ್ಲ, ಮೂಸಲು ವಾಸನೆಯಿಲ್ಲ ! ಆಲದ ಮರದಂತೆ ಹೊರಲಾರದಷ್ಟು ಹಣ್ಣು ಬಿಟ್ಟು ಫಲವೇನಯ್ಯಾ ? ತಿನ್ನಲು ತಿರುಳಿಲ್ಲ, ಕುಡಿಯಲು ರಸವಿಲ್ಲ !" ಎಂದು ಕೇಳುತ್ತಾರೆ. ಅದರಂತೆಯೇ "ಟೇಪ್ ರೆಕಾರ್ಡರಿನಂತೆ ಹೊರಲಾರ ದಷ್ಟು ಹೊತ್ತಗೆಗಳ ಗ್ರಹಿಸಿ ಫಲವೇನಯ್ಯಾ ? ತನಗೂ ಆಗಲಿಲ್ಲ, ಅನ್ಯರಿಗೂ ಉಪಯೋಗವಿಲ್ಲ ?"● ಎಂದು ಪೊಳ್ಳು ಜ್ಞಾನ ಸಂಪಾದನೆಯನ್ನು ಅಲ್ಲಗಳೆ ಯುತ್ತಾರೆ. ಇಲ್ಲಿ ಜೀವನವೇ ಮುಖ್ಯ. ಸದಾಚಾರ ನಿಷ್ಠೆಯೇ ಸತ್ವ. ಅದ ರಿಂದ ನಿಜದ ಗುಡಿಯಲ್ಲಿ ಪೂಜೆ ಮಾಡುವವರು ಬೇಕು; ಪ್ರೇಮದ ಚರ್ಚಿ ನಲ್ಲಿ ಪ್ರಾರ್ಥನೆ ಮಾಡುವವರು ಬೇಕು; ಮೈತ್ರಿಯ ಮಸೀದೆಯಲ್ಲಿ ನಮಾಜು ಮಾಡುವವರಿರಲಿ; ಲೇಸಿನ ಬಸದಿಯಲ್ಲಿ ತಪವ ಗೈವರಿರಲಿ. ಎಲ್ಲರಲ್ಲಿ ಪರ

* ಜೀವನ ವಿಕಾಸ-ಅಕ್ಟೋಬರ ೧೯೭೧. ಪ. ಕ್ರ. ೧೩೩. ೧೩೧.

● ಜೀವನ ವಿಕಾಸ-ನವ್ಹಂಬರ ೧೯೭೧. ಪ. ಕ್ರ. ೧೩೬.೧೩೭.



ಮಾತ್ಮನ ಅಂಶವನ್ನು ಕಾಣುವವರಿಗೇ ಪರಮಾತ್ಮನೆನ್ನೋಣ ಎನ್ನುವ ಗಮಕ ವಿಲ್ಲಿದೆ. ಇದು ಜೀವನವನ್ನು ಅಲ್ಲಗಳೆದು ದೂರ ಸರಿಯುವ ವೈರಾಗ್ಯವೇಷದ ಸಾಧುತನವಲ್ಲ. ಇಲ್ಲಿ ಇದ್ದು, ಈಸಬೇಕು, ಇದ್ದು ಜೈಸಬೇಕು ಎನ್ನುವ ಬದು ಕಿನ ದೃಷ್ಟಿಯಾಗಿದೆ. ಎಲ್ಲರೊಡನೊಂದಾಗಿ ಬಾಳುವ ಹಿರಿ ಜೀವದ ಲಕ್ಷಣ ವಿದೆ. ಎಲ್ಲರಲ್ಲಿರುವ ಒಂದನ್ನರಿಯುವ ದೃಷ್ಟಿಯಿದೆ.

ಮನುಷ್ಯನು ಸಂಸಾರದಲ್ಲಿ ಇರುವಾಗ ಅನೇಕ ಆಶೆ ಆಕಾಂಕ್ಷೆಗಳನ್ನು ಇಟ್ಟುಕೊಂಡಿರುತ್ತಾನೆ. ಅದಾವುದೂ ಪೂರ್ಣವಾಗದೆ ಆಗಾಗ ನಿರಾಶೆಯನ್ನು ಹೊಂದುತ್ತಾನೆ. ಅಂಥ ಒಂದು ಕ್ಷಣದಲ್ಲಿ "ಕಾವ್ಯಾನಂದ"ರು ತಮ್ಮ ಅಂತ ರಂಗವನ್ನೇ ತಾವು ನಿರೀಕ್ಷಿಸಿ "ಹಲವು ಮಸಿಗಳ ಹೀರಿ ಹಣ್ಣಾದ ಒತ್ತು ಕರಡು ನಾನಯ್ಯಾ !"—ಎಂದು ಕೊರಗುತ್ತಾರೆ. ಇಲ್ಲಿ ಹಲವು ಹಂಬಲ ಗಳನ್ನು ಮಸಿಗೆ ಹೋಲಿಸಿದುದರಲ್ಲಿ ಬಹಳ ಅರ್ಥವಿದೆ. ಆ ಮಸಿಯನ್ನು ಹಿಡಿದುಕೊಂಡ ಮನಸ್ಸು "ನಿನ್ನಡಿಯ ಮುದ್ರೆ ಧರಿಸೆ ಎಡೆಯೂ ಇಲ್ಲಿ, ದೃಢವೂ ಇಲ್ಲಿ ಅಲ್ಲಿ !" ಎಂದು ಮರುಗುತ್ತಾರೆ. "ಹಲವು ಬಣ್ಣಗಳ ನುಂಗಿಯೂ ಬಣ್ಣಗೆಟ್ಟ ಈ ಬಡ ಒತ್ತು ಕರಡು ಹರಳಯ್ಯನ ತೊಡೆಯ ಚರ್ಮವಾಗಬಲ್ಲುದೇನಯ್ಯಾ ?"* ಎಂದು ಕೇಳುವರು. ಇಲ್ಲಿ ಎಂಥ ಸ್ವಾರಸ್ಯವಿದೆ ! ಇಂಥ ಸೇವಾ ಭಾವನೆ ಇರುವುದರಿಂದಲೇ "ಇಹದ ಬದುಕಿಗೆ ಪರದ ನಿಕಷವೇಕಯ್ಯ ?"—ಎಂದು ಸ್ಪಷ್ಟವಾಗಿಯೇ ಸಿದ್ಧಯ್ಯ ಪುರಾಣಿ ಕರು ಪ್ರಶ್ನಿಸಿಕೊಳ್ಳುವರು. ಇದಕ್ಕೆ ಹಿನ್ನೆಲೆಯಾಗಿ ಮೌನ, ಕೃತಿ, ಸತ್ಯ, ಪ್ರೀತಿಗಳ ಆಧಾರ ಜೀವನಕ್ಕೆ ಮುಖ್ಯವೆಂಬುದನ್ನು ಬಹು ಸೊಗಸಾಗಿ ಸೂಚಿಸಿದ್ದಾರೆ:

"ಮೌನದ ವೀಣೆಗೆ ಮಾತಿನ ತಂತಿಯೇಕಯ್ಯಾ ?
ಕೃತಿಯ ಬಿಲ್ಲಿಗೆ ಕನಸಿನ ಬಾಣವೇಕಯ್ಯಾ ?
ನಿಜದ ಬಳ್ಳಿಗೆ ಹುಸಿಯ ಹೂಗಳೇಕಯ್ಯಾ ?
ನಲ್ಮೆಯ ತಕ್ಕಡಿಗೆ ಆಣೆಯ ಕಾಣಿಯೇಕಯ್ಯಾ ?" ●

ಎಂಬುದೇ ಅವರ ಪ್ರಶ್ನೆಯಾಗಿದೆ. ಅಂತಲೇ ಜಗಕ್ಕೆಲ್ಲ ಸುಖ-

* "ಅಮರವಾಣಿ" ಮಾಸ ಪತ್ರಿಕೆ ಸಂಪುಟ ೨೪. ಸಂ. ೧. ಪ. ಕ್ರ. ೩೨

● ಜೀವನ ವಿಕಾಸ-ಮೆ, ೧೯೭೦. ಪ. ಕ್ರ. ೧೪.

ಸಂತೋಷಗಳಿರಲಿ. ಅದರಲ್ಲೇನಾದರೂ ಆರೆಕೊರೆಗಳಿದ್ದರೆ ಅವು ಮಾತ್ರ ತನಗಿರಲಿಯೆಂಬ ನೈಜಭಾವ ಅವರಲ್ಲಿದೆ. "ಚಂದ್ರನೊಲು ನನ್ನ ಕಲಂಕ ನನಗಿರಲಿ, ತನಿವನೆಯ ತಂಪು ಮುಂದಿಗಿರಲಿ !....... ಗುಲಾಬಿಯೊಲು ನನ್ನ ಮುಳ್ಳೂ ನನಗಿರಲಿ, ತನಿಗಂಪೇನಾದರೂ ಇದ್ದರೆ ಮುಂದಿಗಿರಲಿ !....... ಸುಡುವ ನಂಜು ನನಗಿರಲಿ, ಅಮೃತ ಮುಂದಿಗಿರಲಿ !"* ಎನ್ನುವ ಉದಾರ ಹೃದಯವಿದೆ. ತಾನು ನೋವಿಗೀಡಾದರೂ ಅಡ್ಡಿಯಿಲ್ಲ. ಅದರ ಕಾವು ಅನ್ಯರಿಗೆ ತಟ್ಟದಿರಲಿ. ಅವರಿಗೆ ತಮ್ಮಿಂದ ಸುಖವೇ ಒದಗಲೆಂಬ ಹಾರೈಕೆಯಿಲ್ಲಿದೆ. ಇದು ಉನ್ನತ ವ್ಯಕ್ತಿತ್ವದ ನಿದರ್ಶನವಾಗಿದೆ.

ಆಗ ಅನಂತ ಮಹತ್ತಿನ ಸಾನಿಧ್ಯದಲ್ಲಿ ತನ್ನ ವ್ಯಕ್ತಿತ್ವವೂ ಒಂದು ಅಲ್ಪವೆಂಬ ಅರಿವು ಅವರಿಗೆ ಉಂಟಾಗುತ್ತದೆ. "ಕಾಲದ ಕಡಲಿನ ಮೇಲೆ ಸಾವಿನ ಹನಿಗಳು ಸುರಿಯುತ್ತಲಿವೆಯಯ್ಯ ಬಾಳ ಬಾನಿನಿಂದ !"—ಎಂಬ ಸಂಗತಿಯು ಅವರ ಅಂತರಂಗಕ್ಕೆ ಗೋಚರವಾಗುತ್ತದೆ. "ಮಹಾ ಜೀವನದ ನಡುನದಿಗಳಾಗಿ ಬೆರೆತೂ ಬೇರುಳಿಯಲು, ಮಹಾ ಕೃತಿಗಳ ಮಾನಸ ಸರೋವರಗಳಾಗಿ ಬೆರೆಯದೇ ಬೇರುಳಿಯಲು ಸರ್ವರಿಗೆ ಸಾಧ್ಯವೇನಯ್ಯಾ ?"—ಎಂದು ತಮ್ಮನ್ನು ತಾವೇ ಕೇಳಿಕೊಳ್ಳುವರು. ಕೊನೆಗೆ—

"ಕಾಲದ ಕಡಲಿನ ಸಿಂಪೊಂದರಲ್ಲಿ
ಸ್ವಾತಿಯ ಹನಿಯಾಗಿ ಸೇರುವ
ಸೌಭಾಗ್ಯವೊಂದನೇ ಕರುಣಿಸಯ್ಯ" ●

ಎಂದು ಪರಮಾತ್ಮನ ಹತ್ತರ ಕೇಳಿಕೊಳ್ಳುವರು. ಈ ಅವಸ್ಥೆಯಲ್ಲಿ ತಾನೊಂದು "ಬಡ ಸಿಸು" ಎಂಬ ಅರಿವು ಮೂಡಿದೆ. ಪರಾವಲಂಬಿಯೆಂಬುದೂ ಗೊತ್ತು. ದಿನಕ್ಕೊಬ್ಬರ ಕೈಗೆ ಕೊಟ್ಟರೆ ಗತಿಯೇನು ? ಬಡ ಸಸಿಯನ್ನು ದಿನಕ್ಕೊಂದು ಮಡಿಯಲ್ಲಿ ನೆಟ್ಟಂತಲ್ಲವೇ ? ಅದರಿಂದ ಹಲವು ಹಾದಿಗಳ ಹಂಬಲವೇಕೆ ? ವಿವಿಧ ವಾದಗಳ ಗೊಂದಲದಲ್ಲಿ ಮನೆಯ ಮಾತಿಗೇ ಅವಕಾಶವಿಲ್ಲದೇ ಹೋದೀತು. ಅನೇಕ ಬೋಧೆಗಳಲ್ಲಿ ತಿಳಿದದ್ದೂ ತಿಳಿಗೆಡುತ್ತ ಸಾಗೀತು. ಅದರಿಂದ ಸಿದ್ಧೇಶ್ವರಾ !

* ಜೀವನ ವಿಕಾಸ—ಮೆ. ೧೯೭೦. ವ. ಕ್ರ. ೧೫.

● ಜೀವನ ವಿಕಾಸ ಮೇ ೧೯೭೦. ವ. ಕ್ರ. ೧೧.



"ನಿನ್ನ ಹಾದಿಯಲ್ಲಿ ನಡೆಸು.
ನಿನ್ನ ಬೋಧೆಯನು ಕೊಡಿಸು.
ಬೇಡವಾದರೆ ನಿನ್ನಡಿಯ ಬಳಿ ಇರಿಸು." *

ಎಂದು ಪ್ರಾರ್ಥಿಸುತ್ತಾರೆ. ಇದು ಸಂಪೂರ್ಣ ಶರಣಾಗತಿಯ ಲಕ್ಷಣವಾಗಿದೆ. ಮೊದಲು ಶರಣನಾಗುವುದೇ ಸಿದ್ಧಿಯ ಪ್ರಥಮ ಸೋಪಾನ ಹತ್ತುವುದರ ಲಕ್ಷಣವೆಂಬುದು ಅವರಿಗೆ ಗೊತ್ತು. ಷಟ್‌ಸ್ಥಲ ಮಾರ್ಗದಲ್ಲಿ ಸಾಗಿದ ಶಿವಶರಣರ ಪ್ರಭಾವ ಪುರಾಣಿಕರಲ್ಲಿ ನಾವು ಇಲ್ಲಿ ಕಾಣುತ್ತೇವೆ. "ಶರಣಚರಿತಾಮೃತ" ವನ್ನೇ ಕುಡಿದು ಅರಗಿಸಿ ಕೊಂಡವರಲ್ಲವೇ ಅವರು ?

ಇನ್ನು ಸಂಪೂರ್ಣ ಶರಣನಾದ ಮೇಲೆ ತನ್ನ ಬಾಳಿನಲ್ಲಿ ತನ್ನ ಬಯಕೆಗೇನಾದರೂ ಬೆಲೆಯಿದೆಯೆ ?—ಎಂಬ ಪ್ರಶ್ನೆಯೂ "ಕಾವ್ಯಾನಂದ" ರನ್ನು ಕಾಡಿರಬೇಕು. ಮಾನವ ಸ್ವಭಾವವಾದುದರಿಂದ ದಿನದಿನ ಹಲವು ಅಪೇಕ್ಷೆಗಳು ಮುಂದೆಯೂ ಉಂಟಾಗುತ್ತಲೂ ನಡೆದವು. ಆಗ "ಬಯಸುವುದು ಜೀವಗುಣ, ಬಯಸದಿರುವುದು ದೇವಗುಣವೇನಯ್ಯ ?" ಎಂದು ಕೇಳಿದರು. ಅದರಲ್ಲಿಯೂ ಅವರಿಗೆ ದ್ವಂದ್ವ ಉಂಟಾಯಿತು. "ಬಯಸನೆ ದೇವ ಉತ್ಪತ್ತಿ-ಸ್ಥಿತಿ-ಲಯಗಳನ್ನು, ಬಯಸನೆ ಲೋಕಕಲ್ಯಾಣವನ್ನು, ಬಯಸನೆ ಸದ್ಭಕ್ತ ಗಾನವನ್ನು ?"—ಎಂದಮೇಲೆ ಈ 'ಬಯಕೆ' ಗೆ ಜೀವನದಲ್ಲಿ ಅರ್ಥವಾದರೂ ಏನು ? ಎಂಬ ಪ್ರಶ್ನೆಯು ಅವರನ್ನು ಮರಳಿ ಮರಳಿ ಕಾಡುತ್ತದೆ. ಆಗ ಅವರು ಒಂದು ಸಮಾಧಾನವನ್ನು ಈ ಹೋರಾಟದಲ್ಲಿ ಕಂಡುಕೊಳ್ಳುತ್ತಾರೆ—

"ತನಗಾಗಿ ಬಯಸಿದರೆ ಜೀವಗುಣ
ಎಲ್ಲರಿಗಾಗಿ ಬಯಸಿದರೆ ದೇವಗುಣವೆಂಬೆನಯ್ಯ" ●

ಹೀಗೆ ಬಯಕೆಯ ಬಗೆ ವಿಸ್ತಾರಗೊಳ್ಳುತ್ತದೆ. ಅದಕ್ಕನುಸರಿಸಿ ನಡೆ ನುಡಿಗಳಲ್ಲಿಯೂ ಲೋಕಕಲ್ಯಾಣದ ವ್ಯವಹಾರ ಹೆಚ್ಚುತ್ತದೆ. ಆಗ ನಿಷ್ಠೆ ಬಲಗೊಳ್ಳಬೇಕೆಂಬ ನೆಲೆಗೆ ಬಂದು ನಿಲ್ಲುತ್ತಾರೆ. ಅದರಲ್ಲಿಯೂ ಇಂಥ ದ್ವಂದ್ವ ತಪ್ಪಲಿಲ್ಲ. "ನಿಷ್ಠೆ ಪ್ರಬಲಿಸಿದರೆ ಅನುಷ್ಠಾನಕ್ಕೆ ಬರದು ಮತ ತತ್ತ್ವ

* ಜೀವನ ವಿಕಾಸ ಮೇ ೧೯೭೦ ವ. ಕ್ರ. ೧೨

● ಜೀವನ ವಿಕಾಸ ಎಪ್ರೀಲ ೧೯೭೦ ವ. ಕ್ರ ೬

ವಾದುದೂ; ನಿಷ್ಠೆ. ಪ್ರಬಲಿಸಿ ಅನ್ಯ ಮತ ಕನಿಷ್ಠವೆಂದೆನುವ ಭಯ ವಯ್ಯ !"—ಎಂಬ ತಳ್ಳಂಕದ ತೂಗಾಟ ಉಂಟಾಗದಿರಲಿಲ್ಲ. ಅದರಲ್ಲಿಯೂ ಒಂದು ಮಾರ್ಗವನ್ನು ಕಂಡುಕೊಳ್ಳುತ್ತಾರೆ—

"ಸ್ವಮತ ನಿಷ್ಠೆ ಪರಮತ ಸಹಿಷ್ಣುತೆಯು,
ಏಕರೂಪ ನಾಮ ನಿಷ್ಠೆ. ಅನೇಕ ರೂಪ ನಾಮ ಸಹಿಷ್ಣುತೆಯು,
ಹುರುಳು ತಿರುಳನು ತಿನಿಸಿ ಬೆಳೆಸಯ್ಯಾ ನನ್ನ !" *

ಎಂಬ ವಚನದಲ್ಲಿ ಹುರುಳು ತಿರುಳುಗಳು ಎಲ್ಲಿದ್ದರೂ ಸೇವಿಸುವೆ; ಅದರಿಂದಲೇ ಆತ್ಮವಿಕಾಸವೆನ್ನುವ ಧ್ವನಿಯು ಇಲ್ಲಿದೆ. ಹೀಗೆ ತನ್ನತನವು ವಿಶಾಲಗೊಂಡು, ವಿಶ್ವಚೇತನದತ್ತ ಐಕ್ಯಕ್ಕಾಗಿ ಮುಂದರಿಯುವುದು.

ಅಧ್ಯಾತ್ಮ ರಂಗದಲ್ಲಿ ಮುಂದರಿಯುವಿಕೆಯು ಸತತ ನಿದಿಧ್ಯಾಸದಿಂದಲೇ ಸಾಧ್ಯ, ಒಮ್ಮೆ ಹಿಡಿದು, ಇನ್ನೊಮ್ಮೆ ಬಿಟ್ಟರೆ ಅದು ಸಫಲವಾಗದು. ಸಿದ್ಧಿಗಾಗಿ ಸದಾ ಹಲಬುತ್ತಲೇ ಇರಬೇಕು ? ಅದಕ್ಕಾಗಿಯೇ ನಮ್ಮಾ ಸಿದ್ಧೇಶ್ವರನು "ಹಲುಬು ಹಲುಬು ಇರವಿನ ಹೊಲಬು ತಿಳಿವವರೆಗೆ ಹಲುಬು!" ಹಲುಬು ಹಲುಬು ಅರಿವಿನ ಕಿಲುಬು ಕಳೆವವರೆಗೆ ಹಲುಬು !" ಎಂದು ತನ್ನ ಅಂತರಾತ್ಮನಿಗೆ ಬೋಧಿಸುವನು. ಈ ಹಲುಬು ಹಂಬಲಗಳ ಹಿಂದೆ ನಂಬಿಗೆಯು ಮಾತ್ರ ಇರಲು ಬೇಕು. ಬಹು ದೃಢವಾಗಿಯೂ ಇರಲಿಕ್ಕೆ ಬೇಕು. ಅದು ಹೇಗೆಂದರೆ—

"ನಂಬಿ ಹಂಬಲಿಸು, ಹಾರೈಸು, ಹಲುಬು,
ಹುಯಿಲೆಬ್ಬಿಸು, ಒರಲು, ಕರೆ, ಮೊರೆ, ದೂರು,
ದುಃಖಿಸು, ಆಕ್ರಂದಿಸು—

ಅವನ ಕಿವಿ ಗಡಚಿಕ್ಕುವವರೆಗೆ;
ನಿನಗೆ ಉತ್ತರ ಸಿಕ್ಕುವವರೆಗೆ !" ●

ಕೊನೆಯವರೆಗೂ ನಮ್ಮ ಪ್ರಯತ್ನ ನಿಲ್ಲಕೂಡದು. ಇಂಥ ಜಿಗುಟುತನವಿದ್ದಾಗಲೇ ಸಿದ್ಧಿಯು ಸಾಧ್ಯ.

ಈ ಸಾಧನೆಯನ್ನೂ ನಾನು ಮೊದಲಿನಿಂದ ಆರಂಭಿಸಿಲ್ಲ. ಇನ್ನು

* ಜೀವನ ವಿಕಾಸ ಆಗಷ್ಟ ೧೯೭೨ ವ. ಕ್ರ ೧೬೯

● ಪರಂಜ್ಯೋತಿ ಪುಟ ೪೨೧



ಅರ್ಥ ಆಯುಷ್ಯ ಹೋಯಿತು. ಇನ್ನೇನು ಮಾಡಲು ಸಾಧ್ಯ? ಎಂಬ ನಿರಾಶೆಯ ಆವಶ್ಯಕತೆಯೇ ಇಲ್ಲ. "ಇದುವರೆಗಿನ ಬಾಳು ಹಾಳಾಯಿತೆಂದು ಹಳಹಳಿಸುತ್ತ ಇನ್ನುಳಿದ ಬಾಳನ್ನು ಹಾಳು ಮಾಡಿಕೊಳ್ಳುವುದರಲ್ಲಿ ಅರ್ಥವೇನಿದೆ? ಹಾಳಾದ ಬಾಳಿನ ಹಾಳು ಮಣ್ಣಿನಲ್ಲಿಯೇ ಹಣ್ಣಾಗದ ಹಾರೈಕೆಗಳ ಬೀಜಗಳನ್ನು ನೆಟ್ಟು, ಕೃತಕೃತ್ಯತೆಯ ಕೈತೋಟವನ್ನು ಬೆಳಸುವೆನು" * ಎಂಬ ಆಶಾವಾದವನ್ನು ಹೊಂದಿದ್ದಾನೆ, ಕವಿ. ಇಂಥ ಆಶೆಯೇ ಅವನನ್ನು ಸಿದ್ಧಿಯ ಪಥದಲ್ಲಿ ಮುನ್ನಡೆಯಿಸುವುದು. ಜೀವನದ ವಿವಿಧ ಹಂತಗಳಲ್ಲಿ ಯಶಸ್ಸನ್ನು ಒದಗಿಸುವುದು.

ಮನುಷ್ಯನಿಗೆ ಹಲವು ಆಶೆಗಳಿರುತ್ತವೆ; ವಿವಿಧ ಹಂಬಲಗಳು ಬೇಗುದಿಯನ್ನುಂಟು ಮಾಡಿರುತ್ತವೆ. ಗುರಿಯ ಕಲ್ಪನೆಯೂ ಇರುತ್ತದೆ. ಆದರೆ ಇಷ್ಟರಿಂದ ಜೀವನದಲ್ಲಿ ಅಂತರ್‌ಬಾಹ್ಯ ಪ್ರಗತಿಯು ಸಾಧ್ಯವಿಲ್ಲ. ಅದಕ್ಕಾಗಿ ಸುಖದುಃಖಗಳೆಲ್ಲ ಸಮವೆಂದು ಸತತ ಶ್ರಮಿಸಲು ಬೇಕು. ಇದನ್ನೇ "ಕಾವ್ಯಾನಂದ"ರು ತಾಪವನ್ನು ತಾಳಿಕೊಳ್ಳುವುದೇ ತಪವೆಂದೂ, ಗುರಿಯನ್ನು ನೆನೆದುಕೊಳ್ಳುವುದೇ ಜಪವೆಂದೂ, ಸಹನೆಯನ್ನು ಕಳೆದುಕೊಳ್ಳದಿರುವುದೇ ಸಮತೆಯೆಂದೂ, ಸಮತೆಯನ್ನು ಸ್ಥಿರೀಕರಿಸುವುದೇ ಸಮಾಧಿಯೆಂದೂ † ಸೂಚಿಸಿದ್ದಾರೆ. ಇನ್ನೂ ಮುಂದೆ ಹೋಗಿ ಆಗು-ಹೋಗುಗಳಿಂದ ಬೆಂಡಾಗದಿರುವುದೇ ಯೋಗವೆಂದು ಭಾವಿಸಿದ್ದಾರೆ. ಆದರಿಂದ ನರನು ಪರಮಾತ್ಮನು ಹುಟ್ಟಿಸಿದಲ್ಲಿ ಹುಟ್ಟಿ, ಇಟ್ಟಂತೆ ಇದ್ದು, ಮಾಡಿಯೂ ಮಾಡದವನ ಹಾಗೆ, ಭೋಗಿಸಿಯೂ ಭೋಗಿಸದಂತೆ ನಿರ್ಲಿಪ್ತನಾಗಿ ಬಾಳನ್ನು ಸಾಗಿಸಬೇಕು. ಇಲ್ಲಿ ಮಹಾಕವಿ ರತ್ನಾಕರ ವರ್ಣಿಯು ಹೇಳುವಂತೆ—ಉಂಡುಪವಾಸಿ, ಬಳಸಿಯೂ ಬ್ರಹ್ಮಚಾರಿಯೆಂದು ಭರತಚಕ್ರಿಯ ಭೋಗ-ಯೋಗಗಳ ವಿಷಯದಲ್ಲಿ ಹೇಳುವಂತೆ-ಪುರಾಣಿಕರ ದೃಷ್ಟಿಯಿದೆ. ಜೀವನವಿದೆ.

ಹೀಗೆ ನಾವು ಸೂಚಿಸಿದೆವೆಂದು ಶ್ರೀ ಸಿದ್ಧಯ್ಯ ಪುರಾಣಿಕರು ತಾವು ಸಿದ್ಧಪುರುಷರೆಂದೇನೂ ನಂಬಿಲ್ಲ, ಅವರ ಅವಸ್ಥೆಯ ಅರಿವು ಅವರಿಗಿದೆ.

* ಜೀವನ ವಿಕಾಸ ಏಪ್ರಿಲ ೧೯೭೦ ಪ. ಕ್ರ, ೯

† ಜೀವನ ವಿಕಾಸ ಆಕ್ಟೋಬರ ೧೯೭೨ ಪ, ಕ್ರ. ೧೬೯

ಆದರಿಂದ ಮುಂದಿನ ವಚನದಲ್ಲಿಯೇ ಅವರು "ಸಂಶಯದ ಹೊಲದಿ ನಿಂತ ಬುದ್ಧಿಯ ಬೆದರಿನಂತೆ ಬದುಕು ನನ್ನದೆಂದು" ಹೇಳುತ್ತಾರೆ. ಅತೃಪ್ತಿಯ ತಿರುಗಣಿಗೆ ಸಿಕ್ಕ ತರಗೆಲೆಯಂತೆ ಪರಿಭ್ರಮಿಸುತ್ತಿಹೆನು; ಅಶ್ರದ್ಧೆಯ ಬಲೆಗೆ ಸಿಕ್ಕ ಇರವಿನ ಎರಳೆಯಂತೆ ಮರವಿನ ಸರಳಿಗೆ ಬಲಿಯಾಗದಂತೆ ಕಾಯಯ್ಯಾ"* ಎಂದು ಬೇಡಿಕೊಳ್ಳುತ್ತಾರೆ. ಎಚ್ಚರದಿಂದ ತಮ್ಮ ಸಾಧಕ ವೃತ್ತಿಯಲ್ಲಿ ಮುಂದರಿಯುತ್ತಾರೆ.

ಈ ರೀತಿ ಬಾಳುವಾಗ, ತಮ್ಮ ಬಾಳಿಗೊಂದು ಸೂತ್ರವನ್ನು ನಿರ್ಮಿಸಿಕೊಂಡಿದ್ದಾರೆ, "ಕಾವ್ಯಾನಂದ" ರು. ಹಲವು ಮಾತಿಗಿಂತ ಒಂದು ಕೃತಿ ಲೇಸು, ಪ್ರಪಂಚದ ವೈವಿಧ್ಯಗಳಲ್ಲಿಯೂ ಒಂದು ಸೊಗಸಿದೆ; ಸಹಜ ಸೌಂದರ್ಯವಿದೆ. ನಶ್ವರದಲ್ಲಿಯೂ ಶಾಶ್ವತವು ರೂಪುಗೊಳ್ಳುತ್ತಿದೆ. ಕ್ರಮದಿಂದ ಮಾನವನು ಹಣ್ಣಿನಂತೆ ಪಕ್ವನಾಗಬೇಕು; ಆಗುತ್ತಾನೆ. ಯಾವುದಕ್ಕೂ ಅವಸರ ಪಡುವಂತಿರಕೂಡದು. ಕೆಟ್ಟ ಕೃತಿಗೆ ಧರ್ಮದ ಆವರಣ ಬೇಡ. ಗುರಿಯಿಂದಲೇ ಜೀವನಕ್ಕೆ ಗೌರವವಿದೆ. ಪ್ರತಿಯೊಂದು ವ್ಯಕ್ತಿತ್ವಕ್ಕೂ ಒಂದು ಬೆಲೆಯಿದೆ. ದ್ವಂದ್ವವನ್ನು ಅಳಿದು ಬಾಳು. ನೆನೆವರಿಗೆ ಪರಮಾತ್ಮ ಹತ್ತಿರದಲ್ಲಿಯೇ ಇದ್ದಾನೆ. ಆದರೆ ಅವನು ಬಣ್ಣನೆಗೆ ಸಿಗದಂಥವ. ದೇವನ ಕೃಪೆಯ ಕವಚವಿದ್ದಲ್ಲಿ ಜೀವಿಗೆ ಹೆದರಕೆಯೆಂಬುದಿಲ್ಲ. ಇಂಥ ಹಲವಾರು ಮುತ್ತಿನಂಥ ಅಮರ ವಾಕ್ಯಗಳನ್ನು ತಮ್ಮ ಅನುಭಾವ ವಚನಗಳ ಮೂಲಕ ಕನ್ನಡ ಕುಲಕೋಟಿಗೆ "ಕಾವ್ಯಾನಂದ" ರು ನೀಡಿದ್ದಾರೆ. ಕನ್ನಡದ ಅಧ್ಯಾತ್ಮ ಸಿರಿಯನ್ನು ಹೆಚ್ಚಿಸಿದ್ದಾರೆ.

ಇನ್ನು ಈ ವಚನಕಾರರು, ಅಧ್ಯಾತ್ಮ, ಅಂತರಂಗ ವಿಕಾಸ, ದೇವನ ಕರುಣೆ ಎಂದು ಹೇಳುತ್ತ ತನ್ನ ಕರ್ತವ್ಯವನ್ನಾಗಲಿ, ದೇಶದ ಆಗು-ಹೋಗುಗಳಿಗಾಗಲಿ ವಿಮುಖನಾದುದು ಇಲ್ಲ. ಸುತ್ತಲಿನ ಜೀವನದಲ್ಲಿ ಸಾಕಷ್ಟು ಆಸ್ಥೆಯಿದೆ. "ಮರು ಹುಟ್ಟನಳಿಪ ಮೋಕ್ಷವೇನಗೆ ಬೇಡಯ್ಯ-ಮತ್ತೆ ಈ ಪವಿತ್ರ ದೇಶದಲ್ಲಿ ಹುಟ್ಟುವಾಸೆ ನನಗೆ. ಕಾಯಕವ ತಪ್ಪಿಸುವ ಧ್ಯಾನ, ಮೌನ, ಜಪ, ತಪ, ಯೋಗ ಮಾರ್ಗಗಳು ಬೇಕಿಲ್ಲವಯ್ಯ ನನಗೆ.

* ಜೀವನ ವಿಕಾಸ ಅಕ್ಟೋಬರ ೧೯೭೨ ವ. ಕ್ರ. ೧೮೦



ಕಾಯಕ ಮಾಡುತ್ತಲೇ ಕೊನೆಯುಸಿರು ಬಿಡುವ ಬಯಕೆ ನನಗೆ," ×— ಎಂದು ಕರ್ತವ್ಯ ನಿಷ್ಠೆಯನ್ನು ಅಗಾಗ ವ್ಯಕ್ತ ಮಾಡಿದ್ದಾರೆ. ಸತ್ಕಾರ್ಯಕ್ಕೆ ಪ್ರೇರಣೆ ನೀಡುವುದೇ ಸುವಿಚಾರ, ಉಳಿದುವೆಲ್ಲ ಕುವಿಚಾರವೆಂದು ಸಾರಿದ್ದಾರೆ, "ಕಡೆದರೆ ಬೆಣ್ಣೆ, ಕಟೆದರೆ ಮೂರ್ತಿ, ....ತಾಳಿದರೆ ಬಾಳು, ದುಡಿದರೆ ಪಾಲು" * ಎಂದು ಮೊದಲಾಗಿ ಬಿತ್ತರಿಸಿ ಪರಿಶ್ರಮ, ಕ್ರಮ ಗೌರವಗಳನ್ನು ಜನತೆಯಲ್ಲಿ ಉಂಟು ಮಾಡಲು ಹೆಣಗಿದ್ದಾರೆ. ಕಂಬನಿಯ ಕಂಡು ಕರಗುವ ಬೆಣ್ಣೆಯಂಥ ಹೃದಯವಿರಲೆಂದೂ ಸೂಚಿಸಿದ್ದಾರೆ. ಅಹಿಂಸೆಗೆ ಕರುಣೆಯೇ ಮೂಲವಲ್ಲವೆ?

ಅದರಂತೆ ನಮ್ಮ ಪರಂಪರೆ, ಸಂಸ್ಕೃತಿಗಳ ವಿಷಯದಲ್ಲಿಯೂ ಅಪಾರ ಅಭಿಮಾನ ಗೌರವಗಳಿವೆ, "ಕಾವ್ಯಾನಂದ" ರಲ್ಲಿ. ಆದರೆ ಅದು ಅಂಧ ಶ್ರದ್ಧೆ ಮಾತ್ರವಲ್ಲ. "ಹಾವಿಗೂ ದೇವತ್ವವನ್ನಿತ್ತ ಭಾವುಕತೆ ನಮ್ಮದು. ಪಾಪಿಗಳ ಒಡಲೊಳಿಹ ಪರಮಾತ್ಮನನ್ನು ಕಂಡುದು ಇನ್ನೊಂದೆಡೆ" ಹೀಗಿದ್ದರೂ ಅದೇ ಸಂಸ್ಕೃತಿಯಲ್ಲಿ ಬೆಳೆದವರು "ನಿನ್ನ ಹೆಸರಿನಲ್ಲಿಯೇ ಹುಸಿ, ಸುಲಿಗೆ, ನ್ಯಾಯ, ಅನಾಚಾರಗಳ ಆಳಿಕೆ ನಡೆಸುತ್ತಿರುವರೆಂದು" + ಕೆರಳದೆ ಇಲ್ಲ. ಈ ಕೆರಳಿಕೆ ಅವರಿಂದ ನಾಡಿನ ವಿಷಯದಲ್ಲಿ ಅನುಪಮ ತ್ಯಾಗಕ್ಕೂ ಸಿದ್ಧಗೊಳಿಸುತ್ತದೆ. "ನನ್ನ ನೆತ್ತರಿನಲ್ಲಿಯೇ ನನ್ನ ನಾಡಿನ ಉತ್ಥಾನ ಚರಿತೆಯ ಬರೆಯಯ್ಯ" * * ,—ಎಂದು ಕಳವಳದಿಂದ ಕೇಳಿಕೊಳ್ಳುವರು. ಇದೀಗ ಅದೆಂಥ ತ್ಯಾಗ, ದೇಶಭಕ್ತಿಗಳು ವ್ಯಕ್ತವಾಗಿವೆಯಿಲ್ಲಿ! ಅದರಿಂದ ವ್ಯರ್ಥ ಶ್ರಮ ಮಾಡಲು ಅವರೆಂದೂ ಮುಂದಾಗುವದಿಲ್ಲ. ಸಫಲತೆಯ ಶಿಖರದಲ್ಲಿಯೇ ಅವರ ದೃಷ್ಟಿ ನೆಟ್ಟಿರುತ್ತದೆ, ಸಮೃದ್ಧಿ ಸುವಿಚಾರಗಳೇ ಅವರ ಜೀವನದ ಸೂತ್ರಗಳು, ಹೃದಯದ ಪಾವಿತ್ರ್ಯವೇ ಅದಕ್ಕಿರುವ ಒರೆಗಲ್ಲು. ಅದರಿಂದ "ನಿನ್ನ ಸಂಕಲ್ಪದ, ಸಂಕೇತದ ಸುತ್ತ ಸುತ್ತುವ ಸ್ಪುಟ್ನಿಕ್ ಆಗಲಯ್ಯ ನನ್ನ

× ಜೀವನ ವಿಕಾಸ. ಜುಲೈ ೧೯೭೨ ವ. ಕ್ರ, ೧೬೪
* ಜೀವನ ವಿಕಾಸ. ಜುಲೈ ೧೯೭೧ ವ. ಕ್ರ. ೧೨೦
+ ಜೀವನ ವಿಕಾಸ. ಮಾರ್ಚ ೧೯೭೧ ವ. ಕ್ರ ೧೦೬
* * ಜೀವನ ವಿಕಾಸ-ಅಕ್ಟೋಬರ ೧೯೭೦. ವ. ಕ್ರ. ೬೦, ೫೯

ತನು" * ಎಂಬ ಹಂಬಲಿಕೆಯುಳ್ಳವರಾಗಿದ್ದಾರೆ. ಆ ಪರಮಾತ್ಮನ ಅವತರಣದ ಪಾತ್ರವಾಗಲಿ ತನ್ನ ದೇಹವೆನ್ನುವಲ್ಲಿ ಎಂಥ ಪವಿತ್ರ ಭಾವ ಅಡುಗಿದೆ? ಇದಕ್ಕೇನೇ ಶರಣಭಾವವೆನ್ನುವರಲ್ಲವೆ?

"ಅರ್ಧ ರಾತ್ರಿಯಲ್ಲಿ ಎದ್ದು ಹೋದವರೆಲ್ಲ ಬುದ್ಧರಾಗುವರೇನಯ್ಯ ?" ಎಂದು ಸ್ಪಷ್ಟವಾಗಿಯೇ ಸಿದ್ಧಯ್ಯನವರು ಒಂದು ವಚನದಲ್ಲಿ ಕೇಳುವರು. ಆದಕ್ಕಾಗಿ ವಿಜ್ಞಾನಿಯ ಬುದ್ಧಿ, ತತ್ತ್ವಜ್ಞಾನಿಯ ಮನ, ಕವಿಯ ಹೃದಯ ದುಡಿತದ ಬಟ್ಟಲು, ತಿಳಿವಿನ ಹಾಲು, ಒಲವಿನ ಸಕ್ಕರೆ, ನಯದ ನೌಕೆ, ನಂಬಿಕೆಯ ಹುಟ್ಟು, ದಿಟದ ದಿಕ್‌ಸೂಚಿ, ಛಲದ ಕುದುರೆ, ಹದುಳದ ಹಲ್ಲಣ, ವಿವೇಕದ ಕಡಿವಾಣ—ಇವೆಲ್ಲವನ್ನೂ ಕರುಣಿಸೆಂದು ಪರಮಾತ್ಮನಲ್ಲಿ ಬೇಡಿಕೊಳ್ಳುವರು. ಇದರಲ್ಲಿ ಮಾನಸಿಕ, ಆಹಾರಕ, ಭಾವಿಕ ಹಾಗೂ ಪ್ರಗತಿಯ ಪರಿಶುದ್ಧತೆ, ನಿಷ್ಠೆ, ಸತ್ವ ಇವೆಲ್ಲವೂ ಹುರಿಗೊಂಡಿವೆ. ಜೀವನವನ್ನು ಸಾರ್ಥಕ್ಯದ ಕಡೆಗೆ ಮುನ್ನಡೆಯಿಸಲು ಸಮರ್ಥವೆನಿಸಿವೆ. ಇವೆಲ್ಲವೂ ಪರಮಾತ್ಮನ ಕೃಪೆಯಿಂದಲೇ ಜೀವಿಗೆ ಒದಗುವವೆಂಬ ಶ್ರದ್ಧೆಯೂ ಇವರಲ್ಲಿದೆ. ಈ ಶ್ರದ್ಧೆ ನಿಷ್ಠೆಗಳೇ ಇವರ ಜೀವನದ ನಂದಾದೀಪಗಳಾಗಿವೆ. ಅವುಗಳಿಂದ ಅವರ ಬಾಳು ಬೆಳಗುವುದಲ್ಲದೆ ಸುತ್ತಲಿನವರ ಬಾಳನ್ನೂ ಬೆಳಗಿಸುವುದು. ಇದೇ ಸಾಹಿತ್ಯದ ಸಾಫಲ್ಯವಲ್ಲವೆ? ಸಾರ್ಥಕ ಸಾಹಿತ್ಯದ ಲಕ್ಷಣವು ಇದನ್ನುಳಿದು ಮತ್ತಿನ್ನೇನಿದ್ದೀತು?

ಆದರಿಂದ ಕನ್ನಡ ಸಾಹಿತ್ಯದಲ್ಲಿ ಶ್ರೀ ಸಿದ್ಧಯ್ಯ ಪುರಾಣಿಕರ ವಚನಗಳಿಗೊಂದು ಅತ್ಯುನ್ನತ ಸ್ಥಾನವಿದೆ. ಅವುಗಳಲ್ಲಿ ಮೂಡಿ ನಿಂತ **"ಕಾವ್ಯಾನಂದ"** ರ ವ್ಯಕ್ತಿತ್ವಕ್ಕೆ ಆದಕ್ಕೂ ಮೇಲ್‌ತರಗತಿಯ ಘನತೆಯಿದೆ. ಸಿದ್ಧಪುರುಷನೊಬ್ಬನ ಅಮೃತ ವಾಕ್ಯಗಳೇ ಸರಿ: ಸ್ವತಂತ್ರಧೀರ ಸಿದ್ಧೇಶ್ವರ ವಚನಗಳು. ಇಂಥ ವಚನ ರಚನೆ ಜೀವನದ ಉಸಿರು! ಅಧ್ಯಾತ್ಮ ಜೀವನದಲ್ಲಿ ಅಂತರಂಗ ವಿಕಾಸದ ಹೊಗರು !!

ಶೇಡಬಾಳ

—❋—

* ಜೀವನ ವಿಕಾಸ–ಅಕ್ಟೋಬರ ೧೯೭೦ ಪ. ಕ್ರ. ೬೦; ೫೯



# ತ್ರಿಭುವನ ಮಲ್ಲ

**ಅಜಿತ ಅಣ್ಣಾರಾಯ ಮಿರ್ಜಿ**

ಮುಡಿವವರ ಮುಖ ನೋಡಿ ಅರಳುವುವೆ ಪುಷ್ಪಗಳು ?
ಓದುವರ ಆಸೆಯಲಿ ನೀ ಬರೆಯಬೇಡ !
ನಿನ್ನ ರುಚಿಯೆತ್ತರಕೆ ಓದುಗರೆ ಬರಬೇಕು
ಅವರನೊಲಿಸಲು ನಿನ್ನ ಗುರಿ ತೊರೆಯಬೇಡ ! *

ಎಂದು ಕವಿ ಕಾವ್ಯಾನಂದರು ತಮ್ಮ "ಬಾಳ ಹೊತ್ತಿಗೆ" ಎಂಬ ಕವನದಲ್ಲಿ ಕರೆ ನೀಡಿದ್ದಾರೆ. ಲೇಖಕರು ಸಾಮಾನ್ಯ ಜನರ ಮಟ್ಟಕ್ಕೆ ಇಳಿದು, ಜನಸಾಮಾನ್ಯರಿಗೂ ರುಚಿಸಬಲ್ಲ ಮತ್ತು ತಿಳಿಯಬಲ್ಲ ಕೃತಿಯನ್ನು ರಚಿಸಬೇಕು. ಲೇಖಕನ ದೃಷ್ಟಿಯಲ್ಲಿ ಓದುಗರು ಯಾವಾಗಲೂ ನೆಲೆಸಿರಬೇಕು. ಅವನು ಓದುಗರಿಗಾಗಿ ಬರೆಯಬೇಕು ಎಂಬ ವಾದವೂ ಬಂದಿದೆ. ಆದರೆ ಪುರಾಣಿಕರ ವಾದ ಈ ವಾದದಿಂದ ಭಿನ್ನವಾದುದಾಗಿದೆ. ಲೇಖಕ ತನ್ನ ಗುರಿ ತೊರೆದು ಓದುವರ ಆಸೆಯಲ್ಲಿ ಕೃತಿ ರಚಿಸಬಾರದು. ಓದುಗರೇ ಲೇಖಕನ ಎತ್ತರಕ್ಕೆ ಏರಬೇಕು. ಇದು ಪುರಾಣಿಕರ ದೃಷ್ಟಿ.

ಪುರಾಣಿಕರು ತಮ್ಮ ದೃಷ್ಟಿಯಂತೆ ಸೃಷ್ಟಿಸಬಲ್ಲರೆಂಬುದಕ್ಕೆ ಅವರ ಐತಿಹಾಸಿಕ ಕಾದಂಬರಿ "ತ್ರಿಭುವನ ಮಲ್ಲ"ವೇ ಸಾಕ್ಷಿ. ಇದು ನಾವು ಓದುವ ಇತರ ಕಾದಂಬರಿಗಳಂತಲ್ಲ. ಇದಕ್ಕೆ ತನ್ನದೇ ಆದ ಶೈಲಿ, ರೀತಿ, ಮೋಹಕತೆಗಳಿವೆ. ಕನ್ನಡದಲ್ಲಿ ಇಂಥ ಶೈಲಿಯಲ್ಲಿ ಬರೆದ ಕಾದಂಬರಿ ಇನ್ನೊಂದಿಲ್ಲವೆನ್ನಬಹುದು. ಇದನ್ನು ಬರಿಯ ಕಾದಂಬರಿ ಎನ್ನುವದಕ್ಕಿಂತ ಕಾವ್ಯಮಯ ಕಾದಂಬರಿ ಎನ್ನಬೇಕು.

ಇದರಲ್ಲಿ ಬರುವದು ಕ್ರಿ. ಶ. 1076ರಿಂದ 1126ರ ವರೆಗೆ ರಾಜ್ಯಭಾರ ಮಾಡಿದ ಚಾಲುಕ್ಯ ರಾಜಮನೆತನದ ಅತ್ಯಂತ ಶ್ರೇಷ್ಠ ಚಕ್ರವರ್ತಿ ವಿಕ್ರಮನ ಕಥೆ. ಇವನು 6ನೆಯ ವಿಕ್ರಮಾದಿತ್ಯ.

* ಕರುಣಾ ಶ್ರಾವಣ ಪುಟ ೩

ಕಾದಂಬರಿಯ ಕಥೆಯನ್ನು ಸ್ವಲ್ಪದರಲ್ಲಿ ಈ ರೀತಿ ಸಂಗ್ರಹಿಸಬಹುದು.

"ಗುರು ಕೃಪೆಯಿಂದ **ಸೋಮೇಶ್ವರ** ಮೈಳಲದೇವಿಯರು ಮೂರು ಜನ ಪುತ್ರರನ್ನು ಪಡೆಯುತ್ತಾರೆ. **ಸೋಮೇಶ್ವರ** ಹಿರಿಯವ, ವಿಕ್ರಮಾದಿತ್ಯ ನಡುವಿನವ ಮತ್ತು ಜಯಸಿಂಹ ಕಿರಿಯವ. ವಿಕ್ರಮನ ಜನಪ್ರಿಯತೆ ಮತ್ತು ಶೌರ್ಯಗಳನ್ನು ಕಂಡು ಹಿರಿಯವ ಸೋಮೇಶ್ವರನಲ್ಲಿ ಮತ್ಸರ ಹುಟ್ಟುತ್ತದೆ. ಈ ಮತ್ಸರಭಾವ ತಂದೆ ತಾಯಿಗಳನ್ನು ಚಿಂತೆಗೀಡು ಮಾಡುತ್ತದೆ. ಸಾಮ್ರಾಟ ಸೋಮೇಶ್ವರ ಈ ವಿಷಯವನ್ನು ಗುರುಗಳಾದ ವಿಜ್ಞಾನೇಶ್ವರರ ಮುಂದಿಡುತ್ತಾನೆ. ಅವರ ಸಲಹೆಯಂತೆ ನಚ್ಚಿನ ಮಗ ವಿಕ್ರಮನನ್ನು ವಿಚಾರಿಸಿ ಅವನ ಸಲಹೆಯಂತೆ ಹಿರಿಯ ಮಗ ಸೋಮೇಶ್ವರನಿಗೇ ಯುವರಾಜ ಪಟ್ಟಾಭಿಷೇಕ ನಡೆಯಿಸುತ್ತಾರೆ. ಪಟ್ಟಾಭಿಷೇಕಾನಂತರ ಸಾಮ್ರಾಟ ಸೋಮೇಶ್ವರ ಮೂವರೂ ಮಕ್ಕಳಿಗೆ ಸಾಮ್ರಾಜ್ಯದ ಕೆಲಸಗಳನ್ನು ಹಂಚಿ ಕೊಡುತ್ತಾನೆ. ಬಳಿಕ ವಿಕ್ರಮ ಸಾಮ್ರಾಜ್ಯದ ಶತ್ರುಗಳನ್ನು ಸದೆಬಡೆಯುತ್ತ ಸಾಗುತ್ತಾನೆ. ಅವನು ವೈರಿಗಳ ಮೇಲೆ ವಿಜಯ ಪಡೆಯುತ್ತ ಸಾಗಿರುವಾಗ ತಂದೆ ಗುಣಪಡಿಸಲಾರದ ರೋಗದಿಂದ ಮರಣ ಹೊಂದಿದ ವಾರ್ತೆ ಖರುತ್ತದೆ. ಕೂಡಲೇ ವಿಕ್ರಮ ಕಲ್ಯಾಣಕ್ಕೆ ಧಾವಿಸುತ್ತಾನೆ. ಸಾಮ್ರಾಟರ ಮರಣದ ಶೋಕದಲ್ಲಿ ಎಲ್ಲರೂ ಮುಳುಗಿರುವಾಗ ಸೋಮೇಶ್ವರನಿಗೆ ತನ್ನ ಪಟ್ಟಾಭಿಷೇಕದ ಚಿಂತೆ. ಅವನು ಅದನ್ನು ತಾನೇ ಪ್ರಸ್ತಾಪಿಸುತ್ತಾನೆ. ಅವನ ಮನಸ್ಸಿನಂತೆ ಅವನ ಪಟ್ಟಾಭಿಷೇಕ ತಂದೆಯ ಮರಣದ ೧೪ನೆಯ ದಿನ ನೆರವೇರುತ್ತದೆ. ಪಟ್ಟಾಭಿಷೇಕವಾದಕೂಡಲೇ ಅವನು ವಿಕ್ರಮ ಮತ್ತು ಜಯಸಿಂಹರನ್ನು ಅವರು ಮೊದಲು ನೋಡಿಕೊಳ್ಳುತ್ತಿದ್ದ ಜವಾಬ್ದಾರಿಗಳಿಂದ ಬೇರೆಡೆಗೆ ವರ್ಗಾಯಿಸುತ್ತಾನೆ. ಇದರಿಂದ ಅಣ್ಣತಮ್ಮಂದಿರಲ್ಲಿ ಮನಸ್ತಾಪವಿದೆಯೆಂಬುದನ್ನರಿತ ಚಾಲುಕ್ಯರ ಹಳೆಯ ಹಗೆಗಳಾದ ಚೋಳ ದೊರೆ ಕಾಲ್ಕೆರೆದು ಯುದ್ಧಕ್ಕೆ ಬಂದ. ಆದರೆ ವಿಕ್ರಮನ ಅಪ್ರತಿಮ ಧೈರ್ಯ ಬಲಗಳನ್ನು ಕಂಡು ತನಗೆ ಸೋಲು ಸಂಭವಿಸುವದು ನಿಶ್ಚಯವೆಂದು ತಿಳಿದ ಮೇಲೆ ಆಪ್ತ ಸಚಿವನ ಉಪದೇಶದಂತೆ ಮಗಳು ಕೇತಲೆಯನ್ನು ಕೊಟ್ಟು ಮದುವೆ ಮಾಡಿ ಉಪಾಯದಿಂದ ಪಾರಾದ. ಈ ರೀತಿ ವಿಕ್ರಮ-ವೀರರಾಜೇಂದ್ರರು ಒಂದಾಗಿ ತಮ್ಮ ಬಲ ಹೆಚ್ಚಿಸಿಕೊಂಡುದಕ್ಕಾಗಿ ಸೋಮೇಶ್ವರ ಕರುಬಿದ. ಚಿಂತೆಗೊಳಗಾದ. ಆದರೆ ಕೂಡಲೇ ವೀರರಾಜೇಂದ್ರ ಅಕಾಲ ಮರಣ ಹೊಂದಿದ್ದನ್ನು ಕೇಳಿ ಹಿಗ್ಗಿದ. ವೀರರಾಜೇಂದ್ರನ ರಾಜ್ಯದಲ್ಲಿ ಅಲ್ಲಲ್ಲಿ ದಂಗೆ ಎದ್ದಿತು. ವಿಕ್ರಮ ಅವನ್ನೆಲ್ಲ ದಮನ ಮಾಡಿ ಯುವರಾಜ ಅಧಿರಾಜೇಂದ್ರನಿಗೆ ಪಟ್ಟಗಟ್ಟಿದ. ಸೋಮೇಶ್ವರ ಮತ್ತು ಕುಲೋತ್ತುಂಗ ಚೋಳರು ಸಮಾಲೋಚಿಸಿಕೊಂಡು ಉಪಾಯದಿಂದ ಅಧಿರಾಜೇಂದ್ರನ ರಾಜಧಾನಿಗೆ ಬೇಹಿನವರನ್ನು ಕಳಿಸಿ ಬಂಡಾಯವೆಬ್ಬಿಸಿದರು. ಬಂಡಾಯದಲ್ಲಿ ಅಧಿರಾಜೇಂದ್ರನ ಕೊಲೆಯಾಯಿತು. ಕನಲಿದ ವಿಕ್ರಮ ಮಾರುವೇಶದಿಂದ ಕಲ್ಯಾಣಕ್ಕೆ ಬಂದು ಅಲ್ಲಿಯ ವಿದ್ಯಮಾನಗಳನ್ನು ತಿಳಿದುಕೊಂಡ. ಗುರು ವಿಜ್ಞಾನೇಶ್ವರರ ಆಶೀರ್ವಾದ ಪಡೆದು ಹಿಂದಿರುಗಿ ಕುಲೋತ್ತುಂಗನ ಮೇಲೆ ಯುದ್ಧ ಸಾರಿದ. ಸೋಮೇಶ್ವರ ಕುಲೋತ್ತುಂಗನ ಸಹಾಯಕ್ಕೆ ಧಾವಿಸಿದ. ವಿಕ್ರಮ ಇಬ್ಬರೊಡನೆಯೂ ಏಕಕಾಲದಲ್ಲಿ ಸೆಣಸಿ ಜಯಗಳಿಸಿದ. ಸೋಮೇಶ್ವರ ವಿಕ್ರಮನ ಸೆರೆಯಾಳಾದ. ಶುಭ ಮುಹೂರ್ತದಲ್ಲಿ ಸಿಂಹಾಸನವನ್ನೇರಿದ ವಿಕ್ರಮ ಕವಿ ಬಿಲ್ಹಣನಿಗೆ ಆಶ್ರಯವಿತ್ತ. ಸಾಮ್ರಾಜ್ಯದಲ್ಲಿ ಅಲ್ಲಲ್ಲಿ ವಿದ್ರೋಹದ ಹೊಗೆಯಾಡುತ್ತಿರುವದನ್ನು ತಿಳಿದು ವಿಕ್ರಮ ದಂಡಯಾತ್ರೆಗೆ ಹೊರಡಲು ನಿರ್ಧರಿಸಿದ. ಕೇತಲೆ ಸಿರಗುಪ್ಪಿಯ ಕೇತಲೇಶ್ವರ ದೇವಸ್ಥಾನಕ್ಕೆ ಕ್ಷೇತ್ರಯಾತ್ರೆ ಹೊರಟಳು. ಕೇತಲೇಶ್ವರನ ಸನ್ನಿಧಿಯಲ್ಲಿಯೇ ಅವಳು ಪುತ್ರರತ್ನವನ್ನು ಪಡೆದಳು. ಜಯದ ಮೇಲೆ ಜಯ ಗಳಿಸಿ ಕಲ್ಯಾಣಕ್ಕೆ ಮರಳಿದ ವಿಕ್ರಮ ಪುತ್ರನಿಗೆ ಜಯಕರ್ಣ ಎಂದು ಹೆಸರಿಡಲು ಸಂದೇಶ ಕಳುಹಿದ. ಕೇತಲೆಯಿಲ್ಲದೆ ವಿರಹದಿಂದ ಬಳಲುತ್ತಿದ್ದ ಅವನಿಗೆ ಶಿಲಾಹಾರ ಮಾರಸಿಂಹನ ಪುತ್ರಿ ಚಂದ್ರಲೇಖೆಯ ಸ್ವಯಂವರಕ್ಕೆ ಕರೆ ಬಂದಿತು. ಒಬ್ಬ ಹೆಂಡತಿ ಇರುವಾಗ ಇನ್ನೊಬ್ಬಳನ್ನು ತರುವದೇ ? ಎಂದು ಯೋಚಿಸುತ್ತಿದ್ದ ವಿಕ್ರಮನಿಗೆ ಕೇತಲೆಯಿಂದ ಸ್ವಯಂವರಕ್ಕೆ ತೆರಳಬೇಕೆಂದು ನಿರ್ದೇಶ ಬಂದು, ತನಗಾಗಿ ಕಾತರಿಸುತ್ತಿದ್ದ ಚಂದಲೆಯ ಸ್ವಯಂವರಕ್ಕೆ ತೆರಳಿ ಚಂದಲೆಯೊಡನೆ ಹಿಂದಿರುಗಿದ. ಕೂಡಲೇ ತಮ್ಮ ಜಯಸಿಂಹ ವಿಕ್ರಮನ ಮೇಲೆ ಯುದ್ಧ ಸಾರಿದ ಸುದ್ದಿ ಬರುತ್ತದೆ ಯುದ್ಧದಲ್ಲಿ ಜಯಸಿಂಹ ಸೆರೆ ಸಿಗುತ್ತಾನೆ. ತಾನು ಮಾಡಿದ ದ್ರೋಹಕ್ಕೆ ಪಶ್ಚಾತ್ತಾಪ ಪಡು

ತ್ತಾನೆ. ಅವನಿಗೆ ಕ್ಷಮೆದೋರಿ ವಿಕ್ರಮ ಕಲ್ಯಾಣಕ್ಕೆ ಕರೆತರುತ್ತಾನೆ. ಸಾಮ್ರಾಜ್ಯದ ವಿಘ್ನಗಳನ್ನೆಲ್ಲ ನೆಲಸಮ ಮಾಡಿದ ವಿಕ್ರಮ ಶಾಸ್ತ್ರ, ಸಾಹಿತ್ಯ ಕಲೆಗಳಿಗೆ ಪ್ರೋತ್ಸಾಹ ನೀಡುತ್ತಾನೆ. ವಿಜ್ಞಾನೇಶ್ವರರು 'ಮಿತಾ-ಕ್ಷರ' ಎಂಬ ಗ್ರಂಥವನ್ನೂ ಬಿಲ್ಹಣ 'ವಿಕ್ರಮಾಂಕದೇವ ಚರಿತ' ವನ್ನೂ ರಚಿಸುತ್ತಾರೆ. ಸಾಮ್ರಾಜ್ಯದಲ್ಲಿಯ ಎಲ್ಲ ಮತ-ಧರ್ಮಗಳ, ದೇವಾಲಯ ಗಳ ಜೀರ್ಣೋದ್ಧಾರವಾಯಿತು. ವಿಕ್ರಮ ಸಾಮ್ರಾಜ್ಯದಲ್ಲೆಲ್ಲ ಸಂಚರಿಸಿ ಪ್ರಜೆಗಳ ಕಷ್ಟಗಳನ್ನು ತಿಳಿದುಕೊಂಡು ಅವನ್ನೆಲ್ಲ ಪರಿಹರಿಸಿದ. ಕೇತಲೆ, ಚಂದಲೆ, ರಾಜಕುಮಾರರೊಂದಿಗೆ ಬನವಾಸಿಯ ಯಾತ್ರೆ ಮಾಡ ಬೇಕೆಂದು ನಿರ್ಧರಿಸಿದಾಗ ಹೊಯ್ಸಳ ಬಿಟ್ಟಿದೇವನು ಬಂಡಾಯ ವೆದ್ದು ಯುದ್ಧದ ಕರೆ ಬರುತ್ತದೆ. ಕಣ್ಣೆಗಾಲದ ಬಳಿ ನಡೆದ ಸಮರದಲ್ಲಿ ಬಿಟ್ಟಿಗನ ದಂಡಾಧಿಪತಿ ಗಂಗರಾಜ ವಿಜಯ ದೊರಕಿಸಿದ. ಈ ಸೋಲು ವಿಕ್ರಮನಿಗೆ ಶೂಲವಾಗಿ ಇರಿಯತೊಡಗಿತು. ಆಚರಸನ ಆಧಿಪತ್ಯದಲ್ಲಿ ವಿದ್ರೋಹಿಮರ್ದನ ಕಾರ್ಯ ನಡೆಯಿತು. ಶಿಲಾಹಾರ ಭೋಜ ಪಲಾ ಯನ ಮಾಡಿದ. ಕದಂಬ ಜಯಕೇಶಿಯ ಗೋವೆಯ ಅರಮನೆಯ ಮೇಲೆ ಆಚರಸ ವಿಕ್ರಮನ ವರಾಹಧ್ವಜವನ್ನು ಹಾರಿಸಿದ. ಆಚರಸ ವಿಕ್ರಮನನ್ನು ಬನವಾಸಿಗೆ ಆಮಂತ್ರಿಸಿದ. ಕೇತಲೆಯಿಲ್ಲದೆ ಚಂದಲೆ, ಮೈಲಳೆಯರೊಡನೆ ಬನವಾಸಿಗೆ ಹೋಗಲು ದುಃಖಿಸುತ್ತಾನೆ. ಕದಂಬ ಜಯಕೇಶಿ ತಾರುಣ್ಯದ ಉದ್ರೇಕದಲ್ಲಿ ತನಗೆ ವಿದ್ರೋಹಿಯಾಗಿದ್ದರೂ ಮೈಲಳೆಗೆ ತಕ್ಕ ವರ ಎಂದು ನಿಶ್ಚಯಿಸಿ ಅವರಿಬ್ಬರ ಮದುವೆಯನ್ನು ವಿಕ್ರಮ ನೆರವೇರಿಸುತ್ತಾನೆ. ಯುದ್ಧ ಗಳೆಲ್ಲ ಮುಗಿದವು. ತನ್ನ ನಂತರ ಪಟ್ಟವೇರುವ ಸೋಮೇಶ್ವರ ಸಾಮ್ರಾ ಜ್ಯವನ್ನು ಸರಿಯಾಗಿ ಆಳುವನೋ, ಇಲ್ಲವೋ ಎಂಬ ಚಿಂತೆ ವಿಕ್ರಮನನ್ನು ಬಾಧಿಸತೊಡಗಿತು. ಅವನು ತನ್ನ ಉಳಿದ ಆಯುಷ್ಯವನ್ನು ಕಲ್ಯಾಣ ಕಾರ್ಯ ದಲ್ಲಿ ಕಳೆಯುತ್ತಾನೆ"

"ತ್ರಿಭುವನ ಮಲ್ಲ"ವನ್ನು ಓದಿ ಮುಗಿಸಿದ ಮೇಲೆ ನಮಗೆ ಒಂದು ವಿಶಿಷ್ಟ ಅನುಭವವಾಗುತ್ತದೆ. ನಾವೊಂದು ಕಾದಂಬರಿಯನ್ನು ಓದಿದೆವೋ ಅಥವಾ ಕಾವ್ಯವನ್ನು ಪಠಿಸಿದೆವೋ ಎಂದು ಸಂಶಯ ಬರುತ್ತದೆ. ಕಾದಂ-ಬರಿಯೆಲ್ಲ ಪ್ರೌಢ ಗಂಭೀರ ಶೈಲಿಯ ಕಾವ್ಯದಂತಿದೆ.



ಉದಾಹರಣೆಗೆ ಈ ಸಾಲುಗಳನ್ನು ನೋಡಬಹುದು.

* "ನೀರನ್ನುಳಿದೂ ಮೀನುಗಳು ಬದುಕ ಬಲ್ಲವೆ ? ಬದುಕ ಬಲ್ಲವು ! ಎಲ್ಲಿ ? ಸುಂದರಿಯರ ನಯನಗಳಲ್ಲಿ ಆದರೆ ನೀರನ್ನಗಲಿದ ವ್ಯಥೆಯಲ್ಲಿ ವಿಲಿವಿಲಿ ಒದ್ದಾಡುತ್ತ ಬದುಕುವವು. ಉದಾಹರಣೆಗೆ ಕೇತಲದೇವಿಯ ಕಣ್ಣುಗಳನ್ನು ನೋಡಿರಿ-- ಆಕೆ ಕುಣಿಯುತ್ತಿರುವಾಗ............... ನಯನ ಮನೋಹರ ರೂಪು ಚೇತೋಹಾರಿ ನೃತ್ಯದಲ್ಲಿ ನಿರತವಾಗಿದೆ. ಚಿತ್ರಕ್ಕೆ ಚೈತನ್ಯ ಬಂದಂತಿರುವ ಚೆಲುವು ಚಿಗುರಿಯಂತೆ ಚಿನ್ನಾಟವಾಡುತ್ತ ಕುಣಿ ಯುತ್ತಲಿದೆ............... ಪಾಪ ಬಳ್ಳಿ ಮೈ ದಣಿದಿರಬಹುದು; ಹೂವಿನಂಥ ಕಾಲು ನೋಯುತ್ತಿರಬಹುದು. ಹೀಗೆಯೇ ನೃತ್ಯ ಮುಂದುವರಿದರೆ ಗತಿ ?"

ಪುರಾಣಿಕರು ವಿಕ್ರಮ-ಕೇತಲೆಯರ ಜೋಡಿಯನ್ನು ವರ್ಣಿಸುತ್ತಾರೆ ನೋಡಿ—

× "ಅವನು ಕಲಿ, ಇವಳು ಕಲೆ; ಅವನು ಹಿಮಗಿರಿ, ಇವಳು ಸುರ ನದಿ; ಅವನು ಮೋಡ, ಇವಳು ಮಿಂಚು; ಅವನು ಮಾವು, ಇವಳು ಮಲ್ಲಿಗೆ; ಅವನು ಗಂಡುಗಾಡಿ, ಇವಳು ಹೆಣ್ಣು ಮೋಡಿ................"

ಈ ಸಾಲುಗಳು ಅವರ ವಿಶಿಷ್ಟ ಗದ್ಯ ಶೈಲಿಗೆ ನಿದರ್ಶನವಾಗಿವೆ. ಅವರು ಕಾದಂಬರಿಯನ್ನು ಗದ್ಯದಲ್ಲಿ ಬರೆದಿದ್ದರೂ ಅಲ್ಲಲ್ಲಿ ಗದ್ಯ ಪದ್ಯಕ್ಕೆ ಸಮೀಪವಾಗಿದೆ. ಅನೇಕ ಕಡೆಗೆ ಸಹಜವಾಗಿ ಪ್ರಾಸ ಬಂದು ಕಾದಂಬರಿಗೆ ಮೋಹಕತೆಯನ್ನು ತಂದಿವೆ. ಪುರಾಣಿಕರು ಕಾದಂಬರಿಯನ್ನು ಭಾವದುಂಬಿ ರಚಿಸಿದ್ದಾರೆ. ಕಾದಂಬರಿಯಲ್ಲಿ ಕೆಲಒಂದು ಪ್ಯಾರಾಗಳನ್ನು ಬೇರ್ಪಡಿಸಿ ದರೆ ಅವು ಸ್ವತಂತ್ರ ವಚನಗಳಂತೆ ಕಾಣುತ್ತವೆ.

ಕಾವ್ಯಾನಂದರ ಈ ಮೌಲಿಕ ಶೈಲಿ ನಮಗೆ ಖ್ಯಾತ ರಶಿಯನ್ ಸಾಹಿತಿ ಮ್ಯಾಕ್ಸಿಂ ಗೋರ್ಕಿಯವರ ಮೊದ ಮೊದಲಿನ ಗದ್ಯ ಸಾಹಿತ್ಯವನ್ನು ನೆನಪಿಗೆ ತರುತ್ತದೆ. ಗೋರ್ಕಿಯವರೇ "ನನಗೆ ತಿಳಿಯದೇ ನನ್ನ ಗದ್ಯ ಪದ್ಯಮಯವಾಗುತ್ತಿದೆ" ಎಂದು ತಮ್ಮದೊಂದು ಪ್ರಬಂಧವಾದ "How I

* ತ್ರಿಭುವನ ಮಲ್ಲ ಪುಟ ೪೩

× ,, ,, ೫೨

learnt to write'' ದಲ್ಲಿ ಹೇಳಿದ್ದಾರೆ. "ತ್ರಿಭುವನ ಮಲ್ಲ" ದಲ್ಲಿಯೂ ಅದೇ ರೀತಿ ಸಂಭವಿಸಿದಂತೆ ತೋರುತ್ತದೆ.

ಕಾವ್ಯಾನಂದರಿಗೆ ಕನ್ನಡ ನಾಡಿನ ಬಗ್ಗೆ ಅಪಾರವಾದ ಪ್ರೇಮ. ಅದನ್ನು ಅವರು ವಿಕ್ರಮನ ಬಾಯಿಯಿಂದ ಈ ರೀತಿ ಹೇಳಿಸಿದ್ದಾರೆ—

* ''ಕಲ್ಯಾಣವು ಕನ್ನಡಿಗರ ಕಾಶಿಯಾದರೆ ಗೋಮಾಂತಕವು ಕನ್ನಡಿಗರ ರಾಮೇಶ್ವರ ಜಯಕೇಶಿ. ಇವೆರಡೂ ಕನ್ನಡ ನಾಡಿನಲ್ಲಿಯೇ ಉಳಿಯಬೇಕು. ಇವೆರಡರಲ್ಲಿ ಯಾವುದನ್ನೂ ಕನ್ನಡಿಗರು ಕಳೆದುಕೊಳ್ಳಲಾರರು, ಕಳೆದುಕೊಳ್ಳಬಾರದು !''

ಈ ಮಾತನ್ನು ಪುರಾಣಿಕರು ಕೇವಲ ಜಯಕೇಶಿಯನ್ನಷ್ಟೇ ಉದ್ದೇಶಿಸಿ ಹೇಳಿಸಿಲ್ಲ. ಇಂದಿನ ಎಲ್ಲ ಕನ್ನಡಿಗರಿಗೂ ಈ ಮಾತು ಅನ್ವಯಿಸುತ್ತದೆ.

ವರ್ಣನಾತ್ಮಕ ಕಾದಂಬರಿ "ತ್ರಿಭುವನ ಮಲ್ಲ" ಕನ್ನಡಿಗರ ದೇಶಪ್ರೇಮ, ಕನ್ನಡ ಜನರ ಉದಾರತೆ, ಶೌರ್ಯಗಳನ್ನು ಚಿತ್ರಿಸುವಲ್ಲಿ ಯಶಸ್ವಿಯಾಗಿದೆ. ಆದರೆ ಇದೇ ಮಾತನ್ನು ಅಂದಿನ ಜನ ಜೀವನದ ಚಿತ್ರಣದ ಬಗ್ಗೆ ಹೇಳುವಂತಿಲ್ಲ. ಇದು ಐತಿಹಾಸಿಕ ಕಾದಂಬರಿಯಾದುದರಿಂದ ವಿಕ್ರಮಾದಿತ್ಯನ ಕಾಲದ ಜನ ಜೀವನದ ಚಿತ್ರಣ ಇದರಲ್ಲಿ ಚನ್ನಾಗಿ ಮೂಡಿ ಬರಬೇಕಾಗಿತ್ತು. ಕಾದಂಬರಿಯ ತುಂಬೆಲ್ಲ ಕೇವಲ ವಿಕ್ರಮನೇ ವಿಕ್ರಮನಾಗಿದ್ದಾನೆ.

ಇಲ್ಲಿಯ ವರೆಗೆ "ತ್ರಿಭುವನ ಮಲ್ಲ''ವನ್ನು ಸಾಹಿತ್ಯಿಕ ದೃಷ್ಟಿಯಿಂದ ನೋಡಿದ್ದಾಯಿತು. ಇದು ಐತಿಹಾಸಿಕ ಕಾದಂಬರಿಯಾದುದರಿಂದ ಇದರಲ್ಲಿ ಬರುವ ಐತಿಹಾಸಿಕ ಘಟನೆಗಳ ಮತ್ತು ಪಾತ್ರಗಳ ಸತ್ಯಾ ಸತ್ಯತೆಯ ಬಗ್ಗೆ ಸ್ವಲ್ಪ ಕೂಲಂಕಶವಾಗಿ ವಿಚಾರಮಾಡುವದು ಅವಶ್ಯ. ಐತಿಹಾಸಿಕ ವಿಷಯಗಳಲ್ಲಿ ಕಲ್ಪನಾ ಸೃಷ್ಟಿ ಮತ್ತು ಬದಲಾವಣೆಗಳನ್ನು ಮಾಡಲು ಲೇಖಕನಿಗೆ ಹಕ್ಕಿಲ್ಲವೆಂದು ನಮ್ಮ ಮತ.

ಈ ಕಾದಂಬರಿಯನ್ನು ಇತಿಹಾಸದ ಸ್ಥೂಲ ಜ್ಞಾನ ವಿಲ್ಲದವರು ಓದಿದರೆ ಅನೇಕ ಗೊಂದಲಗಳಿಗೆಡೆಯಾಗುತ್ತಾರೆ. ಕನ್ನಡ ನಾಡಿನಲ್ಲಿ ವಿಕ್ರಮಾದಿ

* ತ್ರಿಭುವನ ಮಲ್ಲ ಪುಟ ೧೨೮



ತ್ಯರು ೬ ಜನರಾಗಿ ಹೋಗಿದ್ದಾರೆ. ಇಲ್ಲಿ ಚಿತ್ರಿತನಾಗಿರುವವನು ೬ ನೆಯ ವಿಕ್ರಮಾದಿತ್ಯ ಎಂದೂ ಮತ್ತು ಆತನ ಆಳಿಕೆಯ ಕಾಲ ಕ್ರಿ.ಶ. ೧೦೭೬ ರಿಂದ ೧೧೨೬ ರ ವರೆಗೆ ಎಂದೂ ಸೂಕ್ತ ಕಂಡಲ್ಲಿ ವಿವರಿಸಿದ್ದರೆ ಸರಿಯಾಗುತ್ತಿತ್ತು.

ವಿಕ್ರಮಾದಿತ್ಯನ ತಂದೆ ಸೋಮೇಶ್ವರನಿಗೆ ನಾಲ್ವರು ಹೆಂಡಿರು. ಲೇಖಕರು ಮೈಳಾಲದೇವಿಯೊಬ್ಬರನ್ನು ಹೆಸರಿಸಿ ಬಾಚಲದೇವಿ, ಚಂದಲಾದೇವಿ ಇಲ್ಲವೆ ಚಂದ್ರಿಕಾದೇವಿ ಮತ್ತು ಕೇತಲದೇವಿಯರನ್ನು ಯಾಕೆ ಬಿಟ್ಟರೆಂಬುದರ ಔಚಿತ್ಯ ತೋರುವದಿಲ್ಲ. ಲೇಖಕರು ಉದ್ಧರಿಸಿದಂತೆ ಸೋಮೇಶ್ವರನಿಗೆ ಮೂರು ಜನ ಮಕ್ಕಳಲ್ಲ, ನಾಲ್ಕು ಜನರು. ಹಿರಿಯವ ಇಮ್ಮಡಿ ಸೋಮೇಶ್ವರ, ಎರಡನೆಯ ಮಗ ಆರನೆಯ ವಿಕ್ರಮಾದಿತ್ಯ, ಮೂರನೆಯ ಮಗ ಮುಮ್ಮಡಿ ಜಯಸಿಂಹ, ನಾಲ್ಕನೆಯ ಮಗ ವಿಷ್ಣುವರ್ಧನ ವಿಜಯಾದಿತ್ಯ. ಆದರೆ ಕಾದಂಬರಿಯಲ್ಲಿ ಈ ನಾಲ್ಕನೆಯ ಮಗನ ಪ್ರಸ್ತಾಪವೇ ಇಲ್ಲದುದು ಆಶ್ಚರ್ಯಕರ. ಮೊದಲಿನ ಮೂರು ಜನ ಮಕ್ಕಳೂ ಲೇಖಕರು ಹೇಳಿದಂತೆ ಮೈಳಾಲದೇವಿಯ ಮಕ್ಕಳಲ್ಲ. ಈ ಮೂವರೂ ಬಾಚಲದೇವಿಯ ಮಕ್ಕಳು. ಆದರೆ ಬಾಚಲದೇವಿಯೇ ಕಾದಂಬರಿಯಲ್ಲಿಲ್ಲ.

ಲೇಖಕರು ವಿಕ್ರಮಾದಿತ್ಯನಿಗೆ ಕೇತಲೆ ಎಂಬ ಪಿರಿಯರಸಿ ಮತ್ತು ಚಂದಲೆಯೆಂಬ ರಾಣಿ ಇದ್ದಳೆಂದು ತಿಳಿಸುತ್ತಾರೆ. ಆದರೆ ಕೇತಲೆ ಎಂಬ ಹೆಸರಿನವಳಾವಳೂ ವಿಕ್ರಮನ ಹೆಂಡತಿ ಇದ್ದ ಬಗ್ಗೆ ಪ್ರಮಾಣವಿಲ್ಲ. ಆದರೆ ಕೇತಲೆ ಎನ್ನುವವಳು ವಿಕ್ರಮನ ಕಿರಿಯ ತಾಯಿಯಾಗಿದ್ದಳೆನ್ನಲು ಪ್ರಮಾಣವಿದೆ. ಜಯಕರ್ಣ ಚಂದಲಾದೇವಿಯ ಮಗ ಎನ್ನುವದು ಐತಿಹಾಸಿಕ ಸತ್ಯವಾಗಿರುವಾಗ ಕೇತಲೆ ಜಯಕರ್ಣನನ್ನು ಹಡೆದಳೆನ್ನುವದರಲ್ಲಿ ಅರ್ಥವೇನಿದೆ. ವಿಕ್ರಮನ ಮಗಳಾದ ಮೈಳಾಲದೇವಿಯ ತಾಯಿ ಮಾಳಲದೇವಿ ಅಥವಾ ಮಾಲಿಕಾ ಇವಳ ಪ್ರಸ್ತಾಪ ಕಾದಂಬರಿಯಲ್ಲಿ ಬಂದೇ ಇಲ್ಲ. ವಿಕ್ರಮನಿಗೆ ಸಾವಲದೇವಿ, ಲಕ್ಷ್ಮದೇವಿ, ಜಕ್ಕಲದೇವಿ, ಮಲ್ಲೆಯ ಮಹಾದೇವಿ ಅಥವಾ ಮಲಯವತಿದೇವಿ, ಚಂದಲಾದೇವಿ ಅಥವಾ ಚಂದ್ರಲೇಖೆ, ಮಾಳಲದೇವಿ ಅಥವಾ ಮಾಲಿಕಾ ಎಂದು ಆರು ಜನ ಹೆಂಡತಿಯರಿದ್ದರು.

ಇವರಲ್ಲಿ ಲೇಖಕರು ಚಂದಲಾದೇವಿ ಒಬ್ಬಳನ್ನು ಸರಿಯಾಗಿ ಉದ್ಧರಿಸಿ ಉಳಿದವರನ್ನು ಯಾಕೆ ತೊರೆದರೋ ತಿಳಿಯುವದಿಲ್ಲ.

ವಿಕ್ರಮಾದಿತ್ಯನ ಪರಾಕ್ರಮವನ್ನು ಗಮನಿಸಿದರೆ ಅವನಿಗೆ "ತ್ರಿಭು ವನ ಮಲ್ಲ" ಎಂದು ಕರೆಯಲು ಅಡ್ಡಿಯಿಲ್ಲ. ಆದರೆ ಅವನಿಗೆ ಅಂಥ ಬಿರುದೇನೂ ಇರಲಿಲ್ಲ. ಇತಿಹಾಸದಲ್ಲಿ ದಶವರ್ಮನ ಹಿರಿಯ ಮಗ ಜನೆಯ ವಿಕ್ರಮಾದಿತ್ಯನಿಗೆ "ತ್ರಿಭುವನ ಮಲ್ಲ" ಎಂಬ ಬಿರುದು ಇದ್ದುದು ಕಂಡು ಬರುತ್ತದೆ.

ಈ ಕೆಲವು ಐತಿಹಾಸಿಕ ಘಟನೆಗಳ ತಪ್ಪು ತಿಳುವಳಿಕೆಯನ್ನು ನಿವಾ ರಿಸಿದರೆ "ತ್ರಿಭುವನ ಮಲ್ಲ" ಅತೀ ಸುಂದರವಾದ ಕಾದಂಬರಿ. ಇದರಲ್ಲಿ ಸರಾಗವಾಗಿ ಓದಿಸಿಕೊಂಡು ಹೋಗುವ ಗುಣವಿದೆ. ಕಾದಂಬರಿಯಲ್ಲಿ ಬರುವ ಅನೇಕ ಉಪಮಾ ಉಪಮೇಯಗಳು ಕಾವ್ಯಾನಂದರ ಅಲಂಕಾರ ಪ್ರಯ ತೆಗೆ ಸಾಕ್ಷಿಯಾಗಿವೆ.

ಈ ಸರಳ ಸುಂದರ ಕಾವ್ಯಮಯ ಕಾದಂಬರಿ ಇತಿಹಾಸವನ್ನು ಹೊಂದಿ ಸಿಕೊಂಡು ಹೋಗಿದ್ದರೆ ಕನ್ನಡ ಕಾದಂಬರಿಗಳಲ್ಲಿ ಒಂದು ಕೃತಿರತ್ನವೇ ಆಗುತ್ತಿತ್ತು.

ಶೇಡಬಾಳ

*—*—*



## ಸಂಪಾದನಾಶೀಲರು–ಶ್ರೀಪುರಾಣಿಕರು

ಶಾಂತರಸ

ಇಪ್ಪತ್ತನೆಯ ಶತಮಾನದಲ್ಲಿ ಕನ್ನಡವನ್ನು ಹಲವಂದದಿಂದ ಸಮೃದ್ಧಿ ಗೊಳಿಸಿದ ಪ್ರತಿಭಾನ್ವಿತರಲ್ಲಿ, ಹಿರಿಯರಲ್ಲಿ 'ಕಾವ್ಯಾನಂದ' ಕಾವ್ಯನಾಮದ ಶ್ರೀ ಸಿದ್ಧಯ್ಯ ಪುರಾಣಿಕರು ಒಬ್ಬರಾಗಿದ್ದಾರೆ. ಕವಿಗಳಾಗಿ, ಸಂಶೋಧಕ ರಾಗಿ ನಾಟಕಕಾರರಾಗಿ, ಚರಿತ್ರೆಕಾರರಾಗಿ, ವಚನಕಾರರಾಗಿ – ಹಲವು ಹತ್ತೆಂಟು ವಿಧಗಳಿಂದ ಕನ್ನಡ ಸಾಹಿತ್ಯಕ್ಕೆ ಶ್ರೀಮಂತಿಕೆಯೊದಗಿಸಿದ್ದಾರೆ ಅವರು; ಅಲ್ಲದೆ ಆತ್ಮದಿಂದ ಕನ್ನಡ ನಾಡು-ನುಡಿಯನ್ನು ಪ್ರೀತಿಸಿ, ವ್ಯಕ್ತಿ ಗತ ಸಾಮರ್ಥ್ಯದಿಂದ ಮತ್ತು ಆಡಳಿತ ಅಧಿಕಾರದ ವ್ಯಾಪ್ತಿಯಿಂದ, ಭಾಷಣಗಳಿಂದ ಕನ್ನಡಕ್ಕೆ ಒಂದು ಸತ್ವವನ್ನು ಕೆಚ್ಚನ್ನು ಒದಗಿಸಿ, ಅದು ಮೈದುಂಬಿ ಬೆಳೆದು ಬಾಳಲು ನಿರ್ಮಲಾಂತಃಕರಣದಿಂದ ಶ್ರಮಿಸಿದ್ದಾರೆ; ಶ್ರಮಿಸುತ್ತಲಿದ್ದಾರೆ. ಹೈದರಾಬಾದ ಕರ್ನಾಟಕಕ್ಕೆ ಅವರು ಮಾಡಿದ ಸೇವೆ ಬಹಳ ಮಹತ್ವವುಳ್ಳದಾಗಿದೆ.

ಪುರಾಣಿಕರು ಸೃಜನಾತ್ಮಕ ಸಾಹಿತ್ಯದಿಂದ ಕನ್ನಡಕ್ಕೆ ಜೀವಕಳೆ ತುಂಬಿ ದುದು ಒಂದು ಬಗೆಯಾದರೆ, ಗ್ರಂಥ ಸಂಪಾದನೆಯಿಂದ ತಾಯ ಸಿರಿವುಡಿ ತುಂಬಿದ ಸೇವೆ ಇನ್ನೊಂದು ಬಗೆಯದು, ಅತ್ಯಂತ ಮಹತ್ವವುಳ್ಳದು, ಬಹು ಬೆಲೆಯುಳ್ಳದು.

ಗ್ರಂಥ ಸಂಪಾದನೆ ಎಂಬುದು ಶಾಸ್ತ್ರವೂ ಹೌದು, ಕಲೆಯೂ ಹೌದು. ಸಾಹಿತ್ಯ ಸೃಷ್ಟಿಗಿಂತ ಸಾಹಿತ್ಯ ಸಂಪಾದನೆಯ ಕಾರ್ಯ ಬಿಗುವಿನದೆಂದೇ ಹೇಳಬೇಕು. ಪ್ರತಿಭೆಯ ಜೊತೆಗೆ ಆಳವಾದ ಅನುಭವವೂ, ಶಾಸ್ತ್ರ ಜ್ಞಾನವೂ, ಪಾಂಡಿತ್ಯವೂ, ವಿಮರ್ಶಕ ಬುದ್ಧಿಯೂ, ಚಿಕಿತ್ಸಕ ಶಕ್ತಿಯೂ, ಕಲಾಭಿಜ್ಞತೆಯೂ ಈ ಕಾರ್ಯಕ್ಕೆ ಬೇಕಾಗುತ್ತದೆ. ಈ ಎಲ್ಲ ದೃಷ್ಟಿ

ಗಳಿಂದಲೂ ಸಿದ್ಧಯ್ಯ ಪುರಾಣಿಕರ ಸಂಪಾದನಾ ಕಾರ್ಯ ಅತ್ಯುತ್ತಮ ವಾಗಿದೆ. ಅವರು ಸಂಪಾದಿಸಿದ ಗ್ರಂಥಗಳು ಇವು :

೧ **ಶ್ರೀಕಾರ** (ಕವನ ಸಂಕಲನ–ಶ್ರೀರಾಘವೇಂದ್ರ ಇಟಗಿಯವರೊಡನೆ)
ಪ್ರಕಾಶಕರು : ಕರ್ನಾಟಕ ಸಾಹಿತ್ಯ ಮಂದಿರ, ಹೈದರಾಬಾದು
ವರ್ಷ : ೧೯೫೪, ಬೆಲೆ ರೂ. ೧–೫೦

೨ **ಪ್ರಬಂಧ ಮಾಲೆ** (ಶ್ರೀರಾಘವೇಂದ್ರ ಇಟಗಿಯವರೊಡನೆ)
ಪ್ರಕಾಶಕರು : ಕರ್ನಾಟಕ ಸಾಹಿತ್ಯ ಮಂದಿರ, ಹೈದರಾಬಾದ
ವರ್ಷ : ೧೯೫೪, ಬೆಲೆ ರೂ. ೨–೦೦

೩ **ಪದ್ಯ ರತ್ನಾಕರ** : (ಹಳಗನ್ನಡ ಕಾವ್ಯಸಂಗ್ರಹ ವಿದ್ವಾನ್‌ಮಾನ್ವಿ ನರಸಿಂಗರಾಯರೊಡನೆ)
ಪ್ರಕಾಶಕರು ; ಕರ್ನಾಟಕ ಸಾಹಿತ್ಯ ಮಂದಿರ, ಹೈದರಾಬಾದು
ವರ್ಷ ೧೯೫೬ ಬೆಲೆ ರೂ. ೫–೫೦

೪ **ಮಹಾತ್ಮಾ ಕನಕದಾಸ ಪ್ರಶಸ್ತಿ**
ಪ್ರಕಾಶಕರು : ರಾಜ್ಯಸಮಿತಿ ಶ್ರೀ ಕನಕದಾಸರ ನಾಲ್ಕನೆಯ ಶತಮಾನೋತ್ಸವ, ರವೀಂದ್ರ ಕಲಾಕ್ಷೇತ್ರ, ಬೆಂಗಳೂರು
ವರ್ಷ : ೧೯೬೫, ಬೆಲೆ ರೂ. ೪

೫ **ಶರಣ ಪ್ರಸಾದ** (ಶ್ರೀ ಬಿ. ಎ. ಸನದಿಯವರೊಡನೆ)
ಪ್ರಕಾಶಕರು : ನೃಪತುಂಗ ಪ್ರಕಾನ, ಕಲಬುರ್ಗಿ
ವರ್ಷ : ೧೯೬೯, ಬೆಲೆ ರೂ. ೩–೦೦

ಶ್ರೀಕಾರ ಮತ್ತು ಪ್ರಬಂಧಮಾಲೆ ಇವೆರಡು ಹೈದರಾಬಾದ ಕರ್ನಾಟಕನ ದೃಷ್ಟಿಯಿಂದ ಮಹತ್ವಪೂರ್ಣ ಗ್ರಂಥಗಳು.



‘ಶ್ರೀಕಾರ’ ಹೈದರಾಬಾದ ಕರ್ನಾಟಕದ ಪ್ರಾತಿನಿಧಿಕ ಕವನ ಸಂಕಲನ. ಇಪ್ಪತ್ತನೆಯ ಶತಮಾನದ ಎರಡನೆಯ ದಶಕದಿಂದ ೧೯೫೪ರ ವರೆಗೆ ಹೈದರಾಬಾದ ಕರ್ನಾಟಕದಲ್ಲಿ ಕಾವ್ಯ ನಡೆದು ಬಂದುದನ್ನು, ಅದರ ಪ್ರಗತಿಯನ್ನು ಶ್ರೀಕಾರ ಸ್ಪಷ್ಟವಾಗಿ ಗುರುತಿಸಿದೆ. ಇದರಲ್ಲಿ ೩೮ ಕವಿಗಳ ಕವನಗಳು ಸಂಕಲಿತವಾಗಿವೆ. ನನಗೆ ತಿಳಿದ ಮಟ್ಟಿಗೆ ಸಂಪಾದಕರು ಈ ಭಾಗದ ಆಗಿನ ಕಾವ್ಯಸತ್ವವನ್ನೆಲ್ಲ ಇದರಲ್ಲಿ ತಂದಿದ್ದಾರೆ; ಸತ್ವವುಳ್ಳ ಯಾವ ಕವಿಯೂ ಇದರಿಂದ ಹೊರಗೆ ಉಳಿದಿಲ್ಲ. ಸಂಪಾದಕರ ಶ್ರಮ ಸಾರ್ಥಕವಾಗಿದೆ. ಈ ಸಂಕಲನಕ್ಕೆ ಮುನ್ನುಡಿ ಬರೆಯುತ್ತ ಶ್ರೀ ಮಾಸ್ತಿಯವರು, “ಈ ಸಂಕಲನದ ಕೃತಿ ಹಲವದರಿಂದ ನಾನು ಸುಖಿಸಿದೇನೆ....ಇವು ನಮ್ಮ ಜನರ ಸಾಹಿತ್ಯ ಶಕ್ತಿಗೆ ಸಾಕ್ಷಿಗಳಾಗಿವೆ....” ಎಂದು ಹೇಳಿದ್ದಾರೆ.

‘ಪ್ರಬಂಧಮಾಲೆ’ ೧೦ ಪ್ರಬಂಧಗಳ ಒಂದು ಸಂಕಲನ. ಇದರಲ್ಲಿ ಒಂಬತ್ತು ಜನ ವಿದ್ವಾಂಸರು ಸಮಾವೇಶಗೊಂಡಿದ್ದಾರೆ. ಇದು ಈ ಭಾಗದ ಪ್ರಾತಿನಿಧಿಕ ಪ್ರಬಂಧ ಸಂಕಲನ ಅಲ್ಲ. ಇನ್ನೂ ಅನೇಕ ವಿದ್ವಾಂಸರಿಂದ ಲೇಖನ ಬರೆಯಿಸಿ ಇಂಥ ಇನ್ನೂ ಮೂರು ನಾಲ್ಕು ಪ್ರಬಂಧ ಸಂಕಲನಗಳನ್ನು ಪ್ರಕಟಿಸುವ ವಿಚಾರವಿದೆಯೆಂದು ಪುರಾಣಿಕರು ನನಗೆ ಹೇಳಿದ್ದರು. ಆದರೆ ಆ ಕೆಲಸ ಮುಂದುವರಿಯಲಿಲ್ಲ. ಇದಕ್ಕೆ ಕಾರಣ, ಬಹುಶಃ ಪುರಾಣಿಕರು ಬೇರೆ ಕಡೆಗೆ ವರ್ಗವಾಗಿ ಹೋದುದು ಇರಬೇಕು.

ಈ ಪ್ರಬಂಧಮಾಲೆಯಲ್ಲಿ ಒಳಗೊಂಡ ಹತ್ತು ಲೇಖನಗಳು ವಿದ್ವತ್ ಪೂರ್ಣವಾಗಿವೆ; ಆಳವಾದ ಅಭ್ಯಾಸದಿಂದ ಬರೆದವುಗಳಾಗಿವೆ. ಈ ಪ್ರಬಂಧಗಳನ್ನಾರಿಸುವುದರಲ್ಲಿ ಸಂಪಾದಕರ ಒಲವು ನಿಲವು ಅಲ್ಲದೆ ಅವರ ಪಾಂಡಿತ್ಯ ಪರಿಶ್ರಮಗಳು ಎಂಥವು ಎಂಬುದರ ಪರಿಚಯ ನಮಗಾಗುತ್ತದೆ. ಈ ಗ್ರಂಥದ ಮುನ್ನುಡಿಯಲ್ಲಿ ಶ್ರೀ ಡಿ. ವಿ. ಜಿ. ಅವರು ಹೀಗೆ ಬರೆದಿದ್ದಾರೆ.

“ಇಲ್ಲಿಯ ಹತ್ತು ಲೇಖನಗಳಲ್ಲಿ ಐದು ಮುಖ್ಯವಾಗಿ ಸಾಹಿತ್ಯದ ರೂಪ ರಚನೆಗಳಿಗೆ–ರಸ, ಧ್ವನಿ, ಅಲಂಕಾರ, ಶೈಲಿ, ಪ್ರಾಸ–ಇಂಥ ಕಸಬುದಾರಿ ಪ್ರಶ್ನೆಗಳಿಗೆ ಸಂಬಂಧಪಟ್ಟುವು; ಮೂರು ದೇಶ, ಭಾಷೆಗಳ ಚರಿತ್ರೆಗೆ ಸಂಬಂಧಪಟ್ಟವು; ಒಂದು ವಿದ್ಯಾಪ್ರಚಾರದ ಪ್ರಶ್ನೆಗಳಿಗೂ ಮಿಕ್ಕೊಂದು ಒಂದು ಪೌರಾಣಿಕ ದ್ವೈಧಪ್ರಶ್ನೆಗೂ ಸಂಬಂಧಪಟ್ಟದ್ದು. ನಾನು ನಿರ್ಣಯಾ

ಧಿಕಾರಿಯಂತಲ್ಲದೆ ಸಾಮಾನ್ಯ ವಾಚಕನಂತೆ ಒಂದು ಮೆಚ್ಚಿಕೆಯ ಮಾತನ್ನಾಡಬಹುದಾದರೆ, ಈ ಎಲ್ಲ ವಿಷಯಗಳೂ ನಮಗೆ ಬಹು ಮುಖ್ಯವಾದುವು; ಎಲ್ಲ ಲೇಖಕರೂ ತಮ್ಮ ತಮ್ಮ ವಿಷಯಗಳನ್ನು ವಾಚಕರಿಗೆ ಹಿಡಿಯುವಂತೆ ಪ್ರತಿಪಾದಿಸಿದ್ದಾರೆ. ........"

"ಈಗ ಇಷ್ಟು ಒಳ್ಳೆಯ ಪ್ರಬಂಧಸಂಗ್ರಹವನ್ನು ನಮಗೆ ದೊರಕಿಸುವುದಕ್ಕಾಗಿ ಹೈದರಾಬಾದಿನ ಕರ್ನಾಟಕ ಸಾಹಿತ್ಯಮಂದಿರಕ್ಕೆ ಅಭಿನಂದನೆ."*

ಇಲ್ಲಿ ಕೆಲವು ಮಾತುಗಳನ್ನು ಹೇಳುವುದು ಆವಶ್ಯಕವಿದೆ. ಆಗಿನ ಹೈದರಾಬಾದ ಸಂಸ್ಥಾನದಲ್ಲಿ ಕನ್ನಡಕ್ಕೆ ಯಾವ ರೀತಿಯಿಂದಲೂ ಪ್ರೋತ್ಸಾಹವಿರಲಿಲ್ಲ; ಯಾರ ನೆರವೂ, ಬೆಂಬಲವೂ ಅದಕ್ಕಿರಲಿಲ್ಲ. ಪತ್ರಿಕೆಗಳಿರಲಿಲ್ಲ. ಲೇಖಕರಿಗೆ, ಕವಿಗಳಿಗೆ ಒಂದು ಮೆಚ್ಚಿಕೆಯ ಮಾತನಾಡುವವರೂ ಇರಲಿಲ್ಲ. ರಾಜಕೀಯವಾಗಿ, ಸಾಮಾಜಿಕವಾಗಿ ಕನ್ನಡ ಭಾಷೆಗೆ, ಕನ್ನಡ ಸಾಹಿತ್ಯಕ್ಕೆ ಸಂಸ್ಥಾನದಲ್ಲಿ ಬಹು ಕೆಟ್ಟ ಪರಸ್ಥಿತಿ ಇತ್ತು. ಆಡಳಿತ ಭಾಷೆಯಿಂದ ಇನ್ನಿತರ ಭಾಷೆಗಳಿಗೆ, ಅವುಗಳ ಅಭಿವೃದ್ಧಿಗೆ ಆತಂಕವಾಗಿತ್ತೆಂದೇ ಹೇಳಬೇಕು. × ಇಂಥ ಕಾಲದಲ್ಲಿ ಪುರಾಣಿಕ ಸಿದ್ಧಯ್ಯನವರು ಲೇಖಕರನ್ನು, ಕವಿಗಳನ್ನು ಪ್ರೋತ್ಸಾಹಿಸಿ, ಹತ್ತಿರ ಕರೆದು, ಆದರಿಸಿ, ಅವರ ಲೇಖ ಮತ್ತು ಕವನಗನ್ನು ಸಂಪಾದಿಸಿ ಪ್ರಕಟಿಸುವ ಸಾಹಸ ಮಾಡಿದುದು ಸಾಮಾನ್ಯ ಮಾತಲ್ಲ. ಕನ್ನಡದ ಬಗ್ಗೆ ಅವರಿಗಿರುವ ಕಳಕಳಿ ಮತ್ತು ಜ್ವಲಂತಪ್ರೇಮ ಈ ಕೆಲಸವನ್ನು ಅವರಿಂದ ಮಾಡಿಸಿದೆ ಹಿರಿಯರೊಂದಿಗೆ

---

* ಪ್ರಬಂಧಮಾಲೆ ಮುನ್ನುಡಿ ಪುಟ i ಮತ್ತು iii

× "... ಕನ್ನಡದ ಕೆಲಸಕ್ಕೆ ಸ್ವಲ್ಪವೂ ಸೌಕರ್ಯ ಉತ್ತೇಜನ ಎನ್ನುವುದು ಇಲ್ಲದೆ, ಎಲ್ಲ ವಿಧದ ಅಡಚಣೆ ಇರುವ, ಹೈದರಾಬಾದಿನ ಪ್ರಾಂತದ ಕವಿತೆ ಎಂದರೆ ಯಾವ ಕನ್ನಡಿಗ ಅದಕ್ಕೆ ಸ್ವಾಗತ ಕೊಡದೆ ಇದ್ದಾನು? ರಾಯಚೂರು, ಗುಲ್ಬರ್ಗಾ, ಹೈದರಾಬಾದಿಗೆ ನಾನು ಹಲವು ಸಲ ಹೋಗಿದ್ದೇನೆ; ಅಲ್ಲಿಯ ನಮ್ಮ ಬಂಧುಗಳ ಉತ್ಸಾಹ ಕಾರ್ಯದಕ್ಷತೆಗಳನ್ನು ನೋಡಿ ಸಂತೋಷಗೊಂಡಿದ್ದೇನೆ. ಇಂಥ ಉತ್ಸಾಹವಂತರೂ, ಕಾರ್ಯದಕ್ಷರೂ ಆದ್ದರಿಂದಲೇ ನಮ್ಮ ಈ ಸೋದರರು ಅಂಥ ಅನುತ್ತೇಜಕ ಪರಿಸ್ಥಿತಿಯಲ್ಲೂ ಇಂಥ ಒಂದು ಕೆಲಸವನ್ನು ಕೈಕೊಂಡು ಅದನ್ನು ಇಷ್ಟು ಚನ್ನಾಗಿ ಮಾಡಿದ್ದಾರೆ,

ಶ್ರೀಮಾಸ್ತಿ : ಶ್ರೀಕಾರ ; ಮುನ್ನುಡಿ ಪುಟ i



ಹೊಂದಿಕೊಂಡು, ಸ್ನೇಹಿತರನ್ನು ಕೂಡಿಕೊಂಡು, ಕಿರಿಯರನ್ನು ಪ್ರೋತ್ಸಾಹಿಸಿ ಪುರಾಣಿಕರು ಇಲ್ಲಿ ಕನ್ನಡದ ಡಿಂಡಿಮ ಬಾರಿಸಿದರು; ಕನ್ನಡ ನುಡಿಗೆ ಮಾನ್ಯತೆ ತಂದು ಕೊಟ್ಟರು; ಕನ್ನಡ ಸಾಹಿತ್ಯಕ್ಕೆ ಈ ಭಾಗದಲ್ಲಿ ಉಕ್ಕು ಬರಿಸಿದರು. ಸಾಹಿತ್ಯದಿಂದ, ಭಾಷಣಗಳಿಂದ, ವಿಧಾಯಕ ಕೆಲಸಗಳಿಂದ ಸಂಪಾದನಾ ಕಾರ್ಯದಿಂದ ಪುರಾಣಿಕರು ಹೈದರಾಬಾದ ಕರ್ನಾಟಕದಲ್ಲಿ ಕನ್ನಡದ ದೀಪ ಹಚ್ಚಿ, ಅದರ ಬೆಳಕನ್ನು ಅಖಿಲ ಕರ್ನಾಟಕದ ತುಂಬ ಬೆಳಗಿಸಿದರು. ದಿ. ಆಚಾರ್ಯ ಡಿ. ಕೆ. ಭೀಮಸೇನ ರಾಯ ದಿ. ಆಚಾರ್ಯ ರಾಮಚಂದ್ರರಾವ್ ಪಟವಾರಿ, ದಿ. ವಿದ್ವಾನ್ ಮಾನ್ವಿ ನರಸಿಂಗ ರಾಯ, ಲಿಂ. ಪಂ. ಸೂಗವೀರಶರ್ಮ ಮುಂತಾದ ಹಿರಿಯರು ಕನ್ನಡದ ಏಳ್ಗೆಗೆ ನಿರ್ಮಲಾಂತಃಕರಣದಿಂದ ದುಡಿದರು. ಅವರೆಲ್ಲ ಹಿರಿಯರ ಪ್ರೀತಿ ಆದರ ವಿಶ್ವಾಸಗಳನ್ನು ಪುರಾಣಿಕರು ಗಳಿಸಿದ್ದರು. ಅಲ್ಲದೆ ಸಂಘಟನಾ ಚಾತುರ್ಯ ಮತ್ತು ಕಾರ್ಯ ನಿರ್ವಹಣೆಯ ಕೌಶಲ್ಯ ಅವರವೇ ಆಗಿವೆ. ಕಸಗುಡಿಸುವುದರಿಂದ ಹಿಡಿದು ಹಣ ಕೂಡಿಸುವುದರ ವರೆಗೆ ಅವರು ಎಂಥ ಕೆಲಸಕ್ಕೂ ಕಟಿಬದ್ಧರು. ಅಧಿಕಾರಿ ಎಂಬ ಒಣ ಜಂಭವಾಗಲೀ, ಹೆಮ್ಮೆಯಾಗಲೀ ಅವರಲ್ಲಿಲ್ಲ; ಯಾವುದೇ ಕಾರ್ಯಕ್ಕೆ ಅವರ ಅಧಿಕಾರ ಅಡ್ಡ ಬಂದಿಲ್ಲ; ಬದಲಾಗಿ ಆ ಕಾರ್ಯ ಸಾಂಗಗೊಳ್ಳಲು ನೆರವಿತ್ತಿದೆ. ಹೈದರಾಬಾದಿನ ಕರ್ನಾಟಕ ಸಾಹಿತ್ಯಮಂದಿರದ ಜೀವನಾಡಿಯಾಗಿ ಶ್ರಮಿಸಿ ಪುರಾಣಿಕರು ಆಂಧ್ರದ ನೆಲೆನಾಡಾದ ಹೈದರಾಬಾದಿನಲ್ಲಿ ಕನ್ನಡದ ಸುಂದರ ಸತ್ವಪೂರ್ಣ ಧ್ವನಿಯನ್ನು ಎಲ್ಲರೂ ಕೇಳುವಂತೆ ಮಾಡಿದರು.

'ಪದ್ಯರತ್ನಾಕರ' ಒಂದು ಉತ್ಕೃಷ್ಟ ಕಾವ್ಯ ಸಂಕಲನ : "ಆರಂಭ ಕಾಲದಿಂದ ಹಿಡಿದು ಆಧುನಿಕ ಕಾಲದ ಮೊದಲಿನವರೆಗೆ ಎಲ್ಲ ಮಹಾಕೃತಿಗಳಿಂದ ಉದ್ಧರಣಗಳನ್ನು ಆಯ್ದು ಕೊಡಲಾಗಿದೆ ........... ಕನ್ನಡ ಕಾವ್ಯದ ಸಾರ್ವದೇಶಿಕ ಪರಿಚಯ ಓದುಗರಿಗೆ ಆಗಬೇಕೆಂಬ ಉದ್ದೇಶದಿಂದ ಇಷ್ಟು ದೊಡ್ಡ ಸಂಕಲನವನ್ನು ಅಚ್ಚು ಮಾಡಲಾಗಿದೆ........" ಎಂದು ಹೇಳಿದ್ದಾರೆ ಪ್ರಕಾಶಕರು ತಮ್ಮ ಮಾತುಗಳಲ್ಲಿ. ಕನ್ನಡ ಕಾವ್ಯದ ಸಮಗ್ರತೆ, ಸತ್ವ, ಸೌಂದರ್ಯ, ಹರವುಗಳನ್ನೊಳಗೊಂಡ ಶಾಸ್ತ್ರೀಯವಾದ ಸಂಕಲನವಿದು.

ಇದರಂಥ ಇನ್ನೊಂದು ಸಂಕಲನವಿಲ್ಲ. ಹಳಗನ್ನಡ ಕಾವ್ಯಗಳ ಸಂಕಲನಗಳು ಹಲವು ಬಂದಿವೆ. ಆದರೆ ಇದರ ಸಮಗ್ರತೆ ಮತ್ತು ಹರವು ಅವುಗಳಿಗಿಲ್ಲ. ಈ ನಿಟ್ಟಿನಲ್ಲಿ ಇದೊಂದೇ ಸಂಗ್ರಹವೆಂದು ಹೇಳಬಹುದು. ಇದರಲ್ಲಿ ಆರಿಸಿದ ಕಾವ್ಯ ಭಾಗಗಳು ಆಯಾ ಕವಿಗಳ ವ್ಯಕ್ತಿತ್ವ, ಕಾವ್ಯಸತ್ವಗಳನ್ನು ಚೆನ್ನಾಗಿ ಪ್ರತಿನಿಧಿಸುತ್ತವೆ.*

'ಮಹಾತ್ಮಾ ಕನಕದಾಸ ಪ್ರಶಸ್ತಿ' ಕನಕದಾಸರ ನಾಲ್ಕನೆಯ ಶತಮಾನೋತ್ಸವದ ಕಾಲಕ್ಕೆ ಪ್ರಕಟವಾದ ಗ್ರಂಥ. ಈ ಗ್ರಂಥದ ಸಂಪಾದಕ ಸಮಿತಿಯ ಅಧ್ಯಕ್ಷರಾಗಿ ಪುರಾಣಿಕರು ಕಾರ್ಯ ನಿರ್ವಹಿಸಿದ್ದಾರೆ. ಕನ್ನಡ ನಾಡಿನ ಹದಿನಾರು ಜನ ವಿದ್ವಾಂಸರು ಬರೆದ ಲೇಖನಗಳು ಇದರಲ್ಲಿವೆ. ಕನಕದಾಸರ ಜೀವನ, ಅವರ ಬೋಧೆ, ಕನ್ನಡ ಸಾಹಿತ್ಯದಲ್ಲಿ ಅವರ ಸ್ಥಾನ, ಅವರು ಚಿತ್ರಿಸಿದ ಜನಜೀವನ, ಅವರ ಬಹುಮುಖ ವ್ಯಕ್ತಿತ್ವ ಪ್ರತಿಭೆಗಳ ಪರಿಚಯ ಮುಂತಾದವುಗಳು ಸಮರ್ಪಕವಾಗಿ ಇಲ್ಲಿ ಮೂಡಿಬಂದಿವೆ. ಈ ಗ್ರಂಥದ ಅಂದ ಚಂದ ಸತ್ವ ಎಲ್ಲಕ್ಕೂ ಅದರ ಹಿಂದೆ ಪುರಾಣಿಕರ ಪ್ರಾಮಾಣಿಕ ಶ್ರದ್ಧೆಯಿದೆ. ಪುರಾಣಿಕರದು ಎಲ್ಲವೂ ಅಚ್ಚುಕಟ್ಟಿನ ಕೆಲಸ. ಯಾವುದೇ ಕೆಲಸವಿರಲಿ, ಸಣ್ಣದಿರಲಿ ದೊಡ್ಡದಿರಲಿ, ರಾಜ್ಯಮಟ್ಟದ್ದಿರಲಿ ವ್ಯಕ್ತಿಮಟ್ಟದ್ದಿರಲಿ— ಏನಿದ್ದರೂ ಅದು ಅಚ್ಚುಕಟ್ಟಿನಿಂದ ಸುಂದರವಾಗಿ ಶಕ್ತಿಯುತವಾಗಿ ನಾಲ್ಕು ದಿನ ಬಾಳುವಂತೆ ಆಗಬೇಕೆಂಬುದು ಅವರ ಆಸೆ; ಈ ಆಸೆಗೆ ಎಳ್ಳಸಿತೂ ಚ್ಯುತಿ ಬರದಂತೆ ಅವರ ಕಾರ್ಯ ನಡೆಯುತ್ತದೆ.

ಮಹಾನುಭಾವ ಬಸವಣ್ಣನವರ ಅಷ್ಟಶತಮಾನೋತ್ಸವದ ಕಾಲಕ್ಕೆ ಅರಳಿದ ಸುಂದರ ಪ್ರಬಂಧಗಳ ಸಂಕಲನ 'ಶರಣಪ್ರಸಾದ'. ಇದೊಂದು ವಿನೂತನ ಪ್ರಯೋಗ ಸಂಪಾದಕರ ಯೋಜನೆ, ಯೋಚನೆ ಮತ್ತು ಹೊಸತನ, ಅವರ ವೈಚಾರಿಕತೆಯ ಎತ್ತರ ಜೊತೆಗೆ ಅವರ ಕಲಾಕುಶಲತೆ ಮತ್ತು ಸಂಪಾದನೆಯ ಶಾಸ್ತ್ರೀಯ ಜ್ಞಾನಗಳನ್ನು ಶರಣಪ್ರಸಾದ ತೋರಿಸುತ್ತದೆ. ಇಪ್ಪತ್ತು ಜನ ವಿದ್ವಾಂಸರ ಇಪ್ಪತ್ತು ಲೇಖನಗಳು ಇದರಲ್ಲಿವೆ.

* ಈ ಸಂಕಲನಕ್ಕಾಗಿ ಪುರಾಣಿಕರು ತಿಂಗಳುಗಟ್ಟಲೆ ಕನ್ನಡ ಕಾವ್ಯಗಳನ್ನು ಹಗಲಿರುಳು ಮತ್ತೆ ಮತ್ತೆ ಓದುತ್ತಿದ್ದುದನ್ನು ನಾನು ಕಂಡಿದ್ದೇನೆ. ಈ ಸಂಕಲನದ ಸಂಪೂರ್ಣ ಯಶಸ್ಸಿಗೆ ಅವರ ಶ್ರದ್ಧೆ ಶ್ರಮಗಳೇ ಕಾರಣ. —ಲೇಖಕ.



ಅವು ಇಪ್ಪತ್ತು ಜನ ಬೇರೆ ಬೇರೆ ಶರಣರನ್ನು ಕುರಿತವುಗಳಾಗಿವೆ. "ಬಸವಣ್ಣನವರ ಅಷ್ಟಶತಮಾನೋತ್ಸವಕ್ಕೆ ಶರಣರನ್ನು ಆಹ್ವಾನಿಸಲಾಗಿದೆ. ಅವರು ಆ ಉತ್ಸವದಲ್ಲಿ ಭಾಷಣ ಮಾಡುತ್ತಾರೆ. ಬಸವಣ್ಣನವರು ಹಮ್ಮಿಕೊಂಡ ಕಾರ್ಯವನ್ನು ಮತ್ತು ತಾವು ಅದರಲ್ಲಿ ಭಾಗಿಗಳಾಗಿದ್ದುದನ್ನು ಹೇಳುವುದರೊಂದಿಗೆ, ತಮ್ಮ ಆತ್ಮ ಚರಿತ್ರೆ, ತಮ್ಮ ಕಾಯಕಗಳನ್ನು ಕುರಿತು ತಿಳಿಸುವರು. ಇಷ್ಟೇ ಅಲ್ಲ, ಅವರು ಈಗಿನ ಕಾಲದ ಸ್ಥಿತಿಗತಿಗಳನ್ನು ಆಗಿನ ಕಾಲಕ್ಕೆ ಹೊಂದಿಸಿ ತೂಗಿನೋಡುವರು, ವಿಶ್ಲೇಷಿಸುವರು." ಇದೇ ಈ ಗ್ರಂಥದ ಹೊಸತನ.

ಶ್ರೀ ಸಿದ್ಧಯ್ಯ ಪುರಾಣಿಕರಲ್ಲಿ ಇನ್ನೂ ಅನೇಕ ವಿಧ ಸಾಹಿತ್ಯದ ಸಂಗ್ರಹವಿದೆ; ವಚನಶಾಸ್ತ್ರ ಮತ್ತು ಶರಣರ ಬಗೆಗಂತೂ ಅಪಾರ ಸಂಗ್ರಹವಿದೆ. ಅದನ್ನೆಲ್ಲ ಸಂಪಾದಿಸಿ ಪ್ರಕಟಿಸಲು ಅವರನ್ನು ಕಳಕಳಿಯಿಂದ ಕೇಳಿಕೊಳ್ಳುವೆ.

* * *
* *
* * *

## ‘ನಾನಾರು?’

ಸಿದ್ಧಯ್ಯ ಪುರಾಣಿಕ

೧

ಮುಂಜಾನೆ ಅವರನ್ನು ದಿನದ ದುಡಿತಕ್ಕಾಗಿ
ಕಳಿಸಿ ನೋಡುತಲಿರಲು ಬಾಗಿಲಲಿ ನಿಂದು ।
ಹಿಂದಿನಿಂ ಬಂದೆನ್ನ ಕಂದಯ್ಯ ಕೇಳುವನು
ಸೆರಗಿನೊಳು ಮುಖ ಮುಚ್ಚಿ ‘ನಾನಾರು?’ ಎಂದು ॥

೨

ಮಧ್ಯಾಹ್ನದಾಯಾಸ ಕಳೆದು ಕೊಳ್ಳಲಿಕೆಂದು
ಹಾಯಾಗಿ ಮಲಗಿರಲು ಹೇಳಲೇನೆಂದು ।
ಗೆಳತಿ ಮೆಲ್ಲನೆ ಬಂದು ಕಣ್ಮುಚ್ಚಿ ಕೇಳುವಳು
ನಾನಾರು, ನಾನಾರು, ನಾನಾರು? ಎಂದು ॥

೩

ಸಂಜೆಯಾಯಿತು ಎಂದು ಅವರು ಬರುವರು ಎಂದು
ಒಲೆಮುಂದೆ ಕುಳಿತಿರಲು ಚಹ ಮಾಡಲೆಂದು ।
ಬೆಣ್ಣೆಯಾಸೆಯ ಬೆಕ್ಕಿನಂತೆ ಬಂದೆವೆ ಮುಚ್ಚಿ
ಅವರು ಸಹ ಕೇಳುವರು ‘ನಾನಾರು?’ ಎಂದು ॥

೪

ಯಾರಾರಿಗುತ್ತರವ ಹೇಳಲಾ ‘ನಾನಾರು?’
ಎಂಬ ಪ್ರಶ್ನೆಗೆ ತಾಯಿ, ಸಾಕಾಯಿತು !
‘ನಾನಾರು?’ ಎನ್ನುವರು ‘ನೀನಾರು?’ ಎಂದಿಲ್ಲ
ಈ ಹಿಗ್ಗು ಕಡೆತನಕ ಬೇಕಾಯಿತು !



## ‘ನಾನಾರು?’ ಕವಿತೆಯ ರಸಗ್ರಹಣ*

ಉಮಾಶಂಕರ ಜೋಶಿ

ಶ್ರೀ ಸಿದ್ಧಯ್ಯ ಪುರಾಣಿಕರ ‘ನಾನಾರು?’ ಎಂಬ ಕವನ ಮೊದಲು ಅವರ ‘ಮಾನಸ ಸರೋವರ’ ಎಂಬ ಕವನ ಸಂಗ್ರಹದಲ್ಲಿ ಪ್ರಕಟವಾಯಿತು. ಆಮೇಲೆ ಭಾರತ ಸಾಹಿತ್ಯ ಅಕಾಡೆಮಿಯು ಪ್ರಕಟಿಸಿದ ‘ಭಾರತೀಯ ಕವಿತಾ’ ಎಂಬ ವಾರ್ಷಿಕ ಸಂಕಲನದ 1956–57 ರ ಸಂಚಿಕೆಯಲ್ಲಿ ಪ್ರಕಟವಾಯಿತು. ಈಗ ಭಾರತೀಯ ಜ್ಞಾನ ಪೀಠ ಪ್ರಶಸ್ತಿ ವಿಜೇತರೂ, ಗುಜರಾತದ ಮಹಾಕವಿಗಳೂ ಆದ ಶ್ರೀ ಉಮಾಶಂಕರ ಜೋಶಿ ಅವರ ದೃಷ್ಟಿಗೆ ಬಿದ್ದು ಅವರ ಸಂಪಾದಕತ್ವದಲ್ಲಿ ಪ್ರಕಟವಾಗುವ ‘ಸಂಸ್ಕೃತಿ’ ಎಂಬ ಪ್ರೌಢ ಪತ್ರಿಕೆಯಲ್ಲಿ ಪ್ರಶಂಸಿತವಾಗಿ, ಈಚೆಗೆ ಅವರೇ ಬರೆದು ಪ್ರಕಟಿಸಿರುವ ‘ಕಾವ್ಯಾಯನ’ ಎಂಬ ಶ್ರೇಷ್ಠ ಸಾಹಿತ್ಯ ಕೃತಿಯಲ್ಲಿ ಕನ್ನಡದ ಏಕೈಕ ಪ್ರತಿನಿಧಿಯಾಗಿ ಪ್ರವೇಶ ಪಡೆದಿದೆ. ‘ಮಾನಸ ಸರೋವರ’ಕ್ಕೆ ಮುನ್ನುಡಿ ಬರೆದ ಹಿರಿಯ ಕವಿಗಳಾದ ಶ್ರೀ ಪು. ತಿ. ನರಸಿಂಹಾಚಾರ್ಯರು ಈ ಕವನವನ್ನು ಮೆಚ್ಚಿ ಇದನ್ನು ತಮ್ಮದೇ ಆದ ದಾರ್ಶನಿಕ ದೃಷ್ಟಿಯಿಂದ ಅರ್ಥೈಸಿದ್ದಾರೆ. ಈಗ ಬೇರೆ ಭಾಷೆಯ ಮತ್ತೊಬ್ಬ ಮಹಾಕವಿಗಳು ಅದೇ ಕವಿತೆಯನ್ನು ವಿನೂತನ ದೃಷ್ಟಿಯಿಂದ ವಿಮರ್ಶಿಸಿ ರಸಗ್ರಹಣ ಮಾಡಿದ್ದಾರೆ, ಇದು ಕಾವ್ಯಾನಂದರಿಗಷ್ಟೇ ಅಲ್ಲ ಹೊಸಗನ್ನಡ ಕವಿತೆಗೆ ಕೀರ್ತಿ ತರುವ ವಿಷಯವಾದ ಕಾರಣ ಓದುಗರಿಗಾಗಿ, ಕನ್ನಡ ಕವಿತೆಯಲ್ಲಿ ಆಸಕ್ತಿಯುಳ್ಳ ಎಲ್ಲರಿಗಾಗಿ ಮೂಲ ಕವಿತೆಯನ್ನು, ಅದರ ಬಗ್ಗೆ ಮಹಾಕವಿ ಉಮಾಶಂಕರ ಜೋಶಿಯವರು ನೀಡಿರುವ ರಸಗ್ರಹಣವನ್ನು ಒಂದೆಡೆ ಪ್ರಕಟಿಸಿದ್ದೇವೆ.

ಕಾವ್ಯದ ರಸ ವಿಶ್ವವು ಅನಂತವಾಗಿರುತ್ತದೆ. ಅದರಲ್ಲೇ ಆಗಮ ನಿಯಮದ ಪ್ರಶ್ನೆಯ ಗೂಢಸ್ಯ ಗೂಢ ಜೀವನ ರಹಸ್ಯವನ್ನು ಹೀರಿಕೊಳ್ಳುವ ಸಾಧ್ಯತೆಯಿದೆ. ಆದರೆ ಶರ್ತು ಮಾತ್ರ ಇಷ್ಟೇ. ಅವು ಕಾವ್ಯ ಪದ್ಧತಿಯಲ್ಲೇ ಬರಬೇಕು. ಅರ್ವಾಚೀನ ಕವಿತೆಯ ಒಂದು ಲಕ್ಷಣವೆಂದರೆ, ಅದು ಮನೆಯ ವಾತಾವರಣದಲ್ಲಿ ಸಾದಾ ಪೋಷಾಕಿನಲ್ಲಿದ್ದರೂ ಸೂಕ್ಷ್ಮವಾದ ಮತ್ತು ಗಹನವಾದ ರಹಸ್ಯದ ಕಡೆಗೆ ಬೆರಳುಮಾಡಿ ತೋರಿಸುತ್ತದೆ. ಗುರುವಾಗಿ ಅಲ್ಲ,

* ‘ಜೀವನ ವಿಕಾಸ’ದ ಕೃಪೆಯಿಂದ.

ಸ್ನೇಹಿತನ ಹಾಗೆ ಕವಿಯು ಮಾತನಾಡುತ್ತಾನೆ. ಭಾವುಕನಿಗಿಂತ ಮೇಲ್ತರಗತಿಯಲ್ಲಿ ಅಲ್ಲ, ಭಾವುಕನ ಕೂಡ ಆತ್ಮೀಯತೆಯಿಂದ ಮಾತಾಡುತ್ತಾನೆ. ಟಾಗೋರರ ಶಿಶುಕಾವ್ಯಗಳು ವಿದಗ್ಧ ಭಾವುಕನಿಗೆ ಜೀವನ ಮತ್ತು ಪ್ರಪಂಚದ ಗಹನ ಪ್ರದೇಶದಲ್ಲಿ ಪ್ರವೇಶ ದೊರಕಿಸಿ ಕೊಡುತ್ತವೆ. ಹೀಗೆ ಮಾಡುವದರಿಂದ ಕವಿಯು ದೊಡ್ಡ ದೊಡ್ಡ ತತ್ವಗಳನ್ನು ಉಪದೇಶ ಮಾಡಿದಂತಾಗುವದಿಲ್ಲ. ಕಾವ್ಯವನ್ನು ವಾಸ್ತವ್ಯದಿಂದ ದೂರ ತೆಗೆದುಕೊಂಡು ಹೋದ ಆರೋಪವು ಬರುವುದಿಲ್ಲ. ಕವಿಯು ಏನಾದರೂ ಸೂಚಿಸುತ್ತಾನೆ. ಅದರಿಂದ ಭಾವುಕನ ಹೃದಯದಲ್ಲಿ ಮಾತ್ರ ಒಂದು ಕಿಡಿ ಹಾಕಿದಂತಾಗುತ್ತದೆ ಹಾಗೂ ಆ ಕಿಡಿಯಿಂದ ಭಾವುಕನು ತನ್ನ ಶಕ್ತ್ಯಾನುಸಾರ ಇಷ್ಟತೆಯನ್ನು ಗ್ರಹಣ ಮಾಡುತ್ತಾನೆ.

ಈ ತರಹದ ಕಾವ್ಯಗಳು ಮೇಲಿನಿಂದ ನೊಡಲಾಗಿ ಅತಿ ಸರಳ ಕಾಣಿಸುತ್ತವೆ. ಅದರಲ್ಲಿ ಸರಳ ಭಾಷೆ, ಸರಳ ಪಂಕ್ತಿಗಳು ಇದ್ದರೂ ಸಹ ಹೇಳತಕ್ಕ ಮಾತು ಮಾತ್ರ ಅತಿ ಗಹನವಿರುತ್ತದೆ. “ನಾನಾರು?” ಈ ಕಾವ್ಯದ ರಸಗ್ರಹಣ ಮಾಡೋಣ. ಇದರಲ್ಲೇ ಕವಿಯು ವ್ಯವಹಾರದಲ್ಲಿ ತನ್ನ ಆತ್ಮೀಯ ಮತ್ತು ಪ್ರಿಯ ಜನರ ಬಗ್ಗೆ ಮಾತನಾಡುತ್ತಾನೆ. ಕಂದನು ಸೆರಗಿನಲ್ಲಿ ಮುಖ ಮುಚ್ಚಿಕೊಂಡು ಮಾತನಾಡುತ್ತಾನೆ ನಾನಾರೆಂದು; ಪ್ರಿಯತಮನು ಆಕಸ್ಮಿಕವಾಗಿ ಬಂದು ಕಣ್ಣು ಮುಚ್ಚಿ ನಾನಾರೆಂದು; ಕೇಳುತ್ತಾನೆ. ಇಂಥ ಕ್ರಿಯೆಗಳಲ್ಲಿ ಮೂಲ ತತ್ವವಾಗಿ ಪ್ರೇಮವಿರುತ್ತದೆ. ಇದರಲ್ಲಿ ಮುಚ್ಚಿಟ್ಟುಕೊಳ್ಳುವವನ ಹಾಗೂ ಮೆಲ್ಲಗೆ ಬರುವವನ ಇಚ್ಛೆ ತಾನು ಯಾರೆಂಬುದನ್ನು ಸಹಜವಾಗಿ ಕಂಡು ಹಿಡಿಯಬೇಕೆಂಬುದೇ ಇರುತ್ತದೆ. ತನ್ನ ಗುರುತು ಹಿಡಿಯುತ್ತಾರೆಂದು ಆತನಿಗೆ ಆತ್ಮವಿಶ್ವಾಸವಿರುತ್ತದೆ. ಕೇಳಿಸಿಕೊಂಡ ವ್ಯಕ್ತಿಯೂ ಗುರುತು ಹಿಡಿದೇ ಹಿಡಿಯುತ್ತಾನೆ. ಈ ತರಹದ ಗುರುತು ಹಿಡಿಯುವ ಶಕ್ತಿ ಪ್ರೇಮದಿಂದ, ಆತ್ಮೀಯತೆಯಿಂದ ಮಾತ್ರ ಲಭ್ಯವಾಗುತ್ತದೆ. ಯಾವುದೇ ವ್ಯಕ್ತಿ ಅಥವಾ ವಸ್ತು ತಮ್ಮದೇ ಎಂಬ ಭಾವನೆಯಿದ್ದರೆ ಮಾತ್ರ ಗುರುತು ಹಿಡಿಯಲು ಸಾಧ್ಯ. ವ್ಯಕ್ತಿ ಅಥವಾ ವಸ್ತು ಮಾತ್ರವೇ ಏಕೆ, ದೇವರನ್ನು ಸಹ ಗುರುತು ಹಿಡಿಯಲು ಪ್ರೇಮವನ್ನೇ ಮಾಧ್ಯಮವನ್ನಾಗಿ ಸ್ವೀಕರಿಸಿದ್ದೇವೆ.



ಈಗ ನೋಡಿ, ಕವಿಯು ಬಾಲಕ, ಗೆಳತಿ ಮತ್ತು ಪ್ರಿಯತಮ ಇವರ ಸುಪರಿಚಿತ ಸ್ನೇಹ ಚೇಷ್ಟೆಗಳ ತಂತು ಹಿಡಿದು ನಮ್ಮನ್ನು ಎಷ್ಟು ದೂರ ಒಯ್ಯುತ್ತಾನೆ.

ಸೆರಗಿನಲಿ ಮುಖ ಮುಚ್ಚಿ, ಮೆಲ್ಲನೆ ಬಂದು ಕಣ್ಣು ಮುಚ್ಚಿ, ಬೆಣ್ಣೆಯಾಸೆಯ ಬೆಕ್ಕಿನಂತೆ ಬಂದು ಈ ಸಂದರ್ಭದಲ್ಲಿ ಕವಿಯು ಈ ಮೂರು ವ್ಯಕ್ತಿಗಳ ಹಾಗೂ ಕವಿತೆ ಹೇಳುವ ವನಿತೆ ಇವರ ನಡುವಿನ ಪ್ರೇಮ ವ್ಯವಹಾರವನ್ನು ಒಬ್ಬ ಒಳ್ಳೆಯ ಚಿತ್ರಗಾರನಂತೆ ಚಿತ್ರಿಸಿದ್ದಾನೆ. ಕೊನೆಯ ಐದು ಪಂಕ್ತಿಗಳಲ್ಲಿ ಕಾವ್ಯದ ಭಾವವು ಬದಲಾಗುತ್ತದೆ. ಬೇರೆಯವರಿಗೆ ಮೇಲಿಂದ ಮೇಲೆ ತನ್ನ ಪರಿಚಯ ಕೊಟ್ಟು ಬೇಸರಿಯುತ್ತಾಳೆ. ಪ್ರತಿಯೊಬ್ಬರನ್ನು ಹೇಗೆ ಕಂಡುಹಿಡಿಯುವದು ? ಎಲ್ಲರದೂ ನನಗೆ ತಕ್ಕ ಪರಿಚಯವಿದ್ದೇ ಇದೆ. ಅಥವಾ ನಾವು ಕಂಡುಕೊಂಡಂತೆ ಅವರು ಇದ್ದಾರೆಯೋ ಇಲ್ಲವೊ ಯಾರು ಬಲ್ಲರು ?

ಆದರೆ ಎಲ್ಲಿಯವರೆಗೆ ಎಲ್ಲರೂ ನನಗೆ ‘ನಾನಾರು’ ಎಂದು ಕೇಳುತ್ತಾರೆಯೋ ಅಲ್ಲಿಯವರೆಗೆ ಚೆನ್ನಾಗಿದೆ. ಆದರೆ ‘ನೀನಾರು’ ಎಂದು ಯಾರಾದರೂ ಕೇಳಿದರೆ ಮನಸ್ಸಿನಲ್ಲಿ ಎಂಥ ಗೊಂದಲವಾಗಬಹುದು ? ತಾನು ಪರರನ್ನು ಕಂಡುಕೊಂಡಷ್ಟು ತನ್ನನ್ನು ತಾನೇ ಕಂಡುಕೊಳ್ಳುತ್ತಾನೆಯೋ ? ತಾನು ಹೇಳಿದ ಗುರುತನ್ನು ಪರರು ಸ್ವೀಕರಿಸಿಯಾರೆ ? ಕಂದ, ಗೆಳತಿ, ಪ್ರಿಯತಮ ಇವರನ್ನು ನಾವು ಪ್ರೀತಿಸುತ್ತೇವೆ. ಆದ್ದರಿಂದ ಅವರ ಸಂಪೂರ್ಣ ಪರಿಚಯ ಇದೆ. ಆ ಪ್ರಕಾರ ತನ್ನನ್ನು ತಾನೇ ಪ್ರೀತಿಸಿದರೆ ತನ್ನನ್ನು ತಾನೇ ಕಂಡುಕೊಂಡಾನೆಯೇ ? ಬಹುಶಃ ತನ್ನನ್ನು ತಾನೇ ಕಂಡುಕೊಳ್ಳುವುದು ಎಲ್ಲಕ್ಕಿಂತಲೂ ಕಠಿಣ. ಆದ್ದರಿಂದಲೇ ಆಧ್ಯಾತ್ಮಕಕ್ಕೆ “ನಿನ್ನ ನೀನರಿ” ಎಂಬ ಆದೇಶ ಕೊಡುವ ಪ್ರಸಂಗ ಬಂದಿರಬಹುದು.

ಮತ್ತು ‘ನೀನಾರು ?’ ಈ ಪ್ರಶ್ನೆಯನ್ನು ಯಾರೂ ಕೇಳುವುದಿಲ್ಲ. ಇದು ಒಳ್ಳೆಯದೇ. ಆವರೆಗೆ ಆನಂದವಿದೆ. ಪ್ರೇಮದ ಸ್ಪರ್ಶದಿಂದ ಪರರನ್ನು ಕಂಡುಕೊಳ್ಳುತ್ತೇನೆ. ಅದರಿಂದಲೇ ತನ್ನನ್ನು ತಾನೇ ಕಂಡುಕೊಳ್ಳಲು ಸಾಧ್ಯವಾಗಲಾರದೇ ? ಪರರನ್ನು ಕಂಡುಕೊಳ್ಳುತ್ತಾ ತನ್ನನ್ನು ತಾನೇ

ಕಂಡುಕೊಳ್ಳಬಹುದು. ಪರರ ಸ್ನೇಹಿತನಾಗಿ ತನ್ನ ಅಂತಃಕರಣದಲ್ಲಿ ಸ್ನೇಹದ ಅನುಭವ ಮಾಡಿಕೊಂಡರೆ ಸುಖವಾಗುತ್ತದೆ; ಆನಂದವಾಗುತ್ತದೆ ಮತ್ತು ಇದೇ ಪ್ರಕಾರ ಎಲ್ಲರನ್ನೂ ಪ್ರೀತಿಸಿದರೆ, ಪ್ರೀತಿಸಿರಂದು ಕೊಂಡರೆ ಮತ್ತು ತಮ್ಮ ಪ್ರಿಯ ಜನರಲ್ಲಿ ತಮ್ಮನ್ನು ತಾವೇ ಕಂಡರೆ ಅದೇ ಪ್ರಕಾರ ಆನಂದ ಸಿಕ್ಕಬಹುದು.

ಈ ಸಂಬಂಧದಿಂದ ಪ್ರಿಯ ಜನರು ನಮ್ಮನ್ನು ಗುರುತಿಸುತ್ತಾರೆ. ಆದ್ದರಿಂದಲೇ ಅವರು 'ನೀನಾರು?' ಎಂದು ಕೇಳುವದಿಲ್ಲ ಇದು ಎಷ್ಟು ಚೆನ್ನ?

ಅಹಮದಾಬಾದ (ಗುಜರಾತ)

* * *



## ಕಾವ್ಯಾನಂದ

ಎಚ್. ಸೂರ್ಯದೇವ

ಬಾನಂಗಣದಲಿ ಬೆಳ್ಳಿಯ ಚಿಕ್ಕೆಯು
ಮೂಡಿದ ಬಗೆಯಲಿ ನಿಂತಿರುವೆ
ಬೆಳಗಿನ ಬೈಗಿನ ಬಂಗಾರದ ಸಿರಿ
ಥಾರೆಯ ಚೆಲುವನು ಚೆಲ್ಲಿರುವೆ ೧

ನೇಹದ ಜಲಪಾತದಲಿ ನಿಲ್ಲಿಸಿ
ಒಲವಿನ ಗೀತೆಯನೊರೆದಿರುವೆ
ಇಲ್ಲಿಯುಅಲ್ಲಿಯು ಸಲ್ಲುವ ಮಲ್ಲಿಗೆ
ಕಂಪಿನ ಸುಧೆಯನು ಸುರಿಸಿರುವೆ ೨

ಶರಣರ ಸಂಸ್ಕೃತಿ ಇಹಪರಸ್ಥಿತಿಗತಿ
ಮನುಕುಲದುದ್ಧಾರದ ಬಯಕೆ
ಕಾಲ್ದೇಶದ ಕಲ್ಯಾಣವನೆಸಗುವ
ದಿವರಾತ್ರಿಗಳಲಿ ಕನವರಿಕೆ ! ೩

ನೀನಾಡಿದ ನುಡಿ ಪಾವನ; ಹಾಡಿದ
ಹಾಡೇ ಗುರುವಿಗೆ ನೈವೇದ್ಯ !
ನಿನ್ನೊಲುಮೆಯ ಕರೆ ಮಂಗಳಗೀತೆಯ
ನುಡಿಸುವುದಿಂಪಿನ ಸುಖವಾದ್ಯ ! ೪

ಬೈಲಹೊಂಗಲ

# ಕವಿ ಕಂಡ ಕಾವ್ಯಾನಂದ

ಬಿ. ಎ. ಸನದಿ

“ಸಮತೆ ಮಮತೆ ಕಾರ್ಯಕ್ಷಮತೆ ತತ್ವನಿಷ್ಠೆ ಶಿವರತಿ
ಬಂಧುಭಾವ ಭದ್ರವಾದ ಸ್ಮರಣ ಮನನ ಆಕೃತಿ
ಚಿಗಿಯಲಿನ್ನು ಸಾಕು ಸಾಕು ಮನುಜಮನದ ವೈಕೃತಿ;”
ಎಂದೊ ನುಡಿದ ನಿಮ್ಮ ನುಡಿಗೆ ನಿಮ್ಮ ನಡೆಯೆ ಸಾಕ್ಷಿಯು !
ಲೋಕಹಿತದ ಕಿರಣಕೇಂದ್ರ ನಿಮ್ಮ ಮಂಗಲಾಕ್ಷಿಯು !
ನಿಮ್ಮ ಮನಸು, ನಿಮ್ಮ ಕನಸು ಕಾವ್ಯದಲ್ಲಿ ಸಂಗಮ
ನೋಡಬೇಕು ಮೊದಲಕೃತಿ ‘**ಜಲಪಾತ**’ದ ಸಂಭ್ರಮ !
‘ನಾಲ್ಕು ಮುಖವಾಗಿಹುದು ಬಾಳ ರುಚಿ’ ಕಾವ್ಯದಲಿ
ದೇಶಭಕ್ತಿಯ ಜೊತೆಗೆ ಮನುಜಶಕ್ತಿಯ ತೊರೆಯು
ಭೋರ್ಗರೆದು ಹರಿದ ಬಗೆ ಬರೆಹದಲ್ಲಿ;
ಅಲ್ಲಿಲ್ಲಿ ಕಂಡುಂಡ ಪ್ರಕೃತಿ–ಸಂಸ್ಕೃತಿ-ಸುಕೃತಿ
‘**ಕರುಣಾಶ್ರಾವಣ**’ದ ಕಿರಣ–ಕುಂಜದ ಕುರುಹು;
ಕನ್ನಡದ ಕವಿಯೋಧ ಕಾಶ್ಮೀರಕೂ ಹೋದ
ಹಲವು ಅನುಭವಗಳಿಗೆ ಭಾವ ಬಣ್ಣವನಿತ್ತ ಕಲೆಯ ಕುಸುರು !
ನಯನ ದರ್ಪಣದಲ್ಲಿ ಅರಳಿದುದ್ಯಾನವನವು ಕವಿಯ ಉಸಿರು !
ಸು ‘**ವಿಕಾಸವಾಣಿ**’ಯಲಿ ನಾಡ ಕಟ್ಟುವ ಕನಸು
ಬುವಿಯು ಬಸಿರಿಂದೆದ್ದು ಅಪ್ಪಿರಲು ಭೂ–ವ್ಯೋಮ,
‘**ಮಾನಸ ಸರೋವರ**’ದೊಳು ಕೀರ್ತಿಗಂಗೆಯ ಉಗಮ;



ಮುಂದೆ ಒಂದೊಂದಾಗಿ ಕೂಡಿದವು ಹಲವಾರು ಶಾಖೋಪಶಾಖೆ
ನಾಡ ಸೀಮೆಯ ಮೇಲೆ ಮೂಡಿ ಮೆರೆಯಿತು ನಾಟ್ಯ ‘**ರಜತರೇಖೆ**’ !
ಯುದ್ಧದಾಹ್ವಾನಕ್ಕೆ ‘**ಯುದ್ಧ್ಯಸ್ವ**’ ಎಂದೆದ್ದ ವೀರಪುರುಷ;
ಕಠಿಣ ಕಾಲದಿ ವಜ್ರ ಕಾಠಿಣ್ಯವಪ್ಪುವುದು ಭಾವಪರುಷ;
ಧೀರ ‘**ಭಾರತವೀರ**’ನನ್ನು ಚಿತ್ರಿಸಿದವರು ಧೀರಕವಿಯು !
ಸ್ವಂತ ಸೇವಾ ರಂಗದಿಂದೆಂದು ಹಿನ್ನೆಡೆದುದುಂಟೆ ರವಿಯು ?
ರಾಷ್ಟ್ರರಕ್ಷಣೆ, ರಚನೆ, ವ್ಯೈ–ಮನದ ಸಾಧನೆಗೆ
ಯಾರು ಕರೆದರು ಇವರು ಉತ್ತರವೊ “**ಸಿದ್ಧಯ್ಯ**”;
ಬರಿಯ ಹೆಸರಿನೊಳೇಕೆ, ನಡೆ–ನುಡಿಗು ಸಿದ್ಧಯ್ಯ !
‘ಬಂಗಾರವೆ ಬೇಕೆ ಸಿಂಗಾರಗೊಳುವುದಕೆ,
ಹಳೆಯದಾಯಿತು ಜನತೆ ಆ ನಂಬಿಗೆ !’
ಎಂದು ತಿಳಿಹೇಳಲಿಕೆ ನಡೆದ ಕವಿಯೋಧರಿಗೆ
ಶುಭಕೋರಿ ಕಳಿಸೋಣ ಮನೆಯಿಂದ ಮನೆಗೆ !

ಬೆಳಗಾವ

## ಕರ್ಮಯೋಗಿ

ಜಿ. ಆರ್. ಹಿರೇಮಠ

ಕಾವ್ಯ ಶರಪಂಜರದಿ
ಶುಕನಾಗಿ ನೀನಿದ್ದು,
"ಕೆಲವಂಬಲ್ಲವರಿಂದಕಲ್ತು"
ನೀ ಹಾಡಿದೆ ನಿನ್ನನೇ ಮರೆತು.

ಸಾಲು ಸಾಲಿನಲಿ ಶಾರದೆಯ ಕುಣಿತ
ಪದಪದಗಳಲಿ ಕಾವ್ಯ ರಾಣಿಯ ಮಣಿತ
ಹರಿದಿಹುದು ಕೃಷ್ಣೆ ತುಂಗೆಯರ ಸಂಗಮದಂತೆ
ಹರಿಸಿಹರಾರೋ "ಕಾವ್ಯಾನಂದ"ರಂತೆ.

ಏನುಭಾವವೋ ಅದು ಮೈಯುಬ್ಬಿ ನಿಂತಿದೆ
ಏನುಶೈಲಿಯೋ ಅದು ಮೈಮರೆತು ಕುಳಿತಿದೆ
ಶಿವಮುಡಿಯ ಗಂಗೆ ಅನವರತ ಹರಿವಂತೆ
ಹರಿಯುತಿದೆ ಫೈಲುಗಳ ರಾಶಿಯನೇ ಕುಡಿದಂತೆ.

ಸತ್ತ ಫೈಲುಗಳಲಿ ಮತ್ತೆ ಜೀವವ ತುಂಬಿ
ಹಾರುವದು ಮತ್ತೆ ಸವಿಗಾಗಿ ದುಂಬಿ
ಹುಡುಕುತ್ತ ಅರಸುತ್ತ ನಿಂತಿರಲು ನಿಮಿಷ
ಬಂದಿತದೋ ಜೇನ್ನುಡಿಯ ಆವೇಶ.



ಪದವಿ ಎಂಬರಿವು ಎತ್ತಲೋ ಏನೋ
ಬರುತಿಹವು ಸುತ್ತಿ ಸುತ್ತಿ ಇವು ಏನೋ
ಬಂದಂತೆ ಬೇಡೆಂಬ ಸೊಲ್ಲಿಲ್ಲ
ಕಾಯಕದಿ 'ಕರ್ಮಯೋಗಿ' ಬಲ್ಲರಿದನೆಲ್ಲ

ಸದಾ ನಗುತಿರುವ ಗಾಂಭೀರ್ಯ ಮುಖದಲ್ಲಿ
ಚಿಮ್ಮುವದು ಸ್ನೇಹಸ್ನಿಗ್ಧತೆಯ ಮೆಲ್ಲುಲಿ
ಬಡವರಾಧಾರಿ ಕಾರುಣ್ಯಮೂರ್ತಿ !
ಹೆಚ್ಚಿಹುದು ನಿನ್ನಿಂದ ಶಾರದೆಯ ಕೀರ್ತಿ !!

ಬಾಳಿ ಬೆಳಗಯ್ಯ ಕನ್ನಡದ ವರಪುತ್ರ
ಅರಿತಿರುವಿ ನೀನಿಂದು ಕನ್ನಡದ ಸೂತ್ರ
ಆ ಬಯಕೆ ನಿನ್ ಬಯಕೆ ಒಂದೇ ಒಂದು !
ಪೂರ್ತಿಯಾಗಲಿ ಇಂದಲ್ಲ ನಾಳೆ ಮುಂದು !!

ಕುಷ್ಟಗಿ

## ಕರುಣಾಮಯಿ............ಕಾವ್ಯಾನಂದರಿಗೆ

ಸೇಗಿಲಯೋಗಿ

ಕನ್ನಡದ ಬರಹದಲಿ
ನೀವು ಕಾವ್ಯಾನಂದ;
ಆಡಳಿತ ರಂಗದಲಿ
ಹೆಸರು ಕಾರ್ಯಾನಂದ !

ಹೂವಿನಂತಹ ಹೃದಯ
ಸೌಜನ್ಯ ಸಾಗರ;
ಹಿರಿ-ಕಿರಿಯರೆಲ್ಲರಿಗೂ
ವಾತ್ಸಲ್ಯದಾಗರ !

"ಕಾಯಕವೆ ಕೈಲಾಸ"
ನಿಮ್ಮ ಜೀವನದುಸಿರು;
ನಾಡಿನೆಲ್ಲೆಡೆ ದುಡಿದು
ಗಳಿಸಿದಿರಿ ಹೆಸರು !

ದೀನ-ದಲಿತರ ಕಂಡು
ಮನಮರುಗಿ ಮನನೊಂದು;
ಸೇವೆಯನು ಸಲಿಸಿದಿರಿ
ಹಗಲಿರುಳೂ ನಿಂದು !



ಬೆಳಗಾವಿ ಜಿಲ್ಹೆಯಲಿ
ನಿಮ್ಮ ಶ್ರಮಸಾರ್ಥಕ;
ಮಾನವತೆ ಮಂದಿರದಿ
ಆಗದದು ನಿರರ್ಥಕ !

ಕನ್ನಡದ ಗುಡಿಯಲ್ಲಿ
ಬೆಳಗಿದಿರಿ ಜ್ಯೋತಿ;
ಸರ್ವರೊಂದಿಗೂ ಬೆರೆತು
ತೋರಿದಿರಿ ಪ್ರೀತಿ !

ಸರಳ ಸಾತ್ವಿಕ ಜೀವಿ
ಓ ! ಕಾವ್ಯಾನಂದ;
ಕರುಣಾಮಯಿ ಹಿರಿಜೀವ
ನಮನ ಕಾರ್ಯಾನಂದ !

## ಕಾವ್ಯಾನಂದರಿಗೆ

ಬಿ. ಈ. ಶೇಷಾದ್ರಿ

ಹೇ ಹೇ ಕಾವ್ಯಾನಂದ
ಹೇ ರಾಜ ಕವಿ, ಬಂದೆನೀ ತಂದೆನೀ ಜನಕೆ ಆನಂದ ।
ಜಿಲ್ಲಾಧೀಶನ ಮೋಜಿನ ಜೀವನ ಮರೆಯುತೆ
ಹಂಪೆಯ ಕೊಂಪೆಯ ಮಂದಿಯ ಮನಸಿನ
ಕನಸಿನ ಹಸಿರಿನ ಹಂದರವಾಗುತೆ

ಬಾಳಿದೆ ನೀನು ।
ಹೇಳಿದೆ ತಾನು ಜನತೆಯ ವಾಣಿ :
ಕವಿ ರವಿಯಾಗುತೆ ಬಂದನೆಂದು,
ಕಾಲವಿಳಂಬದ ಕತ್ತಲೆ ಪರಿಹರಿಸಿದನೆಂದು,
ನೇಸರ ನೆರವಿಗೆ ನೇಸರ ಬರುಲು ಬೆಳೆಯೆರಡಾಯಿತು ನೋಡು,
ಔದಾಸಿನ್ಯದ ಬರಡದು ಕಳೆದು ಬಂಗಾರಾಯಿತು ನಾಡು,
ಸೊಗಸಾಯಿತು ಕಾಡು !
ದೇವಳಗಳಲೂ ಸುತ್ತಿದ ಕತ್ತಲೆ ಹೋಯಿತು ಹಾರಿ,
ಹೊಳೆಯಿತು ಕಾವೇರಿಯ ವಾರಿ ಎರಡನೆ ಬಾರಿ ।
ಪುರಾಣದ ಪಾರಾಯಣದಲಿ,
ಬರಡಾಯಿತು ಕಲಿ,
ತನಗಿಲ್ಲದೆ ಬಲಿ ।
ನಿನಗಾಗಿರೆ ಕಜ್ಜವು ಸಾಧು ಸಂತರ ಸಲಹುವುದೊಂದೆ
ಕನ್ನಡನಾಡಿಗೆ ಆಗಿಹೆ ನೀನೆಲೊ ಬಾವುಟ ಮುಂದೆ ।
ಅಂತಿರೆ ನಿಂತಿರುವೆವು ನಾವು ನಿನ್ನಯ ವಂದನೆಗೆ,
ಅ ಭಿ ನಂ ದ ನೆ ಗೆ ॥

ಮಡಿಕೇರಿ



## ಕಾವ್ಯಾನಂದರ– 'ಆತ್ಮಾರ್ಪಣ'

ಎಸ್. ಪಿ. ಪಾಟೀಲ ಎಂ. ಎ.

ಕನ್ನಡ ನಾಡಿನ ಚರಿತ್ರೆಯಲ್ಲಿ ೧೨ ನೆಯ ಶತಮಾನ ತುಂಬ ಮಹತ್ವಪೂರ್ಣವಾದ ಕಾಲಖಂಡ. ಪರಂಪರೆಯ ಸೆಳೆತಕ್ಕೆ ಸಿಕ್ಕು ಜರ್ಜರಿತವಾದ ಸಮಾಜಕ್ಕೆ ಬಿಡುಗಡೆಯೆಂಬುದು ಬಯಕೆಯಾಗಿಯೇ ಉಳಿದಿತ್ತು. ಧಾರ್ಮಿಕ ಸಾಮಾಜಿಕ ಕ್ಷೇತ್ರಗಳಂತೆಯೇ ಸಾಹಿತ್ಯ–ಸಂಸ್ಕೃತಿ ಮೊದಲಾದ ವಿಷಯಗಳು ಸರ್ವಸಾಮಾನ್ಯರನ್ನು ಉಪೇಕ್ಷಿಸಿದ ಕಾಲವದು. ಧಾರ್ಮಿಕ ಕಂದಾಚಾರಗಳೇ ಪ್ರಮುಖವಾಗಿ ವರ್ಣಭೇದದಿಂದ ಮಾನವ ಕುಲವನ್ನು ಬೇರ್ಪಡಿಸಿತ್ತು. ಜನ್ಮದಿಂದಲೇ ಉಚ್ಚ–ನೀಚವೆಂದು ಕುಲಗಳ ಗಣನೆಯಾಗುತ್ತಿತ್ತು. ಸಮಾಜದಲ್ಲಿಯ ಈ ಭೇದ-ಭಾವಗಳ ಅಹಿತ ಪರಿಣಾಮಗಳನ್ನು ಗ್ರಹಿಸಿ, ಅವುಗಳ ವಿರುದ್ಧ ಕ್ರಾಂತಿಯ ಕಹಳೆಯನ್ನು ಊದಬಲ್ಲ ಮಹಾಪುರುಷನ ನಿರೀಕ್ಷಣೆಯಲ್ಲಿಯೇ ಪರಿಸ್ಥಿತಿಯು ಮುಂದುವರಿಯುತ್ತಲಿತ್ತು. ಇಂಥ ವಿಷಮ ವಾತಾವರಣದಲ್ಲಿ ವ್ಯಕ್ತಿಯ ವೈಯಕ್ತಿಕ ಏಳ್ಗೆಯಾಗಬೇಕೆನ್ನುವಂತೆಯೇ ಸಮಾಜದ ಏಳ್ಗೆಯಾಗಬೇಕೆಂದು ಆಚಾರ–ವಿಚಾರಗಳನ್ನು ರೂಪಿಸಿ-ರೂಢಿಸಿಕೊಂಡ ಮಹಾಪುರುಷನ ಬರವನ್ನು ಕಾಯುತ್ತಿರುವಲ್ಲಿ ಭಕ್ತಭಾಂಡಾರಿ ಬಸವಣ್ಣನವರು ಜನಿಸಿದುದು ಕರ್ನಾಟಕದ ಸೌಭಾಗ್ಯವೆನ್ನಬೇಕು. ಈ ಮಹಾಪುರುಷನ ಜೀವನ ಸಾಧನೆಯನ್ನು ಪ್ರತಿಬಿಂಬಿಸುವುದೇ ಶ್ರೀ ಕಾವ್ಯಾನಂದರ 'ಆತ್ಮಾರ್ಪಣ'ದ ಪ್ರಧಾನ ಗುರಿಯಾಗಿದೆ.

ಬ್ರಾಹ್ಮಣ ಮನೆತನದಲ್ಲಿ ಜನಿಸಿದ ಬಸವಣ್ಣನವರು ಪರಂಪರೆಯ ಸಂಕೋಲೆಗೆ ಸಿಕ್ಕಿಕೊಳ್ಳದೆ, ಉಪನಯನವನ್ನು ಧಿಕ್ಕರಿಸಿ, ಜಾತವೇದ ಮುನಿಗಳಲ್ಲಿ ವಿದ್ಯಾಭ್ಯಾಸ ಪೂರೈಸಿ,ತಾನು ಬಯಸದಿರುವಾಗ ಕಲ್ಯಾಣದ ಬಿಜ್ಜಳನ ರಾಜ್ಯಾಡಳಿತದ ಒಳಿತಿಗಾಗಿ ಪ್ರಧಾನಿಯಾಗಿ ರಾಜ್ಯದ ಏಳ್ಗೆಗಾಗಿ ಶ್ರಮಿಸಿದುದು ಒಂದು ಲೌಕಿಕ ವಿಶೇಷ ಸಂಗತಿ. ಅದರಂತೆ ಜಾತಿಭೇದವನ್ನು

ತೊರೆದು, ಕಾಯಕದ ಮಹತ್ವವನ್ನು ಅರುಹಿ, ಪ್ರತಿಯೊಬ್ಬನು ಆಧ್ಯಾತ್ಮದ ಏಳ್ಗೆಯನ್ನು ಸಂಪಾದಿಸಬಲ್ಲನೆಂದು, ಅಂಥ ಅನುಭಾವಿಗಳು ಒಂದೆಡೆ ಸೇರಿ ಚರ್ಚಿಸಲು ಅನುಕೂಲವಾಗಲೆಂದು 'ಅನುಭವ ಮಂಟಪ'ವನ್ನು ಕಟ್ಟಿ, ಅದರ ಶೂನ್ಯ ಸಿಂಹಾಸನದ ಮೇಲೆ ಪ್ರಭುದೇವರಂತಹ ಜ್ಞಾನಿಯನ್ನು ಕೂಡ್ರಿಸಿ, ಸಿದ್ಧರಾಮ, ಮಹಾದೇವಿಯಕ್ಕರಂತಹ ಮಹಾಮಹಿಮರಾದ ಶಿವಶರಣ-ಶಿವಶರಣೆಯರನ್ನು ಒಂದೆಡೆ ಸೇರಿಸಿದ್ದು ಬಸವಣ್ಣನವರ ಮಹತ್ಸಾಧನೆ. ಸಾಮಾಜಿಕ ಮೇಲು-ಕೀಳುಗಳನ್ನು ತೊರೆದು ಸೇರಿದ ಅನುಭಾವಿಗಳ ಅನುಭಾವವು 'ವಚನ' ರೂಪದಲ್ಲಿ ವ್ಯಕ್ತವಾಗಿ ಜಗತ್ತಿನ ಜ್ಞಾನ ಭಂಡಾರಕ್ಕೆ ಅಮೌಲ್ಯ ಕಾಣಿಕೆ ಸಲ್ಲುವಂತಾದುದು ನಾಡಿನ ಪುಣ್ಯ. ಕೇವಲ ಪಂಡಿತರಿಗಾಗಿ ರಚನೆಯಾಗುತ್ತಿದ್ದ ಕಾವ್ಯ-ಪುರಾಣಗಳ ಸ್ಥಾನವನ್ನು ಪಡೆದ 'ವಚನ ಸಾಹಿತ್ಯ'ವು ಕನ್ನಡ ಸಾಹಿತ್ಯಕ್ಕೆ ನವೀನ ರೂಪವನ್ನು ಒದಗಿಸಿ ಕೊಟ್ಟಿತು. ಹೀಗೆ ಸಾಮಾಜಿಕ, ಧಾರ್ಮಿಕ ಹಾಗೂ ಸಾಹಿತ್ಯ ಕ್ಷೇತ್ರಗಳಲ್ಲಿ ಕ್ರಾಂತಿಯ ಮೊಳಗನ್ನು ಊದಿ ಅತ್ಯಲ್ಪ ಕಾಲದಲ್ಲಿಯೇ ಅದ್ಭುತ ಸಾಧನೆಯನ್ನು ತೋರಿದ ಬಸವಣ್ಣನವರ ಜೀವನ ವರ್ಣಮಯವಾಗಿದೆ, ನಾಡಿನ ಪ್ರತಿಯೊಬ್ಬರ ಮನದಲ್ಲೂ ಅಚ್ಚಳಿಯದ ಚಿತ್ರ ಮೂಡಿ ನಿಂತಿದೆ. ಇಂಥ ಮಹಾನುಭಾವ, ಆದರ್ಶ ಭಕ್ತ, ಸಮಾಜ ಸುಧಾರಕನ ಜೀವನ ಕಥೆ, ಕಾದಂಬರಿಗಳಿಗಿಂತ ನಾಟಕಕ್ಕೆ ತುಂಬ ಉಚಿತವಾದ ವಸ್ತು. ಅದರಲ್ಲೂ ಕಾವ್ಯಾನಂದರ ಕಲೆಯ ಕುಸುರಿನಿಂದಾಗಿ ಅದು ಇನ್ನೂ ಸ್ಫುಟವಾಗಿ ಒಡಮೂಡಿ ನಿಂತಿದೆ.

ಮಹಾಪುರುಷರ ಜೀವನವನ್ನು ಕಥೆ, ನಾಟಕ ರೂಪದಲ್ಲಿ ಪ್ರತಿಬಿಂಬಿಸುವ ಕಾರ್ಯ ತುಂಬ ಪ್ರಯಾಸಕರ. ಆಗಲೇ ಜನಮನದಲ್ಲಿ ನೆಲೆಸಿದ ಆದರಣೀಯ ವ್ಯಕ್ತಿಯ ಪಾತ್ರನಿರೂಪಣೆಯಲ್ಲಿ ನಾಟಕಕಾರನಿಗೆ ತುಂಬ ಎಚ್ಚರಿಕೆ ಬೇಕು. ಐತಿಹಾಸಿಕ ಪುರುಷರ ಜೀವನ ಚಿತ್ರಣದಲ್ಲೂ ಅಷ್ಟೇ. ಯಾವುದನ್ನೂ ಹೆಚ್ಚಿಸುವಂತಿಲ್ಲ. ಯಾವುದಾದರೊಂದು ಬಿಟ್ಟು ಹೋದರೆ ಮೂಲ ವ್ಯಕ್ತಿತ್ವಕ್ಕೆ ಕುಂದು. ಆದುದರಿಂದ ಇಂಥ ಮಹಾಪುರುಷರ ಜೀವನ-ಸಾಧನೆಯನ್ನು ಕುರಿತು ಬರೆಯುವಾಗ ತುಂಬ ಜಾಗ್ರತೆ ವಹಿಸಬೇಕಾಗು



ವುದು. ಚಾರಿತ್ರಿಕ ವ್ಯಕ್ತಿಯ ವ್ಯಕ್ತಿತ್ವದೊಂದಿಗೆ ತಾದಾತ್ಮ್ಯ ಹೊಂದಬೇಕಾಗುವುದು. ಈ ದೃಷ್ಟಿಯಿಂದ 'ಆತ್ಮಾರ್ಪಣ' ವನ್ನು ಅವಲೋಕಿಸಿದಾಗ ಕಾವ್ಯಾನಂದರ ಸಾಧನೆ, ಸಿದ್ಧಿಯು ಅರಿವಾಗದಿರದು. ನಾಟಕದ ಪಾತ್ರ ಸೃಷ್ಟಿ-ತಂತ್ರ ಮೊದಲಾದವುಗಳಂತೆಯೇ ಬಸವಣ್ಣನವರ ಜೀವನ-ಸಾಧನೆಯನ್ನಷ್ಟೇ ಅಲ್ಲದೆ ಅವರ ಅಂತರಂಗವನ್ನೂ, ಆ ಕಾಲದ ಸಾಮಾಜಿಕ ಪರಿಸ್ಥಿತಿಯನ್ನೂ ಆಳವಾದ ಅಧ್ಯಯನ, ಮನನದಿಂದ ಅರಿತು, ಅವನ್ನು ಪ್ರಭಾವಿಯಾಗಿ ನಿರೂಪಿಸುವಲ್ಲಿಯೂ ಕಾವ್ಯಾನಂದರು ಯಶಸ್ವಿಯಾಗಿರುವುದನ್ನು ಇಲ್ಲಿ ಕಾಣಬಹುದು. ಇದರಿಂದಾಗಿ ಬಸವಣ್ಣನವರು ಹಮ್ಮಿಕೊಂಡ ಆದರ್ಶ ಕ್ರಾಂತಿಯ ಚಿತ್ರ ಸ್ಪಷ್ಟವಾಗಿ ಒಡಮೂಡಿದೆ.

ಕಥೆ ಕಾದಂಬರಿಗಳಿಗೆ ಪಾತ್ರಗಳಿರುವಂತೆ ನಾಟಕಕ್ಕೆ ಸನ್ನಿವೇಶಗಳೇ ಜೀವಾಳ. ಸನ್ನಿವೇಶಗಳು ಸಹಜವಾಗಿ ರೂಪತಳೆಯಬೇಕು. ಮೂಲ ವಸ್ತು ಪರಿಸ್ಫುಟಗೊಳ್ಳಲು ಸಹಕಾರಿಯಾಗಿರಬೇಕು. ಈ ಮಾತು ಕಾವ್ಯಾನಂದರ 'ಆತ್ಮಾರ್ಪಣ' ಕ್ಕೆ ಪೂರ್ತಿ ಅನ್ವಯಿಸುವುದು. ಇಲ್ಲಿಯ (೧) ಬಸವಣ್ಣನವರು ಅಗಲುವಿಕೆಯ ಕಾಲಕ್ಕೆ ಅವರ ತಾಯಿ-ತಂದೆಗಳು ಪಟ್ಟ ಕಷ್ಟದ ಪ್ರಸಂಗ, (೨) ಬಸವಣ್ಣನವರು ಲಗ್ನಕ್ಕೆ ಒಪ್ಪುವ ಸನ್ನಿವೇಶ, (೩) ಪ್ರಭುದೇವರು ಹಾಗೂ ಸಿದ್ಧರಾಮರ ಸಮಾಗಮ-ಸಂವಾದ, (೪) ಬಸವಣ್ಣನವರ ಮಧುರ ದಾಂಪತ್ಯವನ್ನು ಪ್ರತಿಬಿಂಬಿಸುವ ಸನ್ನಿವೇಶ (ಪು-೪೦), (೫) ಪ್ರಭುದೇವರು ಹಾಗೂ ಬಸವಣ್ಣನವರ ಸಂದರ್ಶನ, (೬) ಪ್ರಭುದೇವರಿಂದ ಮಹಾದೇವಿಯಕ್ಕನ ಪರೀಕ್ಷೆ, (೭) ಮನೆಗೆ ಬಂದ ಕಳ್ಳರ ಪರಿವರ್ತನೆಯ ಸನ್ನಿವೇಶ—ಈ ಮೊದಲಾದ ಸನ್ನಿವೇಶಗಳು ಮೂಲ ವಸ್ತುವಿಗೆ ಪೂರಕವಾಗಿ ಅತಿ ಸಹಜವಾಗಿ ಒಡಮೂಡಿ ಬಂದಿದ್ದು ನಾಟಕದ ಒಟ್ಟಂದಕ್ಕೆ ಮೆರಗನ್ನಿತ್ತಿವೆ.

'ಆತ್ಮಾರ್ಪಣ' ದ ಇನ್ನೊಂದು ವೈಶಿಷ್ಟ್ಯವೆಂದರೆ—ಅದರ ಭಾಷೆ, ಆ ಆ ಪಾತ್ರಗಳ ಅಭಿಪ್ರಾಯವನ್ನು ತಿಳಿಸುವಲ್ಲಿ ಲೇಖಕರು ಆ ವಿಚಾರಗಳನ್ನು ತಮ್ಮ ಮಾತಿನಲ್ಲಿ ತಿಳಿಸದೆ, ಆ ಆ ಶರಣರ ವಚನಗಳನ್ನು ಸಂದರ್ಭಕ್ಕೆ ತಕ್ಕಂತೆ ಬಳಸಿಕೊಂಡಿದ್ದಾರೆ. ಇದರಿಂದ ಆ ಪಾತ್ರಗಳ ಹೃದಯವನ್ನೇ ತೆರೆದಿಟ್ಟಿದ್ದಾರೆ. ಅದರಂತೆ ಅನುಭವ ಮಂಟಪ ಹಾಗೂ ಅದರ

ಕಾರ್ಯಕಲಾಪಗಳು ಕೇವಲ ಕಲ್ಪನಾಮಯವೆಂದು ಭಾಸವಾಗದಂತೆ ಆ ಕಾಲದ ವಾತಾವರಣವನ್ನು ವಚನಗಳ ಬಳಕೆಯಿಂದ ನಿರ್ಮಿಸಿದ್ದಾರೆ. ಇದರಿಂದಾಗಿ ೧೨ನೆಯ ಶತಮಾನದ ಕಲ್ಯಾಣ ಪಟ್ಟಣ, ಅನುಭವ ಮಂಟಪ, ಬಸವಣ್ಣನವರ ಜೀವನ ಎಲ್ಲವೂ ಜೀವಂತವಾಗಿ ಕಣ್ಣೆದುರಿಗೆ ನಿಲ್ಲುವವು. ಈ ರೀತಿ ವಚನಗಳ ಯಥೋಚಿತ ಬಳಕೆ ಸ್ತುತ್ಯ ಉಪಕ್ರಮವಾಗಿದೆ. ಅದರಂತೆ ಜನಸಾಮಾನ್ಯರು ಬಳಸುವ ಕನ್ನಡದ ಆಡುನುಡಿಗಳ ಪ್ರಯೋಗವನ್ನು ಅಲ್ಲಲ್ಲಿ ಕಾಣಬಹುದು. 'ಆನೆ ಆ ಹಾದಿಯಲ್ಲಿ ಹೋಯಿತೆಂದರೆ, ಆಡು ಆ ಹಾದಿಯಲ್ಲಿ ಹೋಗಬಹುದೆ?' 'ಬಡೆದ ಪೆಟ್ಟಿಗಿಂತ ನುಡಿದ ಪೆಟ್ಟು ಹೆಚ್ಚು,' 'ದೇವರು ವರಾ ಕೊಟ್ಟರು ಪೂಜಾರಿ ಪರಸಾದ ಕೊಡೋದಿಲ್ಲಂತೆ'—ಮೊದಲಾದ ಮಾತುಗಳು ಆ ಆ ಪಾತ್ರಗಳ ಅಭಿರುಚಿಗೆ ಅನುಗುಣವಾಗಿ ವ್ಯಕ್ತವಾಗಿವೆ.

ವಸ್ತು, ಪಾತ್ರ, ಸನ್ನಿವೇಶ, ತಂತ್ರ, ಶೈಲಿ ಈ ಎಲ್ಲ ಅಂಗಗಳಿಂದ ಕಾವ್ಯಾನಂದರ 'ಆತ್ಮಾರ್ಪಣ' ವನ್ನು ಅವಲೋಕಿಸಿದಾಗ ಅವರ ಪ್ರಥಮ ಕವನಸಂಗ್ರಹ 'ಜಲಪಾತ' ದ ಪೂರ್ವದಲ್ಲಿಯೇ ರಚಿತವಾದ ಈ ಕೃತಿ ಮಹಾಪುರುಷರ ಜೀವನವನ್ನು ಚಿತ್ರಿಸುವ ಕನ್ನಡ ನಾಟಕಗಳಲ್ಲಿ ಒಂದು ಸಾರ್ಥಕ ಕೃತಿ ಎಂದು ನಿಸ್ಸಂದೇಹವಾಗಿ ಹೇಳಬಹುದು.

ಧಾರವಾಡ

*—*—*



## ಆದರ್ಶ ಆಡಳಿತಗಾರ

ಕೊಟ್ರ ಬಸವಯ್ಯನವರು

೧೯೪೩ ರಲ್ಲಿ ಶ್ರೀ ಸಿದ್ಧಯ್ಯ ಪುರಾಣಿಕರು ಆಗಿನ ನಿಜಾಮ ಸರಕಾರದಲ್ಲಿ ತಹಸೀಲ್ದಾರರಾಗಿ ಆರಿಸಲ್ಪಟ್ಟಾಗ ಅವರ ಅಸಂಖ್ಯಾತ ಅಭಿಮಾನಿಗಳಿಗೆ ಆಶ್ಚರ್ಯ ನಿರಾಶೆಗಳು ಏಕಕಾಲಕ್ಕೆ ಉಂಟಾದುವು. ಆಶ್ಚರ್ಯ—ಯಾರ ಪ್ರಬಲ ಸಿಫಾರಸೂ ಇಲ್ಲದೆ ಯೋಗ್ಯತೆಯ ಬಲವೊಂದರಿಂದಲೇ ಅವರು ಆರಿಸಿ ಬಂದುದಕ್ಕಾಗಿ; ನಿರಾಶೆ—ಹೈದರಾಬಾದು ಕರ್ನಾಟಕದ ಸಾರ್ವಜನಿಕ ಜೀವನಕ್ಕೆ ಅವರ ಮಾರ್ಗದರ್ಶನ ಇಲ್ಲದಂತಾದುದಕ್ಕಾಗಿ ಇನ್ನೂ ವಿದ್ಯಾರ್ಥಿ ದೆಶೆಯಲ್ಲಿಯೇ ಹೈದರಾಬಾದು ಕರ್ನಾಟಕದ ಕ್ಷಿತಿಜದ ಮೇಲೆ ದಾರಿ ತೋರುವ ಧ್ರುವ ತಾರೆಯಾಗಿ ಮೂಡಿ ಮಿನುಗತೊಡಗಿದ್ದ ಅವರು ಸರಕಾರದ ಸೇವೆಗೆ ಸೇರಿದುದು ಸರಿಯಾಗಲಿಲ್ಲವೆಂದು ಸಾಮಾನ್ಯವಾಗಿ ಎಲ್ಲರೂ ಅಭಿಪ್ರಾಯಪಟ್ಟರು. ಇದರಲ್ಲಿ ಶ್ರೀ ಪುರಾಣಿಕರದೂ ತಪ್ಪಿಲ್ಲ. ಆರಿಸಿ ಬರುವ ಆಸೆಯಿಂದ ಅಲ್ಲ, ಅಲ್ಲಿ ನಡೆಯುವ ತಮಾಷೆಯನ್ನು ನೋಡಲೆಂದು ಅವರು ಇಂಟರ್‌ವ್ಯೂಗೆ ಹೋಗಿದ್ದರು. ಆದರೆ ಆಯ್ಕೆ ಸಮಿತಿಯ ಅಧ್ಯಕ್ಷರಾಗಿದ್ದ ಅಂದಿನ ಕಂದಾಯ ಸಚಿವ ಗ್ರಿಗ್ಸನ್ನರು ಇವರ ಅಸಾಧಾರಣ ಯೋಗ್ಯತೆಯನ್ನು ಗುರುತಿಸಿದುದರ ಪರಿಣಾಮವಾಗಿ ಇವರು ಅನಿರೀಕ್ಷಿತವಾಗಿ ಆಯ್ಕೆಗೊಂಡರು. ಈಶ್ವರೇಚ್ಛೆಗೆ ಇದಿರೆಲ್ಲಿ?

ಸ್ವಭಾವತ: ದಯಾಳುಗಳೂ ದಾಕ್ಷಿಣ್ಯಪರರೂ ದೀನಬಂಧುಗಳೂ ಆಗಿದ್ದ ಇವರು ಆಡಳಿತದಲ್ಲಿ ಯಶಸ್ವಿಯಾಗಲಾರರೆಂದು ಕೆಲವರು ಭವಿಷ್ಯ ನುಡಿದಿದ್ದರು. ಇದಕ್ಕೆ ಕಾರಣವಿರದಿರಲಿಲ್ಲ. ಆಗಿನ ಆಡಳಿತದ ಗೊಂಡಾರಣ್ಯದಲ್ಲಿ ಶ್ರೀ ಪುರಾಣಿಕರಂಥ ಕವಿಹೃದಯದ, ಉದಾತ್ತ ಆದರ್ಶಗಳ, ಪರೋಪಕಾರ ಬುದ್ಧಿಯ, ನ್ಯಾಯ ನಿಷ್ಠುರ ಸುಸಂಸ್ಕೃತ ವ್ಯಕ್ತಿ ಹೇಗೆ ಪಾರಾಗಬಹು

ದೆಂದು ಯಾರಾದರೂ ಶಂಕಿಸಬಹುದಾಗಿದ್ದಿತು. ಸ್ವತಃ ಪುರಾಣಿಕರಿಗೇ ಸಂದೇಹವಿದ್ದಿತು ಈ ಬಗ್ಗೆ.

ಆದರೆ ಅವರು ಆಡಳಿತದಲ್ಲಿ ಉದ್ದಕ್ಕೂ ಗಳಿಸುತ್ತ ಬಂದಿರುವ ಅಪೂರ್ವ ಯಶಸ್ಸು ಅಸಾಮಾನ್ಯ ಕೀರ್ತಿ ಎಂಥವರನ್ನೂ ಬೆರಗುಗೊಳಿಸಿದೆ. ಅವರಷ್ಟು ವಿವಿಧ ಇಲಾಖೆಗಳಲ್ಲಿ ಅಷ್ಟೇ ಯಶಸ್ಸಿನೊಡನೆ ಕೆಲಸ ಮಾಡಿರುವ ಅಧಿಕಾರಿಗಳು ಅಪರೂಪ. ತಹಸೀಲ್ದಾರರಾಗಿ, ಅಸಿಸ್ಟಂಟ್ ಕಮೀಷನರರಾಗಿ, ಅಂಡರ್ ಸೆಕ್ರೆಟರಿ, ಡೆಪ್ಯುಟಿ ಸೆಕ್ರೆಟರಿಗಳಾಗಿ, ಇಬ್ಬರು ಸಚಿವರ ಆಪ್ತ ಕಾರ್ಯದರ್ಶಿಗಳಾಗಿ, ವಾರ್ತಾ ಹಾಗೂ ಪ್ರವಾಸೋದ್ಯಮ ಇಲಾಖೆಯ ಡೈರೆಕ್ಟರರಾಗಿ, ಗೋಲ್ಡ್ ಕಂಟ್ರೋಲ ಆಫೀಸರರಾಗಿ, ಕೊಡಗು ಮತ್ತು ಬೆಳಗಾವಿ ಜಿಲ್ಲೆಗಳ ಕಲೆಕ್ಟರರಾಗಿ, ರಾಜ್ಯದ ಸಾರಿಗೆ ಕಮೀಷನರರಾಗಿ, ಈಗ ಕಾರ್ಮಿಕ ಕಮೀಷನರರಾಗಿ ಅವರು ಗಳಿಸಿಯೂ ಗಳಿಸುತ್ತಲೂ ಇರುವ ಅನುಭವ, ಯಶ, ಕೀರ್ತಿಗಳು ಅಪ್ರತಿಮವಾದುವುಗಳು. ಇದು ಕರ್ನಾಟಕದ ಕವಿ ಪರಂಪರೆಗೆ ಅನುಗುಣವಾಗಿಯೇ ಇದೆ. ಜನ್ನನ ಪ್ರಸಿದ್ಧ ಉಕ್ತಿಯನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು.

ದಕ್ಷತೆಗೆ, ಪ್ರಾಮಾಣಿಕತೆಗೆ, ಕರ್ತವ್ಯ ನಿಷ್ಠೆಗೆ, ಸರ್ವ ಸಮತಾ ದೃಷ್ಟಿಗೆ, ನ್ಯಾಯ ಬುದ್ಧಿಗೆ, ತ್ರಿಕರಣ ಶುದ್ಧಿಗೆ ಇನ್ನೊಂದು ಹೆಸರೆನಿಸಿರುವ ಶ್ರೀ ಸಿದ್ಧಯ್ಯಪುರಾಣಿಕರು ಗೋದಾವರೀತೀರದ ನಾಂದೇಡದಲ್ಲಿ ತಮ್ಮ ಆಡಳಿತದ ಜೀವನವನ್ನು ಪ್ರಾರಂಭಿಸಿ ಕೃಷ್ಣಾನದಿ ಸೀಮೆಯಾಗಿರುವ ಬೆಳಗಾವಿ ಜಿಲ್ಲೆ, ಕಾವೇರಿಯ ಉಗಮಸ್ಥಾನವಾದ ಕೊಡಗು ಜಿಲ್ಲೆಗಳ ವರೆಗೆ, ಹೈದರಾಬಾದಿನಿಂದ ಬೆಂಗಳೂರಿನ ವರೆಗೆ ಅನೇಕ ಸ್ಥಳಗಳಲ್ಲಿ, ಅನೇಕ ಹುದ್ದೆಗಳಲ್ಲಿ ಗೈದ ಮಹತ್ಕಾರ್ಯಗಳ ನಾಮ ನಿರ್ದೇಶನವೇ ಒಂದು ಹೊತ್ತಗೆಯಾದೀತು. ಈ ಲೇಖನದ ಪರಿಮಿತಿಯಲ್ಲಿ ಅವರು ಮಾಡಿದ ಕಾರ್ಯಗಳ ಬೃಹತ್ತು ಮಹತ್ತುಗಳ ಅರುಂಧತೀ ದರ್ಶನ ಮಾತ್ರ ಸಾಧ್ಯ. ಸಂದರ್ಭ, ಪರಿಸ್ಥಿತಿ ಪರಿಸರಗಳಿಗೆ ತಕ್ಕಂತೆ ಅವರು ಸ್ವಬುದ್ಧಿ ಸಾಮರ್ಥ್ಯಗಳಿಂದಲೇ ಕಂಡುಕೊಂಡು ಅನುಸರಿಸಿದ ಅನೇಕ ನೂತನ ಆಡಳಿತ ಕ್ರಮಗಳ, ತಂತ್ರಗಳ, ಯುಕ್ತಿ ಪ್ರಯುಕ್ತಿಗಳ ಪರಿಚಯ ಮಾಡಿಕೊಡಬೇಕಾದರೆ ಇನ್ನೊಂದು ಲೇಖನವನ್ನೇ ಬರೆಯಬೇಕಾದೀತು.



ಶ್ರೀ ಸಿದ್ಧಯ್ಯ ಪುರಾಣಿಕರ ನರ ರುಧಿರಗಳಲ್ಲಿ ರಾಷ್ಟ್ರೀಯತೆ ಓತಪ್ರೋತವಾಗಿ ತುಂಬಿಕೊಂಡಿದೆ. ಆದುದರಿಂದ ಅವರು ಅಧಿಕಾರವನ್ನು ಅದೇ ದೃಷ್ಟಿಯಿಂದಲೇ ಉಪಯೋಗಿಸಿ ನಾಡು ನುಡಿಗಳ, ನಾಡಿಗರ ಅಭ್ಯುತ್ಥಾನಕ್ಕಾಗಿ ದಣಿವರಿಯದೆ ದುಡಿದಿದ್ದಾರೆ; ದುಡಿಯುತ್ತಿದ್ದಾರೆ. ಮನೆಯಲ್ಲಿ ಕಾವ್ಯಾನಂದರಾಗಿ, ಕಾರ್ಯಾಲಯದಲ್ಲಿ ಕಾರ್ಯಾನಂದರಾಗಿ ದಿನಕ್ಕೆ ಹದಿನಾಲ್ಕು ಘಂಟೆಗಳಿಗೆ ಕಡಿಮೆಯಿಲ್ಲದಂತೆ ಸತತವಾಗಿ ಕಳೆದ ಮೂವತ್ತು ವರ್ಷಗಳಿಂದ ತಮ್ಮ ಪ್ರಾಪಂಚಿಕ ಕೌಟುಂಬಿಕ ತೊಂದರೆಗಳನ್ನೂ, ದೇಹಾರೋಗ್ಯವನ್ನೂ, ಮರಿಸ್ಮರ ಕಿರುಕುಳವನ್ನೂ, ಅಗದವರ ಅವಹೇಳನವನ್ನೂ ಲೆಕ್ಕಿಸದೆ ಶ್ರದ್ಧೆಯಿಂದ, ಶುದ್ಧಿಯಿಂದ ಶ್ರಮಿಸಿ ಸಿದ್ಧ ಪುರುಷರಾಗಿದ್ದಾರೆ. ಸ್ಥೂಲವಾಗಿ ಹೇಳುವುದಾದರೆ ಜಾತಿ, ಮತ ಪಂಥ ಪ್ರಭೇದಗಳನ್ನು, ಭಾಷಾಭೇದ, ಪ್ರಾಂತಭೇದ ಮೊದಲಾದವುಗಳನ್ನು ಗಣಿಸದೆ ಅವರು ಗೈದ ಶುದ್ಧಾಂತಃಕರಣದ ಸೇವೆಯ ಫಲವಾಗಿ ನಾಡಿನ ಸಾವಿರಾರು ಹಳ್ಳಿಗಳಿಗೆ ಒಂದಿಲ್ಲೊಂದು ಪ್ರಯೋಜನ ತಟ್ಟಿದೆ; ಲಕ್ಷಾಂತರ ರೈತಬಾಂಧವರಿಗೆ, ದೀನದಲಿತರಿಗೆ ಸರಕಾರದ ಸಹಾಯ ಸಿಕ್ಕಿದೆ; ಹಲವಾರು ಸಂಘ ಸಂಸ್ಥೆಗಳಿಗೆ, ನೂರಾರು ವಿದ್ಯಾಲಯಗಳಿಗೆ ಪೋಷಣೆ ದೊರೆತಿದೆ; ಅನೇಕ ದೇವಾಲಯಗಳ ಅಭಿವೃದ್ಧಿಯಾಗಿದೆ; ಜೀರ್ಣೋದ್ಧಾರವಾಗಿದೆ. ಕನ್ನಡಕ್ಕೆ, ಕನ್ನಡ ಸಾಹಿತ್ಯಕ್ಕೆ ಸ್ಮರಣೀಯ ಸೇವೆ ಸಂದಿದೆ. ಹೈದರಾಬಾದು ಕರ್ನಾಟಕದ ಮೂರು ಜಿಲ್ಲೆಗಳಲ್ಲಿ, ವಿಶೇಷವಾಗಿ ಬೀದರ ಜಿಲ್ಲೆಯಲ್ಲಿ ಕನ್ನಡ ತಲೆಯೆತ್ತಲು ಅವರು ಹೈದರಾಬಾದು ಪ್ರದೇಶ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಯಾಗಿ, ಅಧ್ಯಕ್ಷರಾಗಿ ಮಾಡಿದ ಅದ್ಭುತ ಕಾರ್ಯ ಅವರ ಹೆಸರು ಹಳ್ಳಿಹಳ್ಳಿಗಳಲ್ಲಿ ಮನೆಮಾತಾಗುವಂತೆ ಮಾಡಿದೆ. ಈ ಮಾದರಿ ಅಧಿಕಾರಿಯ ಇನ್ನೊಂದು ವೈಶಿಷ್ಟ್ಯವೆಂದರೆ ಸಮಾಜದ ಸರ್ವ ವರ್ಗಗಳಿಗೂ ಅಷ್ಟೇ ಆಸಕ್ತಿಯಿಂದ ಅವರು ಸೇವೆ ಸಲ್ಲಿಸಿದ್ದಾರೆ. ಕಂದಾಯ ಇಲಾಖೆಯ ಅಧಿಕಾರಿಯಾಗಿ ರೈತರಿಗೆ ಸೇವೆ ಸಲ್ಲಿಸಿದ್ದಾರೆ. ವಿದ್ಯಾ ಇಲಾಖೆಯ ಉಪಕಾರ್ಯದರ್ಶಿಯಾಗಿ ಶಿಕ್ಷಕರಿಗೆ, ವಿದ್ಯಾರ್ಥಿಗಳಿಗೆ ಸೇವೆ ಸಲ್ಲಿಸಿದ್ದಾರೆ; ಸಾರಿಗೆ ಕಮೀಷನರರಾಗಿ ಆಪರೇಟರರಿಗೆ, ಪ್ರವಾಸಿಗರಿಗೆ ಸೇವೆ ಸಲ್ಲಿಸಿದ್ದಾರೆ; ವಾರ್ತಾ ಇಲಾಖೆ ಹಾಗೂ ಪ್ರವಾಸೋದ್ಯಮ ಇಲಾಖೆಯ ಡೈರೆಕ್ಟರರಾಗಿ ಪತ್ರಿಕೆಗಳಿಗೆ, ಪತ್ರಕರ್ತರಿಗೆ,

ವಿಹಾರಿಗಳಿಗೆ ಸೇವೆ ಸಲ್ಲಿಸಿದ್ದಾರೆ; ಗೋಲ್ಡ್ ಕಂಟ್ರೋಲ್ ಆಫೀಸರರಾಗಿ ಅಕ್ಕಸಾಲಿಗರಿಗೆ ಸೇವೆ ಸಲ್ಲಿಸಿದ್ದಾರೆ; ಸ್ಥಾನಿಕ ಸ್ವರಾಜ್ಯ ಮಂತ್ರಿಗಳ ಆಪ್ತ ಕಾರ್ಯದರ್ಶಿಯಾಗಿ ಪಂಚಾಯತಿಗಳಿಗೆ, ನಗರ ಸಭೆಗಳಿಗೆ ಸೇವೆ ಸಲ್ಲಿಸಿದ್ದಾರೆ; ಯೋಜನಾ ಮಂತ್ರಿಗಳ ಆಪ್ತ ಕಾರ್ಯದರ್ಶಿಗಳಾಗಿ ಪಂಚವಾರ್ಷಿಕ ಯೋಜನೆಗಳನ್ವಯ ದೇಶಕ್ಕೂ ಸೇವೆ ಸಲ್ಲಿಸಿದ್ದಾರೆ; ಈಗ ಕೂಲಿಕಾರರ ಕಲ್ಯಾಣಕ್ಕಾಗಿ ಕಂಕಣಬದ್ಧರಾಗಿದ್ದಾರೆ. ಕಳೆದ ಮೂವತ್ತು ವರ್ಷಗಳಿಂದಲೂ ಯಾವುದೇ ಹುದ್ದೆಯಲ್ಲಿರಲಿ ಹರಿಜನ-ಗಿರಿಜನರ ಉದ್ಧಾರಕ್ಕಾಗಿ ಹಗಲಿರುಳು ದುಡಿದಿದ್ದಾರೆ. ಬೆಳಗಾವಿಜಿಲ್ಲೆಯಲ್ಲಿ ಒಂದರಲ್ಲಿಯೇ ಮಲಪ್ರಭಾ ಜಲಾಶಯದಲ್ಲಿ ಮುಳುಗಡೆಯಾದ ಹಳ್ಳಿಗಳ ಹರಿಜನರಿಗಾಗಿ ಒಂದು ಸಾವಿರ ಮನೆಗಳನ್ನೂ, ಉಳಿದ ಹಳ್ಳಿಗಳಲ್ಲಿಯು ಹರಿಜನರಿಗಾಗಿ ಒಂದು ಸಾವಿರ ಮನೆಗಳನ್ನು ಕಟ್ಟಿಸಿದ ಇವರು ಕೊಡಗಿನ ಕಲೆಕ್ಟರರಾಗಿದ್ದಾಗ ಗಿರಿಜನರ ಸರ್ವತೋಮುಖ ಅಭಿವೃದ್ಧಿಗಾಗಿ ಅನೇಕ ಕಾರ್ಯಗಳನ್ನು ಮಾಡಿದರು. ಅವರಿಗಾಗಿಯೇ ರಾಜ್ಯದ ಪ್ರಪ್ರಥಮ ಗಿರಿಜನ ಹಾಯ್‌ಸ್ಕೂಲನ್ನು ತಿತ್ತಿಮತ್ತಿಯಲ್ಲಿ ತೆರೆದರು.

ಕೆಲವು ಉದಾಹರಣೆಗಳಿಂದ ಆಡಳಿತದಲ್ಲಿ ಇವರು ಅನುಸರಿಸಿದ ಮಾನವೀಯ ಧೋರಣೆ, ವಿನೂತನ ಪ್ರಯೋಗಗಳು, ವಿಶಿಷ್ಟ ತಂತ್ರಗಳನ್ನು ವಿಶದೀಕರಿಸಬಹುದಾಗಿದೆ. ಇವರು ನಾಂದೇಡದಲ್ಲಿದ್ದ ಕಾಲ ಲೇವಿ ಧಾನ್ಯ ವಸೂಲಿಯೇ ಆಡಳಿತಗಾರರ, ಆದ್ಯ ಕರ್ತವ್ಯವಾಗಿದ್ದ ಕಾಲ ಆಗ ಯಾರು ಹೆಚ್ಚು ಲೇವಿ ಸಂಗ್ರಹಿಸುವರೋ ಅವರೇ ದಕ್ಷ ಅಧಿಕಾರಿಗಳೆನಿಸುತ್ತಿದ್ದರು. ಹದ್‌ಗಾಂವ್ ತಾಲೂಕಿನಲ್ಲಿ ಆಗಿದ್ದ ತಹಸೀಲ್ದಾರರು ಲೇವೀ ತಹಸೀಲ್ದಾರರೆಂದೇ ಹೆಸರಾಗಿದ್ದರು. ಅವರಿಗೂ ಹತ್ತಾರು ಹಳ್ಳಿಗಳು ತಿರುಗಿ ಬಿದ್ದುವು. ಅಧಿಕಾರಿಗಳ ಸಭೆಯಲ್ಲಿ "ನಿಮ್ಮಲ್ಲಿ ಯಾರು ಈ ಹಳ್ಳಿಗಳಿಗೆ ಹೋಗಿ ಲೇವಿ ವಸೂಲು ಮಾಡಲು ಸಿದ್ಧರಿರುವಿರಿ?" ಎಂದು ಕಲೆಕ್ಟರರು ಸವಾಲು ಹಾಕಿದರು. ಯಾರಿಂದಲೂ ಉತ್ತರ ಬರಲಿಲ್ಲ. ಶ್ರೀ ಪುರಾಣಿಕರು ಎದ್ದು ನನಗೊಂದು ಸಣ್ಣ ಅಧಿಕಾರ ಕೊಡುವುದಾದರೆ ನಾನೀ ಕೆಲಸ ಮಾಡಬಲ್ಲೆ, ಎಂದು ಆತ್ಮವಿಶ್ವಾಸದಿಂದ ಹೇಳಿದರು. ಅವರು ಆಗ ಅಧಿಕಾರಿಯಾಗಿ ಆರು ತಿಂಗಳುಗಳನ್ನು ಮಾತ್ರ ಕಳೆದಿದ್ದರು; ಎಲ್ಲರಿಗೂ ಆಶ್ಚರ್ಯವಾಯಿತು. ಕಲೆ



ಕ್ಟರರು ಕೇಳಿದರು, "ಯಾವ ಅಧಿಕಾರ ಬೇಕು? ಪೋಲೀಸರ ಮೇಲೆ ಅಧಿಕಾರ ಬೇಕೆ?" ಪುರಾಣಿಕರು ಉತ್ತರಿಸಿದರು: ಪೋಲೀಸರ ನೆರಳು ಕೂಡ ನನಗೆ ಬೇಕಿಲ್ಲ; ಆದರೆ ಈ ಹಳ್ಳಿಗಳಲ್ಲಿ ಭೂರಹಿತ ಬಡವರಿಗೆ ರೇಷನ್ ಕಾರ್ಡು ಕೊಟ್ಟು ಅವರಿಗೆ ಅತಿ ಸಮೀಪದ ಉಗ್ರಾಣದಿಂದ ನ್ಯಾಯಬೆಲೆಗೆ ಆಹಾರ ಧಾನ್ಯಗಳು ದೊರೆಯುವಂತೆ ಮಾಡುವ ಸಣ್ಣ ಅಧಿಕಾರ ಸಾಕು;" ಕಲೆಕ್ಟರರು ಸಮ್ಮತಿಸಿದರು. ಪುರಾಣಿಕರು ಮೊದಲನೆಯ ಹಳ್ಳಿಗೆ ಒಬ್ಬ ರೆವಿನ್ಯೂ ಇನಸ್ಪೆಕ್ಟರ್, ಒಬ್ಬ ಜವಾನನೊಡನೆ ಹೋದರು. ನಿರೀಕ್ಷಿಸಿದಂತೆ ಯಾರೂ ಇವರನ್ನು ಸ್ವಾಗತಿಸಲಿಲ್ಲ. ಪುರಾಣಿಕರು ಅಧೀರರಾಗದೆ ಹರಿಜನರ ಕೇರಿ, ಬಡವರ ಗಲ್ಲಿಗಳಿಗೆ ಹೋಗಿ ಅಂದೇ, ಒಲೆ ಹೊತ್ತಿಸಲು ಆಹಾರ ಧಾನ್ಯವಿಲ್ಲದವರಿಗೆ ಜನರ ಎಣಿಕೆ ಮಾಡಿ ಕಾರ್ಡುಕೊಟ್ಟು ಅವರನ್ನು ಜವಾನನೊಡನೆ ನೆರೆ ಗ್ರಾಮದ ಉಗ್ರಾಣಕ್ಕೆ ಕಳಿಸಿದರು. ಬಡವರೆಲ್ಲ ಮೂರು ತಾಸುಗಳಲ್ಲಿ ಕಾಳು ಪಡೆದುಕೊಂಡು ಹಿಗ್ಗಿ ಹಿಂದಿರುಗಿದರು. ಈ ವಿಷಯ ತಿಳಿಯುತ್ತಲೇ ಲೇವಿ ಬಾಕಿ ಇದ್ದವರೆಲ್ಲ ಸ್ವಸಂತೋಷದಿಂದ ಸಾವಿರ ಚೀಲ ಗೋದಿ ಚಾವಡಿಯ ಮುಂದೆ ತಂದೊಗೆದರು. ಇವುಗಳಿಗೆ ಪಾವತಿ ಬರೆಯುತ್ತಿದ್ದಂತೆ ನೆರೆಯೂರಿನವರು ಕರೆಯಲು ಬಂದರು. ಆ ಊರ ಕೆಲಸ ಮುಗಿಯುವುದರೊಳಗಾಗಿ ಮುಂದಿನ ಊರಿನವರು ಕರೆಯಲು ಬಂದರು. ಮೂರು ದಿನಗಳಲ್ಲಿ ಹತ್ತು ಹಳ್ಳಿಗಳ ಕೆಲಸ ಮುಗಿದು ಪುರಾಣಿಕರು ನಾಂದೇಡಕ್ಕೆ ಹಿಂದಿರುಗಿದರು. ಮರುದಿನವೇ ನಾಂದೇಡ ತಾಲೂಕಿನಲ್ಲಿ ಲೇವಿ ವಸೂಲಿಗೆ ಹೋಗಿ ದರ್ಪ ದೌರ್ಜನ್ಯಗಳ ಅತಿರೇಕವನ್ನು ತೋರಿದ್ದ ತಹಸೀಲ್ದಾರರೊಬ್ಬರ ಕೊಲೆಯಾಗಿ ಅವರ ಶವವೂ ನಾಂದೇಡಕ್ಕೆ ಹಿಂದಿರುಗಿತು!

ಇವರು ಕಲಬುರಗಿಯಲ್ಲಿದ್ದ ಕಾಲ ರಜಾಕಾರರ ಹಾವಳಿಯ ಕಾಲ, ಪೋಲೀಸ್ ಕಾರ್ಯಾಚರಣೆಯಾದ ಕಾಲ. ರಜಾಕಾರರ ದಬ್ಬಾಳಿಕೆಗೆ ಅಂಜಿ ಅನೇಕ ಹಿಂದೂಗಳು ಸೋಲ್ಲಾಪುರ ಮೊದಲಾದ ಗಡಿನಗರಗಳಿಗೆ ಓಡಿ ಹೋದರು. ಅನೇಕರು, ವಿಶೇಷವಾಗಿ ಮಹಿಳೆಯರು ತಮ್ಮಲ್ಲಿದ್ದ ಬೆಳ್ಳಿ ಬಂಗಾರಗಳನ್ನು ಪುರಾಣಿಕರ ಮನೆಯಲ್ಲಿಟ್ಟು, "ನಾವು ಹಿಂದಿರುಗಿ ಬಂದರೆ ನಮಗೆ ಕೊಡಿರಿ; ನಾವು ಬರದಂತಾದರೆ ಗುರುಗಳಿಗೆ ಅರ್ಪಿತವೆಂದು ಭಾವಿಸುವೆವು" ಎಂದು ಹೊರಟು ಹೋದರು. ಪೋಲೀಸ್ ಕಾರ್ಯಾಚರಣೆಯ

ತರುವಾಯ ಅವರು ಬರಲು ಎಲ್ಲರಿಗೂ ಅವರವರ ಒಡವೆಗಳನ್ನು ಒಪ್ಪಿಸಿ ದರು ಪುರಾಣಿಕರು. ಪೋಲೀಸ್ ಕಾರ್ಯಾಚರಣೆಯ ಪ್ರಾರಂಭದ ದಿನಗಳಲ್ಲಿ ಕಲಬುರಗಿಯ ಕೆಲವು ಮುಸಲ್ಮಾನರಿಗೆ ಭಯ ಹುಟ್ಟಿ ಅವರು ತಮ್ಮ ಬೆಳ್ಳಿ ಬಂಗಾರಗಳನ್ನು ಪುರಾಣಿಕರ ವಶಕ್ಕೆ ಒಪ್ಪಿಸಿದರು. ಕೆಲವರಂತೂ ತಮ್ಮ ಪ್ರಬುದ್ಧ ಪುತ್ರಿಯರನ್ನೂ, ತರುಣ ಪತ್ನಿಯರನ್ನೂ ಪುರಾಣಿಕರಿದ್ದ ಮನೆಗೆ ತಂದು ಬಿಟ್ಟರು. ಪುರಾಣಿಕರು ಬಾಗಿಲ ಬಳಿಯ ಕೋಣೆಯಲ್ಲಿ ತಾವಿದ್ದು ಪೂರ್ಣಮನೆಯನ್ನು ಅವರಿಗೆ ಬಿಟ್ಟು ಕೊಟ್ಟು ಒಂದು ವಾರದ ವರೆಗೆ ಅವರನ್ನು ಕಾಪಾಡಿದರು. ಪರಿಸ್ಥಿತಿ ಶಾಂತವಾದ ಮೇಲೆ ಅವರೆಲ್ಲ ತಮ್ಮ ತಮ್ಮ ಒಡವೆ ಗಳೊಂದಿಗೆ ತಮ್ಮ ತಮ್ಮ ಮನೆಗಳಿಗೆ ಪುರಾಣಿಕರನ್ನು ಹಾಡಿ ಹರಸುತ್ತ ಹೋದರು.

ಪೋಲೀಸ್ ಕಾರ್ಯಾಚರಣೆಯ ತರುಣದಲ್ಲಿ ಪುರಾಣಿಕರ ಮನೆಯ ಮುಂದೆ ಜನಗಳ ಜಾತ್ರೆ ನೆರೆಯುತೊಡಗಿತು. ದಿನಕ್ಕೆ ನೂರಾರು ಜನರಿಗೆ ಅರ್ಜಿ ಬರೆದು ಕೊಡುವುದೂ, ಕಳೆದುಕೊಂಡಿದ್ದ ಆಸ್ತಿಪಾಸ್ತಿಗಳ ಬಗ್ಗೆ ಪರಿ ಹಾರ ಪಡೆವ ಬಗೆ ಹೇಳಿಕೊಡುವುದೂ, ವಿವಿಧ ವಿಷಯಗಳಲ್ಲಿ ಮಾರ್ಗ ದರ್ಶನ ಮಾಡುವುದೂ ನಡೆಯಿತು. ಇವರ ಸ್ವಾಗತಾಧ್ಯಕ್ಷತೆಯಲ್ಲಿಯೇ ಅಖಿಲ ಕರ್ನಾಟಕ ಸಾಹಿತ್ಯ ಸಮ್ಮೇಳನವೂ, ಇವರ ಪ್ರೋತ್ಸಾಹದಿಂದಲೇ ಕರ್ನಾಟಕ ಏಕೀಕರಣ ಸಮ್ಮೇಳನವೂ ಕಲಬುರಗಿಯಲ್ಲಿ "ನಭೂತೋ ನ ಭವಿಷ್ಯತಿ" ಎಂಬ ರೀತಿಯಲ್ಲಿ ಜರುಗಿದುವು.

ಮೇಲಿನ ಅಧಿಕಾರ ದೊರೆತು ಪುರಾಣಿಕರು ಹೈದರಾಬಾದಿಗೆ ಹೋದರು. ಅಲ್ಲಿಯ ಕನ್ನಡ ಚಟುವಟಿಕೆಗಳಿಗೆ ಮಹಾಪೂರ ಬಂದಿತು. ಕರ್ನಾಟಕ ಸಾಹಿತ್ಯ ಮಂದಿರದ ಕಾರ್ಯದರ್ಶಿಯಾಗಿ, ಉಪಾಧ್ಯಕ್ಷರಾಗಿ, ವಿಶ್ವವಿದ್ಯಾಲಯದಿಂದ ಹಲವು ಕಾಲೇಜುಗಳ ವರೆಗೆ ಎಲ್ಲ ಕನ್ನಡ ಸಂಘಗಳ ಪ್ರೋತ್ಸಾಹಕರಾಗಿ, ಹೈದರಾಬಾದು ಪ್ರದೇಶ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಯಾಗಿ, ಅಧ್ಯಕ್ಷರಾಗಿ, ನಾಡಹಬ್ಬ ಸಮಿತಿಗಳ ಕಾರ್ಯದರ್ಶಿ ಯಾಗಿ, ನಗರ ಹಿಂದೀ ಪ್ರೇಮೀ ಮಂಡಳಿಯ ಉಪಾಧ್ಯಕ್ಷರಾಗಿ, ಪಂಚ ಭಾಷಾ ಕವಿ ಸಮ್ಮೇಳನಗಳ ಸೂತ್ರಧಾರರಾಗಿ ಹಲವು ಬಗೆಯಿಂದ ಕನ್ನಡದ ಪುನರುತ್ಥಾನಕ್ಕಾಗಿ ಪ್ರಯತ್ನಿಸಿದರು. ಇವರು ಹೈದರಾಬಾದಿನಲ್ಲಿದ್ದಾಗ



ಮಾಡಿದ ಬೆರಗುಗೊಳಿಸುವ ಕಾರ್ಯಗಳಲ್ಲಿ ಒಂದೆರಡನ್ನಾದರೂ ಇಲ್ಲಿ ವಿವರಿಸಲೇ ಬೇಕು. ಜಾಗೀರುಗಳ ವಿಲಯನವಾಯಿತು. ಜಾಗೀರು ಗ್ರಾಮಗಳಲ್ಲಿನ ಕಂದಾಯ ದರಗಳನ್ನು ದೀವಾನಿ (ಖಾಲಸಾ) ಗ್ರಾಮಗಳ ದರಗಳಿಗೆ ಇಳಿಸುವ ಮಹತ್ತರವಾದ ಕಾರ್ಯ ಇವರ ಮೇಲೆ ಬಿದ್ದಿತು. ಒಂದೇ ವಾರದಲ್ಲಿ ಈ ವಿಷಯಕ್ಕೆ ಎಲ್ಲ ಸೂಚನೆಗಳೂ ಸರಕಾರಕ್ಕೆ ತಲುಪಬೇಕೆಂಬ ಕಟ್ಟಪ್ಪಣೆ ಬಂದಿತು. ಪುರಾಣಿಕರು ನಾಲ್ಕು ಜನ ಶೀಘ್ರ ಲಿಪಿಕಾರರ ಸಹಾಯದಿಂದ ಮೂರುದಿನ ಹಗಲೂ ಇರುಳೂ ಕುಳಿತು ಸರಕಾರಕ್ಕೆ ಸಾವಿರಾರು ಹಳ್ಳಿಗಳ ದರ ವಿಮರ್ಶೆಯನ್ನೊಳಗೊಂಡ ೧೦೩ ಸಲಹೆಗಳನ್ನು ಕಳಿಸಿದರು. ಅವುಗಳಿಗೆ ಮಂಜೂರಿ ನೀಡಲು ಮೂರು ವರ್ಷ ಹಿಡಿಯಿತು!

ಇವರು ಸ್ಥಾನಿಕ ಸ್ವರಾಜ್ಯ ಮಂತ್ರಿಗಳಾಗಿದ್ದ ಮಾನ್ಯ ಶ್ರೀ ಅಣ್ಣಾರಾವ್ ಗಣಮುಖಿಯವರಿಗೆ ಆಪ್ತಕಾರ್ಯದರ್ಶಿಗಳಾಗಿ ನೇಮಕಗೊಂಡರು. ಆಗ ಅದೊಂದು ಅಲಕ್ಷಿತ ಇಲಾಖೆ. ಶ್ರೀ ಅಣ್ಣಾರಾಯರ ಜನ ಕಲ್ಯಾಣರತಿ ಹಾಗೂ ಶ್ರೀ ಪುರಾಣಿಕರ ಕಾರ್ಯಪ್ರತಿಭೆಗಳಿಂದ ಹಳ್ಳಿ ಹಳ್ಳಿಗೆ ಹೊಸ ಕಾರ್ಯಗಳು ಪ್ರಾರಂಭವಾದುವು. ಈ ಇಲಾಖೆಯತ್ತ ಎಲ್ಲರ ಗಮನ ಹರಿಯುವಂತಾಯಿತು. ಹೈದರಾಬಾದು ಕರ್ನಾಟಕ ಪ್ರದೇಶದಲ್ಲಿ ಯಂತೂ ಶಾಲಾಭವನಗಳು, ಕುಡಿಯುವ ನೀರಿನ ಯೋಜನೆಗಳ, ಗ್ರಾಮಾಂತರ ರಸ್ತೆಗಳ, ನಗರಾಭಿವೃದ್ಧಿ ಯೋಜನೆಗಳ ಅಪೂರ್ವ ಕಾರ್ಯ ಕ್ರಮಗಳು ಪ್ರಾರಂಭವಾದುವು.

ಆಮೇಲೆ ಇವರು ಕೃಷಿ, ಯೋಜನಾ ಹಾಗೂ ಆಹಾರ ಇಲಾಖೆಯ ಮಂತ್ರಿಗಳಾಗಿದ್ದ ಡಾ. ಚೆನ್ನಾರೆಡ್ಡಿಯವರ ಆಪ್ತ ಕಾರ್ಯದರ್ಶಿಗಳಾದರು. ಆಗಂತೂ ಹಗಲಿರುಳುಗಳು ಸಾಲದಾದುವು. ಇವರಿಬ್ಬರ ಕೆಲಸಕ್ಕೆ ಸಮಾಜ ವಿಕಾಸ ಯೋಜನಾ ಕಾರ್ಯಗಳಿಗೆ, ಕೃಷಿ ಸುಧಾರಣಾ ಕಾರ್ಯಗಳಿಗೆ, ಅಧಿಕ ಆಹಾರೋತ್ಪಾದನಾ ಕಾರ್ಯಗಳಿಗೆ ಉಕ್ಕು ಬಂದಿತು. ಶ್ರೀ ಪುರಾಣಿಕರ ಕಾರ್ಯಶಕ್ತಿಗೆ, ಬಹು ವಿಷಯ ತಜ್ಞತೆಗೆ ನಿದರ್ಶನವಾದ ಒಂದು ಘಟನೆ ನಡೆಯಿತು– ರಾಜ್ಯ ಪುನರ್ರಚನಾ ಆಯೋಗಕ್ಕೆ ಪ್ರತ್ಯೇಕ ತೆಲಂಗಾಣಾ ಬೇಡಿಕೆಯನ್ನೊಳಗೊಂಡ ಒಂದು ಮನವಿಯನ್ನು ಸಲ್ಲಿಸಬೇಕೆಂದು ಡಾ. ಚೆನ್ನಾರೆಡ್ಡಿಯವರೂ ಅವರ ಸಹೋದ್ಯೋಗಿಗಳೂ ತಡವಾಗಿ ನಿರ್ಣಯಿಸಿ–

ದರು. ಸಲ್ಲಿಸುವ ಅವಧಿ ಒಂದು ವಾರ ಮಾತ್ರ ಉಳಿದಿದ್ದಿತು. ಮನವಿಯ ಕರಡನ್ನು ಸಿದ್ಧಪಡಿಸುವ ಹೊಣೆ ಶ್ರೀ ಪುರಾಣಿಕರ ಮೇಲೆ ಬಿದ್ದಿತು. ಅವರಿಗೆ ಕೊಟ್ಟ ಅವಧಿ ಎರಡು ದಿನಗಳು ಮಾತ್ರ! ಶ್ರೀ ಪುರಾಣಿಕರು ಮತ್ತೆ ನಾಲ್ಕು ಜನ ಶೀಘ್ರ ಲಿಪಿಕಾರರನ್ನು ಕರೆದು ಮನವಿ ಬರೆಸಲು ಪ್ರಾರಂಭಿಸಿದರು. ಬೇಕಾದ ಮಾಹಿತಿಯನ್ನು ಆಯಾ ಇಲಾಖೆಯಿಂದ ಟೆಲಿಫೋನಿನ ಮುಖಾಂತರ ತಿಳಿದುಕೊಳ್ಳುವುದು. ಶೀಘ್ರ ಲಿಪಿಕಾರರಿಗೆ ಬರೆಸುವುದು. ಎರಡು ದಿನಗಳ ವರೆಗೆ ಪುರಾಣಿಕರು ಕುಳಿತ ಖುರ್ಚಿ ಬಿಟ್ಟು ಮೇಲೇಳಲಿಲ್ಲ. ಊಟ ಅಲ್ಲಿಯೇ; ನಿದ್ರೆ, ವಿಶ್ರಾಂತಿ ವರ್ಜ್ಯ. ಮನವಿ ಅಚ್ಚಾಗಿ ಬಂದಾಗ ಒಂದು ನೂರು ಪುಟಗಳ ಪುಸ್ತಕವೇ ಆಯಿತು. ಅದು ಎಷ್ಟು ಪರಿಣಾಮಕಾರಿಯಾಗಿದ್ದಿತೆಂದರೆ ರಾಜ್ಯ ಪುನರ್ರಚನಾ ಆಯೋಗದವರು ಪ್ರತ್ಯೇಕ ತೆಲಂಗಾಣಾದ ನಿರ್ಮಾಣವನ್ನು ಸಮರ್ಥಿಸಿದರು. ಬೇರೆ ಕಾರಣಗಳಿಂದ ಆಗ ಪ್ರತ್ಯೇಕ ತೆಲಂಗಾಣಾ ರಾಜ್ಯ ಸ್ಥಾಪಿತವಾಗಲಿಲ್ಲ. ಆದರೆ ಅದರ ಆಂದೋಲನ ಇಂದಿಗೂ ನೆಡೆದಿದೆ.

ಆಮೇಲೆ ಪುರಾಣಿಕರು ತಾಂಡೂರಿನ ಡೆಪ್ಯುಟಿ ಕಲೆಕ್ಟರರಾದರು. ಅನೇಕ ಹಳ್ಳಿಗಳಲ್ಲಿ ಒಮ್ಮೆಗೇ ಅಭಿವೃದ್ಧಿ ಕಾರ್ಯಗಳು ಆರಂಭವಾದುವು. ತಾಂಡೂರಿನಲ್ಲಿರುವಾಗಲೇ ಯಾದಗಿರಿ ಸಬ್ ಡಿವ್ಹಿಜನ್ನಿನ ಅಡಿಷನಲ್ ಚಾರ್ಜ ಇವರ ಪಾಲಿಗೆ ಬಂದಿದ್ದಿತು. ಯಾದಗಿರಿಯ ರಾಷ್ಟ್ರೀಯ ವಿಸ್ತರಣಾ ಯೋಜನೆಯು ಮಲಗಿ ಬಿಟ್ಟಿದ್ದಿತು. ಅವರ ಬಗ್ಗೆ ಸರಕಾರಕ್ಕೆ ಎಷ್ಟು ನಿರಾಶೆಯಾಗಿದ್ದಿತೆಂದರೆ ಆ ಯೋಜನೆಯನ್ನು ಬೇರೆ ತಾಲೂಕಿಗೆ ವರ್ಗಾಯಿಸುವ ವಿಚಾರ ಬಂದಿದ್ದಿತು ಸರಕಾರಕ್ಕೆ. ಶ್ರೀ ಪುರಾಣಿಕರ ಆಗಮನದಿಂದ ಆ ಯೋಜನೆಯಲ್ಲಿ ಪ್ರಾಣ ಸಂಚಾರವಾಯಿತು. ಒಂದೊಂದಾಗಿ ಕಾರ್ಯಗಳು ಪ್ರಾರಂಭವಾಗತೊಡಗಿದುವು. ಇದನ್ನು ಕಂಡು ಸರಕಾರವು ಆರು ತಿಂಗಳುಗಳಲ್ಲಿಯೇ ಇವರನ್ನು ತಾಂಡೂರಿನಿಂದ ಯಾದಗಿರಿಗೆ ವರ್ಗ ಮಾಡಿತು. ಅಷ್ಟರಲ್ಲಿಯೇ ಇವರು ಸೇಡಂ ಹಾಯ್‌ಸ್ಕೂಲ್ ಕಟ್ಟಡದ ಬಗ್ಗೆ ಮಾಡಿದ ಒಂದು ನವೀನ ಪ್ರಯೋಗವನ್ನು ಇಲ್ಲಿ ನೆನೆಯಬೇಕು. ಸ್ಥಳೀಯ ಕಾಣಿಕೆಯಿಲ್ಲದೆ ಕಟ್ಟಡ ಮಂಜೂರಾಗುವಂತಿರಲಿಲ್ಲ; ಸ್ಥಳೀಯ ಕಾಣಿಕೆ ಸಂಗ್ರಹವಾಗುವಂತಿರಲಿಲ್ಲ. ಶ್ರೀ ಪುರಾಣಿಕರು ಹೊಸ ಹಾದಿಯನ್ನೇ ಹುಡುಕಿದರು. ಸೇಡಂ ಕೊಡಂಗಲ್ ರಸ್ತೆಯಲ್ಲಿ ವಿಲೀನವಾಗಿದ್ದ ಭೂಮಿಗಳಿಗೆ ಸರ



ಕಾರವುಪರಿಹಾರ ಧನವನ್ನು ಕೊಟ್ಟಿರಲಿಲ್ಲ. ಬಹಳ ಹಿಂದೆ ಆಗಿದ್ದ ರಸ್ತೆ ಅದು. ಜನರು ಪರಿಹಾರದ. ವಿಷಯವನ್ನೇ ಮರೆತು ಬಿಟ್ಟಿದ್ದರು ಪುರಾಣಿಕರು ಯಾರಿಗೂ ಗೊತ್ತಾಗದಂತೆ ಪರಿಹಾರ ಧನದ ಮಂಜೂರಿ ದೊರಕಿಸಿದರು. ಅರ್ಧಭಾಗ ಹೈಸ್ಕೂಲ ಕಟ್ಟಡಕ್ಕೆ ಕೇಳಿದರು. ಎಲ್ಲರೂ ಸಂತೋಷದಿಂದ ಕೊಟ್ಟರು. ಹಾಯ್‌ಸ್ಕೂಲ ಕಟ್ಟಡ ಎದ್ದು ನಿಂತಿತು.

ಶ್ರೀ ಪುರಾಣಿಕರು ಯಾದಗಿರಿಯ ಡೆಪ್ಯುಟಿ ಕಲೆಕ್ಟರರಾಗಿ ಮೂರೂವರೆ ವರ್ಷ ಕೆಲಸ ಮಾಡಿದರು. ಅಲ್ಲಿ ಯಾವ ಡೆಪ್ಯುಟಿ ಕಲೆಕ್ಟರರೂ ಒಂದು ವರ್ಷಕ್ಕೆ ಹೆಚ್ಚು ಉಳಿದಿರಲಿಲ್ಲ, ಅಷ್ಟು ತೊಡಕಿನ ಸ್ಥಳವಾಗಿದ್ದಿತಾಗ. ಶ್ರೀ ಪುರಾಣಿಕರ ಗಾರುಡಿಯಿಂದ ಎಲ್ಲರೂ ಒಂದಾಗಿ ತಾಲ್ಲೂಕಿನ, ಉಪ ವಿಭಾಗದ ಅಭಿವೃದ್ಧಿಗಾಗಿ ದುಡಿಯತೊಡಗಿದರು. ಪುರ ಪ್ರಮುಖರು ನಗರ ನೈರ್ಮಲ್ಯ, ಕೆಸರಿನಲ್ಲಿಳಿದು ಜಾಪಾನೀ ಪದ್ಧತಿಯಂತೆ ಬತ್ತದ ನಾಟಿ ಹಾಕುವುದು, ಇತ್ಯಾದಿ ಕಾರ್ಯಗಳಲ್ಲಿ ಪ್ರತ್ಯಕ್ಷ ಭಾಗವಹಿಸತೊಡಗಿದರು. ಒಂದು ವರ್ಷದೊಳಗಾಗಿ ಬೇರೆ ಕಡೆಗೆ ವರ್ಗಾಯಿಸಬೇಕೆಂದಿದ್ದ ರಾಷ್ಟ್ರೀಯ ವಿಸ್ತರಣಾ ಯೋಜನೆಯು ಮೇಲ್ಪಡತಿ ಪಡೆದು ಸಮಾಜ ವಿಕಾಸ ಯೋಜನೆಯಾಗಿ ಪರಿವರ್ತಿತವಾಯಿತು. ಅಲ್ಲದೆ ಶಹಾಪೂರ ತಾಲೂಕಿಗೊಂದು, ಚಿಂಚೋಳಿ ತಾಲೂಕಿಗೊಂದು ರಾಷ್ಟ್ರೀಯ ವಿಸ್ತರಣಾ ಯೋಜನೆಗಳು ಮಂಜೂರಾದುವು.

ಈ ಎಲ್ಲ ಯೋಜನೆಗಳೂ ರಾಜ್ಯದಲ್ಲೆಲ್ಲ ಹೆಸರಾಗುವಂತೆ ಶ್ರೀ ಪುರಾಣಿಕರು ಹಸಿವೆ ನೀರಡಿಕೆಗಳ ಪರಿವೆಯಿಲ್ಲದೆ ದುಡಿದರು. ಅವರು ಅನುಸರಿಸಿದ ಅಪೂರ್ವ ಕಾರ್ಯ ವಿಧಾನಗಳಲ್ಲಿ ಕೆಲವನ್ನಾದರೂ ಮುಂಬರುವ ಆಡಳಿತಗಾರರ ಉಪಯೋಗಕ್ಕಾಗಿಯಾದರೂ ಇಲ್ಲಿ ನೆನೆಯಬೇಕು.

ಒಂದು ಹಳ್ಳಿ. ಅಲ್ಲಿಯ ಗೌಡ ಗುಂಡಾಗಿರಿಗೆ ಹೆಸರಾದವ. ಅಲ್ಲಿ ಯಾವ ಕಾರ್ಯವೂ ಪ್ರಾರಂಭವಾಗಿರಲಿಲ್ಲ. ಆಗುವಂತೆಯೂ ಇರಲಿಲ್ಲ. ಶ್ರೀ ಪುರಾಣಿಕರು ಒಂದು ಉಪಾಯ ಹೂಡಿದರು. ಸಮಾಜ ವಿಕಾಸ ಯೋಜನೆಗಳ ಡೈರೆಕ್ಟರರನ್ನು ಆ ಊರಿನಾಚೆ ಇನ್ನೊಂದು ಊರಿನಲ್ಲಿ ನಿರ್ಮಾಣವಾಗಿದ್ದ ಶಾಲಾಭವನದ ಉದ್ಘಾಟನೆಗಾಗಿ ಕರೆಸಿದರು. ಆ ಊರಿಗೆ ಈ ಊರಿನ ಮಧ್ಯದಲ್ಲಿಯೇ ಹಾಯ್ದು ಹೋಗಬೇಕು. ಈ ಊರಿನ ಗೌಡರಿಗೆ

ಹೇಳಿ ಕಳಿಸಿದರು. ಡೈರೆಕ್ಟರರು ನಿಮ್ಮೂರಿಗೆ ಬಂದಾಗ ಹಾರ ಹಾಕೆಂದು. ಗೌಡ ಉಬ್ಬಿದ. ತಳಿರು ತೋರಣ ಕಟ್ಟಿಸಿ, ಮೇಜು ಕುರ್ಚಿಗಳನ್ನು ಇಡಿಸಿ ಹಾರ ಹಿಡಿದು ಅಣಿಯಾಗಿ ನಿಂತಿದ್ದ. ದಾರಿಯಲ್ಲಿ ಪುರಾಣಿಕರು ಡೈರೆಕ್ಟರರಿಗೆ ಕಿವಿ ಮಾತು ಹೇಳಿದರು: ಈ ಗೌಡ ಹಾರ ಹಾಕಲು ಬಂದರೆ ಸ್ವೀಕರಿಸಬೇಡಿರಿ; ನಿಮ್ಮ ಊರಿನಲ್ಲಿ ಯಾವ ಅಭಿವೃದ್ಧಿ ಕಾರ್ಯವೂ ಆಗಿಲ್ಲವಾಗಿ ನಿಮ್ಮ ಹಾರ ನನಗೆ ಬೇಡವೆಂದು ನಿರಾಕರಿಸಿರಿ. ಡೈರೆಕ್ಟರರು ಹಾಗೆಯೇ ಮಾಡಿದರು. ನೆರೆದ ನೂರಾರು ಜನರೆದುರಿಗೆ ಗೌಡ ತಲೆ ತಗ್ಗಿಸುವಂತಾಯಿತು. ಮರುದಿನವೇ ಗೌಡ ಪುರಾಣಿಕರ ಬಳಿಗೆ ಓಡಿ ಬಂದ. ತಮ್ಮೂರಿನಲ್ಲಿಯೂ ಕೆಲಸ ಪ್ರಾರಂಭಿಸಲು ಕೇಳಿಕೊಂಡ. ಅಂದೇ ಪುರಾಣಿಕರು ಆ ಊರಿಗೆ ಹೋಗಿ ಊರವರ ಪಾಲು ಕೂಡಿಸಿ ಶಾಲಾಭವನವನ್ನು ಸ್ಥಳದಲ್ಲಿಯೇ ಮಂಜೂರು ಮಾಡಿದರು. ಗೌಡ ಸ್ವತಃ ನಿಂತು ಬಹಳ ಚೆನ್ನಾಗಿ ಅದನ್ನು ಕಟ್ಟಿಸಿದ. ಆಮೇಲೆ ಮತ್ತೊಂದು ಕಾರ್ಯ ಆ ಊರಿಗೆ ಮಂಜೂರಾಯಿತು. ಅದೂ ಪೂರ್ಣವಾಯಿತು. ಆ ಮೇಲೆ ಮತ್ತೊಂದು ಹೀಗೆ ಅದು ಮಾದರಿ ಗ್ರಾಮವಾಯಿತು.

ಇನ್ನೊಂದು ಅಂಥದೇ ಹಳ್ಳಿ. ಅಲ್ಲಿಯ ಗೌಡನೂ ಅಂಥವನೇ. ಅವನಿಂದಲೇ ಅಡ್ಡಿ ಆ ಊರ ಕಾರ್ಯಗಳಿಗೆ. ಇಲ್ಲಿ ಪುರಾಣಿಕರು ಇನ್ನೊಂದು ಹೊಸ ಹಂಚಿಕೆ ಹೂಡಿದರು. ಆ ಊರ ಪಕ್ಕದ ಗ್ರಾಮದಲ್ಲಿ ಒಮ್ಮೆಗೇ ಎರಡು ಮೂರು ಕೆಲಸ ಪ್ರಾರಂಭಿಸಿದರು. ಗೌಡನು ಈ ಊರಿಗೆ ಬಂದಾಗಲೆಲ್ಲ ಅವನಿಗೆ ಈ ಕೆಲಸಗಳನ್ನು ತೋರಿಸಿ ನಿಮ್ಮೂರು ಹಿಂದುಳಿದ ಊರೆಂದು ಹಂಗಿಸುವಂತೆ ಪುರಾಣಿಕರು ಪ್ರೋತ್ಸಾಹಿಸಿದರು. ಗೌಡನ ಗರ್ವಭಂಗವಾಗಲು ಅವನೂ ಓಡಿ ಬಂದ. ತನ್ನೂರಿನಲ್ಲಿಯೂ ಅಭಿವೃದ್ಧಿ ಕಾರ್ಯಗಳನ್ನು ಕೈಕೊಂಡು ಕೃತಾರ್ಥನಾದ.

ಇನ್ನೊಂದು ಊರು. ಊರವರು ಮೂರು ಸಾವಿರ ರೂಪಾಯಿ ಸಂಗ್ರಹಿಸಬೇಕಾಗಿದ್ದಿತು. ಶಾಲಾ ಕಟ್ಟಡಕ್ಕೆ ತಮ್ಮ ಪಾಲಾಗಿ ಅವರವರ ಯೋಗ್ಯತೆಯಂತೆ ಪಟ್ಟಿಮಾಡಲು ಗೌಡನ ಪಾಲಿಗೆ ಒಂದು ಸಾವಿರ ರೂಪಾಯಿ ಬಂದಿತು. ಗೌಡ ಕೊಡಲಿಲ್ಲ. ಗೌಡನು ಕೊಡುವವರೆಗೆ ನಾವೂ ಕೊಡುವದಿಲ್ಲವೆಂದು ಊರವರು ಹಟ ಹಿಡಿದರು. ಪುರಾಣಿಕರು ಆ ಊರಿಗೆ



ಹೋದರು. ಗೌಡನು ಮನೆಗೆ ಊಟಕ್ಕೆ ಕರೆಯುವಂತೆ ಸಂಚು ಮಾಡಿದರು. ಗೌಡನು ಉಬ್ಬಿ ಊಟಕ್ಕೆ ಕರೆದ. ಹೋದರು. ಊಟಕ್ಕೆ ಬಡಿಸಿ ಆಯಿತು. ಪುರಾಣಿಕರು ಸುಮ್ಮನೆ ಕುಳಿತರು. ಗೌಡ ಊಟ ಪ್ರಾರಂಭಿಸಲು ಕೇಳಿಕೊಂಡ. ಪುರಾಣಿಕರು ದಕ್ಷಿಣೆಯಿಲ್ಲದೆ ಜಂಗಮರು ಊಟ ಮಾಡುವುದಿಲ್ಲವೆಂದು ಹೇಳಿದರು; ಊರ ಶಾಲೆಗಾಗಿ ಒಂದು ಸಾವಿರ ರೂಪಾಯಿ ದಕ್ಷಿಣೆ ಕೇಳಿದರು. ಗೌಡ ಉಪಾಯವಿಲ್ಲದೆ ಸಾವಿರ ರೂಪಾಯಿ ತಂದಿತ್ತ; ಊರವರೆಲ್ಲ ಅಂದೇ ಎರಡು ಸಾವಿರ ಕೂಡಿಸಿ ಕೊಟ್ಟರು. ಶಾಲೆಯ ಕಟ್ಟಡದ ಕೆಲಸ ಪ್ರಾರಂಭವಾಯಿತು.

ಇನ್ನೊಂದು ಊರು. ಆ ಊರ ಗೌಡ ನಾನು ಬದುಕಿರುವವರೆಗೆ ನಮ್ಮೂರಿಗೆ ಶಾಲೆಯನ್ನು ಬರಗೊಡುವುದಿಲ್ಲವೆಂದು ಪ್ರತಿಜ್ಞೆ ಮಾಡಿದ್ದ. ಕಾರಣ? ಶಾಲೆ ಬಂದರೆ ಎಲ್ಲರ ಮಕ್ಕಳೂ ಕಲಿತು ಜಾಣರಾಗುತ್ತಾರೆ. ಆ ಮೇಲೆ ತನಗೆ ವಿಧೇಯವಾಗಿ ಉಳಿಯುವುದಿಲ್ಲ; ಇದು ಅವನ ವಾದ. ಪುರಾಣಿಕರು ಯಾರಿಗೂ ಹೇಳದೆ ಆ ಊರಿಗೆ ಹೋದರು. ತಾವೇ ಗೌಡನ ಮನೆಗೆ ಹೋದರು. ಗೌಡನಿಗೆ ಆಶ್ಚರ್ಯ. ಪುರಾಣಿಕರು ಶಾಲೆಗೆ ಗೌಡನು ತೋರುತ್ತಿರುವ ವಿರೋಧ ಅವನಿಗೂ, ಅವನ ಮಕ್ಕಳು ಮೊಮ್ಮಕ್ಕಳಿಗೂ ಎಷ್ಟು ಗಂಡಾಂತರದ್ದೆಂದು ತಿಳಿಸಿ ಹೇಳಿದರು. “ಗೌಡರೇ, ನಿಮ್ಮೂರಿನಲ್ಲಿ ಶಾಲೆ ಸ್ಥಾಪಿತವಾಗದಿದ್ದರೆ ಕಲಿಸುವ ಇಚ್ಛೆಯುಳ್ಳ ತಂದೆ ತಾಯಿಗಳು ತಮ್ಮ ಮಕ್ಕಳನ್ನು ಶಾಲೆಗೆ ಕಳಿಸದೆ ಬಿಡುವರೇ? ನೆರೆಯೂರಿನ ಶಾಲೆಗಾದರೂ ಕಳಿಸುತ್ತಾರೆ. ಆ ಮಕ್ಕಳು ನಿಮ್ಮನ್ನು ಶಪಿಸುತ್ತ ಬೇರೂರಿನ ಶಾಲೆಗೆ ನಡೆದುಕೊಂಡು ಹೋಗುತ್ತಾರೆ. ಮುಂದೆ ನಿಮ್ಮ ಮಕ್ಕಳು ಮೊಮ್ಮಕ್ಕಳ ವೈರಿಗಳಾಗುತ್ತಾರೆ. ಊರಿಗೆ ಊರನ್ನೇ ವೈರಿಯನ್ನಾಗಿ ಮಾಡಿಕೊಳ್ಳಬೇಡಿರಿ....” ಪುರಾಣಿಕರ ಆತ್ಮೀಯತೆಯ, ಅಂತಃಕರಣದ ಮಾತುಗಳು ನಾಟಿದುವು. ಗೌಡನ ಕಣ್ಣು ತೆರೆದುವು. ಒಳಗೆ ಹೋಗಿ ಐದು ಸಾವಿರ ರೂಪಾಯಿಗಳ ಹಮ್ಮಿಣಿ ತಂದು ಪುರಾಣಿಕರಿಗೆ ಒಪ್ಪಿಸಿ, “ಈ ಹಣದಿಂದ ನಮ್ಮೂರಿನ ಶಾಲೆ ಕಟ್ಟಿಸಿ ಕೊಡಿರಿ; ಊರವರಿಂದ ಒಂದು ಪೈಯನ್ನೂ ಕೇಳಬೇಡಿರಿ; ಎಲ್ಲರ ಪಾಲು ನಾನೇ ಕೊಟ್ಟಿದ್ದೇನೆ!”

ಹೀಗೆ ಒಂದಲ್ಲ, ಎರಡಲ್ಲ–ಹಲವು ಹೊಸ ಹೊಸ ಹಂಚಿಕೆಗಳಿಂದ,

ಉಪಾಯಗಳಿಂದ, ತಂತ್ರಗಳಿಂದ, ಮಧುರ ಮಾತುಗಾರಿಕೆಯಿಂದ ಪುರಾಣಿಕರು ತಮ್ಮ ಅಧಿಕಾರ ವ್ಯಾಪ್ತಿಯ ಐದೂ ತಾಲೂಕುಗಳ ನೂರಾರು ಹಳ್ಳಿಗಳಲ್ಲಿ ಎಂದಿಗೂ ಮರೆಯಲಾಗದ ಅಭಿವೃದ್ಧಿ ಕಾರ್ಯಗಳನ್ನು ಮಾಡಿದರು. ಎಂದೋ ಒಡೆದು ಹೋಗಿದ್ದ ನೂರಾರು ಕೆರೆಗಳು ಮತ್ತೆ ಕಟ್ಟಲ್ಪಟ್ಟವು. ಹೊಸ ಕೆರೆಗಳು, ರಸ್ತೆಗಳು, ನೂರಾರು ಶಾಲಾಭವನಗಳು ಸಾವಿರಾರು ಎಕರೆಗಳಲ್ಲಿ ಸಮಪಾತಳಿ ಒಡ್ಡುಗಳು, ಚಿಕ್ಕ ಪುಟ್ಟ ಅಣೆಕಟ್ಟುಗಳ ನಿರ್ಮಾಣವಾಯಿತು. ನೂರಾರು ಹರಿಜನ ಕುಟುಂಬಗಳಿಗೆ ಮನೆ ಕಟ್ಟಿಸಿ ಕೊಟ್ಟರು. ಅವರು ವರ್ಗವಾಗಿ ಬೆಂಗಳೂರಿಗೆ ಹೊರಡಲು, ಬಡವರು ಕಣ್ಣೀರು ಸುರಿಸಿದರು. ಬಲ್ಲಿದರು ಬಹು ಸಂಖ್ಯೆಯಲ್ಲಿ ನಿಲ್ದಾಣಕ್ಕೆ ಬಂದು ಬೀಳ್ಕೊಟ್ಟರು. ಯಾದಗಿರಿಯ ನಿಲ್ದಾಣದಲ್ಲಿ ಹಿಂದೆ ಎಂದೂ ಅಷ್ಟು ಜನ ನೆರೆದಿರಲಿಲ್ಲವಂತೆ.

ಪುರಾಣಿಕರು ಬೆಂಗಳೂರಿಗೆ ಹೋದುದು ವಿದ್ಯಾ ಇಲಾಖೆಯ ಅಂಡರ್ ಸೆಕ್ರೆಟರಿಗಳಾಗಿ; ಮುಂದೆ ಅದೇ ಇಲಾಖೆಯಲ್ಲಿ ಡೆಪ್ಯುಟಿ ಸೆಕ್ರೆಟರಿಯಾಗಿ ಮೂರು ವರ್ಷ ಮುಂದುವರಿದರು. ಮತ್ತೆ ಮಾನ್ಯ ಅಣ್ಣಾರಾವ್ ಗಣಮುಖಿಯವರ ಮತ್ತು ಪುರಾಣಿಕರ ಜೋಡಿ ಕೂಡಿತು. ಈ ಅವಧಿಯಲ್ಲಿ ರಾಜ್ಯದ ವಿದ್ಯಾ ಇಲಾಖೆಯಲ್ಲಿ ಆದಷ್ಟು ಶಾಶ್ವತ ಕಾರ್ಯಗಳು ಹಿಂದೆಂದೂ ಆಗಿರಲಿಲ್ಲ; ಮುಂದೆಂದು ಆಗುವುವೋ ಶಿವನೇ ಬಲ್ಲ. ಎಷ್ಟು ಹೊಸ ಶಾಲೆಗಳು, ಹೊಸ ಹಾಯ್‌ಸ್ಕೂಲುಗಳು, ಹೊಸ ಕಾಲೇಜುಗಳು, ಹೊಸ ಹಾಸ್ಟೇಲುಗಳು, ಈ ಕಾಲದಲ್ಲಿ ಪ್ರಾರಂಭವಾದುವೆಂಬುದನ್ನು ಹೇಳುವುದು ಕಷ್ಟ. ಒಟ್ಟಿನಲ್ಲಿ ಇದು ವಿದ್ಯಾ ಇಲಾಖೆಯ ಸುವರ್ಣಯುಗವೆಂದೇ ಹೇಳಬೇಕು.

ಮುಂದೆ ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಯ ಮುಖ್ಯಾಧಿಕಾರಿತ್ವ. ಅದು ವರೆಗೆ ಅನೇಕರಿಗೆ ಗೊತ್ತಿಲ್ಲದಿದ್ದ ಆ ಇಲಾಖೆ ಒಮ್ಮೆಗೇ ಎಲ್ಲರ ಗಮನಕ್ಕೆ ಬರುವಂತಾಯಿತು ಪುರಾಣಿಕರ ಕರ್ಣಧಾರತ್ವದಿಂದ. ಮೈಸೂರಿನ ದಸರಾ ಪ್ರದರ್ಶನದಲ್ಲಿ ಮೊದಲಬಾರಿಗೆ ವಾರ್ತಾ ಇಲಾಖೆಗೆ ಸುವರ್ಣ ಪದಕ ಪ್ರಾಪ್ತವಾಯಿತು; ಇವರ ನೇತೃತ್ವದಲ್ಲಿ ಹೊರಟ ಮೂರು 'ದಸರಾ ದರ್ಶಿನಿ'ಗಳು ಎಂದಿಗೂ ಹಸಿರಾಗಿ ಉಳಿಯುವಂಥವು; ಪ್ರಪ್ರಥಮವಾಗಿ ಇವರು ಸಂಘಟಿಸಿದ ದಕ್ಷಿಣ ಭಾರತದ ಪ್ರಸಿದ್ಧ ಅಧಿಕಾರಿಗಳ ಶಿಕ್ಷಣ ಶಿಬಿರವು ಅವಿಸ್ಮರಣೀಯವಾದುದು; ಚೀನದ ದುರಾಕ್ರಮಣ ನಡೆದಾಗ



ವೀರಯೋಧರಂತೆ ಇವರು ಮಾಡಿದ ಪ್ರಚಾರ ಕಾರ್ಯ ಅದ್ಭುತವಾದುದು. ಆಗ ಇವರು ಸಂಘಟಿಸಿದ ಬೆಂಗಳೂರಿನ ಸನ್ನದ್ಧ ಭಾರತ ಪ್ರದರ್ಶನವು ಇಂದಿಗೂ ನೆನೆದರೆ ರೋಮಾಂಚನವನ್ನು ಹುಟ್ಟಿಸುವಂತಹದು. ಇನ್ನು ಪ್ರವಾಸೋದ್ಯಮ ರಂಗದಲ್ಲಿ ಇವರು ಮಾಡಿದ ಕಾರ್ಯ ಘನವಾದುದು. ನಂದಿ ಬೆಟ್ಟದ ಅಭಿವೃದ್ಧಿ ಯೋಜನೆ, ಹಾಸನ, ಜೋಗ, ಗೋಕಾಕ ಫಾಲ್ಸ್, ಕಲಬುರಗಿ, ಬೀದರ, ಕಲ್ಯಾಣ, ವಿಜಾಪುರ, ಬಾದಾಮಿ, ಐಹೊಳೆ, ವಾಣೀವಿಲಾಸ ಸಾಗರ, ಕೆ. ಆರ್. ಸಾಗರ, ಮಂಗಳೂರು, ಹಂಪಿಗಳಲ್ಲಿ ಟೂರಿಸ್ಟ್ ಭವನಗಳ ಕಾರ್ಯ ಪ್ರಾರಂಭವಾದುದು ಇವರ ದಿಟ್ಟ ನಿಲವಿನಿಂದ. ಹಾಸನದ ವಿಮಾನ ನಿಲ್ದಾಣ, ವಿಜಾಪುರದ ವಿಮಾನ ನಿಲ್ದಾಣಗಳ ಯೋಜನೆಗಳು ರೂಪಿತವಾದುವು ಇವರ ಸಾಹಸದಿಂದ.

ಗೋಲ್ಡ್ ಕಂಟ್ರೋಲ ಆರ್ಡರು ಬಂದಿತು. ಸಹಸ್ರಾವಧಿ ಅಕ್ಕಸಾಲಿಗರು ನಿರುದ್ಯೋಗಿಗಳಾದರು. ವಿಧಾನ ಸೌಧದ ತುಂಬ ಅವರೇ. ಸರಕಾರ ಪುರಾಣಿಕರನ್ನು ಗೋಲ್ಡ್ ಕಂಟ್ರೋಲ್ ಆಫೀಸರರನ್ನಾಗಿ ನಿಯಮಿಸಿತು ಮೂರು ತಿಂಗಳುಗಳಲ್ಲಿ ಪುರಾಣಿಕರು ಸಾವಿರಾರು ವಿಶ್ವಕರ್ಮ ಸಮಾಜೀಯರಿಗೆ ಭೂಮಿ ಕೊಡಿಸಿದರು, ಕಾರಖಾನೆಗಳಲ್ಲಿ ಕೆಲಸ ಕೊಡಿಸಿದರು, ಸಾಲ ಕೊಡಿಸಿದರು, ಉದ್ಯೋಗ ಕೊಡಿಸಿದರು ಆಮೇಲೆ ಹಣಕಾಸಿನ ಇಲಾಖೆಯಲ್ಲಿ ವಿಲೇವಾರಿಯ ಹೊಸ ದಾಖಲೆ. ಆಮೇಲೆ ಕೊಡಗಿನ ಜಿಲ್ಲಾಧಿಕಾರಿಯಾಗಿ ವರ್ಗ.

ಕೊಡಗಿನ ಜಿಲ್ಲಾಧಿಕಾರಿಯಾಗಿ ಇವರು ಗಳಿಸಿದ ಜನಾನುರಾಗ ಅವರ್ಣನೀಯವಾದುದು. ಕೊಡಗಿನ ಜನ ಇನ್ನೂ ಇವರನ್ನು ಮರೆತಿಲ್ಲ, ಮರೆಯುವಂತಿಲ್ಲ. ಕೊಡಗಿನಲ್ಲಿ ಅರ್ಧಕ್ಕೆ ನಿಂತಿದ್ದ ಅನೇಕ ಸೇತುವೆಗಳ, ಶಾಲಾಭವನಗಳ, ಮಾರ್ಗಗಳ, ಆಸ್ಪತ್ರೆಗಳ ಪೂರ್ತಿ ಮಿಂಚಿನ ವೇಗದಲ್ಲಿ ಆಯಿತು ಇವರ ದಕ್ಷ ನೇತೃತ್ವದಲ್ಲಿ; ಕೊಡಗಿನಲ್ಲಿ ಮೊದಲ ಸಲ ಎರಡನೆಯ ಬೆಳೆಯ ಆಂದೋಲನ ಯಶಸ್ವಿಯಾಗಿ ನಡೆಯಿತು; ಅನೇಕ ಗ್ರಾಮಗಳಿಗೆ ವಿದ್ಯುದ್ದೀಪಗಳು, ಕುಡಿಯುವ ನೀರಿನ ಯೋಜನೆಗಳು ದೊರೆತುವು; ತಲ-ಕಾವೇರೀ ಕ್ಷೇತ್ರದ ಅಭಿವೃದ್ಧಿ ಅದ್ಭುತ ರೀತಿಯಲ್ಲಿ ಜರುಗಿತು; ಕೊಡಗಿನ ಉಳಿದ ದೇವಾಲಯಗಳ ಜೀರ್ಣೋದ್ಧಾರ ಕಾರ್ಯವೂ ಪ್ರಾರಂಭವಾಯಿತು;

ನೀರಾವರಿ ಪಂಪ್ ಸೆಟ್ಟುಗಳ ವಿತರಣೆಗಾಗಿ ಇವರು ಅನುಸರಿಸಿದ ಸ್ಥಳೀಯ ಮಂಜೂರಿಯ ಕ್ರಮವು ಆಗಿನ ಮುಖ್ಯ ಮಂತ್ರಿಗಳ, ಪ್ರಧಾನ ಕಾರ್ಯದರ್ಶಿಗಳ, ಇಡಿಯ ರಾಜ್ಯದ ಪ್ರಶಂಸೆಯನ್ನು ಪಡೆಯಿತು; ಮಡಿಕೇರಿ ಬಚತ್ ನಗರವಾಗಿ ಪರಿವರ್ತಿತವಾಯಿತು; ಮಡಿಕೇರಿಯ ಬೃಹತ್ ನೀರಾವರಿ ಯೋಜನೆ ಮಂಜೂರಾಯಿತು; ಪಾಕಿಸ್ತಾನದೊಡನೆ ನಡೆದ ಯುದ್ಧದಲ್ಲಿ ಕೊಡಗಿನ ಕಾಣಿಕೆ–ಸೈನಿಕ ಭರತಿಯಲ್ಲಿ, ರಕ್ಷಣಾ ನಿಧಿ ಸಂಗ್ರಹದಲ್ಲಿ–ಪ್ರಚಂಡವಾಯಿತು; ಯುದ್ಧದಲ್ಲಿ ಮಡಿದ, ಗಾಯಗೊಂಡ ಯೋಧರ ಕುಟುಂಬಗಳಿಗಾಗಿ ಪುರಾಣಿಕರು ಗೈದ ಪರಿಹಾರ ಕ್ರಮಗಳು ಎಲ್ಲರ ಮೆಚ್ಚುಗೆ ಪಡೆದುವು.

ಮುಂದೆ ಸಾರಿಗೆ ಕಮೀಶನರರಾಗಿ ಇವರು ಆ ಇಲಾಖೆಯಿಂದ ಸರಕಾರಕ್ಕೆ ಬರುತ್ತಿದ್ದ ಆದಾಯವನ್ನು ವರ್ಷಕ್ಕೆ ಒಂದು ಕೋಟಿಯಂತೆ ಮೂರು ವರ್ಷ ಕರ ಹೆಚ್ಚಿಸದೇ, ಹೆಚ್ಚಿಸಿದರು; ಇಲಾಖೆಯ ಅನೇಕ ಲೋಪದೋಷಗಳನ್ನು ನಿವಾರಿಸಿದರು; ಅದಕ್ಕೆ ಬಂದಿದ್ದ ಕೆಟ್ಟ ಹೆಸರನ್ನು ಕಡಿಮೆಮಾಡಿದರು; ನೆರೆ ರಾಜ್ಯಗಳೊಡನೆ ಒಪ್ಪಂದ ಮಾಡಿಕೊಂಡು ಸಾರಿಗೆ ಉದ್ಯಮದ ಪ್ರಚಂಡ ಪ್ರಗತಿಯನ್ನು ಸಾಧಿಸಿದರು; ಕೇಳಿದವರಿಗೆಲ್ಲ ಪರ್ಮಿಟ್ ಕೊಟ್ಟರು; ಸಾವಿರಾರು ಅಪೀಲುಗಳ ವಿಲೇವಾರಿ ಮಾಡಿದರು; ಎಸ್ಟಿಮೇಟ್ ಕಮೀಟಿಯವರು ವಿಶೇಷ ಪರಿಶೀಲನೆಗಾಗಿ ಇವರ ಇಲಾಖೆಯನ್ನೇ ಆರಿಸಿಕೊಂಡು ಆಮೂಲಾಗ್ರ ಪರಿಶೀಲಿಸಿ ಮೆಚ್ಚುಗೆಯ ಮಾತುಗಳನ್ನು ಬರೆದರು.

ಅಲ್ಲಿಂದ ಬೆಳಗಾವಿಯ ಜಿಲ್ಲಾಧಿಕಾರಿಯಾಗಿ ವರ್ಗ. ಎರಡೂ ಕಾಲು ವರ್ಷಗಳ ಅವಧಿಯಲ್ಲಿ ಇವರು ಬೆಳಗಾವಿ ಜಿಲ್ಲೆಯಲ್ಲಿ ಮಾಡಿ ತೋರಿಸಿದ ಕಾರ್ಯಗಳು ವಿಸ್ಮಯಕರವಾದವುಗಳು. ಈ ಅಲ್ಪಾವಧಿಯಲ್ಲಿ ಎರಡು ಸಾರ್ವತ್ರಿಕ ಚುನಾವಣೆಗಳು, ೧೯೭೧ ರ ಜನಗಣತಿ, ಮಹಾಜನ ವರದಿಯನ್ನು ಲೋಕ ಸಭೆಯಲ್ಲಿ ಮಂಡಿಸಿದಾಗಿನ ಕ್ಷೋಭೆಯ ಪರಿಸ್ಥಿತಿ, ರಾಷ್ಟ್ರಾಧ್ಯಕ್ಷರ ಭೇಟಿ, ಪ್ರಧಾನಿಯವರ ಭೇಟಿ, ಬಂಗ್ಲಾ ಯುದ್ಧ, ಎರಡು ಬರಗಾಲಗಳು, ಮಲಪ್ರಭಾ ಜಲಾಶಯದಲ್ಲಿ ಹದಿಮೂರು ಹಳ್ಳಿಗಳ ಮುಳುಗಡೆ, ಅಲ್ಲಿಂದ ಸಾವಿರಾರು ಕುಟುಂಬಗಳನ್ನು ಸುರಕ್ಷಿತ ಸ್ಥಳಗಳಿಗೆ ಸಾಗಿಸುವ ಕೆಲಸ, ಬಂಗ್ಲಾ ಯುದ್ಧದಲ್ಲಿ ಮಡಿದ, ಗಾಯಗೊಂಡ, ಕಾಣೆಯಾದ ವೀರ



ಯೋಧರ ಕುಟುಂಬಗಳಿಗೆ ಪರಿಹಾರ ನೀಡುವ ಕೆಲಸಗಳು ಒಂದರ ಹಿಂದೊಂದರಂತೆ ಎದುರಾದುವು ಪುರಾಣಿಕರನ್ನು. ಅವುಗಳನ್ನೆಲ್ಲ ಎಂಥ ಎದೆಗಾರಿಕೆಯಿಂದ, ಚಾತುರ್ಯದಿಂದ, ದಕ್ಷತೆಯಿಂದ ಪುರಾಣಿಕರು ಎದುರಿಸಿ ಯಶಸ್ವಿಗಳಾದರೆಂಬುದು ಎಲ್ಲರಿಗೂ ತಿಳಿದಿರುವ ವಿಷಯ. ಮಲಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆಯ ಕೊನೆಯ ಹಂತವನ್ನು ಪೂರ್ಣಗೊಳಿಸಿ ಕಬ್ಬು ನುರಿಸುವಂತೆ ಮಾಡುವಲ್ಲಿ ಇವರು ತೋರಿದ ಕಾರ್ಯಶ್ರದ್ಧೆ, ಗೊಡಚಿ ವೀರಭದ್ರ ಹಾಗೂ ಸೌದತ್ತಿಯ ಎಲ್ಲಮ್ಮನ ಕ್ಷೇತ್ರಗಳ ಅಭಿವೃದ್ಧಿ ವಿಚಕ್ಷಣತೆಗಳು, ಬಳ್ಳಾರೀ ನಾಲಾ ಸಮಸ್ಯೆಯನ್ನು ಯಂತ್ರಜ್ಞರೂ ಬೆರಗಾಗುವಂತೆ ಇವರು ಬಗೆಹರಿಸಿದ ರೀತಿ, ಮೃತಯೋಧರ ನೂರಾರು ಕುಟುಂಬಗಳಿಗೆ ಸಾರ್ವಜನಿಕರ ಸಹಕಾರದಿಂದಲೇ ಇವರು ಕ್ಷಿಪ್ರ ಪರಿಹಾರ ಒದಗಿಸುವುದಲ್ಲದೆ ಅವರಿಗಾಗಿ ಬೆಳಗಾವಿಯಲ್ಲಿ ಒಂದು ಓಣಿಯನ್ನೇ ಕಟ್ಟಿಸಿದ ಪವಾಡ, ಬೆಳಗಾವಿ ಸ್ಟೇಡಿಯಮ್ಮಿನ ಕಾರ್ಯ, ಮಲಪ್ರಭಾ ಜಲಾಶಯದಲ್ಲಿ ಮುಳುಗಡೆಯಾದ ಹಳ್ಳಿಗಳ ಜನರನ್ನು ಸುರಕ್ಷಿತವಾಗಿ, ಸುಲಲಿತವಾಗಿ ಹೊಸ ಹಳ್ಳಿಗಳಿಗೆ ಸಾಗಿಸುವುದಲ್ಲದೆ ಅವರ ಪ್ರಾರಂಭದ ದಿನಗಳಲ್ಲಿ ಅವರಿಗೆ ಉಚಿತವಾಗಿ ಆಹಾರ ಧಾನ್ಯಗಳನ್ನೂ, ಬಟ್ಟೆಬರೆಗಳನ್ನೂ ವಿತರಣೆ ಮಾಡಿದ ಮತ್ತು ಹೌಸಿಂಗ್ ಬೋರ್ಡಿನ ಸಹಕಾರದಿಂದ ಒಂದು ಸಾವಿರ ಮನೆಗಳನ್ನೂ, ಸರಕಾರದ ಸಹಾಯದಿಂದ ಹರಿಜನರಿಗಾಗಿ ಒಂದು ಸಾವಿರ ಮನೆಗಳನ್ನೂ ಕಟ್ಟಿಸಿದ ಕೀರ್ತಿ, ಮೊನ್ನಿನ, ಉಗ್ರ ಬರಗಾಲದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಮೆಚ್ಚುವಂತೆ ಬರಗಾಲ ಕಾಮಗಾರಿಗಳನ್ನೂ, ಆಹಾರ ಧಾನ್ಯಗಳ ಕಣಿಕೆಯ ಪೂರೈಕೆಯನ್ನೂ ನಿರ್ವಹಿಸಿದ ರೀತಿ, ಎಲ್ಲ ಅಚ್ಚರಿಯ ವಿಷಯಗಳು. ಗಡಿ ವಿವಾದ ಉಲ್ಬಣಿಸದಂತೆ ಎಲ್ಲ ಭಾಷೆಗಳ ಜನರಲ್ಲಿ ಸೌಹಾರ್ದ್ಯವನ್ನು ಹುಟ್ಟಿಸುವಲ್ಲಿ ಅವರು ಪಡೆದ ಯಶಸ್ಸಿಗೆ ಬೆಳಗಾವಿಯ ನಗರ ಸಭೆಯು ಕನ್ನಡ ಸಾಹಿತ್ಯ ಪರಿಷತ್ತಿಗೆ ೫೦೦೦ ರೂ. ಕಾಣಿಕೆ ಕೊಟ್ಟುದೂ, ಅದೇ ನಗರ ಸಭೆಯೇ ಮಾನ್ಯ ಶ್ರೀ ಕೆ. ಹನುಮಂತಯ್ಯನವರಿಗೆ ಮಾನಪತ್ರ ಅರ್ಪಿಸಿದುದೂ, ಅದೇ ನಗರ ಸಭೆಯ ಕಲಾ ಮಂದಿರದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಲನವು ವಿಜೃಂಭಣೆಯಿಂದ ಜರುಗಿದುದೂ, ಅದೇ ನಗರ ಸಭೆಯು ಶ್ರೀ ಪುರಾಣಿಕರಿಗೆ ಬೆಳಗಾವಿಯಿಂದ ವರ್ಗ

ವಾಗಲು ಇನ್ನೊಂದು ವರ್ಷ, ಅವರನ್ನು ಬೆಳಗಾವಿಯಲ್ಲಿಯೇ ಉಳಿಸಬೇಕೆಂದು ಸರಕಾರವನ್ನು ಕೋರುವ ಗೊತ್ತುವಳಿಯನ್ನು ಒಮ್ಮತದಿಂದ ಸ್ವೀಕರಿಸಿದುದೂ ನಿದರ್ಶನಗಳಾಗಿವೆ.

ಈಗ ಕಾರ್ಮಿಕ ಕಮೀಷನರಾಗಿ ಅಷ್ಟೇ ಯಶಸ್ಸನ್ನು ಸಂಪಾದಿಸಿದ್ದಾರೆ. ಅನೇಕ ವಿವಾದಗಳನ್ನು ಇತ್ಯರ್ಥಗೊಳಿಸಿ ರಾಜ್ಯದಲ್ಲಿ ಕೈಗಾರಿಕಾ ಶಾಂತಿ ನೆಲೆಸಲು ನೆರವಾಗಿದ್ದಾರೆ. ಎಲ್ಲ ಸಮಾಜಗಳವರ ಸಮಾರಂಭಗಳಲ್ಲಿ ಭಾಗವಹಿಸುತ್ತ ಅಂತರ್ ಜಾತೀಯ ಸಾಮರಸ್ಯಕ್ಕೆ, ರಾಷ್ಟ್ರೀಯ ಭಾವೈಕ್ಯಕ್ಕೆ ಅಳಿಲು ಸೇವೆ ಸಲ್ಲಿಸಿದ್ದಾರೆ. ಕಲ್ಯಾಣದಲ್ಲಿ ಆಗ ಉಪಾಧ್ಯಕ್ಷರಾಗಿದ್ದ ಮಾನ್ಯ ಶ್ರೀ ವ್ಹಿ. ವ್ಹಿ. ಗಿರಿಯವರ ಭಾಷಣವನ್ನು, ಬೆಂಗಳೂರಿನಿಂದ ಮೈಸೂರಿನ ವರೆಗೆ ಗಡಿನಾಡಗಾಂಧಿ ಖಾನ್ ಅಬ್ದುಲ್ ಗಫಾರಖಾನರ ಭಾಷಣಗಳನ್ನೂ ಕನ್ನಡಕ್ಕೆ ಪರಿವರ್ತಿಸಿ ಆ ಕಲೆಯಲ್ಲಿಯೂ ತಾವು ಎತ್ತಿದ ಕೈ ಎಂಬುದನ್ನು ಸಿದ್ಧ ಮಾಡಿಕೊಟ್ಟಿದ್ದಾರೆ. ರಾಜ್ಯವು ಆಚರಿಸಿದ ಎಲ್ಲ ಮಹಾಪುರುಷರ ಶತಮಾನೋತ್ಸವಗಳಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ.

ಹೀಗೆ ನಾನಾ ಮುಖಗಳಿಂದ ನಾನಾ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿ ಶ್ರೀ ಪುರಾಣಿಕರು ನಾಡು ಕಟ್ಟುವ, ನಾಡಿಗರ ನೆಮ್ಮದಿಗೆ ಕಾರಣವಾಗುವ, ನುಡಿ ಬೆಳೆಸುವ ಅನೇಕ ಕಾರ್ಯಗಳನ್ನು ಪೂರ್ಣಗೊಳಿಸಿದ ಕೀರ್ತಿಗೆ ಪಾತ್ರರಾಗಿದ್ದಾರೆ. ಅವರಷ್ಟು ಎಲ್ಲರ ವಿಶ್ವಾಸ ಗಳಿಸಿರುವ, ಎಲ್ಲ ಇಲಾಖೆಗಳಲ್ಲಿ ಯಶಸ್ವಿಯಾಗಿರುವ, ಎಲ್ಲ ಬಗೆಯ ಅನುಭವ, ಪರಿಣತಿಗಳನ್ನು ಪಡೆದ ಅಧಿಕಾರಿಗಳು ವಿರಳ. ಇವರು ಇದು ವರೆಗೆ ಇತ್ತ ಸಹಸ್ರಾರು ತೀರ್ಪುಗಳಲ್ಲಿ ಅಪೀಲಿನಲ್ಲಿ ವಜಾ ಆದುವು ಇಲ್ಲವೆಂದರೂ ಸಲ್ಲುವುದು. ಅವರನ್ನು ಆದರ್ಶ ಅಧಿಕಾರಿಗಳೆಂದು ಕರೆದರೆ ತಪ್ಪೇನು ?

ರಾಯಬಾಗ

❋❋❋❋



## ಕಾವ್ಯಾನಂದ ಉವಾಚ

**ಸಂಗ್ರಾಹಕ : ಪಿ. ಆಯ್. ವಸವಡೆ ಎಂ. ಎ.**

'ಜಲಪಾತ' ದಿಂದ

ನೆನಪಿಡು ಸಮಾಜವೆ ನಿನ್ನ ನಿರ್ಲಕ್ಷ್ಯತನ
ಕೊನೆಗಾಣಲೇ ಬೇಕು–ಸಾಗದಿನ್ನು !
ಇದ್ದುದನು ಎಂತೆಂತೊ ಉಳಿಸಿ ಬಾಳುವ ಹೊಂಚು
ನಡೆಯಲಾರದು ಇದಕೆ ಬೇಗ ಶರಣೆನ್ನು !

ಕುರಿಗಳನು ಕಾಯ್ವುದಕೆ ತೋಳಗಳ ನಿಯಮಿಸಿದೆ
ಕುರಿ ತೋಳಗಳ ಕೊಲ್ವ ಕಾಲ ಬಂತು !
ದೀನತನ ಕೊನೆಗೊಮ್ಮೆ ದಾನವತ್ವವ ಮೆಟ್ಟಿ
ಮಾನವತ್ವವ ತರುವ ಕಾಲ ಬಂತು !
('ಮಾನವ ಸಮಾಜ' ದಿಂದ ಗ್ಗಳಿಅರ ರಚನೆ)

.... .... .... ....

ನಿರ್ಜೀವಕೆ ಜೀವದ ಬಲಿ ! ಇದು ಎಲ್ಲಿಯ ನ್ಯಾಯ ?
ಮಾನವ್ಯವೆ ಮೃತವಾದರೆ ಯಾರಿಗೆ ಈ ಆಯ ?
ಹೊಸ ಲೋಕವ ಕಟ್ಟುವ ಹೊಣೆ ಇಂದಿನ ಬಡವನದು,
ಹೊಸ ಬಾಳನು ರಚಿಸುವ ಹೊಣೆ ನಾಳಿನ ದುಡಿವನದು !
('ಬರುತಿದೆ ಬಡವರ ಯುಗ' ದಿಂದ ಗ್ಗಳಳರ ರಚನೆ)

.... .... .... ....

ಸುಟ್ಟು ಸಗ್ಗವ ಕಟ್ಟಿ ಬೆಟ್ಟದುರಿ ಹೊತ್ತಿಸಿದೆ–
ನೆಂಬ ನುಡಿ ನಿಜವಿರಲು ಸುಡು ಸಿಕ್ಕದನೆ ಕೈಗೆ !
ಆದರೊಂದೆಚ್ಚರಿಕೆ : ಈ ಬೆಟ್ಟದಲಿ ಈ ಪ್ರಳಯ–
ಜ್ವಾಲೆಯೇ ಕೊನೆಯ ಕಾಲನ ಲೀಲೆಯಾಗಲಿ !

ಹೀಗಾಗುವಂತೆಸಗು; ಬಲು ಜೋಕೆ, ಈ ಬೆಂಕಿ
ಇನ್ನೊಂದು ದಳ್ಳುರಿಗೆ ದಾರಿ ಮಾಡದ ತೆರದಿ
ಹೊಟ್ಟೆಯುರಿ ಹಗೆತನವ ಸುಟ್ಟು ಬೂದಿಯ ಮಾಡು !
ಶಾಂತಿ ಸೌಖ್ಯಕೆ ದಾಳಿ ತರುವ ಬೇರಾವುದೂ
ತಪ್ಪಿಯೂ ಉಳಿಯದೊಲು ಹುಡುಹುಡುಕಿ ಹುರಿದು ಬಿಡು !
ಬಲು ಜೋಕೆ ಗಾಳಿಯೇ, ಬಾಯಿಂದ ಆಡಿದುದು
ಕೃತಿಯಲ್ಲಿ ಮಾಡಿದುದು ಬೇರಾಗದಿರಲಿ!
('ಬೆಟ್ಟದುರಿ' ಯಿಂದ: ದ್ವಿತೀಯ ಮಹಾಯುದ್ಧ ಪ್ರಾರಂಭ ಕಾಲ)

.... .... .... ....

ಇಡಿಯ ಏಷ್ಯಾ ಖಂಡ ಹಿರಿಯ ಬಂದೀಖಾನೆ
ಪರರ ಬಲೆಯಲಿ ಸಿಕ್ಕಿ ಬಿದ್ದ ಮದ್ದಾನೆ
ಇಲ್ಲಿ ಬಡತನ ದಾಸ್ಯ ಅಜ್ಞಾನ ಬಹು ಜೇನೆ
ಮೇಲೆ ತುಳಿಯುತಲಿಹುದು ಪರರಾಷ್ಟ್ರಗಳ ಸೇನೆ
ಇದಕುಂಟೆ ಈ ನರಕದಿಂದ ಮುಕ್ತಿ ?
ಎಂದು ಸಿಡಿದೇಳುವುದು ಇದರ ಶಕ್ತಿ ?
('ಏಷ್ಯಾ' ದಿಂದ : ರಚನೆ ೧೯೪೨)

.... .... .... ....

ಹುಟ್ಟಿನೊಳಗಿರಬಹುದು, ಹಸಿದ ಹೊಟ್ಟೆಯಲಿ ಕುಲವುಂಟೆ ?
ವೇಷದೊಳಗಿರಬಹುದು, ಹೃದಯ ಭಾಷೆಯಲಿ ಕುಲವುಂಟೆ ?
ಜಡ ತನುವಿಗಿರಬಹುದು, ಬಡತನಕೆ ಕುಲವುಂಟೆ ?
ಕರಿ ಬಿಳಿಯ ವರ್ಣವಿರೆ ಕರುಣಕ್ಕೆ ಕುಲವುಂಟೆ?
('ಸಲಾಮ್‌ಸಾಬ್' ದಿಂದ : ರಚನೆ ೧೯೪೩)

.... .... .... ....

ಒಳ ಹೊರಗು ಒಂದಾಗೆ ತಳತಳಿಸಿ ಬೆಳಗೀತು
ಜೀವನದ ದೇವತೆಯ ದಿವ್ಯದೇಗುಲವು !



ಒಳ ಹೊರಗಿನಿಬ್ಬಣವೆ ಕಳವಳದ ಕಾರಂಜಿ
ಸೃಜಕ ಸಮ್ಮಿಳನವೇ ಸುಖದ ಬಾಗಿಲವು !
('ದೇಹ-ಆತ್ಮ' ದಿಂದ : ರಚನೆ ೧೯೪೩)

.... .... .... ....

ಪ್ರೇಮವಿಲ್ಲದ ರೂಪ ವಿಷಯ ಭೋಗಿಗಾಗಿ
ಸೇವೆಯಿಲ್ಲದ ಪ್ರೇಮ ಬರಿಯ ಸೋಗಿಗಾಗಿ
ಪರಿಶುದ್ಧ ಕಾಯಕವು ಪ್ರೇಮ ಯೋಗಿಗಾಗಿ
('ಕಾಯಕ' ದಿಂದ)

... .... .... ....

ಸತ್ಯಮಂದಿರದಲ್ಲಿ ಉರಿವ ಜ್ಯೋತಿಯು ಜ್ಞಾನ
ಸೌಂದರ್ಯ ಮಂದಿರದ ಪ್ರಣತಿ ಪ್ರೇಮ
ಸೌಂದರ್ಯ ಸತ್ಯಗಳು ಜನನಿ ಜನಕರು ಜಗಕೆ
ಜ್ಞಾನ ಪುರುಷನು ಪ್ರಕೃತಿ ಮಾತೆ ಪ್ರೇಮ
('ಜ್ಞಾನ-ಪ್ರೇಮ' ದಿಂದ)

.... .... .... ....

ಋಷಿ ದಧೀಚಿಯ ಅಸ್ಥಿಪುಟದಲಿ ಬರೆದ ಭಾರತ ಸಂಸ್ಕೃತಿ
ಬಾಪುವಿನ ಬಲಿದಾನ ವೇದಿಕೆಯಿಂದ ಬೇಡಿದೆ ಆಹುತಿ
ಬಾಷ್ಪ ಸ್ವೇದದ ಕ್ಷುಧೆಯ ರುಧಿರದ ಕಠಿನ ಶ್ರಮಗಳ ಆಹುತಿ
ಬಾ ಸಮರ್ಪಿಸು ನಿನ್ನ ಆಹುತಿ ಭವ್ಯ ಭಾರತ ಕಾಣುವೆ,
ಸ್ವಾಗತವು ಸ್ವಾತಂತ್ರ್ಯ ದಿನವೆ ತಂದೆ ಗಾಂಧಿಯ ದಾನವೆ!

.... .... .... ....

ಮಿಂಚು ಹುಟ್ಟುವ ನಾಡು ಮನಸು ಮಾಡಿದಡೊಮ್ಮೆ
ಬ್ರಹ್ಮಾಂಡವನ್ನೆಲ್ಲ ಬೆಳಗಬಹುದು !
ಕನ್ನಡದ ಸಿರಿವೆಳಕು ಮುನ್ನೀರುಗಳ ದಾಟಿ
ನಿಟ್ಟು ನಿಟ್ಟಿನ ನಾಡ ತೊಳಗಬಹುದು !
('ಕನ್ನಡದ ದೀಪವದು ಕಾಣದಿಹುದು' ೧೯೫೦ರ ರಚನೆ)

.... .... .... ....

ಘುಮ್ಮಿಕ್ಕಲಿ ಧೀಗಂಗೆಯು ಹಳ್ಳಿಗರೆದೆಯಲ್ಲಿ
ಮನೆ ಮಾಡಲಿ ವಿಜ್ಞಾನವು ಗುಡಿಸಲ ಬದಿಯಲ್ಲಿ
ಸುಧೆ ಹೊಮ್ಮಲಿ ಅವರಿಂದಿನ ಚಿರತೃಷೆಯಲಿ, ಕ್ಷುಧೆಯಲ್ಲಿ
ನವಭಾರತ ನಿರ್ಮಾಣಕೆ ಬೇರೆಯ ವಿಧಿಯೆಲ್ಲಿ ?
ಭಾರತವೇ ಹಳ್ಳಿ !
('ಜನಜೀವನ ಜಾಹ್ನವಿ' ಯಿಂದ)

.... .... .... ....

ನಿನ್ನ ನಗೆಯಿಂದಲೇ ಬೆಳಗಲೆನ್ನೀ ಮನೆಯು
ನಿನ್ನ ಪ್ರಿತಿಯೆ ನನಗೆ ಗೆಲವ ತರಲಿ
ನಿನ್ನಡಿಗೆ ದುಡಿಮೆಗಳು ನಿನ್ನ ಕಾಳಜಿ ಸಿಸ್ತು
ನನ್ನ ದುಡಿಯುವ ವ್ಮೈಗೆ ಬಲವ ತರಲಿ
ನಿನ್ನ ಸವಿ ಮಾತುಗಳು ನಿನ್ನ ಸವಿ ನೋಟಗಳು
ನನ್ನ ಬಾಳಿಗೆ ಹೊಸತು ಚೆಲುವ ತರಲಿ
ನಮ್ಮಿಬ್ಬರೊಂದಾದ ಬಾಳುವೆಯ ನೋಡಿ ಶಿವ-
ನೂರಲ್ಲಿ ತಾಯ್ತಂದೆ ಹಿಗ್ಗು ತಿರಲಿ
ನಮ್ಮ ಪ್ರೀತಿಯ ಬಳ್ಳಿ, ಬೆಳೆದು ಮನೆಯೆಲ್ಲವನು
ಮಗಮಗಿಸುವಂತಿರುವ ಮೊಗ್ಗೆ ಬರಲಿ!
('ಹೊಸ ಹೆಂಡತಿಗೆ' ೧೯೪೪ರ ರಚನೆ)

.... .... .... ....

ಗಂಡು ಹೆಣ್ಣಿನ ಬಾಳು ಗಂಡಭೇರುಂಡದೊಲು
ಎರಡು ಮುಖ, ಒಂದಾತ್ಮ ದುಃಖ ಹರುಷ !
('ಹೊಸ ಗಂಡನಿಗೆ')

.... .... .... ....

ತೋಳ ಸೆಳೆಮಂಚದಲಿ ತೂಗದಿರು ಓ ನಲ್ಲ
ನಾನೊಲ್ಲೆನೀಪರಿಯ ಬರಿದು ಬಾಳಿನ ಬೇಡಿ
ಗಂಡು–ಗಾಂಡೀವವನು ಹಿಡಿದು ನಡೆ ಓ ನಲ್ಲ
ನಾನು ಬರುವೆನು ಜತೆಗೆ ಹೆಂಗರುಳ ರಥ ಹೂಡಿ



ಜಗದ ಋಣ ತೀರಿಸಲು ಮೇಲೇಳು ನಲ್ಲ
ಜೀವನಕೆ ಅಪಚಾರವೆಸಗದಿರು ನಲ್ಲ
ಸಾಕೇಳು ನಲ್ಲ
ಮರೆತು ಪ್ರೇಮದ ಸೊಲ್ಲ
ಗಂಡುತನಕಿದು ಹೊಲ್ಲ
ಓ ನಲ್ಲ, ಏನಲ್ಲ, ನಲ್ಲ!
('ಎರಡು ಚಿತ್ರಗಳು' ರಚನೆ ೧೯೪೩)

.... .... .... ....

ಎಲ್ಲೆಡೆಯೊಳೂ ಶುದ್ಧ ಪ್ರೇಮವನೆ ಕಾಣುವಂ–
ತೆನ್ನ ನಯನಕೆ ಬರಲಿ ಪ್ರೇಮ ದೃಷ್ಟಿ
ನಿನ್ನ ನಗೆಯಂತೆಯೇ ನಗುನಗುತ ಕಾಣಿಸಲಿ
ನನ್ನ ಕಣ್ಣಿಗೆ ಸಕಲ ಮನುಜ ಸೃಷ್ಟಿ !
('ಮನೆಯಿಂದ ಹೊರಡುವಾಗ')

.... .... .... ....

'ಕರುಣಾ ಶ್ರಾವಣ'ದಿಂದ

ಶಬ್ದದಲಿ ಸವಿಯಾಗಿ ಅರ್ಥದಲಿ ಬೆಳಕಾಗಿ
ಬಾಳ ಧನ್ಯತೆಗಿಲ್ಲಿ ಬೆಳಕು ಸವಿ ಸಾಕಾಗಿ
ಬಾಳುವೆಯ ಸವಿ ಬೆಳಕ ಬರೆಯುವವ ಬೇಕಾಗಿ
ಸಾರುತಿದೆ ಸೃಷ್ಟಿ ಸವಿ ಛವಿಯಾಗಿ ನಿಂದು–
'ಕವಿಯಾಗು, ಕವಿಯಾಗು, ಕವಿಯಾಗು' ಎಂದು !
(ಸಾರುತಿದೆ ಸೃಷ್ಟಿ)

.... .... .... ....

ಮುಡಿವವರ ಮುಖನೋಡಿ ಅರುಳುವುವೆ ಪುಷ್ಪಗಳು ?
ಓದುವರ ಆಸೆಯಲಿ ನೀ ಬರೆಯ ಬೇಡ !

ನಿನ್ನ ರುಚಿಯೆತ್ತರಕೆ ಓದುಗರೆ ಬರಬೇಕು--
ಅವರನೊಲಿಸಲು ನಿನ್ನ ಗುರಿ ತೊರೆಯ ಬೇಡ !
(ಬಾಳ ಹೊತ್ತಗೆ)

.... .... .... ....

ಏಸು ಸಲ ಬರಿದೆ ಸತ್ತು
ಮತ್ತೆ ಹುಟ್ಟಿ ಸಾಯಲಿ ?
ಹಿಂದೆ ನೊಂದ ನೋವಿನಲ್ಲೆ
ಇಂದು ಮತ್ತೆ ನೋಯಲಿ ?
ಎಷ್ಟು ಜನ್ಮ ಹೀಗೆ ನಿನ್ನ
ಬರವಿಗಾಗಿ ಕಾಯಲಿ ?
ಬರದ ನಿನ್ನ ಬರುವ ಹಾಗೆ
ಕರೆವೆ ಯಾವ ಬಾಯಲಿ ?
ಬೆಳಕೆ ಬಾರ, ತುಳುಕು ಬಾರ.
ನನ್ನ ಮನದಿ, ಮೈಯಲಿ;
ಪ್ರಖರವಾಗಿ ಪ್ರಕಟವಾಗೊ
ಓ ಉತ್ತಮೋತ್ತಮ
ನರನ ಮರೆಯ ನರೋತ್ತಮ
ಓ ಅಂತರಾತುಮ !
('ಆತ್ಮನಿಗೆ ಆಹ್ವಾನ')

.... .... .... ....

ಇಂದಿನುಷೆ ತಂದಿಹಳು ಸೌಂದರ್ಯ ಸಂದೇಶ
ಜಗದ ಜೀವಿಗಳದರ ವಿವಿಧ ವೇಷ
ವಿಶ್ವಗರ್ಭವದೆಲ್ಲ ಒಂದೆ ಜೀವದ ಕೋಶ
ವಿಶ್ವಮಾನವ ಮೈತ್ರಿ ಪ್ರಕೃತಿಯಾದೇಶ
('ಬೆಳಗು')

.... .... .... ....



ಅರೆಸಳ, ನೂರೆಸಳ, ನೂರಾರು ಬಣ್ಣಗಳ
ಹೂಗಳಿವು ಈಶ್ವರನ ಮೂಲಾಕ್ಷರ
ಈ ಸೊಬಗಿನಕ್ಕರದಿ ಬರೆವನವ ಅನುದಿನವು
ಸೌಂದರ್ಯ ಸಂಹಿತೆಯನಾದಿ ಕಲೆಗಾರ !
('ಹೂ')

.... .... .... ....

ಸಾರುತಿದೆ ಕಮ್ಮಟವು ಸಚಿವಾಲಯಕೆ "ನೋಟಿನ ಬಲದಲಿ
ನಾಡು ಬದುಕದು ! ನಾಡಿನೈಸಿರಿ ಗದ್ದೆ ತೋಟದಿ ಹೊಲದಲಿ !
ನಾನು ನೀಡುವ ನಾಣ್ಯಗಳ ಕೆರೆಗಳಿಗೆ ಕಾಲುವೆಗಿಕ್ಕಿರಿ,
ಬೀಳು ನೆಲದೊಳೆ ಬಂಜೆ ನೆಲದೊಳೆ ಚಿನ್ನ ರನ್ನವ ಒಕ್ಕಿರಿ !
ಕ್ರಯಗಳಿಳಿವುವು, ಕೊರತೆಯಳಿವುದು, ಶಾಂತಿಸೌಖ್ಯವು ಬೆಳೆವುದು
ಹಳ್ಳಿಗರ ಹಗೆ ಕಣಜ ತುಂಬಲು ಜಗದ ಸಂಕಟವಳಿವುದು !
ನೀರು ಕೊಡಿ ನೇಗಿಲದ ಯೋಗಿಗೆ ಧನವ ಗ್ರಾಮೋದ್ಯೋಗಕೆ
ಆಗ ಭಾರತ ಭೂಮಿಯೇ ಆಹ್ವಾನವೀವುದು ಸ್ವರ್ಗಕೆ !"
('ಸರಸಿಯ ಮೇಲೆ ಸೂರ್ಯೋದಯ'–ರ್ಗ್ಳರ ರಚನೆ)

.... .... .... ....

ಕೂಡಿಟ್ಟ ಗಳಿಕೆಯದು ತಂಗುಳವು ಎಂದು
ಭೂಮಿ ತಾಯಿಯ ದಾನ ಅಕ್ಷಯವು ಎಂದು
ತಾಯ ಸೊಮ್ಮನು ತಾಯ್ಗೆ ಸಲ್ಲಿಸಿಹವಿಂದು
ಗಿಡ ಬಳ್ಳಿಗಳು ತಾವು ಬರಿ ಮೈಯ್ಲಿ ನಿಂದು
ಕೊಡುವವರಿಗಿರಬಹುದೆ ಕಡೆತನಕ ಬಡತನವು ?
ಎಲೆಯುದುರಿ ನಿಂತರೂ ಒಣಗಿಲ್ಲ ವನವು !
('ಎಲೆಯುದುರಿ ನಿಂತರೂ ಒಣಗಿಲ್ಲ ವನವು')

.... .... .... ....

ಜಗವಿದು ತೋಟವು ತೋಟಿಗನಿದರೊಳು ಹೊಯ್ಯುವ
ಹೊಸ ಹೊಸ ಬೀಜಗಳ
ಮೃಗ ಖಗ ನರ ನಗ ಲತೆ ಗುಲ್ಮಗಳ ಕ್ರಿಮಿ ಸಸಿ ಕೀಟಕ ಭೂಜಗಳ

ಎಲ್ಲ ಬೀಜಗಳು ತನ್ಮಯ ತಾಣದಿ ತೋರಲಿ ನಿಜ ರುಚಿ ತೇಜಗಳ
ಎಲ್ಲರ ಬೆಳವಿಗೆಗಿಲ್ಲಿಯೆ ಎಡೆಯಿದೆ ಎಲ್ಲಿಯದಿದು ಬದುಕಿನ ಜಗಳ?
ಇಲ್ಲಿದೆ ಸುಮಧುರ ಸಹಕಾರ
ಶಾಂತಿಯ ತುಷ್ಟಿಯ ಪರಿವಾರ
ಪ್ರೀತಿಯ ಮೈತ್ರಿಯ ಅಧಿಕಾರ
ಬಾ ನನ್ನೀ ತೋಟಕ್ಕೆ-
ಆನಂದದ ಊಟಕ್ಕೆ!
('ಬಾ ನನ್ನೀ ತೋಟಕ್ಕೆ')

.... .... .... ....

ಪ್ರೇಮವಿರೆ ಗುಡಿಸಲೇ ತಾಜಮಹಲಾಗುವುದು
ಇಲ್ಲದಿರೆ ಅರಮನೆಯೆ ಸೆರೆಮನೆಗೆ ಸರಿಯು!
ತಾಜಮಹಲನು ನೋಡಿ ರಾಜವೈಭವ ಬಯಸ
ಬೇಡ! ಪ್ರೇಮವೇ ತಾಜಮಹಲ ಗುರಿಯು!
('ತಾಜಮಹಲು')

.... .... .... ....

'ದಿವರಾತ್ರಿಯೆಂಬುದಿದು ಭ್ರಮೆಯಲ್ತೆ?' ಎಂಬ ಕವಿ:
"ಆಶೆಯೇ ಹಗಲು, ನಿರಾಶೆ ರಾತ್ರಿ!"

.... .... .... ....

ಮಿಲ್ಟನನ ಅಂಧತ್ವ ಹೋಮರನ ಭಿಕ್ಷೆ
ಫಿರದೋಸಿಯಪಮಾನ ರೂಸೋನ ಶಿಕ್ಷೆ
ಡ್ಯಾಂಟೇಯ ಗಡಿಪಾರು ಮಾರ್ಲೋ ಪರೀಕ್ಷೆ
ಮಾಯ್ಕಲೆಂಜಲೊ ವ್ಯಥೆಯು ಫಾನಿಯ ವಿವಕ್ಷೆ
ಕವಿಯ ಜೀವನವೊಂದು ಸಂತಾಪ ಸ್ತೂಪ,
ಆದರೂ ಆರಿಲ್ಲ ಕಾವ್ಯ ಪ್ರದೀಪ!
('ಆರಿಲ್ಲ ಈವರೆಗೆ ಆಶಾ ಪ್ರದೀಪ')

.... .... .... ....



ಬಾಳು ಬಗೆಯಲು ಬಿಲ್ವ ಪತ್ರಿಯು
ದಳವು ನನ್ನಿಯು ಚೆಲುವು ಮೈತ್ರಿಯು
ಕರ್ಮ ಪೂಜೆಯು ಹಗಲು ರಾತ್ರಿಯು
ಜೀವನವೆ ಗಾಯತ್ರಿಯು
ಆದಕೆ ಶ್ರೋತ್ರಿ ಧರಿತ್ರಿಯು!
('ಜನುಮು ಜನುಮದ ಜಾತ್ರೆ')

.... .... .... ....

ಮನೆಗೆ ಮರಳುವ ಎತ್ತು ಇರುಳ ಕಾಳದಿ ಕೂಡ
ದಾರಿ ತಪ್ಪದು ಪಥಿಕ, ನೀನು ಕೂಡ
ಮನೆಗೆ ಮರಳುವ ಪಯಣದಲ್ಲಿರುವೆ! ಕಾಳದಲಿ
ದಾರಿ ತೋರದು ನನಗೆ ಎನ್ನಬೇಡ!
('ಪಥಿಕ')

.... .... .... ....

ತರುಗಿರಿ ಸೃಷ್ಟಿಯ ಸ್ವರ್ಗಾರೋಹಣ
ವೃಷ್ಟಿಯು ಸೃಷ್ಟಿಗೆ ಶಿವನವರೋಹಣ
ಧರೆಯುತ್ಥಾನವು ಹರನವತರಣ
ಎಲ್ಲೋ ಒಂದೆಡೆ ಎರಡರ ಮಿಲನ
ತೋರುವುದಾಕ್ಷಣ ಕರುಣಾಶ್ರಾವಣ
ಕಾಂಬುದು ದಿವ್ಯೋದ್ದೇಶದ ಪೂರಣ
ನವ ಸೃಷ್ಟಿಯ ಜನನ-
ನವ ಶೋಭೆಯ ಸೃಜನ!
('ಕರುಣಾಶ್ರಾವಣ')

... ... ... ...

'ಕಲ್ಲೋಲ ಮಾಲೆ' ಯಿಂದ
ನನಗೆ ಅಮೃತ ಬೇಕಿಲ್ಲ.
ಮಡದಿ ಕಡೆದೀವ ಮಜ್ಜಿಗೆಯೆ ಸಾಕು!

ಕಲ್ಪವೃಕ್ಷದ ಹಣ್ಣು ಬೇಕಿಲ್ಲ.
ನಾನೆ ದುಡಿದುಣುವ ಕಜ್ಜಾಯ ಸಾಕು !
ಸ್ವರ್ಗ, ನಂದನ, ಅಲಕ ಬೇಕಿಲ್ಲ.
ಒಲ್ಮೆಯುಕ್ಕುವ ಮುರುಕು ಮನೆಯೆ ಸಾಕು !
ಸುಧೆಯೆ ಜೇಕೆನುವ ಸುರಸುಂದರಿಯು ಬೇಕಿಲ್ಲ–
ರೊಟ್ಟಿ ತಟ್ಟುವ ಸರಳ ಸತಿಯೆ ಸಾಕು !

.... .... .... ....

ಮಾನವರು ಕೆಟ್ಟಾರು,
ಮಾನವತೆ ಉಳಿದೀತು !
ಕವಿ ದೇಹವಿಟ್ಟಾನು,
ಕವಿತೆ ಉಳಿದೀತು,
ಕೃತಿಗಿಳಿಯದಿದ್ದರೂ
ಕನಸೊಂದು ಉಳಿದೀತು !
ಅದನುಂಡೆ ಬರಲಿರುವ
ಮನಸು ಬೆಳೆದೀತು !
('ಕಲ್ಲೋಲ ಮಾಲೆ' ಯಿಂದ)

.... .... .... ....

ಮನದ ತಲೆಯನು ಹಿಕ್ಕಿ ಸಿಕ್ಕು ಬಿಡಿಸಲು ಹೋದ
ಹಣಿಗೆಯೇ ಮುರಿದಿಹುದು ಹೆಣಗಿ ಹೆಣಗಿ !
ಬಗೆಯ ತೆನೆಗಳ ಹೆಕ್ಕಿ ಒಕ್ಕಲೆಳಸಿದ ಬಾಳು
ಕಂಕಿಗಳನಾಯ್ದಿಹುದು ಗೊಣಗಿ ಗೊಣಗಿ !
ತಿಳಿವಿನುಕ್ಕಿನ ತೆಕ್ಕೆಯಲ್ಲಿ ಬಿಕ್ಕುತಲಿಹುದು
ಒಲವು ಅಕ್ಕಸಬಡುತ ಚಡಪಡಿಸುತ !
ಬಲದ ಕಪಿ ಮುಷ್ಟಿಯಲಿ ವಿಲ ವಿಲನೆ ಒದ್ದಾಡಿ
ತಿಳಿವು ತಳಮಳಿಸುತಿದೆ ತಡವಡಿಸುತ !

.... .... .... ....



ವಾನರನು ನರನಾದ ಉತ್ಕ್ರಾಂತಿಯಲ್ಲಿ
ನರನು ವಾನರನಾದ ನವಕ್ರಾಂತಿಯಲ್ಲಿ
ಸಕಲ ಸಂಪದ ಬಂತು— ಶಾಂತಿಯೆಲ್ಲಿ ?
ಜೀವನವೆ ಸಾಗಿಹುದು ಬರಿ ಭ್ರಾಂತಿಯಲ್ಲಿ !

.... .... .... ....

ಬಾಳ ಕಡಲಲಿ ಮುಳುಗಿ ಮೂರು ಮುತ್ತನು ತಂದೆ–
'ಸ್ನೇಹ, ಸ್ಯೆರಣೆ, ಸಮತೆ' ಎಂದು ಕರೆದೆ;
ಬಾಳ ಬನದಲಿ ತಿರುಗಿ ಮೂರು ಫಲಗಳ ತಂದೆ–
'ದಿಟ, ಚೆಲುವು, ಒಲವುಗಳು', ಎಂದು ಒರೆದೆ.
ಬಾಳಿನಾಗಸದಲ್ಲಿ ಮೂರು ನಕ್ಷತ್ರಗಳು–
'ಒಲಿ, ಒಲಿಸು, ಕೂಡಿ ನಲಿ' ಎಂದು ಹೆಸರು;
ಬಾಳ ಭಾಂಡಾರದಲಿ ಮೂರು ರತ್ನಗಳುಂಟು–
'ನೆನಿಕೆ, ನಯ, ನಂಬಿಕೆ'ಗಳೆಂದು ಉಸಿರು.

.... .... .... ....

ಷುರುಳಾಗಿದೆ ಕತ್ತಲೆಗೇ
ವಿಜ್ಞಾನದ ಗೂಗೆ !
ಕುಣಿಯಲದುವೆ ಬಾಳ ಬನದಿ
ಆಗಿ ಸೊಗದ ಸೋಗೆ !
(ಕಲ್ಲೋಲ ಮಾಲೆಯಿಂದ)

.... .... .... ....

**"ಮೊದಲು ಮಾನವನಾಗು" ಕೃತಿಯಿಂದ**

ಎಲ್ಲ ಯತ್ನವ ಮಾಡಿ ಒತ್ತು ಗುಂಡಿಯ ಬಳಿಗೆ
ಕೋತಿ ಬಾರದ ಹಾಗೆ ನೋಡಿಕೊಳ್ಳೋಣ !
ಕೈ ಮೀರಿ ಕೋತಿ ಬಂದರೂ ಸಹಿತ ಅದಕೆ
ಹೆಂಡ ಸಿಕ್ಕದ ಹಾಗೆ ಏರ್ಪಾಡು ಮಾಡಿಕೊಳ್ಳೋಣ

.... .... .... ....

ನಮ್ಮ ಮನೆಯಲ್ಲಿಯೇ ಹೆರವರಾದೆವು ನಾವು
ಇದನು ನೆನೆದಾಗೊಮ್ಮೆ ಉಕ್ಕುವದು ನೋವು
ಬಂದ ಅತಿಥಿಯೇ ಇಂದು ಒಡೆಯನು
ಅವನಿಗೇ ಹಿಡಿ ನೀನು ಕೊಡೆಯನು
ಕಲಿತು ಬಿಡು ನೀ ಅವನ ನುಡಿಯನು
ಕಲಿತು ಬಿಡು ನೀ ಅವನ ನಡೆಯನು

.... .... .... ....

ಹಂಗಿನಮೃತವಲ್ಲ ಹಂಗಿಲ್ಲದಂಬಲಿಯ
ನಾನು ದುಡಿದಂಬಲಿಯ ಕರುಣಿಸುತಿರು
ನಂಜನುಂಡರು ಜಿಹ್ವೆ ನಂಜನುಗುಳದ ಹಾಗೆ
ನಯವನೇ ಅನವರತ ಕಲಿಸುತ್ತಿರು

.... .... .... ....

ಒಡೆದ ಕನಸುಗಳ ಚೂರನು ತುಳಿದು
ರಕ್ತ ಬಸಿಯುತಿದೆ ಕಾಲಲ್ಲಿ

.... .... .... ....

ಆದರ್ಶದ ಹರಿದರಿವೆಯ ತೇಪೆಯ
ಜೋಳಿಗೆ ಹಿಡಿದಿಹೆ ಕೈಯಲ್ಲಿ

.... .... .... ....

ಕಂಡಿಹೆನೆಂಬುವ ಕಳ್ಳಿಯ ಹಾಲಿದೊ
ಕುರುಡಗೊಳಿಸಿಹುದು ನಯನವನು !

.... .... .... ....

ಬತ್ತಿಯೆ ಇಲ್ಲದ ಮೇಣಬತ್ತಿಯಿದೆ
ಏನು ಮಾಡಲೀ ಮಯಣವನು ?

.... .... .... ....

ಬದುಕಗೊಡಿ ನನ್ನನೂ ಬದುಕಗೊಡಿರಿ
ಘಟನೆ ನೀಡುವ ಮೂಲಭೂತ ಹಕ್ಕುಗಳಲ್ಲ
ನಟನೆ ನೀಡುವ ದಾನದಯೆಯ ಬಿಕ್ಕೆಗಳಲ್ಲ



ಇಲ್ಲ ನನ್ನಿಷ್ಟದೊಲು ಇರಲು ಬಿಡಿರಿ
ಕುಣಿಯ ಬೇಡಿರಿ ನೀವು ನನ್ನ ಮೇಲಡರಿ
ಬದುಕಗೊಡಿ ನನ್ನನೂ ಬದುಕಗೊಡಿರಿ !

.... .... .... ....

ಕತ್ತಲೆಯಲಿ ಹೇಗೋ ಪಾರಾಗಬಹುದು
ಬೆಳಕಿನಲೇ ಭಯವಣ್ಣ
ಹೊತ್ತು ಮುಳುಗಿದರೆ ಮುಳುಗಲಿ
ಕತ್ತಲಾದರೆ ಆಗಲಿ
ನಿಂತು ಮುಂದೆ ಹೋಗು
ತಡೆದು ಮುಂದೆ ಸಾಗು
Halt and Proceed

.... .... .... ....

ಏ ಕುರುಡಿ
ತೂಗುತಲೆ ಬಂದಿರುವೆ ಯುಗ ಯುಗದಿ
ಮಾಡಿರುವರಾರು ನಿನ್ನ ತೂಕವ ನಿಗದಿ ?
ಒಪ್ಪುತಲೆ ಬಂದಿಹೆವು ನಿನ್ನ ತೂಕವ ನಾವು
ಚೌಕಸಿಯ ಮಾಡದಲೆ ! ಬೆಲ್ಲ ಎಂದಿತ್ತೆ ಬೇವು !
........ ತೂಕ ಸರಿಯಿಲ್ಲೆನುವ ಕೆಚ್ಚ ತೋರಿದ ಕಲಿಗೆ
ಸಾಮಾನೆ ಸಿಗದಾಯ್ತು
ಉಪವಾಸ ಗತಿಯಾಯ್ತು

.... .... .... ....

ರಾಜ ಕಾರಣಿಯಾಗು
ರಾಷ್ಟ್ರಭಕ್ತನೆ ಆಗು
ಕಲೆಗಾರ ವಿಜ್ಞಾನಿ ವ್ಯಾಪಾರಿಯಾಗು
ಏನಾದರೂ ಆಗು
ನೀ ಬಯಸಿದಂತಾಗು

ಏನಾದರೂ ಸರಿಯೆ
ಮೊದಲು ಮಾನವನಾಗು

.... .... .... ....

"ಮಾನಸ ಸರೋವರ" ದಿಂದ

ನಿತ್ಯವೂ ಹೊಸ ಆಸೆ ಅಂಕುರಿಸಬಹುದಿಲ್ಲಿ
ನಿತ್ಯವೂ ಅಂಕುರವು ಕಮರಬಹುದು !
ಚಿತ್ತ ಭೂಮಿಯು ಮಾತ್ರ ಫಲವತ್ತವಾಗಿರಲಿ
ಮತ್ತೆ ಹೃದಯಾರಾಮ ಕೊನರಬಹುದು !

.... .... .... ....

ಇಲ್ಲೆ ನಂದನವಿಲ್ಲೆ ಮಸಣವು
ಮೃತ್ಯು ಲಕ್ಷ್ಮಿಯ ವಾಸವು
ಇಲ್ಲೆ ನಾಕವು ಇಲ್ಲೆ ನರಕವು
ಬಯಸಿದೊಡೆ ಕೈಲಾಸವು !

.... .... .... ....

ಮುಂದೆ ನಡೆದರೆ ದಿವ್ಯ ಪಯಣವು
ಮುಳುಗೆ ಸಲಿಲ ಸಮಾಧಿಯು !
ನಡೆಯದಿದ್ದರೆ ಮಡಿಯದಿರುವೆಯ ?
ನಡೆವುದೊಂದೇ ಹಾದಿಯು !

.... .... .... ....

ಯಾರಾರಿಗುತ್ತರವ ಹೇಳಲೌ "ನಾನಾರು?"
ಎಂಬ ಪ್ರಶ್ನೆಗೆ ತಾಯಿ ಸಾಕಾಯಿತು !
"ನಾನಾರು?" ಎನ್ನುವರು "ನೀನಾರು?" ಎಂದಿಲ್ಲ
ಈ ಹಿಗ್ಗು ಕಡೆತನಕ ಬೇಕಾಯಿತು !

.... .... .... ....

ಹರಿ ಹಾಯದಿರು ಹೆರರ ಮೇಲೆ ಕೆಳೆಯ
ಈ ನಗುವ ನಂದನವ



ಮಸಣ ಮಾಡಿದವ ನೀನೇ !
ಈ ಮಸಣದಲಿ ಮತ್ತೆ
ವನ ಬೆಳೆಸುವವ ನೀನೇ !
ನಿನಗೆ ನೀನೇ, ನಿನಗೆ ನೀನೇ
ನಿನ್ನ ಕೆಡಿಸುವವ ನೀನೇ !
ನಿನ್ನ ಸರಿಪಡಿಸುವವ ನೀನೇ !

.... .... .... ....

ಹಾಲಾ ಹಲವ ಕುಡಿದು ಶೂಲವನ್ನೇರಿಯೂ
ಸೋಲನೊಪ್ಪದ ಮತಿಯೆ ನನಗಿರುವ ಆಶೆ
ಆಳಾಗಿ ದುಡಿಸಿದರು ಕೀಳಾಗಿ ನಡೆಸಿದರು
ದೇಹಿಯೆನ್ನದ ಧೃತಿಯೇ ನಾ ತೊಟ್ಟ ಭಾಷೆ
........ನಿನಗೆ ಮೊಳಕಾಲೂರಿ ಸುಖವ ಪಡೆವುದಕಿಂತ
ನಿನ್ನನೆದುರಿಸಿ ಪಡೆವ ದುಃಖವೇ ಮೇಲು.

.... .... .... ....

ಈ ಕೆರೆಯ ತೂಬುಗಳ ಬಾಯ್ಮುಚ್ಚಿ ನೀರಿನಲಿ
ಕಮಲ–ಕೇಳೀವನವ ಬೆಳೆಸಬೇಡ !
ಮತ್ತೆ ತುಂಬಲಿ ಬಿಡಲಿ, ನೀರು ಬಿಡು ನೀರು ಬಿಡು
ನೌಕಾವಿಹಾರಕ್ಕೆ ಉಳಿಸಬೇಡ ?

ಉಗಾರ

—✻✻—

# ಒಂದು ಸಂಭವನೀಯ ಸಂಭಾಷಣೆ

ಸಿದ್ಧಯ್ಯ ಪುರಾಣಿಕ

(ಮಧ್ಯ ರಾತ್ರಿ. ದೂರ್ವಾಣಿಯ ಗಂಟೆ ಬಾರಿಸತೊಡಗುತ್ತದೆ. ಅದೇ ಮಲಗಿದ್ದ ಸಿದ್ಧಯ್ಯ ಪುರಾಣಿಕರು ಎದ್ದು ಹೋಗಲು ಯತ್ನಿಸಿದಾಗ ಶ್ರೀಮತಿ ಪುರಾಣಿಕರು ಕನಲಿ ನುಡಿಯುತ್ತಾರೆ.)

**ಶ್ರೀಮತಿ ಪುರಾಣಿಕ**— ಬೆಳಗಿನ ಜಾವದಿಂದ ಮಧ್ಯ ರಾತ್ರಿಯವರೆಗೆ ಬಿಡುವಿಲ್ಲದೆ ದುಡಿದು ಈಗ ತಾನೆ ಹಾಸಿಗೆಗೆ ಮೈ ಹಚ್ಚಿರುವಿರಿ. ಈಗ ಮತ್ತೆ ಎದ್ದು ಹೋಗುವಿರಾ ಈ ಹಾಳು ಟೆಲಿಫೋನಿನ ಕರೆ ಕೇಳಿ? ರಾತ್ರಿ ೧೧ ಘಂಟೆಗೆ ಅದನ್ನು ಕೆಳಗಿರಿಸಿ ಬಿಡಲು ಹೇಳಿದ್ದೆ. ಯಾರದನ್ನು ಮತ್ತೆ ಎತ್ತಿ ಮೇಲಿರಿಸಿದವರು ?

**ಸಿದ್ಧಯ್ಯ ಪುರಾಣಿಕ**—(ಸಂತೈಸುವ ಸ್ವರದಲ್ಲಿ) ಅಂಥ ಅಗತ್ಯದ ಕೆಲಸವಿಲ್ಲದೆ ಇಂಥ ಅಪರಾತ್ರಿಯಲ್ಲಿ ಫೋನ್ ಮಾಡಿರಲಾರರು. ಹೋಗಿ ವಿಚಾರಿಸುತ್ತೇನೆ. "ಆ ದೇವ ಈ ದೇವ ಮಾದೇವನೆನಬೇಡ। ಆದರದಿ ಜಗದ ಜೀವಿಗಳಿಗಾದವನೆ ದೇವ" ಎಂಬ ಸರ್ವಜ್ಞನ ವಚನವನ್ನು ಮರೆತೆಯಾ? (ಟೆಲಿಫೋನಿನ ಹತ್ತಿರ ಹೋಗಿ ವಿಚಾರಿಸಿ) ನೋಡಿದೆಯಾ, ಇಲ್ಲಿಗೆ ಹತ್ತಾರು ಮೈಲಿಗಳಾಚೆಗೆ ಇರುವ ಹಳ್ಳಿಯೊಂದರಲ್ಲಿ ಬಡ ರೈತರ ಬಣವೆಗಳಿಗೆ ಬೆಂಕಿ ಹತ್ತಿದೆ. ಅಗ್ನಿಶಾಮಕ ಯಂತ್ರವನ್ನು ಕಳಿಸಲು ಫೋನು ಮಾಡಿದ್ದಾರೆ. ಪಾಪ, ಆಪತ್ತಿಗೆ ಈಡಾಗಿದ್ದಾರೆ. ಅಗ್ನಿಶಾಮಕ ಯಂತ್ರವನ್ನು ಕಳಿಸಿ ಕೊಡುವೆನು.

**ಶ್ರೀಮತಿ ಪುರಾಣಿಕ**— ಇದನ್ನೂ ನೀವೇ ಮಾಡಬೇಕೆ? ಬೆಳಗಾವಿಯಲ್ಲಿ ಬೇರೆ ಅಧಿಕಾರಿಗಳೇ ಇಲ್ಲವೆ? ನೀವೇ ಎಲ್ಲ ಕೆಲಸಗಳ ಗುತ್ತಿಗೆ ಹಿಡಿದಿರುವಿರಾ ?



**ಸಿದ್ಧಯ್ಯ ಪುರಾಣಿಕ**— ಹಾಗಲ್ಲ ಗಿರಿಜಾ, ಅಗ್ನಿಶಾಮಕ ಯಂತ್ರವನ್ನು ಬೆಳಗಾವಿಯ ನಗರಸಭೆಯ ಹದ್ದಿನಿಂದಾಚೆ ಒಯ್ಯಲು ಜಿಲ್ಲಾ ಮ್ಯಾಜಿಸ್ಟ್ರೇಟನಾದ ನನ್ನ ಅನುಜ್ಞೆ ಬೇಕಾಗುತ್ತದೆ. ಈಗ ಮೊದಲು ಅಗ್ನಿಶಾಮಕ ದಳವನ್ನು ಕಳಿಸಿ ಆಮೇಲೆ ಮಾತು ಮುಂದುವರಿಸುತ್ತೇನೆ. (ಅಗ್ನಿಶಾಮಕ ಯಂತ್ರ ಕಳಿಸಿ ಬಂದು ಕುಳಿತು) ನೋಡು ಗಿರಿಜಾ, ಜನಕಲ್ಯಾಣ ಕಾರ್ಯಗಳನ್ನು ಮಾಡುವ ಅವಕಾಶ ಯಾವಾಗಲೂ ಸಿಕ್ಕುವದಿಲ್ಲ. ಈಗೇನೋ ದೇವರ ದಯದಿಂದ ಅಧಿಕಾರ ಸ್ಥಾನದಲ್ಲಿದ್ದೇನೆ— ಇಂಥ ಅವಕಾಶಗಳೂ ಸಿಕ್ಕುತ್ತಿವೆ, ಅವುಗಳನ್ನು ಉಪಯೋಗಿಸಿಕೊಂಡು ಜನಮಂಗಲ ಕಾರ್ಯಗಳನ್ನು ಮಾಡುವುದೂ ಸಾಧ್ಯವಾಗುತ್ತಿದೆ. ನಾಳೆ ನಿವೃತ್ತನಾದ ಮೇಲೆ ಇಂಥ ಕಾರ್ಯಗಳನ್ನು ಮಾಡಲಿಕ್ಕಾಗುವುದೆ ?

**ಕಾವ್ಯಾನಂದ**— (ಮಧ್ಯದಲ್ಲಿ ಪ್ರವೇಶಿಸಿ) ನಿಮಗೆ ಎಲ್ಲರ ಕೆಲಸ ಮಾಡಲೂ ಸಮಯ ಸಿಕ್ಕುತ್ತದೆ ಶ್ರೀಮಾನ್ ಸಿದ್ಧಯ್ಯ ಪುರಾಣಿಕರೆ, ಆದರೆ ನನ್ನ ಕೆಲಸಕ್ಕೆ ಮಾತ್ರ ಸಮಯ ಸೊನ್ನೆ! ದಿನಕ್ಕೆ ಸಾವಿರಾರು ಮನವಿಗಳ ವಿಲೇವಾರಿ ಮಾಡುವ ನೀವು ನನ್ನ ಮನವಿಯ ಇತ್ಯರ್ಥ ಮಾಡುವುದು ಯಾವಾಗ? ನನ್ನ ಕೋರಿಕೆಗೆ ಇಷ್ಟೊಂದು ಅನಾದರವೆ? ಅವಜ್ಞೆಯೆ? ಹಗಲಿರುಳು 'ಉಘೋ ಉಘೋ' ಎನ್ನುತ್ತ ನಿಮ್ಮ ಸುತ್ತು ಸುಳಿಯುತ್ತಲೇ ಇರುತ್ತೇನೆ; ಕಿವಿಗೊಡುವುದಿಲ್ಲ, ಕತ್ತೆತ್ತಿ ನೋಡುವುದಿಲ್ಲ, ಕಾಗದ ಲೆಕ್ಕಣಿಕೆ ಕೊಂಡು ನಾನು ಹೇಳುವುದನ್ನು ಬರೆದಿಟ್ಟುಕೊಳ್ಳುವುದಿಲ್ಲ! ನೂರಾರು ಸಲ ನಾನು ಹೇಳಿದುದನ್ನು ಬರೆದಿಟ್ಟುಕೊಳ್ಳಲಾಗದೆ, ಆಮೇಲೆ ಅದನ್ನು ನೆನಪಿಸಿ ಕೊಳ್ಳಲಾಗದೆ ಹಳಹಳಿಸಿದ್ದೀರಿ, ತಳಮಳಿಸಿದ್ದೀರಿ—

"ಸ್ಫುರಿಸಿದಾಗ ಲಿಪಿಸಲಾಗದೆ ವಿಸ್ಮರಿಸಿ ಹೋದ ವಚನಗಳೇ, ಕವನಗಳೆ—
ನನ್ನ ಉಪೇಕ್ಷೆಯನ್ನು ಅಲಕ್ಷಿಸಿ, ಆಲಸ್ಯವನ್ನು ಕ್ಷಮಿಸಿ ಇನ್ನೊಮ್ಮೆ ಬನ್ನಿರಿ,

ನನ್ನ ತಪ್ಪು ಮನ್ನಿಸಿ ಬನ್ನಿರಿ, ದಯದೋರಿ ಬನ್ನಿರಿ !
ನೀವು ಬರುವ ದಾರಿಯನ್ನು ತೋರಿದರೆ
ನನ್ನ ನೋಟಗಳನ್ನು ಬಿತ್ತುವೆನು ಅದರ ಉದ್ದಕ್ಕೂ !
ಆ ಹಾದಿಯಲ್ಲಿ ನಿಮ್ಮ ಹೆಜ್ಜೆಗಳು ಮೂಡಿದರೆ ಮಜ್ಜನ ಮಾಡಿಸುವೆ
ಅವುಗಳಿಗೆ ನನ್ನ ಕಂಬನಿಗಳಿಂದ !
ನಿಮಗೆ ಗೊತ್ತಿಲ್ಲವೆ ನಾನು ಪರಾಧೀನನೆಂಬುದು, ಸಮಯವಿಹೀನನೆಂಬುದು ?
ನನ್ನ ನಿಸ್ಸಹಾಯಕತೆಯನರಿತು ಬನ್ನಿ, ನನ್ನ ಅನಾದರವ ಮರೆತು ಬನ್ನಿ.
ಮತ್ತೆ ಬನ್ನಿ, ಸತ್ತನು ಕೆರಳಿಸಿ ಬನ್ನಿ, ಚಿತ್ತವನರಳಿಸಿ ಬನ್ನಿ,
ಮುತ್ತು ಉರುಳಿಸಿ ಬನ್ನಿ !"

ಎಂದು ಅಂಗಲಾಚಿದ್ದೀರಿ. ಆದರೂ ಇನ್ನೂ, ನಿಮಗೆ ಎಚ್ಚರಿಕೆ ಬರದಿದ್ದರೆ ಯಾರೇನು ಮಾಡುವುದು ?

**ಶ್ರೀಮತಿ ಪುರಾಣಿಕ**— "ಕಾವ್ಯಾನಂದರ ನುಡಿಗೆ ಕಿವಿಗೊಡಿರಿ ಸ್ವಲ್ಪ. ನಿಮ್ಮ ಕಂದಾಯ ವಸೂಲಿಯ ಕೆಲಸ, ಬೀಜ ಗೊಬ್ಬರದ ಕೆಲಸ, ಕೋಳಿ ಸಾಕಾಣಿಕೆ, ಮೀನುಗಾರಿಕೆ, ಹಯನಗಾರಿಕೆ, ತೋಟಗಾರಿಕೆ ಇನ್ನಾವುವೋ ಕಲಬೆರಕೆಯ ಕೆಲಸಗಳನ್ನು ಯಾರಾದರೂ ಮಾಡಬಹುದು. ಕಾವ್ಯಾನಂದರ ಕರೆಗೆ ಕಿವಿಗೊಡುವ ಕೆಲಸವನ್ನು ಎಲ್ಲರೂ ಮಾಡಲಾಗುವುದೆ? ದೇವರು ಕೊಟ್ಟ ದೇಣಿಗೆಯನ್ನು ಹಾಳು ಮಾಡಬೇಡಿರಿ. ಶಾಶ್ವತವಾಗಿ ಉಳಿಯುವ ಈ ಕೆಲಸಕ್ಕೂ ಸ್ವಲ್ಪ ಸಮಯ ಕೊಡಿರಿ !"

**ಸಿದ್ಧಯ್ಯ ಪುರಾಣಿಕ**— "ಕನಲದಿರಿ ಕಾವ್ಯಾನಂದರೆ, ಗಿರಿಜಾದೇವಿಯವರೆ, ಇಂಥದೇ ಒಂದು ಪ್ರಶ್ನೆಯನ್ನು ಗುರುದೇವ ಕವೀಂದ್ರ ರವೀಂದ್ರರು ಎತ್ತಿದಾಗ ರಾಷ್ಟ್ರಪಿತ ಗಾಂಧೀಜಿಯವರು ಅವರಿಗಿತ್ತ ಉತ್ತರವಿದು— 'ಕ್ಷಮಿಸಿ ಗುರುದೇವ. ಯಾವ ಯಾವ ಕಾರ್ಯಗಳಿಗೋ ಸಮಯ ನೀಡುತ್ತಿರುವ ನಾನು ಕಲೆ, ಸಂಸ್ಕೃತಿಗಳ ಕಾರ್ಯಗಳಿಗೆ ನೀಡುತ್ತಿಲ್ಲ; ಮಾಡಲೇನು ? ಭಾರತವೊಂದು ಬಡತನದ ಬನವೀಗ. ಆದರಲ್ಲಿರುವ ಜೀವಪಕ್ಷಿಗಳು ಹಸಿದು ಕಂಗಾಲಾಗಿವೆ. ಅವುಗಳಲ್ಲಿ ಹಾರುವ ಶಕ್ತಿಯೇ ಉಳಿದಿಲ್ಲ. ಹಾಡುವುದೆಂತು ಅವು ಗಗನಕ್ಕೆ ಹಾರಿ ?" ಈ ಉತ್ತರ



ವನ್ನು ಓದಿದಾಗಿನಿಂದ, ಹಿಂದೊಮ್ಮೆ ವಿದ್ಯಾರಣ್ಯರು ಸ್ವರಾಜ್ಯ ಸ್ಥಾಪನೆಗಾಗಿ 'ಏಳು ಸಾಯಣ, ಕಟ್ಟು ಗ್ರಂಥವ' ಎಂದಿತ್ತ ಕರೆಯನ್ನು ನಾಡಿನ ನವಜಾಗರಣದ ನಾಗಸ್ವರದಲ್ಲಿ ಕೇಳಿದಾಗಿನಿಂದ ನಾಡನ್ನು ಕಟ್ಟುವ, 'ಸಿರಿಯ ಪೆರ್ಚುಗೆಗೆ ಒಳ್ಮನೆ' ಯಾದ ಈ ನಾಡಿನಲ್ಲಿ ಸಿರಿಯನ್ನು ಉಕ್ಕಿಸಿ ಬಡವರ ಗುಡಿಸಲುಗಳಿಗೂ ಸಿರಿಯ ಸ್ವಲ್ಪಾಂಶವನ್ನಾದರೂ ಹರಿಸುವ, ಅವರ ಕಂಬನಿ ಒರೆಸುವ, ಅವರ ಗೋಳಿನ ಬಾಳಿಗೂ ಒಂದಿನಿಸು ಸವಿ ಸೊಬಗು ತರಿಸುವ ಮಹಾಮಣಿಹದಲ್ಲಿ ಅಳಿಲಿನ ಮಳಲು ಸೇವೆಯನ್ನು ಸಲ್ಲಿಸುವುದೇ ಆದ್ಯ ಕರ್ತವ್ಯವೆಂದೆನಿಸಿತು ಅಂತೆಯೇ ಇರುವಷ್ಟು ಸಮಯವನ್ನೂ ಶಕ್ತಿಯನ್ನೂ ಇದೇ ಕಾರ್ಯಕ್ಕಾಗಿ ಧಾರೆಯೆರೆಯುತ್ತ ಬಂದಿದ್ದೇನೆ— ಸದವಕಾಶ ಸಿಕ್ಕಾಗಲೆಲ್ಲ. ಸಾಹಿತ್ಯಸೃಷ್ಟಿಯ ಸುಮನೋಹರ ಕಾರ್ಯಕ್ಕೆ ಹೋಲಿಸಿದಾಗ ಹಳ್ಳಿಯ ಹಾದಿಗಳ ಹುಡಿ ತಿನ್ನುತ್ತ ತಿರುಗುವ ಈ ಕೆಲಸ ಕಳಪೆಯಾಗಿ ಕಾಣುವದು. ಉಪಾಯವಿಲ್ಲ.

**ಕಾವ್ಯಾನಂದ**—ನೀವೊಬ್ಬರು, ನಿಮ್ಮಂಥ ಹಲಕೆಲವರು ಹೆಣಗಿದರೇನಾಗುವುದು ? ಕೋಟಿ ಕೋಟಿ ಕೈಗಳು ಕೂಡಿ ದುಡಿದರೆ ಮಾತ್ರ ಈ ದೇಶದ ದಟ್ಟ ದಾರಿದ್ರ್ಯ ದೂರವಾದೀತು. ಈ ದೃಷ್ಟಿಯಿಂದ ನಿಮ್ಮದು ಗಾಳಿ ಗುದ್ದಿ ಮೈ ನೋಯಿಸಿಕೊಳ್ಳುವ ವಿಫಲಾಯಾಸ, ವ್ಯರ್ಥ ಪರಿಶ್ರಮ. ಮೇಲಾಗಿ, ಈ ದಿಶೆಯಲ್ಲ ನೀವೆಷ್ಟು ದುಡಿದರೂ ನಿಮಗೇನೂ 'ಪದ್ಮಶ್ರೀ' ಸಿಕ್ಕುವಂತಿಲ್ಲ.

**ಶ್ರೀಮತಿ ಪುರಾಣಿಕ**— 'ಪದ್ಮಶ್ರೀ' ಅಂತೆ, ಎಂತೆಂಥವರೋ ಏನೇನೋ ನೆಪ ಹೂಡಿ ವಿದೇಶ ಯಾತ್ರೆ ಮಾಡಿಕೊಂಡು ಬಂದರು—ಇವರು ಇಲ್ಲಿಯೇ ಸಿಲೋನಿಗೆ ಸಹ ಹೋಗಿ ಬಂದಿಲ್ಲ !

**ಕಾವ್ಯಾನಂದ**— ಆದುದರಿಂದ ಇನ್ನಾದರೂ ನನ್ನ ಮಾತಿಗೆ ಕಿವಿಗೊಡಿರಿ ಪುರಾಣಿಕರೆ,— ನಿಮ್ಮ ಆಗದ, ನೀಗದ ಯೋಚನೆ, ಯೋಜನೆಗಳ ಹವ್ಯಾಸವನ್ನು ಸ್ವಲ್ಪ ಕಡಿಮೆ ಮಾಡಿ ನನಗೂ ಅಷ್ಟಿಷ್ಟು

ಸಮಯ ಕೊಡಿರಿ; ಇಲ್ಲದಿದ್ದರೆ ನಿಮ್ಮ ಬದುಕೇ ಬರಡಾಗಿ ಹೋದೀತು !

**ಸಿದ್ಧಯ್ಯ ಪುರಾಣಿಕ**— ನನಗೆ 'ಪದ್ಮಶ್ರೀ' ಸಿಕ್ಕದೆಂದು ಹಂಗಿಸುತ್ತಿರುವಿರಿ; ನಿಮಗಾವ ಡಾಕ್ಟರೇಟ್ ಸಿಕ್ಕಿದೆ, ಅಕಾಡೆಮಿ ಅವಾರ್ಡು ಸಿಕ್ಕಿದೆ ಕಾವ್ಯಾನಂದರೆ ? ಹೊಸಗನ್ನಡ ಕಾವ್ಯದ ಸಮೀಕ್ಷೆಗಳಲ್ಲಿ ನಿಮ್ಮ ಹೆಸರು ಸಹ ಕಾಣುವುದಿಲ್ಲವೆಂಬುದನ್ನು ನೀವು ಅರಿಯಿರಾ? ಹೀಗಿದ್ದೂ ಇನ್ನೂ ನಿಮಗೆ ಸಮಯ ಬೇಕೆನ್ನುತ್ತಿರುವಿರಿ !

**ಕಾವ್ಯಾನಂದ**— (ಅಭಿಮಾನ ಕೆರಳಿ) ವಿಮರ್ಶಕರ, ಸಮೀಕ್ಷಕರ ದೃಷ್ಟಿಗೆ ನಾನು ಬೀಳದಿದ್ದರೇನಾಯಿತು ಸಿದ್ಧಯ್ಯನವರೆ, ಅನೇಕರ ಮನಗಳಲ್ಲಿ ಮನೆ ಮಾಡಿದ್ದೇನೆ ನಾನು ! ಅಜ್ಜನ ಕೋಲನ್ನೇ ಕುದುರೆ ಮಾಡಿ ಕುಣಿವ ಬಾಲಕರಿಂದ "ಶರಣ ಚರಿತಾಮೃತ" ವನ್ನು ಭಕ್ತಿಯಿಂದ ಪಠಿಸುವ ಭಾವುಕರವರೆಗೆ ಸಾವಿರಾರು ವಾಚಕರ, ಶ್ರಾವಕರ ಹೃದಯಗಳನ್ನು ತಣಿಸಿದ್ದೇನೆ ನಾನು ! ಈ ಸಂತೃಪ್ತಿ ಸಾಲದೆ ? ಬಿರುದು ಬಾವುಲಿಗಳಲ್ಲೇನಿದೆ ? ಮರೆತಿರಾ— 'ಬಲ್ ಬಿರುದೆ, ಹಾಲುಗಲ್ ವಿಗ್ರಹವೆ ? ಕವಿಬಯಸನ್' ಎಂಬುದ ?

**ಸಿದ್ಧಯ್ಯ ಪುರಾಣಿಕ**— ಹೀಗೆ ದಾರಿಗೆ ಬನ್ನಿರಿ ಕಾವ್ಯಾನಂದರೆ—ನಾವು ಮಾಡುವ ಕೆಲಸವನ್ನು ಕಾಯಕವೆಂದು ಭಾವಿಸಿ, ಶುದ್ಧ ಮನದಿಂದ-ಪ್ರಸಿದ್ಧಿಗಾಗಿಯಲ್ಲ-ಪರಿಶುದ್ಧ ಆತ್ಮಸಂತೃಪ್ತಿಗಾಗಿ ಮಾಡಬೇಕು. ಭಕ್ತಿಗೆ ಕೂಲಿ ಬೇಡಬಾರದೆಂದರು ಪುರಾತನರು; ಮಾಡಿದ ಕೆಲಸಕ್ಕೆ ಕೀರ್ತಿ, ಲಾಭ, ಹೊಗಳಿಕೆಗಳನ್ನು ಬಯಸಬಾರದೆಂದರು ನೂತನರು. ಶಿವನೇ ಕೈಲಾಸಕ್ಕೆ ಬಾರೆಂದು ಕರೆಯಲು ಬಂದಾಗ ಕುಂಬಾರ ಗುಂಡಯ್ಯನಿತ್ತ ಉತ್ತರ ಮರೆಯದಿರೋಣ:

"ಬೇಡೆನಗೆ ಕೈಲಾಸ; ಬಾಡುವುದು ಕಾಯಕವು;
ನೀಡೆನಗೆ ಶಿವನೆ ಕಾಯಕವ-ಕುಣಿದಾಡಿ
ನಾಡ ಹಂದರಕೆ ಹಬ್ಬಿಸುವೆ !"



ನಾಡ ಹಂದರಕ್ಕೆ ಕಾಯಕದ ಬಳ್ಳಿಯನ್ನು ಹಬ್ಬಿಸುವುದೇ ಗುರಿಗಳಲ್ಲಿ ಗುರಿ, ಕಜ್ಜಗಳಲ್ಲಿ ಕಜ್ಜ. ಈ ಕಜ್ಜ ಕಜ್ಜಾಯವನ್ನೂ ಕೊಡಬೇಕು; ಕಲೆ, ಕಾವ್ಯಗಳಿಗೂ ಅನುವು ನೀಡಬೇಕು. ನಾನು ಸರಕಾರದ ಪ್ರತಿನಿಧಿಯಾಗಿ ಅಭಿವೃದ್ಧಿ ಕಾರ್ಯಗಳನ್ನೇ ಮಾಡಲಿ, ನೀವು ಜೀವನದ ಪ್ರತಿನಿಧಿಯಾಗಿ ಸಾಹಿತ್ಯ ಸೃಷ್ಟಿಯನ್ನೇ ಮಾಡಲಿ— ಇಬ್ಬರ ಉದ್ದೇಶ ಒಂದೇ; ನಮ್ಮ ನಾಡಿಗರಿಗೆ ಸಮೃದ್ಧ ಸುಂದರ ಸಾರ್ಥಕ ಬದುಕನ್ನು ಒದಗಿಸುವುದು. ಇದನ್ನು ನಾವು ಕರ್ತವ್ಯವೆಂದು-ಅಲ್ಲ-ಕಾಯಕವೆಂದು ಮಾಡಬೇಕು. ಹೇಗೆ ಮಾಡಬೇಕು ? ಬಸವಣ್ಣನವರೇ ಹೇಳಲಿ : "ಮಾಡುವಂತಿರಬೇಕು; ಮಾಡದಂತಿರಬೇಕು; ಮಾಡುವ ಕೆಲಸದಲ್ಲಿ ತಾನಿಲ್ಲದಿರಬೇಕು !" ಇದನ್ನುಳಿದು 'ಆಶೆ, ಆಮಿಷ, ತಾಮಸ, ಹಾನಿ, ವಿಷಯ' ಗಳ ಪ್ರಲೋಭನೆಗಳಿಗೆ, ಪ್ರಚೋದನೆಗಳಿಗೆ ಒಳಗಾಗಿ ಮಾಡುವುದು, 'ಕೀರ್ತಿ ವಾರ್ತೆ' ಗಾಗಿ ಮಾಡುವುದು ವ್ಯರ್ಥ; "ಬಲಿಯ ಭೂಮಿ, ಕರ್ಣನ ಕವಚ, ಖಚರನ ಅಸ್ತಿ, ಶಿಬಿಯ ಮಾಂಸ ವೃಥಾ ಹೋಯಿತಲ್ಲಾ !"

ಶಿವಭಕ್ತಿಮತಿಕ್ರಮ್ಯ ಯದ್ ದಾನಂಚ ದೀಯತೆ
ನಿಷ್ಫಲಂತು ಭವೇದ್ ದಾನಂ ಕೌರವಂ ನರಕಂ ವ್ರಜೇತ್.

ಇಂತೆಂದುದಾಗಿ ಕೂಡಲಸಂಗನ ಶರಣರನರಿಯದೆ ಕೀರ್ತಿ ವಾರ್ತೆಗೆ ಮಾಡಿದವನ ಧನವು (ಕಾಯಕವೂ ಕೂಡ) ವೃಥಾ ಹೋಯಿತಲ್ಲಾ !

**ಕಾವ್ಯಾನಂದ**— ಇದನ್ನರಿತೇ ನಾನೂ—

"ಸ್ನೇಹವೋ ಕರುಣೆಯೋ ದಾರುಣವೊ ದೈನ್ಯವೋ
ಶ್ರೀಕರವೊ ಭೀಕರವೊ ಚೀತ್ಕಾರವೊ
ನಿನ್ನ ಪಾಲಿಗೆ ಬಂದುದನೆ ನೀನು ಬರೆ ಸಖನೆ
ಧಿಕ್ಕಾರವೇ ಸಿಗಲಿ ಸತ್ಕಾರವೊ !"

ಎಂದು ಹಾಡಿಕೊಂಡಿಲ್ಲವೆ? ಖ್ಯಾತಿ, ಪೂಜಾ, ಲಾಭ, ಮನ್ನಣೆ, ಮರ್ಯಾದೆಗಳಿಗಾಗಿ ಯಾವ ನಿಜವಾದ ಕವಿಯೂ ಕೃತಿ ರಚನೆ ಮಾಡಲಾರ.

**ಸಿದ್ಧಯ್ಯ ಪುರಾಣಿಕ**— ಇದು ನಿಮ್ಮ ಅತಿ ಲೌಕಿಕ ಕಾರ್ಯಕ್ಕೂ ಅನ್ವಯಿಸುತ್ತದೆ. ನನ್ನ ಲೌಕಿಕ ಕಾರ್ಯಕ್ಕೂ ಅನ್ವಯಿಸುತ್ತದೆ. ಏನು ಮಾಡಿದೆವೆಂಬುದು ಮುಖ್ಯವಲ್ಲ, ಹೇಗೆ ಮಾಡಿದೆವೆಂಬುದು ಮುಖ್ಯ. ನಾವಿಬ್ಬರೂ ನಮ್ಮ ನಮ್ಮ ಕಾಯಕವನ್ನು 'ಮಾಡಿದರೆ ಹೀಗೆಯೇ ಮಾಡಬೇಕು' ಎಂದು ಹೊಲಬಿಗರು, ಹದುಳಿಗರು ಮೆಚ್ಚಿ ನುಡಿವಂತೆ ಮಾಡುತ್ತ ಹೋಗೋಣ. ಅದು ಫಲಿಸಲಿ, ಬಿಡಲಿ; ಅದಕ್ಕೆ ಪುರಸ್ಕಾರವೇ ಸಿಗಲಿ, ತಿರಸ್ಕಾರವೇ ಸಿಗಲಿ; ಅದು ಮುಗಿಯಲಿ, ಮುಗಿಯದಿರಲಿ; ಮಾಡುವುದೊಂದೇ ನಮ್ಮ ನಿಜವಾದ ಧರ್ಮ!

**ಕಾವ್ಯಾನಂದ**—ನಾನೂ ಇದನ್ನು ಒಪ್ಪಿಕೊಂಡಿದ್ದೇನೆ ಪುರಾಣಿಕರೆ :

"ಪಯಣ ಪೂರಣಕಾಗಿ ನೀನೆ ದಾರಿಗನಾಗಿ
ಮತ್ತೆ ಬರದಿದ್ದರೂ ಬೇರೆ ಪಥಿಕ
ನೀ ಮುಟ್ಟಿದೆಡೆಯಿಂದ ಮುಂದೆ ಸಾಗಲುಬಹುದು
ಸರಿದೋರೆ ಈ ದಾರಿ ಓ ಯಾತ್ರಿಕ!
ಪಯಣ ಮುಗಿಯಲಿ ಮುಗಿಯದಿರಲಿ ಮತ್ತೊಬ್ಬರು
ಮುಂದುವರಿಸಲಿ ಪಯಣ ಬಿಡಲಿ ಪಥಿಕ–
ನೀನು ನಡೆವಷ್ಟರೊಳೆ ನಿನ್ನ ಸಫಲತೆ ಮುಕ್ತಿ
ಬಿಡಬೇಡ ಯಾತ್ರೆಯನು ಓ ಯಾತ್ರಿಕ!"

**ಸಿದ್ಧಯ್ಯ ಪುರಾಣಿಕ**— ನಾನು ದಾರಿ, ನೀವು ಗುರಿ ಕಾವ್ಯಾನಂದರೆ. ಗುರಿ ಮುಟ್ಟಲೆಂದೇ ದಾರಿ ಕೊರೆಯುತ್ತಲಿದ್ದೇನೆ. ಗುರಿ ಮುಟ್ಟಲು ನಿಮ್ಮ ಹರಕೆ ನೆರವಾಗಲಿ ನನಗೆ!

**ಕಾವ್ಯಾನಂದ**— ಕನ್ನಡ ತಾಯಿಯ ಹರಕೆ ನಮ್ಮಿಬ್ಬರನ್ನೂ ಕರವಿಡಿದು ನಡೆಸಲಿ!



**ಗಿರಿಜಾದೇವಿ**— ಹಗ್ಗ ಹರಿಯಲಿಲ್ಲ, ಕೋಲು ಮುರಿಯಲಿಲ್ಲ! ನೀವಿಬ್ಬರೂ ಕೊನೆಗೆ ನಿರ್ಣಯಿಸಿದುದಾದರೂ ಏನನ್ನು?

**ಇಬ್ಬರೂ**— ನಾವಿಬ್ಬರೂ ಒಳಗಿನ ಪಶುವನ್ನು ಬಂಧಿಸುವ ಹಗ್ಗ; ಆಶ್ರಯವಿಲ್ಲದವರ ಊರುಗೋಲು! ಈ ಹಗ್ಗ ಹರಿವುದೂ ಬೇಡ, ಈ ಕೋಲು ಮುರಿವುದೂ ಬೇಡ!

**ನಿದ್ರಾದೇವಿ**— ಈ ಹಾಳು ಹರಟೆ ಹೀಗೆಯೇ ಸಾಗಿದರೆ ನಾಳೆ ಕೆಲಸ ಹೇಗೆ ಮಾಡುವಿರಿ? ಇನ್ನಾದರೂ ಮಲಗಿ ವಿಶ್ರಮಿಸಿರಿ; ಮಾತು ಮುಗಿಸಿ ಕೆಲಸಕ್ಕೆ ಅಣಿಯಾಗಿರಿ! (ಒಮ್ಮೆಗೇ ಎಲ್ಲರಿಗೂ ಗಾಢ ನಿದ್ರೆ. ಗಡಿಯಾರದ ಟಿಕ್‌ಟಿಕ್ ಮಾತ್ರ ಕೇಳುತ್ತಿದೆ.)

.... .... .... ....

**ಓದುಗರಿಗೆ ಪ್ರಶ್ನೆ**— ಇದನ್ನು ಬರೆದವರಾರು? ಸಿದ್ಧಯ್ಯ ಪುರಾಣಿಕರೋ ಕಾವ್ಯಾನಂದರೊ?

ಬೆಂಗಳೂರ

*—*—*

# ಸವ್ಯಸಾಚಿ ಸಿದ್ಧಯ್ಯ ಪುರಾಣಿಕ

ಜನನ- ೧೮-೮-೧೯೧೮

| ಕ್ಯಾವ್ಯಾನಂದರ ಸಾಹಿತ್ಯ ಸೃಷ್ಟಿ | ವರುಷ | ಅಧಿಕಾರಿ ಸಿದ್ಧಯ್ಯ ಪುರಾಣಿಕರ ಜೀವನ ನಡೆದು ಬಂದ ದಾರಿ |
|---|---|---|
| 'ಬೆಳಗು' ಪ್ರಥಮ ಕವನ ರಚನೆ. ೧. ಆತ್ಮಾರ್ಪಣೆ ನಾಟಕ ರಚನೆ. ೨. 'ಸುಬೋಧ-ಸಾರ'- ಮುಪ್ಪಿನ ಷಡಕ್ಷರಿಯ ಹಾಡು-ಗಬ್ಬಗಳ ಸಂಪಾ-ದನೆ- ಆಲಮಟ್ಟಿ-ಯಲ್ಲಿದ್ದಾಗ, ಮಹಾನುಭಾವ ಮಂಜಪ್ಪ ಹರ್ಡೇಕರರ ಮಾರ್ಗದರ್ಶನದಲ್ಲಿ. | ೧೯೩೨ | ಗುಲಬರ್ಗಾ ಕಾಲೇಜ ವಿದ್ಯಾರ್ಥಿ. ಕಾ-ಲೇಜು ಯೂನಿಯನ್ನಿನ ಕಾರ್ಯದರ್ಶಿ, 'ಮಿಂಚು' ಪತ್ರಿಕೆಯ ಸಂಪಾದಕ, ಬೆಳ-ವಡಿ ಮಲ್ಲಮ್ಮ ನಾಟಕ ರಚನೆ, ರಂಗ ಭೂಮಿಯ ಮೇಲೆ ಯಶಸ್ವೀ ಪ್ರಯೋಗ, ಶಿವಾಜಿ ಪಾತ್ರಾಭಿನಯ, ಇನ್ನೆರಡು ಕನ್ನಡ ನಾಟಕಗಳನ್ನು ಆಡಿ, ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹೂಡಿ, ಸಂಘ ಸಂಸ್ಥೆಗಳ ಮುಖಾಂತರ ಹೋರಾಡಿ ಕನ್ನಡದ ಪುನರುಜ್ಜೀವನ ಪ್ರಾರಂಭಿಸಿದುದು. ಹೈದರಾಬಾದಿನಲ್ಲಿದ್ದಾಗ ವಿಶ್ವವಿದ್ಯಾಲಯ ಕರ್ನಾಟಕ ಸಂಘದ ಉಪಾಧ್ಯಕ್ಷನಾಗಿ, ಕರ್ನಾಟಕ ಸಾಹಿತ್ಯ ಮಂದಿರದ ಕಾರ್ಯದರ್ಶಿಯಾಗಿ, ಉಪಾಧ್ಯಕ್ಷನಾಗಿ, ನಾಡಹಬ್ಬ ಸಮಿತಿಗಳ ಕಾರ್ಯದರ್ಶಿಯಾಗಿ, ಹಲವು ಸಂಘ ಸಂಸ್ಥೆಗಳ ಅಧಿಕಾರಿ ವರ್ಗದಲ್ಲಿ ಸೇರಿ ಕನ್ನಡ ಚಳವಳಿಯ ಕರ್ಣಧಾರತ್ವ ವಹಿಸಿದುದು; ಆತ್ಮಾರ್ಪಣ ನಾಟಕದಲ್ಲಿ ಬಸವೇಶ್ವರ ಪಾತ್ರಾಭಿನಯ- ನಾಟಕ ಪ್ರಯೋಗಕ್ಕೆ ಅದ್ಭುತ ಯಶಸ್ಸು- ಉತ್ತೇಜಿತನಾಗಿ |



| ಕಾವ್ಯಾನಂದರ ಸಾಹಿತ್ಯ ಸೃಷ್ಟಿ | ವರುಷ | ಅಧಿಕಾರಿ ಸಿದ್ಧಯ್ಯ ಪುರಾಣಿಕರ ಜೀವನ ನಡೆದು ಬಂದ ದಾರಿ |
|---|---|---|
| | | ಬಾಲಕಿಯರಿಗಾಗಿಯೇ 'ಆತ್ಮರತಿ' ಎಂಬ ಅಕ್ಕಮಹಾದೇವಿಯ ನಾಟಕ ಬರೆದು ಅವರಿಂದಲೇ ಆಡಿಸಿದುದು; ಹೈದರಾಬಾದು ಕನ್ನಡ ಸಾಹಿತ್ಯ ಸಮ್ಮೇಲನದಲ್ಲಿ ಎ.ಆರ್.ಕೃ., ಮಾಸ್ತಿ, ಬೇಂದ್ರೆ, ಗೋಕಾಕ ಮೊದಲಾದ ಹಿರಿಯ ಸಾಹಿತಿ ಕವಿಗಳ ಪರಿಚಯ, 'ಎರಡು ಚಿತ್ರಗಳು' ಎಂಬ ಕವಿತೆ ಓದಿ ಖ್ಯಾತಿ ಪಡೆದುದು; ಬೇರೆ ಭಾಷೆಗಳ ಸಾಹಿತಿಗಳ ಸಂಪರ್ಕ. |
| | ೫-೧೨-೪೩ | ತಹಶೀಲದಾರ ತರಬೇತಿ, ನಾಂದೇಡ. |
| | ೨-೮-೪೪ | ಲ್ಯಾಂಡ ರಿಕಾರ್ಡ ಆಫೀಸರ, ನಾಂದೇಡ. |
| | ೪೪ | ಮದುವೆ, ಧಾರವಾಡದ ಚರಂತೀಮಠ ಚನ್ನಬಸವಯ್ಯ ಅವರ ಮಗಳು ಸೌ.ಗಿರಿಜಾದೇವಿ ಅವರೊಡನೆ. |
| | ೨೨-೮-೪೫ | ಅಸಿಸ್ಟಂಟ್ ಕಲೆಕ್ಟರ್, ಲ್ಯಾಂಡ ರಿಕಾರ್ಡ್ಸ ವಿಭಾಗ ಆಫಿಸರ, ಗುಲಬರ್ಗಾ. |
| | ೧೪-೮-೪೮ | ಅಸಿಸ್ಟಂಟ್ ಕಮೀಶನರು ಜಾಗೀರಾತ್. |
| ೩. 'ಜಲಪಾತ' ಕವನ ಸಂಗ್ರಹದ ಪ್ರಕಟನೆ. ೪. 'ಕಥಾಮಂಜರಿ' ಕಥಾ ಸಂಗ್ರಹದ ಪ್ರಕಟನೆ. ೫. 'ಕರುಣಾಶ್ರಾವಣ' ಕವನ ಸಂಗ್ರಹದ ಪ್ರಕಟನೆ. | ೨೫-೯-೫೧ | ಅಸಿಸ್ಟಂಟ ರೆವಿನ್ಯೂ ಸೆಕ್ರೇಟರಿ ಹೈದರಾಬಾದ ಸಂಸ್ಥಾನ. |

| ಕಾವ್ಯಾನಂದರ ಸಾಹಿತ್ಯ ಸೃಷ್ಟಿ | ವರುಷ | ಅಧಿಕಾರಿ ಸಿದ್ಧಯ್ಯ ಪುರಾಣಿಕರ ಜೀವನ ನಡೆದು ಬಂದ ದಾರಿ |
|---|---|---|
| ೬. 'ತುಷಾರಹಾರ' ಕಿರುಗತೆಗಳ ಸಂಗ್ರಹದ ಪ್ರಕಟನೆ. | | |
| ೭.೮. 'ಶ್ರೀಕಾರ' ಹಾಗೂ 'ಪ್ರಬಂಧ ಮಾಲೆಗಳ' ಸಂಪಾದನೆ ಶ್ರೀ ಇಟಗಿ ರಾಘವೇಂದ್ರರೊಡನೆ ೯. 'ಪದ್ಯರತ್ನಾಕರ'ದ ಸಂಪಾದನೆ– ವಿದ್ವಾನ್ ಮಾನ್ವಿಯವರೊಡನೆ. | ೭–೨–೫೨ | ಸ್ಥಾನಿಕ ಸ್ವರಾಜ್ಯ ಆಡಳಿತ ಸಚಿವರ ಕಾರ್ಯದರ್ಶಿ. |
| | ೮–೧–೫೩ | ಕೃಷಿ ಯೋಜನೆ, ಹಾಗೂ ಪೂರೈಕೆ ಇಲಾಖೆಯ ಸಚಿವರ ಕಾರ್ಯದರ್ಶಿ. |
| | ೯–೫೫ | ಡೆಪ್ಯೂಟಿ ಕಲೆಕ್ಟರ್ ತಾಂಡೂರ. |
| | ೫–೬–೫೭ | ಡೆಪ್ಯೂಟಿ ಕಲೆಕ್ಟರ್ ಯಾದಗಿರಿ. |
| ೧೦. 'ಮಾನಸ ಸರೋವರ' (ಕವನ ಸಂಗ್ರಹ) | ೧೯೫೯ | |
| | ೨೯–೩–೬೦ | ಭಾರತೀಯ ನಾಗರಿಕ ಸೇವೆ (I.A.S) |
| | ೩೦–೩–೬೦ | ವಿದ್ಯಾ ಇಲಾಖೆಯ ಡೆಪ್ಯೂಟಿ ಸೆಕ್ರೆಟರಿ. |
| ೧೧. ಶರಣ ಚರಿತಾಮೃತ (೯೦೦ ಪುಟದ ಸಂಶೋಧಿತ ೧೦೧ ಶರಣರ ಚರಿತ್ರೆ) | ೨೮–೬–೬೦ | |



| ಕಾವ್ಯಾನಂದರ ಸಾಹಿತ್ಯ ಸೃಷ್ಟಿ | ವರುಷ | ಅಧಿಕಾರಿ ಸಿದ್ಧಯ್ಯ ಪುರಾಣಿಕರ ಜೀವನ ನಡೆದು ಬಂದ ದಾರಿ |
|---|---|---|
| 'ರಜತ ರೇಖೆ' ರೇಡಿಯೋ ರೂಪಕಗಳ ಪ್ರಕಟನೆ. | | |
| ೧೨. ಮೂರು ದಸರಾ ದರ್ಶನಿಗಳ ೧೩. ಮಹಾತ್ಮಾ ಕನಕದಾಸ ಪ್ರಶಸ್ತಿಯ ಸಂಪಾದನೆ 'ಭಾರತ ವೀರ' ನಾಟಕದ ಪ್ರಕಟನೆ. | ೬-೭-೬೨ | ವಾರ್ತಾ ಹಾಗೂ ಪ್ರವಾಸೋದ್ಯಮ ಇಲಾಖೆಗಳ ಡೈರೆಕ್ಟರ್. |
| ೧೪. ೧೫. ೧೬ ರಾಷ್ಟ್ರೀಯ ಕಾರ್ಯಕ್ರಮಕ್ಕೆ ಸೇರಿದ ಪ್ರಥಮ ಕನ್ನಡ ಗೀತ ನಾಟಕ 'ಗಿರಿಜಾ ಕಲ್ಯಾಣ'ದ ರಚನೆ. 'ವಸಂತ ಬಂದ' 'ಮೋಹನ ಮಂತ್ರ' 'ಕಾಶ್ಮೀರದ ಕವಯಿತ್ರಿ' ಇತ್ಯಾದಿ ಗೀತರೂಪಕಗಳ ಪ್ರಸರಣೆ, 'ತ್ರಿಭುವನ ಮಲ್ಲ' ಕಾದಂಬರಿಯ ಪ್ರಕಟನೆ. | ೧೮–೨-೬೪ | ಅರ್ಥ ಶಾಖೆಯಲ್ಲಿ ಡೆಪ್ಯೂಟಿ ಸೆಕ್ರೆಟರಿ. ಚಿನ್ನ ನಿಯಂತ್ರಣಾಧಿಕಾರಿಗಳು. |

| ಕಾವ್ಯಾನಂದರ ಸಾಹಿತ್ಯ ಸೃಷ್ಟಿ | ವರುಷ | ಅಧಿಕಾರಿ ಸಿದ್ಧಯ್ಯ ಪುರಾಣಿಕರ ಜೀವನ ನಡೆದು ಬಂದ ದಾರಿ |
|---|---|---|
| **'ತುಪ್ಪಾರೊಟ್ಟೆ ಗೇಗೇಗೇ'** ಮಕ್ಕಳ ಕವನಗಳ ಸಂಗ್ರಹದ ಪ್ರಕಟನೆ. ಭಾರತ ಸರಕಾರದ ಬಹುಮಾನ. | | |
| | ೩-೭-೬೫ | ಡೆಪ್ಯೂಟಿ ಕಮಿಶನರ ಮಡಿಕೇರಿ, ಕೂರ್ಗ. |
| ೧೭.-೧೮. **ಕಲ್ಲೋಲ ಮಾಲೆ' 'ಮೊದಲು ಮಾನವ ನಾಗು'** ಕವನ ಸಂಗ್ರಹಗಳ ಪ್ರಕಟನೆ. ವಚನ ರಚನೆಗೆ ಆರಂಭ. | ೫-೫-೬೭ | ಕಮಿಶನರ ಸಾರಿಗೆ (MSRTC). |
| | ೨೮-೯-೭೦ | ಡೆಪ್ಯೂಟಿ ಕಮಿಶನರ ಬೆಳಗಾವಿ. |
| ಮಹಾಕವಿ ಮಿರ್ಜಾ ಗಾಲಿಬರನ್ನು ಕುರಿತ 'ನಾನಿಹೆನು ಬರಲಿರುವ ಬನದ ಬುಲಬುಲ್' ಎಂಬ ಸುದೀರ್ಘ ರೇಡಿಯೋ ರೂಪಕದ ರಚನೆ, ಪ್ರಸರಣೆ. ವಚನ ರಚನೆಯ ಮುಂದು- | ೧-೧೨-೭೨ | ಲೇಬರ್ ಕಮಿಶನರ ಕರ್ನಾಟಕ ರಾಜ್ಯ. |



| ಕಾವ್ಯಾನಂದರ ಸಾಹಿತ್ಯ ಸೃಷ್ಟಿ | ವರುಷ | ಅಧಿಕಾರಿ ಸಿದ್ಧಯ್ಯ ಪುರಾಣಿಕರ ಜೀವನ ನಡೆದು ಬಂದ ದಾರಿ |
|---|---|---|
| ವರಿಕೆ. ಲೇಖನ-ಭಾಷಣ ಸಂಗ್ರಹದ, ಮತ್ತೊಂದು ರೇಡಿಯೋ ನಾಟಕ ಸಂಗ್ರಹದ ಪ್ರಕಟನೆಗೆ ಸಿದ್ಧತೆ. | | |

## ವಿಶೇಷ ವಿವರಗಳು

(೧) 'ತುಷಾರ ಹಾರ' ಹಿಂದೀ ಭಾಷೆಗೆ ಅನುವಾದಗೊಂಡಿದೆ.

(೨) 'ಮಾನಸ ಸರೋವರ'ಕ್ಕೆ ರಾಜ್ಯ ಸರಕಾರದ ಬಹುಮಾನ ಬಂದಿದೆ.

(೩) 'ತುಪ್ಪಾರೊಟ್ಟೆ ಗೇ ಗೇ ಗೇ' ಗೆ ಭಾರತ ಸರಕಾರದ ಬಹುಮಾನ ಬಂದಿದೆ.

(೪) 'ಗಿರಿಜಾ ಕಲ್ಯಾಣ' ರಾಷ್ಟ್ರೀಯ ಕಾರ್ಯಕ್ರಮದಲ್ಲಿ ಸೇರ್ಪಡೆಗೊಂಡ ಪ್ರಥಮ ಕನ್ನಡ ಗೀತನಾಟಕವಾಗಿದೆ.

(೫) ಹರಪನ ಹಳ್ಳಿಯಲ್ಲಿ ಜರುಗಿದ ಕನ್ನಡ ಸಾಹಿತ್ಯ ಸಮ್ಮೇಳನದ ಸಾಹಿತ್ಯ ಗೋಷ್ಠಿಗೆ, ಮೈಸೂರಿನಲ್ಲಿ ಜರುಗಿದ ಕನ್ನಡ ಸಾಹಿತ್ಯ ಸಮ್ಮೇಳನದ ಲೇಖಕರ ಗೋಷ್ಠಿಗೆ, ಕಲಬುರಗಿಯಲ್ಲಿ ಜರುಗಿದ ಕನ್ನಡ ಸಾಹಿತ್ಯ ಸಮ್ಮೇಳನದ ಸ್ವಾಗತ ಸಮಿತಿಗೆ,ಹೈದರಾಬಾದಿನಲ್ಲಿ ಹಿಂದೀ ಸಾಹಿತ್ಯ ಸಮ್ಮೇಳನದ ಅಂಗವಾಗಿ ಜರುಗಿದ ಪಂಚಭಾಷಾ ಕವಿ ಸಮ್ಮೇಳನಕ್ಕೆ, ಧರ್ಮಸ್ಥಳದಲ್ಲಿ ಜರುಗಿದ ಸಾಹಿತ್ಯ ಸಮ್ಮೇಳನಕ್ಕೆ, ಹಾಗೂ ಧರ್ಮ ಸಮ್ಮೇಳನಕ್ಕೆ, ಹೊಂಬುಜದಲ್ಲಿ ಜರುಗಿದ ಸಾಹಿತ್ಯ ಸಮ್ಮೇಳನಕ್ಕೆ, ಮೈಸೂರಿನಲ್ಲಿ ಜರುಗಿದ ದಸರಾ ಕವಿ ಸಮ್ಮೇಳನಕ್ಕೆ, ಯಾದಗಿರಿಯಲ್ಲಿ ಜರುಗಿದ ಹೈದರಾಬಾದು ಪ್ರದೇಶ ಕನ್ನಡ ಸಾಹಿತ್ಯ

ಸಮ್ಮೇಳನಕ್ಕೆ, ನವಿಲುಗುಂದದಲ್ಲಿ ಜರುಗಿದ ಸರ್ವ ಧರ್ಮ ಸಮ್ಮೇ
ಳನಕ್ಕೆ ಅಧ್ಯಕ್ಷ. ಇನ್ನೂ ಹಲವು ಸಮ್ಮೇಳನಗಳ ಉದ್ಘಾಟಕ.
ಸಾವಿರಾರು ಸಭೆಗಳಲ್ಲಿ ಉಪನ್ಯಾಸಕ. ನೂರಾರು ತರುಣ ಬರಹ
ಗಾರರಿಗೆ ಮಾರ್ಗದರ್ಶಕ, ಹಲವಾರು ಕನ್ನಡ ಸಂಘ ಸಂಸ್ಥೆಗಳಿಗೆ
ಸಹಾಯಕ. ಆಕಾಶವಾಣಿ, ಕನ್ನಡ ಕೋಶ ಸಮಿತಿ, 'ಜ್ಞಾನ
ಗಂಗೋತ್ರಿ' ಸಂಪಾದಕ ಸಮಿತಿ,ಕನ್ನಡ ಸಾಹಿತ್ಯ ಪರಿಷತ್ತಿನ ಗ್ರಂಥ
ಪ್ರಕಾಶನ ಸಮಿತಿ, ಆಡಳಿತ ಭಾಷಾ ಸಮಿತಿ, ಕನ್ನಡ ಅಭಿವೃದ್ಧಿ
ಸಮಿತಿ, ಕನ್ನಡ ಮುದ್ರಣ ಸುಧಾರಣಾ ಸಮಿತಿ, ಕೇಂದ್ರ ಸಾಹಿತ್ಯ
ಅಕಾಡೆಮಿಯ ಕನ್ನಡ ಸಮಿತಿ, ರಾಜ್ಯ ಸಾಹಿತ್ಯ ಅಕಾಡೆಮಿಯ
ಸಲಹಾ ಸಮಿತಿ ಇತ್ಯಾದಿ ಸಾಹಿತ್ಯಿಕ, ಸಾಂಸ್ಕೃತಿಕ ಸಂಘ ಸಂಸ್ಥೆಗಳ
ಸದಸ್ಯನಾಗಿ ಸೇವೆ ಸಲ್ಲಿಸಿಯೂ, ಸಲ್ಲಿಸುತ್ತಲೂ ಇದ್ದೇನೆ. ರವೀಂದ್ರ
ಶತಮಾನೋತ್ಸವ, ಮದನಮೋಹನ ಮಾಲವೀಯ ಶತಮಾನೋ
ತ್ಸವ, ಪುರಂದರದಾಸರ, ಕನಕದಾಸರ ಶತಮಾನೋತ್ಸವ, ಗಾಲಿಬರ
ಶತಮಾನೋತ್ಸವ, ಗಾಂಧೀಜೀ ಹಾಗೂ ಶ್ರೀ ಅರವಿಂದರ ಶತಮಾ
ನೋತ್ಸವಗಳಲ್ಲಿ ಪ್ರಮುಖ ಪಾತ್ರ ವಹಿಸಿದ್ದೇನೆ. ಹೈದರಾಬಾದು
ಕರ್ನಾಟಕದಲ್ಲಿ ಕನ್ನಡದ ಉಳಿವಿಗಾಗಿ, ಬೆಳವಣಿಗೆಗಾಗಿ ಕಳೆದ
ನಾಲ್ಕು ದಶಕಗಳಿಂದಲೂ ಶ್ರಮಿಸಿದ್ದೇನೆ. ಕನ್ನಡ ನಾಡಿನ ವಿವಿಧ
ಮತ ಪಂಥಗಳ ಅನುಯಾಯಿಗಳಲ್ಲಿ ಸೌಹಾರ್ದ್ಯ ಬೆಳೆಯುವಂತೆ
ಯಥಾ ಶಕ್ತಿ ಯತ್ನಿಸಿದ್ದೇನೆ. ಮತ್ತೆ, ನನ್ನ ಸೇವಾ ಜೀವನದಲ್ಲಿ
ಸುಮಾರು ಸಾವಿರ ಕನ್ನಡ ಹಳ್ಳಿಗಳಿಗೆ ಒಂದಿಲ್ಲೊಂದು ವಿಕಾಸ ಕಾರ್ಯ
-ಅದು ಶಾಲಾಭವನವಾಗಿರಬಹುದು, ಕುಡಿಯುವ ನೀರಿನ ಭಾವಿ,
ಕೆರೆ, ಕಟ್ಟೆ, ಕೂಡುದಾರಿ, ಕೈಗಾರಿಕೆ, ಕಾಲುವೆ, ಕಾಳಿನ ಕಣಜ,
ತೋಟಗಾರಿಕೆ, ಕೃಷಿ ವಿಸ್ತರಣೆ ಇತ್ಯಾದಿಯಾಗಿರಬಹುದು- ದೊರೆ
ತಿದೆ. ಹೀಗೆ ಕನ್ನಡ ನುಡಿಯನ್ನು ಬೆಳೆಸುವಲ್ಲಿ, ಕನ್ನಡ ನಾಡನ್ನು
ಕಟ್ಟುವಲ್ಲಿ, ಕನ್ನಡಿಗರಲ್ಲಿ ಭಾವೈಕ್ಯ ಮೂಡಿಸುವಲ್ಲಿ ಅಳಿಲು ಸೇವೆ
ಸಲ್ಲಿಸಿದ್ದೇನೆ.

—❋—